ವಿಶ್ವವಾಣಿ
ವಿಶ್ವಾಸವೇ ವಿಶ್ವ



ವಿರಾಟ್ ಕೊಹ್ಲಿ ಕಠಿಣಾಭ್ಯಾಸ

ಆರ್‌ಸಿಬಿ ತಂಡದ ಹಿರಿಯ ಆಟಗಾರ ವಿರಾಟ್ ಕೊಹ್ಲಿ ಗುಜರಾತ್ ಟೈಟಾನ್ಸ್ ವಿರುದ್ಧ ಬುಧವಾರ ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ನಡೆಯಲಿರುವ ಐಪಿಎಲ್ ಪಂದ್ಯಕ್ಕಾಗಿ ಕಠಿಣ ಅಭ್ಯಾಸದಲ್ಲಿ ತೊಡಗಿಸಿಕೊಂಡಿದ್ದರು.

ಸೊಂಪಾದ ಪುಟಗಳು



ಎಂದೆಂದಿಗೂ ಮೌಗ್ಲಿ ಆಗದ ಅವೆರಾನಿನ ವಿಕ್ಟರ್

ಹಿಂದಿರುಗಿ ನೋಡಿದಾಗ ಡಾ. ನಾ.ಸೋಮೇಶ್ವರ 6

ನಾವು ಇನ್ನೆಷ್ಟು ಉದಾರಿಗಳು ಆಗಬೇಕು

ಲೋಕಮತ ಲೋಕೇಶ್ ಕಾಯರ್ಗ 7

ದಾರಿದೀಪೋಕ್ತಿ

ಪ್ರತಿ ಸಮಸ್ಯೆಗೂ ಎರಡು ಮುಖಗಳಿರುತ್ತವೆ. ಒಂದು ಅಸಾಧ್ಯ ಮತ್ತು ಇನ್ನೊಂದು ಅವಕಾಶ. ಅಸಾಧ್ಯ ಎಂಬ ಭಾವವನ್ನು ಬಿಟ್ಟು ಅವಕಾಶವನ್ನು ಎತ್ತಿಕೊಳ್ಳುವುದು ಜಾಣತನ. ಅಸಾಧ್ಯವನ್ನು ಆಯ್ಕೆ ಮಾಡಿಕೊಳ್ಳಲು ಸ್ವಲ್ಪವೂ ಶ್ರಮಪಡಬೇಕಿಲ್ಲ. ಆದರೆ ಅವಕಾಶವನ್ನು ಆಯ್ಕೆ ಮಾಡಿಕೊಂಡರೆ ಸುಮ್ಮನೆ ಕುಳಿತುಕೊಳ್ಳಲು ಬಿಡುವುದಿಲ್ಲ. ಆಯ್ಕೆ ನಿಮ್ಮದು.

ವಕ್ರತುಂಡೋಕ್ತಿ

ಕೆಲವರು ತಮ್ಮ ಅಭಿಪ್ರಾಯವನ್ನು ಬದಲಿಸಿಕೊಳ್ಳದೇ ಕಠಿಣ ನಿಲುವು ತಾಳುತ್ತಾರೆ. ಮೂರ್ಖರೂ ಹಾಗೆ.

ತಿಂಡಿ, ಪಾರ್ಕಿಂಗ್ ದರ ಹೆಚ್ಚಳ

ಬೆಂಗಳೂರು: ಹಾಲು, ಮೊಸರಿನ ಹೆಚ್ಚಳದ ಬಳಿಕ ಹೋಟೆಲ್‌ಗಳಲ್ಲಿ ಚಹಾ, ಕಾಫಿ ಸೇರಿದಂತೆ ಹಾಲಿನ ಖಾದ್ಯಗಳ ಬೆಲೆ ಹೆಚ್ಚಾಗಲಿದೆ ಎನ್ನಲಾಗಿದೆ. ಯಾವ ಯಾವ ಪದಾರ್ಥಗಳ ದರ ಎಷ್ಟು ಹೆಚ್ಚಿಸಬೇಕು ಎಂಬ ಬಗ್ಗೆ ಬೆಂಗಳೂರು ಹೋಟೆಲ್‌ಗಳ ಸಂಘ, ಕರ್ನಾಟಕ ಹೋಟೆಲ್‌ಗಳ ಸಂಘಗಳ ಸದಸ್ಯರು ಸಭೆ ಸೇರಿ ನಿರ್ಧರಿಸಲಿವೆ. ಅಲ್ಲದೆ, ಬೆಂಗಳೂರಿನಲ್ಲಿ ಕಸಕ್ಕೂ ತೆರಿಗೆ ವಿಧಿಸಿದ ಬೆನ್ನಲ್ಲೇ ಬಿಬಿಎಂಪಿ ಪಾರ್ಕಿಂಗ್ ಶುಲ್ಕವನ್ನೂ ನಿಗದಿಪಡಿಸಲು ಮುಂದಾಗಿದೆ. ವಾಹನ ನಿಲ್ದಾಣದ ಪ್ರದೇಶವಾರು ಯೂನಿಟ್ ದರ ನಿರ್ಧರಿಸಲು ಕರಡು ಅಧಿಸೂಚನೆ ಹೊರಡಿಸಲಾಗಿದ್ದು, ಅಧಿಸೂಚನೆ ಸಂಬಂಧ ಸಾರ್ವಜನಿಕರು ಸಲಹೆ ಮತ್ತು ಆಕ್ಷೇಪಣೆ ಸಲ್ಲಿಸಲು ಅವಕಾಶ ನೀಡಿದೆ.

ಮಾತಂದ್ರೆ ಮಾತು

ಸರಕಾರ ವಿಶ್ವಾಸಾರ್ಹ ಮತ್ತು ನವೀಕೃತ ದತ್ತಾಂಶವಿಲ್ಲದೆ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಿದೆ. ಆದ್ದರಿಂದ 10 ವರ್ಷಗಳಿಗೊಮ್ಮೆ ನಡೆಸುವ ಜನಗಣತಿಯನ್ನು ತಕ್ಷಣವೇ ಪ್ರಾರಂಭಿಸಬೇಕೆಂದು ನಾನು ಸರಕಾರವನ್ನು ಒತ್ತಾಯಿಸುತ್ತೇನೆ. ಜಾತಿ ಜನಗಣತಿ ಮತ್ತು ಜನಗಣತಿಯನ್ನು ಆದಷ್ಟು ಬೇಗ ನಡೆಸಬೇಕು.



- ಮಲ್ಲಿಕಾರ್ಜುನ ಖರ್ಗೆ
ರಾಜ್ಯಸಭೆ ಪ್ರತಿಪಕ್ಷ ನಾಯಕ

ಫನ್‌ತರಂಗ

- ರಘುಪತಿ ಶೃಂಗೇರಿ -



ಪ್ರತಿಪಕ್ಷ ಸದಸ್ಯರ ತೀವ್ರ ವಿರೋಧದ ನಡುವೆ ವಿಧೇಯಕ ಮಂಡನೆಗೆ ಸರಕಾರ ಸಜ್ಜು

ಇಂದು ವಕ್ಫ್ ಕದನ

ದೆಹಲಿ: ದೇಶಾದ್ಯಂತ ಭಾರೀ ಚರ್ಚೆಗೆ ಕಾರಣವಾಗಿರುವ ವಕ್ಫ್ ತಿದ್ದುಪಡಿ ವಿಧೇಯಕವನ್ನು ಬುಧವಾರ ಲೋಕಸಭೆಯಲ್ಲಿ ಮಂಡಿಸಲು ಸರಕಾರ ಸಜ್ಜಾಗಿದೆ.

ಸ್ಪೀಕರ್ ಓಂ ಬಿರ್ಲಾ ಅವರ ಅಧ್ಯಕ್ಷತೆಯಲ್ಲಿ ಬುಧವಾರ ನಡೆದ ಸಂಸದೀಯ ವ್ಯವಹಾರ ಸಲಹಾ ಸಮಿತಿ ಸಭೆಯಲ್ಲಿ ವಕ್ಫ್ ವಿಧೇಯಕದ ಚರ್ಚೆಗೆ ಎಂಟು ಗಂಟೆ ನಿಗದಿಪಡಿಸಲಾಗಿದೆ ಎಂದು ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ತಿಳಿಸಿದ್ದಾರೆ. ಸರಕಾರದ ನಿರ್ಧಾರ ತಿಳಿಯುತ್ತಿದ್ದಂತೆ ಈ ಸಭೆಯಿಂದ ಪ್ರತಿಪಕ್ಷಗಳು ಹೊರನಡೆದಿವೆ.

ಸಂಸತ್ತಿನ ಪ್ರಸ್ತುತ ಬಜೆಟ್ ಅಧಿವೇಶನ ಏಪ್ರಿಲ್ 4ರಂದು ಕೊನೆಗೊಳ್ಳಲಿದೆ. ಈ ಮಸೂದೆಯನ್ನು ಕಾನೂನನ್ನಾಗಿ ಮಾಡಲು,. ಮೂರು ದಿನಗಳೊಳಗೆ ಸಂಸತ್ತಿನ ಎರಡೂ ಸದನಗಳಲ್ಲಿ (ಲೋಕಸಭೆ ಮತ್ತು ರಾಜ್ಯಸಭೆ) ಅಂಗೀಕರಿಸಬೇಕಾಗುತ್ತದೆ.

ಸಂಸದೀಯ ವ್ಯವಹಾರ ಸಲಹಾ ಸಮಿತಿ ಸಭೆಯ ನಂತರ ಮಾಧ್ಯಮಗಳೊಂದಿಗೆ ಮಾತನಾಡಿದ ಸಚಿವ ರಿಜಿಜು, ವಿಧೇಯಕ ಕುರಿತು ಚರ್ಚೆಗೆ ಒಟ್ಟು 8 ಗಂಟೆಗಳ ಸಮಯ ಮೀಸಲಿಡಲು ಒಪ್ಪಿಗೆ ದೊರೆತಿದೆ. ಸಭೆಯ ಒಮ್ಮತದ ಆಧಾರದ ಮೇಲೆ ಚರ್ಚೆಯ ಸಮಯವನ್ನು ವಿಸ್ತರಿಸಬಹುದು ಎಂದು ಹೇಳಿದರು.

ವಿಧೇಯಕ ಮಂಡನೆಗೆ ಪ್ರತಿಪಕ್ಷಗಳ ವಿರೋಧದ ಬಗ್ಗೆ ಪ್ರಸ್ತಾಪಿಸಿದ ರಿಜಿಜು, ಕೆಲವು ಪಕ್ಷಗಳು ಮತ್ತು ಸಂಘಟನೆಗಳು ಸಮಾಜವನ್ನು ದಾರಿತಪ್ಪಿಸುವಲ್ಲಿ ತೊಡಗಿವೆ ಎಂದು ದೂರಿದರು. ಈ ಜನರು ಸುಳ್ಳನ್ನು ಆಶ್ರಯಿಸುತ್ತಿದ್ದಾರೆ. ಈ ಮಸೂದೆಯನ್ನು ಮುಸ್ಲಿಮರ ಹಿತದೃಷ್ಟಿಯಿಂದ ತರಲಾಗಿದೆ. ಆದರೆ ಈದ್ ಹಬ್ಬದಂದು ಮುಸ್ಲಿಮರು ಕಪ್ಪು ಪಟ್ಟಿ ಧರಿಸಿ ಮಸೂದೆಯನ್ನು ವಿರೋಧಿಸುವಂತೆ ಪ್ರಚೋದಿಸುವುದು ಒಳ್ಳೆಯದಲ್ಲ ಎಂದರು.

ಪೌರತ್ವ (ತಿದ್ದುಪಡಿ) ಕಾಯ್ದೆ ವಿರುದ್ಧವೂ ಇದೇ ರೀತಿಯ ಅಭಿಯಾನವನ್ನು ಪ್ರಾರಂಭಿಸಲಾಗಿತ್ತು. ಆದರೆ ಈ ಕಾನೂನು ಜಾರಿಗೆ ಬಂದ ನಂತರ ಯಾವೊಬ್ಬ ಮುಸ್ಲಿಮ್ ಕೂಡ ಪೌರತ್ವ ಕಳೆದುಕೊಂಡಿಲ್ಲ ಎಂದು ಅವರು ಹೇಳಿದರು.

ವಿಪ್ ಜಾರಿ

ಪ್ರಮುಖ ವಿಧೇಯಕ ಮಂಡನೆ ಖಚಿತವಾಗುತ್ತಿದ್ದಂತೆ ಬಿಜೆಪಿ ಎನ್‌ಡಿಎ ಮಿತ್ರಪಕ್ಷಗಳಿಗೆ ಮಾಹಿತಿ ನೀಡಿದೆ. ಸರಕಾರದ ಹಿರಿಯ ಸಚಿವರು ಸರ್ಕಾರದ ಮೈತ್ರಿ ಪಕ್ಷಗಳ ನಾಯಕರಿಗೆ ಕರೆ ಮಾಡಿ ಬೆಂಬಲ ಕೋರಿದ್ದಾರೆ. ಇದರ ನಡುವೆ ಬಿಜೆಪಿ ಸಂಸದರಿಗೆ ವಿಪ್ ಜಾರಿ ಮಾಡಲಾಗಿದೆ. ಈ ನಡುವೆ ವಿಧೇಯಕವನ್ನು ಖಂಡತುಂಡವಾಗಿ ವಿರೋಧಿಸುತ್ತಿರುವ ಇಂಡಿಯಾ ಒಕ್ಕೂಟದ ಸದಸ್ಯರು ಸಂಸತ್ತಿನಲ್ಲಿ ವಿಧೇಯಕ ಮಂಡನೆಗೆ ಮುನ್ನವೇ ಗದ್ದಲ ಎಬ್ಬಿಸುವ ನಿರೀಕ್ಷೆ ಇದೆ. ಗದ್ದಲದ ಕಾರಣಕ್ಕೆ ಸದನವನ್ನು ಮುಂದೂಡಿದರೂ ವಿಧೇಯಕ ಈ ಅಧಿವೇಶನದಲ್ಲಿ ಅಂಗೀಕಾರವಾಗುವ ಸಾಧ್ಯತೆ ಇಲ್ಲ.

ಕೇರಳ ಕ್ಯಾಥೊಲಿಕ್ ಬಿಷಪ್‌ಗಳ ಬೆಂಬಲ

ತಿರುವನಂತಪುರಂ: ಕಾಂಗ್ರೆಸ್ ಹಾಗೂ ಎಡಪಕ್ಷಗಳೆರಡರಿಂದಲೂ ವಿರೋಧ ಎದುರಿಸುತ್ತಿರುವ ಕೇಂದ್ರದ ವಕ್ಫ್ ತಿದ್ದುಪಡಿ ಮಸೂದೆಯ ಪರವಾಗಿ ಮತ ಚಲಾಯಿಸುವಂತೆ ರಾಜ್ಯದ ಸಂಸದರಿಗೆ ಕೇರಳ ಕ್ಯಾಥೊಲಿಕ್ ಬಿಷಪ್ ಮಂಡಳಿ ಮನವಿ ಮಾಡಿದೆ. ಕೇರಳ ಕ್ಯಾಥೊಲಿಕ್ ಬಿಷಪ್ ಗಳ ಮಂಡಳಿಯ ಈ ನಿಲುವನ್ನು ಕೇರಳದಲ್ಲಿ ಕ್ರಿಶ್ಚಿಯನ್ನರಿಗೆ ಹತ್ತಿರವಾಗಲು ಪ್ರಯತ್ನಿಸುತ್ತಿರುವ ಬಿಜೆಪಿ ಶ್ಲಾಘಿಸಿದೆ. ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಬಿಷಪ್ ಮಂಡಳಿಯ ಈ ಪತ್ರವನ್ನು ತಮ್ಮ ಎಕ್ಸ್ ಖಾತೆಯಲ್ಲಿ ಹಂಚಿಕೊಂಡಿದ್ದಾರೆ. ಸೈರೊ-ಮಲಬಾರ್, ಲ್ಯಾಟಿನ್ ಹಾಗೂ ಸೈರೊ-ಮಲಂಕಾರ ಚರ್ಚ್ ಗಳಿಗೆ ಸಂಬಂಧಿಸಿದ ಕೇರಳ ಕ್ಯಾಥೊಲಿಕ್ ಬಿಷಪ್ ಗಳ ಮಂಡಳಿಯು ಕೇರಳದ ಕ್ಯಾಥೊಲಿಕ್ ಬಿಷಪ್ ಗಳ ಬಲಿಷ್ಠ ಸಂಘಟನೆಯಾಗಿದೆ. ಈ ಕುರಿತು ಪ್ರಕಟಣೆಯೊಂದನ್ನು ಬಿಡುಗಡೆ ಮಾಡಿರುವ ಕಾರ್ಡಿನಲ್ ಬೆಸೆಲಿಯಸ್ ಕ್ಲೀಮಿಸ್ , ಸಂಸತ್ತಿನಲ್ಲಿ ಮಸೂದೆಯ ಚರ್ಚೆಯನ್ನು ಕೈಗೆತ್ತಿಕೊಂಡಾಗ, ತಿದ್ದುಪಡಿಯ ಪರವಾಗಿ ಕೇರಳದ ಜನ ಪ್ರತಿನಿಧಿಗಳು ಮತ ಚಲಾಯಿಸಬೇಕು ಎಂದು ಆಗ್ರಹಿಸಿದ್ದಾರೆ. ಇದಕ್ಕೂ ಮುನ್ನ, ಕೇರಳ ಕ್ಯಾಥೊಲಿಕ್ ಬಿಷಪ್‌ಗಳ ಮಂಡಳಿ ವಕ್ಫ್ ತಿದ್ದುಪಡಿ ಮಸೂದೆಯ ಕುರಿತು ಪರಿಶೀಲನೆ ನಡೆಸುತ್ತಿದ್ದ ಜಂಟಿ ಸದನ ಸಮಿತಿಗೆ ಮುನಂಬಮ್ ಜಮೀನು ವಿವಾದದ ಸಂಬಂಧ ಮನವಿ ಪತ್ರ ಸಲ್ಲಿಸಿತ್ತು.

ಬಸನಗೌಡ ಯತ್ನಾಳ್ ಏಕಾಏಕಿ ಉಚ್ಚಾಟನೆಗೆ ಕಾರಣ ಬಯಲು

ಬಿಎಸ್‌ವೈ ಒತ್ತಡಕ್ಕೆ ಮಣಿದರೇ ಶಾ?

ವಿಶ್ವವಾಣಿ ಸುದ್ದಿಮನೆ

ಬೆಂಗಳೂರು: ಯಡಿಯೂರಪ್ಪ ಕುಟುಂಬದ ವಿರುದ್ಧ ನಿರಂತರ ವಾಗ್ದಾಳಿ ನಡೆಸಿಕೊಂಡೇ ಬಂದಿದ್ದ ಬಸನಗೌಡ ಪಾಟೀಲ್ ಯತ್ನಾಳ್ ನಡೆ ಬಗ್ಗೆ ಹಲವು ಬಾರಿ ದೂರು ದಾಖಲಾದರೂ ಕ್ರಮ ಕೈಗೊಳ್ಳದ ವರಿಷ್ಠರು ಏಕಾಏಕಿ ಉಚ್ಚಾಟನೆಯ ಶಿಕ್ಷೆ ನೀಡಿದ್ದೇಕೆ ಎನ್ನುವ ಹಲವರ ಪ್ರಶ್ನೆಗೆ ಕೊನೆಗೂ ಉತ್ತರ ಸಿಕ್ಕಿದೆ.

ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಹಾಗೂ ಪುತ್ರ, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ವಿರುದ್ಧ ಯತ್ನಾಳ್ ನಿತ್ಯ ಬಹಿರಂಗವಾಗಿ ಆರೋಪಿಸುತ್ತಿದ್ದರೂ ಪಕ್ಷದ ವರಿಷ್ಠರು ಕ್ರಮ ಕೈಗೊಂಡಿರಲಿಲ್ಲ ಎನ್ನುವ ಆರೋಪವಿತ್ತು. ಆದರೆ ಕಳೆದ ವಾರ ಏಕಾಏಕಿ ಆರು ವರ್ಷಗಳ ಉಚ್ಚಾಟನೆಯ ಶಿಕ್ಷೆ ವಿಧಿಸಲು ಪ್ರಮುಖವಾಗಿ ಯಡಿಯೂರಪ್ಪ ಅವರ 'ಒತ್ತಡ'ವೇ ಕಾರಣವೆಂದು ತಿಳಿದುಬಂದಿದೆ.

ಯತ್ನಾಳ್ ಅವರ ನಿತ್ಯ ಆರೋಪಕ್ಕೆ ಸಂಬಂಧಿಸಿದಂತೆ ಈ ಹಿಂದೆಯೂ ವರಿಷ್ಠರ ಗಮನಕ್ಕೆ ಯಡಿಯೂರಪ್ಪ ಅವರು ತಂದಿದ್ದರು. ವಿಜಯೇಂದ್ರ ಅವರೂ ದೆಹಲಿ ಭೇಟಿಯ ವೇಳೆ ಈ ವಿಷಯವನ್ನು ಪ್ರಸ್ತಾಪಿಸಿದ್ದರು. ಆದರೆ ಅಮಿತ್ ಶಾ ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿರಲಿಲ್ಲ. ಆದರೆ ಕಳೆದ ತಿಂಗಳು ಖಾಸಗಿ ಆಸ್ಪತ್ರೆಯ ಉದ್ಘಾಟನೆಗೆ ಅಮಿತ್ ಶಾ ಬೆಂಗಳೂರಿಗೆ ಆಗಮಿಸಿದಾಗ, ಯಡಿಯೂರಪ್ಪ ಅವರು ಪ್ರತ್ಯೇಕವಾಗಿ ಚರ್ಚಿಸಿ, 'ಯತ್ನಾಳ್ ನಿತ್ಯ ಟೀಕಿಸುತ್ತಿರುವುದು ಕೇಳಿ ಕೇಳಿ ಸಾಕಾಗಿದೆ. ಅವರನ್ನು ಸರಿಪಡಿಸಿ ಇಲ್ಲವೇ ನನ್ನ ಪುತ್ರನನ್ನು ಹಾಗೂ ನನ್ನನ್ನು ಪಕ್ಷದ ಕಾರ್ಯದಿಂದ ಮುಕ್ತ ಗೊಳಿಸಿ' ಎನ್ನುವ ಸ್ಪಷ್ಟ ಸಂದೇಶದ ಎಚ್ಚರಿಕೆ ನೀಡಿದ್ದಾರೆ. ಈ ಎಚ್ಚರಿಕೆಯ ಬೆನ್ನಲ್ಲೇ, ಯತ್ನಾಳ್ ಅವರನ್ನು ಪಕ್ಷದಿಂದ ಹೊರಗಿಡುವ ತೀರ್ಮಾನಕ್ಕೆ ವರಿಷ್ಠರು ಬಂದಿದ್ದಾರೆ ಎನ್ನಲಾಗಿದೆ.

ಯಡಿಯೂರಪ್ಪ ಅವರ ಈ ಎಚ್ಚರಿಕೆಯನ್ನು ಗಂಭೀರವಾಗಿ ಪರಿಗಣಿಸಿದ ಅಮಿತ್ ಶಾ ಅವರು ದೆಹಲಿಗೆ ತೆರಳುತ್ತಿದ್ದಂತೆ ಪ್ರಧಾನಿ ನರೇಂದ್ರ ಮೋದಿ ಹಾಗೂ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಅವರೊಂದಿಗೆ ಚರ್ಚಿಸಿದ್ದಾರೆ. ಯತ್ನಾಳ್ ಅವರಿಗೆ ನೀಡಿದ ಹಲವು ಎಚ್ಚರಿಕೆಯ ಹೊರತಾಗಿಯೂ, ವರ್ತನೆಯನ್ನು ಸರಿಪಡಿಸಿಕೊಂಡಿಲ್ಲ. → 4

ವರಿಷ್ಠರ ಲೆಕ್ಕಾಚಾರವೇನು?

- ಯಡಿಯೂರಪ್ಪ ಸಕ್ರಿಯ ರಾಜಕಾರಣದಿಂದ ಹಿಂದೆ ಸರಿದಿದ್ದರೂ, ರಾಜ್ಯದಲ್ಲಿ ತಮ್ಮದೇಯಾದ ವರ್ಚಸ್ಸು ಇದೆ.
- ಯಡಿಯೂರಪ್ಪ ಅವರನ್ನು ಈ ಹಂತದಲ್ಲಿ ನಿರ್ಲಕ್ಷ್ಯ ಮಾಡಿದರೆ ಪಕ್ಷಕ್ಕೆ ಭಾರಿ ಹೊಡೆತ ಬೀಳುವ ಆತಂಕ
- ಒಂದು ವೇಳೆ ಅಸಮಾಧಾನಗೊಂಡು ಪಕ್ಷದ ವಿರುದ್ಧ ಹೇಳಿಕೆ ನೀಡಿದರೆ, ಲಿಂಗಾಯತ ಮತಬ್ಯಾಂಕ್ ಕೈಬಿಡುವುದು ಖಚಿತ
- ಪ್ರತಿಪಕ್ಷದಲ್ಲಿದ್ದುಕೊಂಡು ಪಕ್ಷವನ್ನು ಮುನ್ನಡೆಸಲು 'ಸಂಪನ್ಮೂಲ' ಹೊಂದಿಸುವುದು ವಿಜಯೇಂದ್ರರಿಂದ ಮಾತ್ರ ಸಾಧ್ಯ

ಯತ್ನಾಳ್ ಯತ್ನಕ್ಕೆ ಪ್ರತಿಕ್ರಿಯಿಸದ ವರಿಷ್ಠರು

ಅಮಿತ್ ಶಾ ಬೆಂಗಳೂರಿಗೆ ಆಗಮಿಸಿದಾಗ ಯಡಿಯೂರಪ್ಪ ಅವರು ಪ್ರತ್ಯೇಕವಾಗಿ ಚರ್ಚಿಸಿ, ತಮ್ಮ ಅಸಮಾಧಾನವನ್ನು ಹೊರಹಾಕುತ್ತಿದ್ದಂತೆ ಎಚ್ಚೆತ್ತ ಅಮಿತ್ ಶಾ ಅವರು ಈ ವಿಷಯವನ್ನು ಪ್ರಧಾನಿ ನರೇಂದ್ರ ಮೋದಿ ಅವರ ಗಮನಕ್ಕೂ ತಂದಿದ್ದಾರೆ. ರಾಜಕೀಯ ಸಂಧ್ಯಾಕಾಲದಲ್ಲಿರುವ ಯಡಿಯೂರಪ್ಪ ಅವರು ಈ ಹಂತದಲ್ಲಿ ತಿರುಗಿಬಿದ್ದರೆ ಪಕ್ಷಕ್ಕೆ ಡ್ಯಾಮೇಜ್ ಆಗುವುದು ನಿಶ್ಚಿತ ಎನ್ನುವುದು ಖಚಿತವಾಗುತ್ತಿದ್ದಂತೆ ಯತ್ನಾಳ್ ಅವರನ್ನು ಪಕ್ಷದಿಂದ ಹೊರಗಿಡಲು ತೀರ್ಮಾನಿಸಲಾಗಿದೆ. ಈ ಕಾರಣಕ್ಕಾಗಿಯೇ, ಯತ್ನಾಳ್ ಉಚ್ಚಾಟನೆಗೂ ಮೊದಲು ದೆಹಲಿಯಲ್ಲಿ ಪಕ್ಷದ ವರಿಷ್ಠರನ್ನು ಸಂಪರ್ಕಿಸಲು ಪ್ರಯತ್ನಿಸಿದರೂ ಪ್ರತಿಕ್ರಿಯಿಸಿರಲಿಲ್ಲ ಎಂದು ಮೂಲಗಳು ತಿಳಿಸಿವೆ.

ಡೀಸೆಲ್ ಬೆಲೆ 2ರು. ಏರಿಕೆ

ಬೆಂಗಳೂರು: ಬೆಲೆ ಏರಿಕೆಯ ಆರೋಪದ ನಡುವೆಯೇ ಡೀಸೆಲ್ ಬೆಲೆಯನ್ನು ಪ್ರತಿ ಲೀಟರ್‌ಗೆ ಎರಡು ರು. ದರ ಏರಿಸಿ ರಾಜ್ಯ ಸರಕಾರ ಆದೇಶ ಹೊರಡಿಸಿದೆ. ಬೆಲೆ ಏರಿಕೆ ವಿರೋಧಿಸಿ ಪ್ರತಿಪಕ್ಷಗಳ ಆಹೋರಾತ್ರಿ ಧರಣಿ ಆರಂಭವಾಗುತ್ತಿರುವ ಹೊತ್ತಿನಲ್ಲೇ ಡೀಸೆಲ್ ಮೇಲೆ ರಾಜ್ಯದಲ್ಲಿ ವಿಧಿಸಲಾಗುತ್ತಿದ್ದ ಮಾರಾಟ ತೆರಿಗೆ ದರ ಶೇ.18.44 ರನ್ನು ಶೇ.21.17ಕ್ಕೆ ಏರಿಸಿ, ಏಪ್ರಿಲ್ 1 ರಿಂದಲೇ ಜಾರಿಗೆ ಬರುವಂತೆ ಅಂದರೆ ಪ್ರತಿ ಲೀಟರ್‌ಗೆ ಎರಡು ರು. ಏರಿಸಿ ಆದೇಶ ಹೊರಡಿಸಲಾಗಿದೆ. ಅದರಂತೆ ರಾಜ್ಯದಲ್ಲಿ ಪರಿಷ್ಕೃತ ಲೀ.ದರ 91.02 ರು. ಆಗಲಿದ್ದು, ನೆರೆಯ ರಾಜ್ಯಗಳಿಗೆ ಹೋಲಿಸಿದರೆ ಕಡಿಮೆ ಇರುತ್ತದೆ ಎಂದು ಸರಕಾರ ಸಮರ್ಥಿಸಿಕೊಂಡಿದೆ.

ಇತರೆ ರಾಜ್ಯಗಳ ದರ

ಬೆಂಗಳೂರು	89.02 ರು.
ಹೊಸೂರು (ತಮಿಳುನಾಡು)	94.42 ರು.
ಕಾಸರಗೋಡು(ಕೇರಳ)	95.66 ರು.
ಅನಂತಪುರ (ಆಂಧ್ರಪ್ರದೇಶ)	97.35 ರು.
ಹೈದರಾಬಾದ್(ತೆಲಂಗಾಣ)	95.70 ರು.
ಕಾಗಲ್ (ಮಹಾರಾಷ್ಟ್ರ)	91.07 ರು.

ಸಿಎಂ ದೆಹಲಿ ಭೇಟಿಯ ನಡುವೆಯೇ ಹೊಸ ಚರ್ಚೆ

ಕೈ ಉಸ್ತುವಾರಿ ಬದಲಾವಣೆ?

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ದೆಹಲಿ ಭೇಟಿಯ ಸಮಯದಲ್ಲಿಯೇ ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಅವರ ಬದಲಾವಣೆಯ ಮಾತುಗಳು ಪಕ್ಷದಲ್ಲಿ ಕೇಳಿಬರುತ್ತಿರು ವುದು ತೀವ್ರ ಕುತೂಹಲಕ್ಕೆ ಕಾರಣವಾಗಿದೆ.

ಸುಮಾರು ಏಳೆಂಟು ವರ್ಷಗಳಿಂದ ಕರ್ನಾಟಕದ ಉಸ್ತುವಾರಿಯಾಗಿ ಕಾರ್ಯನಿರ್ವಹಿಸುತ್ತಿರುವ ರಣದೀಪ್ ಸಿಂಗ್ ಸುರ್ಜೇವಾಲ ಅವರನ್ನು ಬದಲಾಯಿಸಬೇಕು ಎನ್ನುವ ಮಾತುಗಳು ಪಕ್ಷದೊಳಗೆ ಕೇಳಿಬರುತ್ತಿವೆ. ಈ ಹಿಂದೆಯೂ ಬದಲಾಗುತ್ತಾರೆ ಎನ್ನುವ ಮಾತಿದ್ದರೂ ರಾಜ್ಯ ಕಾಂಗ್ರೆಸ್‌ನಲ್ಲಿನ ಗೊಂದಲಗಳಿಂದ ಈ ವಿಷಯ ಮುಂದೂಡಿಕೆಯಾಗಿತ್ತು. ಆದರೀಗ ಸುರ್ಜೇವಾಲ ಬದಲಿಗೆ ಬೇರೆಯವರನ್ನು ಉಸ್ತುವಾರಿಯನ್ನಾಗಿ ನೇಮಿಸಬೇಕು. ಬದಲಿಗೆ ಸುರ್ಜೇವಾಲ ಅವರಿಗೆ ಬೇರೆ ರಾಜ್ಯದಲ್ಲಿ ಉಸ್ತುವಾರಿಯ ಹೊಣೆ ನೀಡಬೇಕು ಎನ್ನುವ ಒತ್ತಡ ಪಕ್ಷದ ಆಂತರಿಕ ಸಭೆಗಳಲ್ಲಿ ಕೇಳಿಬರುತ್ತಿದೆ. ಈ ಬೇಡಿಕೆಗೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಬಣ ಹಾಗೂ ಸಿದ್ದರಾಮಯ್ಯ ಬಣವೂ ಒತ್ತು ನೀಡುತ್ತಿರು ವುದರಿಂದ ಬದಲಾವಣೆಯ ಮಾತುಗಳು ಮತ್ತೆ ಮುನ್ನಲೆಗೆ ಬಂದಿದೆ. ರಾಜ್ಯ ಕಾಂಗ್ರೆಸ್‌ನ ಈ ಬೇಡಿಕೆಗೆ ಸಕಾರಾತ್ಮಕವಾಗಿಯೇ ಸ್ಪಂದಿಸಿರುವ ಹೈಕಮಾಂಡ್ ರಣದೀಪ್ ಸಿಂಗ್ ಸುರ್ಜೇವಾಲ ಅವರನ್ನು ಕರ್ನಾಟಕ ಕಾಂಗ್ರೆಸ್ ರಾಜ್ಯ ಉಸ್ತುವಾರಿ ಜವಾಬ್ದಾರಿಯಿಂದ ಬಿಡುಗಡೆ ಮಾಡಲು ತೀರ್ಮಾನಿಸಿದೆ. ಕಳೆದ ತಿಂಗಳೇ ಹೈಕಮಾಂಡ್ ಮಟ್ಟದಲ್ಲಿ ತೀರ್ಮಾನಿಸಲಾಗಿದ್ದು, ಈ ಬಗ್ಗೆ ಸುರ್ಜೇವಾಲ ಅವರ ಗಮನಕ್ಕೂ ತರಲಾಗಿದೆ. ಈಗ ಹೊಸ ಉಸ್ತುವಾರಿ ನೇಮಕ ಮತ್ತು ಸುರ್ಜೇವಾಲಗೆ ನೀಡಬೇಕಿರುವ ಜವಾಬ್ದಾರಿ ಬಗ್ಗೆ ಚರ್ಚೆ ನಡೆಯುತ್ತಿದ್ದು, ಅಂತಿಮವಾಗುತ್ತಿದ್ದಂತೆ ಬದಲಾವಣೆ ಯಾಗಲಿದೆ ಎಂದು ಖಚಿತ ಮೂಲಗಳು ತಿಳಿಸಿವೆ.

ಶಾಸಕರ ಅಮಾನತು: ಕೊನೆಗೂ ಎಚ್ಚೆತ್ತ ಪ್ರತಿಪಕ್ಷ ನಾಯಕ

ಬೆಂಗಳೂರು: ಬಿಜೆಪಿಯ ಶಾಸಕರನ್ನು ಅಮಾನತು ಮಾಡಿದ ಹತ್ತು ದಿನಗಳ ನಂತರ ಎಚ್ಚೆತ್ತುಕೊಂಡಿರುವ ಪ್ರತಿಪಕ್ಷ ನಾಯಕ ಆರ್.ಅಶೋಕ, ತಮ್ಮ ಪಕ್ಷದ ಶಾಸಕರ ಅಮಾನತು ಆದೇಶ ವಾಪಾಸ್ ಪಡೆಯಲು ಕೋರಿ ಸ್ಪೀಕರ್ ಅವರಿಗೆ ಪತ್ರ ಬರೆದಿದ್ದಾರೆ. ಆದರೆ, ಇದಕ್ಕೂ ಮೊದಲು ಈಗ ಪಕ್ಷದಿಂದಲೇ ಅಮಾನತುಗೊಂಡಿರುವ ಬಸನಗೌಡ ಪಾಟೀಲ್ ಯತ್ನಾಳ್ ಈ ಕೆಲಸ ಮಾಡಿದ್ದರು.

ಮಾರ್ಚ್ 21ರಂದು ವಿಧಾನಸಭೆ ಅಧಿವೇಶನದ ವೇಳೆ ಸದನದಲ್ಲಿ ಹನಿಟ್ರ್ಯಾಪ್ ಹಾಗೂ ಮುಸ್ಲಿಮರಿಗೆ ಶೇ 4ರಷ್ಟು ಮೀಸಲಾತಿ ವಿಚಾರದ ಚರ್ಚೆಯು ವಿಕೋಪಕ್ಕೆ ತಿರುಗಿದಾಗ ಪ್ರತಿಪಕ್ಷದವರಾದ ನಾವೆಲ್ಲ ಸಭಾಧ್ಯಕ್ಷರ ಪೀಠದ ಸುತ್ತ ನಿಂತು ಪ್ರತಿಭಟನೆ ಮಾಡಿದ್ದೇವೆ. ಈ ಸಂದರ್ಭದಲ್ಲಿ ತಾವು, ಸದನದಲ್ಲಿ ಪೀಠದ ಆದೇಶ ಲೆಕ್ಕಿಸದೇ ಸದನದ ಕಾರ್ಯಕಲಾಪಗಳಿಗೆ ಅಡ್ಡಿಯುಂಟು ಮಾಡಿರುತ್ತಿರೆಂದು, ಅಶಿಸ್ತಿನಿಂದ ಹಾಗೂ ಅಗೌರವದಿಂದ ನಡೆದುಕೊಂಡಿರುತ್ತಿರೆಂದು ವಿಧಾನಸಭೆಯ 18 ಸದಸ್ಯರನ್ನು ಅಮಾನತುಗೊಳಿಸಿದ್ದೀರಿ. ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಾಮಾವಳಿಗಳ ನಿಯಮ 348ರ ಮೇರೆಗೆ ತಕ್ಷಣದಿಂದ ಜಾರಿಗೆ ಬರುವಂತೆ 6 ತಿಂಗಳುಗಳ ಕಾಲ ಸದನಕ್ಕೆ ಬಾರದಂತೆ ತಡೆಹಿಡಿದು ಅಮಾನತು ಮಾಡಲಾಗಿದೆ. ಅದರ ಜತೆಗೆ ಇತರ ನಿರ್ಬಂಧಗಳನ್ನೂ ವಿಧಿಸಲಾಗಿದೆ ಎಂದು ಆರ್.ಅಶೋಕ ತಮ್ಮ ಪತ್ರದಲ್ಲಿ ವಿವರಿಸಿದ್ದು, ಈ ಅಮಾನತು ಆದೇಶ ವಾಪಸ್ ಪಡೆಯುವಂತೆ ಕೋರಿದ್ದಾರೆ.

ವಿಶ್ವವಾಣಿ ದಿನಪತ್ರಿಕೆಯು ಯುಗಾದಿ ಹಬ್ಬದ ನಿಮಿತ್ತ ಹೊರತಂದಿರುವ ವಿಶೇಷ ಪುರವಣಿಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಂಗಳವಾರ ತಮ್ಮ ಅಧಿಕೃತ ನಿವಾಸ ಕಾವೇರಿಯಲ್ಲಿ ಬಿಡುಗಡೆಗೊಳಿಸಿದರು. ಈ ವೇಳೆ ಪತ್ರಿಕೆಯ ಮುಖ್ಯವರದಿಗಾರ ರಂಜಿತ್ ಎಚ್. ಅಶ್ವತ್ಥ ಹಾಗೂ ಜಾಹೀರಾತು ವಿಭಾಗದ ವ್ಯವಸ್ಥಾಪಕ ಅಶೋಕ್ ಮೂಡಲಗಿರಿ ಇದ್ದರು.

ಗುಜರಾತ್ ಪಟಾಕಿ ಕಾರ್ಖಾನೆಯಲ್ಲಿ ಭಾರೀ ಅಗ್ನಿ ಅವಘಡ

18 ಕಾರ್ಮಿಕರು ಪಟಾಕಿ ಸ್ಫೋಟಕ್ಕೆ ಬಲಿ

ಪಲನ್‌ಪುರ: ಗುಜರಾತ್ ರಾಜ್ಯದ ಬನಸ್ಕಾಂತ ಜಿಲ್ಲೆಯಲ್ಲಿನ ದೀಸಾ ಪಟ್ಟಣದಲ್ಲಿನ ಪಟಾಕಿ ಕಾರ್ಖಾನೆ ಮತ್ತು ಗೋದಾಮಿನಲ್ಲಿ ಮಂಗಳವಾರ ಬೆಳಗ್ಗೆ ಬೆಂಕಿ ಅವಘಡವಾಗಿದ್ದು, 18 ಕಾರ್ಮಿಕರು ದುರ್ಮರಣಕ್ಕೀಡಾಗಿದ್ದಾರೆ. ಮೃತ ಕಾರ್ಮಿಕರೆಲ್ಲರೂ ಮಧ್ಯಪ್ರದೇಶ ರಾಜ್ಯದವರು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಹಲವು ಕಾರ್ಮಿಕರು ಗಾಯಗೊಂಡಿದ್ದು, ದೀಸಾ ಜಿಲ್ಲಾಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಲಾಗುತ್ತಿದೆ. ಗಾಯಾಳುಗಳ ಸ್ಥಿತಿ ಬಹಳ ಗಂಭೀರವಾಗಿದೆ. ಹಾಗಾಗಿ ಸಾವಿನ ಸಂಖ್ಯೆ ಮತ್ತಷ್ಟು ಹೆಚ್ಚುವ ಸಾಧ್ಯತೆ ಇದೆ ಎನ್ನಲಾಗಿದೆ. ಕಾರ್ಖಾನೆಯಲ್ಲಿ ಸ್ಫೋಟವಾದಾಗ ಪಟಾಕಿ ತಯಾರಿಕೆ ಕೆಲಸದಲ್ಲಿ ತೊಡಗಿದ್ದ 18 ಕಾರ್ಮಿಕರು ಸ್ಥಳದಲ್ಲೇ ಅಸುನೀಗಿದ್ದಾರೆ.

ಕೆಲವರು ಸ್ಫೋಟದ ತೀವ್ರತೆಯಿಂದ ಗಾಯಗೊಂಡು ಮಡಿದಿದ್ದರೆ, ಕೆಲವರು ಕುಸಿದ ಗೋದಾಮಿನ ಛಾವಣಿಯಡಿ ಸಿಲುಕಿ ಸಾವಿಗೀಡಾಗಿದ್ದಾರೆ. ಸ್ಫೋಟದ ತೀವ್ರತೆ ಎಷ್ಟಿತ್ತೆಂದರೆ, ಪಟಾಕಿ ಕಾರ್ಖಾನೆಯ ಹಲವು ಸಾಮಗ್ರಿಗಳು 200 ಮೀ. ದೂರದವರೆಗೂ ಹಾರಿಹೋಗಿ ಬಿದ್ದಿವೆ. ಜತೆಗೆ ಪಕ್ಕದಲ್ಲೆ ಇದ್ದ ಗೋದಾಮು ಕೂಡಾ ಕುಸಿದು ನೆಲಕಚ್ಚಿದೆ.

ಅಕ್ರಮ ಕಾರ್ಖಾನೆ

ಕಾರ್ಖಾನೆಯು ದೀಸಾ ನಗರದ ಖೂಬ್‌ಚಂದ್ ಸಿಂಧಿ ಎಂಬವರಿಗೆ ಸೇರಿದ್ದಾಗಿದೆ. ಕಾರ್ಖಾನೆ ಅಕ್ರಮವಾಗಿ ನಡೆಸಲಾಗುತ್ತಿತ್ತು ಎಂದು ಬನಸ್ಕಾಂತ ಎಸ್‌ಪಿ ಅಕ್ಷಯ್ ರಾಜ್ ಮಕ್ವಾನಾ ತಿಳಿಸಿದ್ದಾರೆ. ಬಿಸಿಲ ತಾಪದ ಕಾರಣ ಪಟಾಕಿ ತಯಾರಿಕೆಗೆ ಬಳಸುವ ಸುಡುಮದ್ದು ಸಂಗ್ರಹದಲ್ಲಿ ಕಾವು ಉಂಟಾಗಿ ಬೆಂಕಿ ಹೊತ್ತಿಕೊಂಡಿರಬಹುದು. ಬಳಿಕ ಭಾರೀ ಸ್ಫೋಟವಾಗಿದೆ ಎಂದು ಅಂದಾಜಿಸಲಾಗಿದೆ.

ಮುಸ್ಲಿಂ ಸಮುದಾಯದಲ್ಲಿರುವ ಹಿಂದುತ್ವದ ಮೂಲ ಬೇರು ಜಾಗೃತಗೊಳಿಸಬೇಕು | ಒಂದೇ ಪಕ್ಷವನ್ನು ಬೆಂಬಲಿಸಬೇಕು ಎಂದು ಆರ್‌ಎಸ್‌ಎಸ್ ಹೇಳುವುದಿಲ್ಲ

ಮುಸ್ಲಿಮರಲ್ಲಿ ಹಿಂದುತ್ವ ಜಾಗೃತಗೊಳಿಸಬೇಕಿದೆ: ಹೊಸಬಾಳೆ

ವಿಶ್ವವಾಣಿ ಸುದ್ದಿಮನೆ

ಬೆಂಗಳೂರು: ಕಟ್ಟಡದಲ್ಲಿರುವ ಹಿಂದುತ್ವದ ಪಳೆಯುಳಿಕೆಯನ್ನು ಹುಡುಕುವುದಕ್ಕಿಂತ ಆ ಮುಸ್ಲಿಂ ಸಮುದಾಯದಲ್ಲಿರುವ ಹಿಂದುತ್ವದ ಮೂಲ ಬೇರುಗಳನ್ನು ಜಾಗೃತಗೊಳಿಸಿಬೇಕಿದೆ ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಅಭಿಪ್ರಾಯಪಟ್ಟಿದ್ದಾರೆ.

ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಶತಮಾನೋತ್ಸವದ ಹಿನ್ನಲೆಯಲ್ಲಿ 'ವಿಕ್ರಮ' ಪತ್ರಿಕೆಗೆ ನೀಡಿರುವ ವಿಶೇಷ ಸಂದರ್ಶನದಲ್ಲಿ ಹಿಂದೂ ದೇವಾಲಯ, ಆರ್‌ಎಸ್‌ಎಸ್ ರಾಜಕೀ ಯ ಸಿದ್ಧಾಂತ, ಆರ್‌ಎಸ್‌ಎಸ್‌ನ ಚಿಂತನೆ ಸೇರಿದಂತೆ ಹಲವು ವಿಷಯಗಳ ಬಗ್ಗೆ ಮಾತನಾಡಿ ದ್ದಾರೆ. ಸಂದರ್ಶನದ ಆಯ್ದ ಭಾಗದ ಸಾರಾಂಶ ಇಲ್ಲಿದೆ.

ಅಯೋಧ್ಯೆ ರಾಮಮಂದಿರದ ಆಂದೋ ಲನದ ಬಳಿಕ ಇಂತಹ ಆಂದೋಲನವನ್ನು ಕೈಗೊಳ್ಳುವುದಿಲ್ಲ ಎನ್ನುವ ಮೋಹನ್ ಭಾಗವತ್ ಅವರ ಹೇಳಿಕೆಗೆ ಸ್ಪಷ್ಟನೆ ನೀಡಿರುವ ದತ್ತಾತ್ರೇಯ ಹೊಸಬಾಳೆ ಅವರು, ರಾಮಜನ್ಮಭೂಮಿ ಹೋರಾಟವನ್ನು ಸಂಘ ಆರಂಭಿಸಲಿಲ್ಲ. ಸಮಾಜದ ಧಾರ್ಮಿಕ ನೇತೃತ್ವ ವಹಿಸಿದ್ದ ಅನೇಕ ಸಾಧು ಸಂತರು, ಮಠಾಧೀಶರು ಸಭೆಯನ್ನು ಮಾಡಿ ಅದರಲ್ಲಿ ಈ ತೀರ್ಮಾನ ಮಾಡಿದರು. ಅವರು ಸಂಘವನ್ನು ಕೇಳಿದರು. ರಾಮಜನ್ಮ ಭೂಮಿ ಆಂದೋಲನದಲ್ಲಿ ಸ್ವಯಂಸೇವಕರು ತೊಡಗಲು ಒಪ್ಪಿದೆವು. ಒಂದು ದೇಶದ ಸಂಸ್ಕೃತಿಯ ದೃಷ್ಟಿಯಿಂದ ರಾಮಜನ್ಮಭೂಮಿ ಯಲ್ಲಿ ಮಂದಿರವನ್ನು ನಿರ್ಮಾಣ ಮಾಡಲು, ರಾಮಜನ್ಮಭೂಮಿಯನ್ನು ಹಿಂದೂಗಳಿಗೆ ತೆಗೆದುಕೊಳ್ಳಲು ಒಪ್ಪಿದೆವು. ಅಂದು ವಿಶ್ವ ಹಿಂದೂ ಪರಿಷತ್ ಸಂಘಟನೆ ಹಾಗೂ ಧರ್ಮಾ ಚಾರ್ಯರು ಅಯೋಧ್ಯೆ, ಕಾಶಿ, ಮಥುರಾ ದೇವಾಲಯಗಳ ಬಗ್ಗೆ ಮಾತನಾಡಿದ್ದರು. ಕೆಲವು ಸ್ವಯಂಸೇವಕರು ಸೇರಿಕೊಂಡು ಈ ಮೂರು ಮಂದಿರಗಳ ಕುರಿತು ಪ್ರಯತ್ನ ಮಾಡಿದರೆ ಸಂಘ ಅದನ್ನು ತಡೆಯುತ್ತಿಲ್ಲ ಎಂದು ಸ್ಪಷ್ಟಪಡಿಸಿದರು.

ಆದರೆ ದೇಶದಲ್ಲಿ 30 ಸಾವಿರ ಮಸೀದಿಗಳ ಕೆಳಗೆ ದೇವಾಲಯವಿದೆ ಎಂದರೆ ಅದೆಲ್ಲವನ್ನೂ ಅಗೆದು ಚರಿತ್ರೆಯನ್ನು ಉಲ್ಟಾ ಮಾಡಲು ಹೋದರೆ ಸಮಾಜದಲ್ಲಿ ಇನ್ನಷ್ಟು ವೈರತ್ವ, ದ್ವೇಷವನ್ನೇ ಬೆಳೆಸಿಕೊಂಡು ಹೋಗುತ್ತದೆ. ಹೀಗೆ ಮಾಡುತ್ತಾ ಹೋದರೆ ಸಮಾಜದ ಉಳಿದ ಪರಿವರ್ತನೆಯ ಕೆಲಸ ಯಾವಾಗ ಮಾಡು ವುದು? ಸಮಾಜದಲ್ಲಿರುವ ಅಸ್ಪೃಶ್ಯತೆ ನಿವಾರಣೆ, ಯುವಕರಲ್ಲಿ ಜೀವನಮೌಲ್ಯ, ಸಂಸ್ಕೃತಿಯ ರಕ್ಷಣೆ, ಭಾಷೆ ಉಳಿಸುವ ಕಾರ್ಯ ಬಿಟ್ಟು ಅದೊಂದನ್ನೇ ಮಾಡುತ್ತಾ ಕೂರಬೇಕೇನು? ಇಂದು ಸಮಾಜದಲ್ಲಿ ಮತಾಂತರ, ಗೋಹತ್ಯೆ, ಲವ್ ಜಿಹಾದ್, ಇನ್ನೂ ಅನೇಕ ಸಮಸ್ಯೆಗಳಿವೆ. ಈ ಸಮಸ್ಯೆಗಳ ನಿವಾರಣೆಗೆ ಕೆಲಸ ಮಾಡಬಾರದು ಎಂದು ಸಂಘ ಹೇಳಿಲ್ಲವಲ್ಲ? ಎಂದು ಪ್ರಶ್ನಿಸಿದರು. → 4

- ಹಿಂದೂ ಎನ್ನುವುದು ಒಂದು ಧರ್ಮವಲ್ಲ, ಇದೊಂದು ಜೀವನ ಪದ್ಧತಿ. ನಿಜಕ್ಕೂ ಅದು ಮಾನವಧರ್ಮ.
- ಸಂಘದಲ್ಲಿ ಜಾತಿ ಬಗ್ಗೆ ಚರ್ಚಿಸುವುದಿಲ್ಲ, ನಾವೆಲ್ಲರೂ ಹಿಂದೂ ಎನ್ನುವುದೇ ಸಂಘದಲ್ಲಿ ಮೊದಲ ಪಾಠ.
- ಜಾತಿಯನ್ನು ರಾಜಕೀಯಕ್ಕಾಗಿ ಬಳಸಿಕೊಳ್ಳಲಾಗುತ್ತಿದೆ. ಅಂಬೇಡ್ಕರ್ ಅವರ ಹಾದಿಯಲ್ಲಿ ಜೀವಿಸುತ್ತಿದ್ದೇವೆ ಎನ್ನುವ ಅನೇಕರು ಅವರ ಹೆಸರಲ್ಲಿ ಪಕ್ಷ ಕಟ್ಟಿದ್ದಾರೆ.
- ಭಾರತ ಅಖಂಡವಾಗಿರಬೇಕು ಎನ್ನುವುದು ಕೇವಲ ಭೌಗೋಳಿಕ ಅಖಂಡತೆ ಮಾತ್ರವಲ್ಲ. ಅಖಂಡ ಭಾರತ ಎನ್ನುವುದು ನಮ್ಮ ಜೀವನದ ಕನಸು, ವ್ರತ.



ರಾಜಕೀಯದ ಮೇಲೆ ನೈತಿಕ ನಿಯಂತ್ರಣ ಬೇಕು

ರಾಮನಿದ್ದಾಗ ರಾಮರಾಜ್ಯವಾಗುತ್ತದೆ, ಧರ್ಮವಿದ್ದಾಗ ಧರ್ಮರಾಜ್ಯವಾಗುತ್ತದೆ. ಈ ವಿಶೇಷಣಗಳು ಇಲ್ಲದಿದ್ದಾಗ ಕೇವಲ ಸ್ವಾರ್ಥದ, ಅಧಿಕಾರದ ಪ್ರತಿಷ್ಠೆಯ, ದಾದಾಗಿರಿ ಮಾಡುವ, ರಾಕ್ಷಸೀ ರಾಜ್ಯವಾಗುತ್ತದೆ. ಹಾಗಾಗಿ ರಾಜ್ಯದ ಮೇಲೆ ಸಂಸ್ಕೃತಿಯ ನೈತಿಕ ನಿಯಂತ್ರಣ ಇರಬೇಕು. ಆ ನೈತಿಕ ನಿಯಂತ್ರಣ ಯಾರೋ ಒಬ್ಬಿಬ್ಬರು ವ್ಯಕ್ತಿಗಳು, ಒಂದು ಸಂಘಟನೆ ಮಾಡುವುದಲ್ಲ, ಸಮಾಜದ ಒಂದು ವ್ಯವಸ್ಥೆ ಮಾಡಬೇಕು. ಸಮಾಜ ಒಂದು ಸ್ವಾಯತ್ತ ಶಾಸನವನ್ನು ಗಟ್ಟಿಗೊಳಿಸುವಂತಹ ಸ್ಥಿತಿಗೆ ತಲುಪಿಲ್ಲವಾದ್ದರಿಂದ ರಾಜಕೀಯ ಎಲ್ಲವನ್ನೂ ಪ್ರಭಾವಿಸುತ್ತಿದೆ. ಅದಕ್ಕೆ ಸಮಾಜ ಹೆಚ್ಚು ಶಕ್ತಿಯುತವಾಗಬೇಕು. ಎಲ್ಲವನ್ನೂ ಸರಕಾರವೇ ಮಾಡಬೇಕು ಎಂಬ ಬಯಕೆಯನ್ನು ಜನರೇ ತೋರಿಸುತ್ತಿದ್ದಾರೆ. ಚುನಾವಣೆ ಹಾಗೂ ಬೇರೆಬೇರೆ ಸಂದರ್ಭಗಳಲ್ಲಿ ಜನರಲ್ಲಿ ಇಲ್ಲಸಲ್ಲದ ಆಸೆ ಆಮಿಷಗಳನ್ನು ಹುಟ್ಟಿಸಿ ದಾರಿತಪ್ಪಿಸುತ್ತಿದ್ದಾರೆ. ಈ ವ್ಯವಸ್ಥೆ ಎಷ್ಟು ದಿನ ನಡೆಯುತ್ತದೆ? ಹೀಗೇ ನಡೆದರೆ ದೇಶ ದೀವಾಳಿಯಾಗಿಹೋಗುತ್ತದೆ ಎಂದು ಆತಂಕ ವ್ಯಕ್ತಪಡಿಸಿದ್ದಾರೆ.

ಸಮಾಚಾರ ಸಣ್ಣದಲ್ಲ

ಏ.6ರಂದು ಸತ್ಯನಾರಾಯಣ ವ್ರತ

ಹೊಸನಗರ: ಹೊಸನಗರದ ಸೀತಾರಾಮಚಂದ್ರ ಸಭಾಭವನದ ಆವರಣದಲ್ಲಿ ಕೋಟೆಗಾರ್ ವಿದ್ಯಾವರ್ಧಕ ಸಂಘ, ಮಹಿಳಾ ಸಂಘ ಹಾಗೂ ಕೋಟೆಗಾರ್ ಯುವಕ ಸಂಘದಿಂದ ಏ.6ರಂದು ಶ್ರೀರಾಮ ವಸಂತ ಪೂಜಾ ಹಾಗೂ ಸಾಮೂಹಿಕ ಶ್ರೀ ಸತ್ಯನಾರಾಯಣ ವ್ರತವನ್ನು ಏರ್ಪಡಿಸಲಾಗಿದೆ ಎಂದು ಕೋಟೆಗಾರ್ ಯುವಕ ಸಂಘದ ಅಧ್ಯಕ್ಷರಾದ ಮಾವಿನಕೊಪ್ಪ ಸತೀಶ್ ತಿಳಿಸಿದ್ದಾರೆ. ಭಾನುವಾರ ಬೆಳಿಗ್ಗೆ 9ಗಂಟೆಗೆ ರಾಮ ವಸಂತ ಪೂಜೆ ನಂತರ 10ಗಂಟೆಗೆ ಸತ್ಯ ನಾರಾಯಣ ಪೂಜೆ ಹಾಗೂ 1ಗಂಟೆಗೆ ಪ್ರಸಾದ ವಿನಿಯೋಗ ಮಧ್ಯಾಹ್ನ 1;30ಕ್ಕೆ ಸಾರ್ವಜನಿಕ ಅನ್ನಸಂತರ್ಪಣೆ ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು. ಕೋಟೆಗಾರ್ ಮಹಿಳಾ ಮಂಡಳಿಯಿಂದ ಭಜನೆ, ಸಂಜೆ 6ಗಂಟೆಯಿಂದ ವೇದಿಕೆ ಕಾರ್ಯಕ್ರಮವಿದೆ ಎಂದು ಯುವಕ ಸಂಘದ ಅಧ್ಯಕ್ಷ ಸತೀಶ್ ಮಾವಿನಕೊಪ್ಪ ತಿಳಿಸಿದ್ದಾರೆ.

5ರಂದು ಅಪ್ಪು ಟ್ರೋಫಿ ಕಬಡ್ಡಿ ಪಂದ್ಯಾವಳಿ

ಹೊಸನಗರ: ಹೊಸನಗರ ತಾಲೂಕು ಅರಳಿಕೊಪ್ಪ ಗ್ರಾಮದಲ್ಲಿ ತೃತೀಯ ವರ್ಷದ ಹೊನಲು ಬೆಳಕಿನ ಅಪ್ಪು ಟ್ರೋಫೀ ಕಬಡ್ಡಿ ಪಂದ್ಯಾವಳಿ ಏರ್ಪಡಿಸಲಾಗಿದೆ ಎಂದು ಸಂಘದ ಅಧ್ಯಕ್ಷ ವಿಜಯಕುಮಾರ್ ತಿಳಿಸಿದರು. ಏ.5ನೇ ಶನಿವಾರ ಸಂಜೆ 6ಗಂಟೆಗೆ ಅರಳಿಕೊಪ್ಪದ ಮೈದಾನದಲ್ಲಿ ಆರಂಭವಾಗಲಿದ್ದು ಬಹುಮಾನದ ಜೊತೆಗೆ ಬೆಸ್ಟ್ ರೈಡರ್, ಬೆಸ್ಟ್ ಕ್ಯಾಚರ್ ಹಾಗೂ ಬೆಸ್ಟ್ ಆಲ್‌ರೊಂಡರ್ ಪ್ರಶಸ್ತಿಗಳನ್ನು ನೀಡಿ ಗೌರವಿಸಲಾಗುವುದು. ಆಟಗಾರರು ಹಾಗೂ ಸಾರ್ವಜನಿಕರು ಆಗಮಿಸಿ ಯಶಸ್ವಿಗೊಳಿಸಿಕೊಡಬೇಕೆಂದು ವಿಜಯಕುಮಾರ್, ಪ್ರಧಾನ ಕಾರ್ಯದರ್ಶಿ ಶರತ್ ಹಾಗೂ ಖಜಾಂಚಿ ಸುಧಾಕರ್ ಕೇಳಿಕೊಂಡಿದ್ದಾರೆ.

ನಾಳೆ ಡಿಗ್ರಿ ಕಾಲೇಜಿನಲ್ಲಿ ಜಾನಪದೋತ್ಸವ

ಹೊಸದುರ್ಗ: ನಗರದ ಸರಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಏ.3ರಂದು ಹಳ್ಳಿ ಸೊಗಡಿನ ಬಾಲ್ಯದ ನೆನಪುಗಳತ್ತ ಒಂದು ಹೆಜ್ಜೆ ಧ್ಯೇಯದಡಿ ಜಾನಪದ ಉತವ ಕಾರ್ಯಕ್ರಮವನ್ನು ವಿಶಿಷ್ಟವಾಗಿ ಆಯೋಜಿಸಲಾಗಿದೆ. ದೇವಪುರ ಗ್ರಾಮದ ವೀರಗಾಸೆ ತಂಡ, ಉರುಮೆ, ಗೊರವರ ಕುಣಿತ,

ಬುರ್ರಕಥಾ ಕುಣಿತ, ವೇಷಗಾರರ ಕುಣಿತ, ಉರುಮಾರಮ್ಮ, ಭಜನೆ, ಜೆಎಆರ್ ಪುರದ ಕೋಲಾಟ ಮೇಳ, ಪಾನಕದ ಬಂಡಿ, ಟಗರು, ಜೋಡೆತ್ತಿನ ಬಂಡಿಗಳು, ಪೂಜಾ ಕುಣಿತ, ಕೃಷಿ ಸಲಕರಣೆಗಳು, ವಿವಿಧ ಜಾನಪದ ಊಟೋಪಚಾರಗಳು, ಭಜನೆ, ಅಮ್ಮನ ಕಳಿಸುವವರು, ದೇವರ ಹಲಗನ್ನು ಹೊತ್ತು ಕುಣಿಯುವವರು, ಮುಂತಾದ ಜಾನಪದ ಪ್ರಕಾರಗಳ ವಿಶೇಷ ಮೆರವಣಿಗೆ ಕಾಲೇಜು ಆವರಣದಲ್ಲಿ ಪ್ರದರ್ಶನಗೊಳ್ಳಲಿವೆ. ಆನಿವಾಳದ ಹಲಗೆ ಆಸಾದಿಗಳು ಜಾನಪದ, ಸಾಂಸ್ಕೃತಿಕ ಜಾತ್ರೆಗೆ ಆಗಮಿಸುವರು. ಆದ್ದರಿಂದ ಇನ್ನು ಜಾನಪದಕ್ಕೆ ಸಂಬಂಧಿಸಿದ ಪ್ರಕಾರಗಳನ್ನು ಸ್ಥಳೀಯರು ಮತ್ತು ವಿದ್ಯಾರ್ಥಿಗಳು ಇಚ್ಛೆಯುಳ್ಳವರು ಪ್ರದರ್ಶಿಸಬಹುದು. ಅಳಿವಿನ ಅಂಚಿನಲ್ಲಿರುವ ಜಾನಪದವನ್ನು ಪ್ರದರ್ಶಿಸಿ, ಪರಿಚಯಿಸಿ ಮುಂದಿನ ಪೀಳಿಗೆಗೆ ಉಳಿಸೋಣ ಬನ್ನಿ ಎಂದು ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರು ಮನವಿ ಮಾಡಿದ್ದಾರೆ.

ದೇವರ ದಾಸಿಮಯ್ಯ ಜಯಂತಿ ಇಂದು

ದಾವಣಗೆರೆ:ಜಿಲ್ಲಾಡಳಿತ ವತಿಯಿಂದ ಏ. 2 ರಂದು ಬೆಳಿಗ್ಗೆ 11 ಗಂಟೆಗೆ ದೇವರ ದಾಸಿಮಯ್ಯ ಜಯಂತಿಯನ್ನು ಜಿಲ್ಲಾಡಳಿತ ಭವನದ ತುಂಗಾಭದ್ರ ಸಭಾಂಗಣದಲ್ಲಿ ಆಯೋಜಿಸಲಾಗಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ರವಿಚಂದ್ರ ತಿಳಿಸಿದ್ದಾರೆ.

ವೃತ್ತಿಪರ ಕೋರ್ಸ್‌ಗಳಿಗೆ ಅರ್ಜಿ ಆಹ್ವಾನ

ದಾವಣಗೆರೆ: ಪ್ರಸಕ್ತ ಸಾಲಿಗೆ ಐಐಎಸ್ಸಿ, ಐಐಟಿ ಮತ್ತು ನೀಟ್ ಸಂಸ್ಥೆಗಳ ಮೂಲಕ ಆರ್ಟಿಫಿಶಿಯಲ್ ಇಂಟಲಿಜೆನ್ಸ್ ಅಂಡ್ ಮಶಿನ್ ಲರ್ನಿಂಗ್ ವೃತ್ತಿಪರ ಕೋರ್ಸ್‌ಗಳಲ್ಲಿ ಭಾಗವಹಿಸುವ ಪರಿಶಿಷ್ಟ ಪಂಗಡದ 200 ಇಂಜಿನಿಯರಿಂಗ್ ಪದವೀಧರರಿಗೆ ಶಿಷ್ಯವೇತನ ತರಬೇತಿ ನೀಡಲು ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ನಮೂನೆಯನ್ನು ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳ ಕಚೇರಿ, ಮೊದಲನೇ ಮಹಡಿ, ಜಯವಿಭವನಿಲಯ, ರಾಂ ಕೋ ಅಂಗಡಿ ಎದುರು, 4ನೇ ಮೇನ್, ಪಿ.ಜೆ ಬಡಾವಣೆ ದಾವಣಗೆರೆ ಇಲ್ಲಿ ಪಡೆದು ಏಪ್ರಿಲ್ 9 ರೊಳಗಾಗಿ ಸೂಕ್ತ ದಾಖಲೆಗಳೊಂದಿಗೆ ಕಚೇರಿಗೆ ಸಲ್ಲಿಸಬೇಕು.

{ಜಗದೀಶ್ ಶೆಟ್ಟರ್} ಸಂಸದ

ರಾಜ್ಯದಲ್ಲಿ ಪ್ರತಿ ನಿತ್ಯ ಬೆಲೆ ಏರಿಕೆಯಿಂದ ಜನರು ಬೇಸತ್ತು ಹೋಗಿದ್ದಾರೆ. ಏ.5 ರಿಂದ ಬಿಜೆಪಿಯಿಂದ ರಾಜ್ಯಾದ್ಯಂತ ಹೋರಾಟ ನಡೆಸಲಾಗುವುದು ಎಂದರು. ಸಿದ್ದರಾಮಯ್ಯನವರು ಆಡಳಿತದ ಹಿಡಿತ ಕಳೆದುಕೊಂಡಿದ್ದಾರೆ. ಕಾನೂನು ಸುವ್ಯವಸ್ಥೆ ಸಂಪೂರ್ಣ ಹದಗೆಟ್ಟು ಹೋಗಿದೆ.

ಮತ್ತೆ ಭುಗಿಲೆದ್ದ ಮೈದಾನ ವಿವಾದ

ಮುಸ್ಲಿಂರಿಂದ 10 ಅಡಿ ಎತ್ತರದ ಬೇಲಿ | ಹಿಂದೂ ಕಾರ್ಯಕರ್ತರಿಂದ ಧರಣಿ

ಶಿವಮೊಗ್ಗ: ನಗರದ ಮಧ್ಯ ಭಾಗದಲ್ಲಿರುವ ಜಿಲ್ಲಾಧಿಕಾರಿಗಳ ಕಚೇರಿ ಮುಂಭಾಗದ ಮೈದಾನದ ವಿವಾದ ಮತ್ತೆ ಭುಗಿಲೆದ್ದಿದೆ.

ನಿನ್ನೆ ಮುಸ್ಲಿಂ ಸಮುದಾಯದ ರಂಜಾನ್ ಹಬ್ಬದ ಪ್ರಾರ್ಥನೆಗೆ ಎಂದಿನಂತೆ ಅವಕಾಶ ನೀಡಲಾಗಿತ್ತು. ಆದರೆ ಸೋಮವಾರ ಏಕಾಏಕಿ ಆ ಮೈದಾನಕ್ಕೆ ಹೋಗುವ ಮುಖ್ಯ ದ್ವಾರದಲ್ಲಿ 10 ಅಡಿ ಎತ್ತರದ ಬೇಲಿ ನಿರ್ಮಾಣವಾಗಿತ್ತು. ಇದರಿಂದ ಸುತ್ತಲು ಇರುವ ವಾಣಿಜ್ಯ ಮಳಿಗೆಗಳಿಗೆ ಮತ್ತು ಬ್ಯಾಂಕ್‌ಗಳಿಗೆ ತೆರಳುವ ಹಾಗೂ ಆ ಮೈದಾನದಲ್ಲಿ ವಾಹನ ನಿಲುಗಡೆ ಮಾಡುವ ಸಾರ್ವಜನಿಕರಿಗೆ ತೊಂದರೆಯಾಗಿತ್ತು. ಇದರಿಂದ ಆಕ್ರೋಶ ಭರಿತರಾದ ಸಾರ್ವಜನಿಕರು ಬೇಲಿ ತೆರವುಗೊಳಿಸುವಂತೆ ಪಟ್ಟು ಹಿಡಿದರು.

ಈ ಸಂದರ್ಭದಲ್ಲಿ ಹಿಂದೂ ಪರ ಸಂಘಟನೆಯ ಕಾರ್ಯಕರ್ತರು ಕೂಡ ಸ್ಥಳಕ್ಕೆ ಧಾವಿಸಿ, ಇದು ಮಹಾನಗರ ಪಾಲಿಕೆಗೆ ಸೇರಿದ ಜಾಗ. ಮುಸ್ಲಿಂರು ನಿನ್ನೆ ಪ್ರಾರ್ಥನೆ ಮಾಡಿದ್ದಾರೆ. ಹಬ್ಬ ಶಾಂತಿಯುತವಾಗಿ ನಡೆದಿದೆ. ಅವರ ಪ್ರಾರ್ಥನೆಗೆ ನಾವು ಯಾವುದೇ ಅಡ್ಡಿಪಡಿಸಿಲ್ಲ. ಹಿಂದೂ ಮತ್ತು ಮುಸ್ಲಿಂ ಎಲ್ಲರೂ ನಗರದಲ್ಲಿ ಭಾವೈಕ್ಯತೆಯಿಂದ ಇದ್ದಾರೆ. ಆದರೆ ನಿನ್ನೆ ಪ್ರಾರ್ಥನೆ ಮುಗಿದ ಬಳಿಕ ಬೆಳಿಗ್ಗೆ ಏಕಾಏಕಿ ಬೇಲಿ ಹಾಕಿದ್ದು, ಇದು ಮುಸ್ಲಿಂರ ಏಕಪಕ್ಷೀಯ ತೀರ್ಮಾನ. ಇದಕ್ಕೆ ಅವರು ಯಾವುದೇ ಅನುಮತಿ ಪಡೆದಿಲ್ಲ. ಪಾಲಿಕೆಯ ಗಮನಕ್ಕೂ ತಂದಿಲ್ಲ. ಪೊಲೀಸ್ ಇಲಾಖೆಗೂ ತಿಳಿಸಿಲ್ಲ. ಇದರಿಂದ ಸಾರ್ವಜನಿಕರಿಗೆ ತೊಂದರೆಯಾಗಿದೆ. ಮತ್ತೆ ಇದೊಂದು ದೊಡ್ಡ ವಿವಾದವಾಗುವ ಮೊದಲೇ ಕೂಡಲೇ ಜಿಲ್ಲಾಡಳಿತ ಮತ್ತು ಪೊಲೀಸ್ ಇಲಾಖೆ ಕೂಡಲೇ ತೆರವುಗೊಳಿಸಬೇಕು. ಇಲ್ಲವಾದಲ್ಲಿ ನಾವೇ ತೆರವುಗೊಳಿಸುತ್ತೇವೆ ಎಂದು ಕೆಲವರು ಪಟ್ಟು ಹಿಡಿದು ಸ್ಥಳದಲ್ಲೇ ಧರಣಿ ಕೂತರು.

ಬೇಲಿ ಹಾಕಿದವರ ವಿರುದ್ಧ ಎಫ್‌ಐಆರ್ ದಾಖಲಿಸಬೇಕು. ಮತ್ತು ಬೇಲಿಗೆ ಅಡ್ಡವಾಗಿ ರೈಲ್ವೆ ಕಂಬಿಗಳನ್ನು ಕೂಡ ಬಳಸಿದ್ದು, ಇದು ಕಾನೂನು ಬಾಹಿರ ಇದರ ವಿರುದ್ಧ ಸುಮೋಟೋ ಕೇಸ್ ದಾಖಲಿಸಿ. ಬೇಲಿ ಹಾಕಿದವರ ವಿರುದ್ಧ ಕ್ರಮ ಕೈಗೊಳ್ಳಿ ಎಂದು ಒತ್ತಾಯಿಸಿದರು.

ಪೊಲೀಸ್ ದಳದೊಂದಿಗೆ ಸ್ಥಳಕ್ಕೆ ಬಂದ ಜಿಲ್ಲಾರಕ್ಷಣಾಧಿಕಾರಿ, ಪ್ರತಿಭಟನಾಕಾರರ ಅಹವಾಲು ಆಲಿಸಿದರು.

ಎಸ್ಪಿ ಮಧ್ಯ ಪ್ರವೇಶದಿಂದ ಪರಿಸ್ಥಿತಿ ತಿಳಿ

ಸದ್ಯಕ್ಕೆ ಜಿಲ್ಲಾ ರಕ್ಷಣಾಧಿಕಾರಿಗಳ ಮಧ್ಯ ಪ್ರವೇಶದಿಂದ ಪರಿಸ್ಥಿತಿ ತಿಳಿಯಾಗಿದ್ದು, ಹಿಂದೂಪರ ಸಂಘಟನೆಯ ಕಾರ್ಯಕರ್ತರು ಕೂಡ ಇದಕ್ಕೆ ಒಪ್ಪಿದ್ದು, ಸಂಜೆಯವರೆಗೆ ಕಾದು ನೋಡುವುದಾಗಿ ಹೇಳಿದ್ದು, ಯಾವುದೇ ಕಾರಣಕ್ಕೂ ಇಲ್ಲಿ ಬೇಲಿ ಹಾಕಲು ಬಿಡುವುದಿಲ್ಲ. ಇದು ಸಾರ್ವಜನಿಕರಿಗೆ ಪಾರ್ಕಿಂಗ್‌ಗೆ ಮೀಸಲಾದ ಜಾಗ ಎಂದು ಹೇಳಿದ್ದಾರೆ.

ಈ ಸಂದರ್ಭದಲ್ಲಿ ಕೂಡಲೇ ಪೊಲೀಸ್ ದಳದೊಂದಿಗೆ ಸ್ಥಳಕ್ಕೆ ಬಂದ ಜಿಲ್ಲಾರಕ್ಷಣಾಧಿಕಾರಿ, ಪ್ರತಿಭಟನಾಕಾರರ ಅಹವಾಲು ಆಲಿಸಿ ಸಂಜೆ 7 ಗಂಟೆಯೊಳಗೆ ಬೇಲಿ ತೆರವುಗೊಳಿಸುತ್ತೇವೆ. ಸುಮ್ಮನೆ ವಿವಾದ ಮಾಡುವುದು ಬೇಡ. ಶಾಂತವಾಗಿರಿ, ಪಾಲಿಕೆ ಅಧಿಕಾರಿಗಳೊಂದಿಗೆ ಚರ್ಚಿಸಿ ವಾಸ್ತವ ಸ್ಥಿತಿ ಅರಿತುಕೊಳ್ಳಬೇಕು. ಇದಕ್ಕೆ ಸಮಯ ಬೇಕಾಗುತ್ತದೆ. ಯಾರೂ ಕೂಡ ಕಾನೂನು

ಕೈಗೆತ್ತಿಕೊಳ್ಳುವ ಕೆಲಸ ಮಾಡಬೇಡಿ. ಏನೇ ವಿವಾದ ಇದ್ದರೇ ನಾಲ್ಕು ಗೋಡೆ ಮಧ್ಯೆ ಬಗೆಹರಿಸಿಕೊಳ್ಳೋಣ. ಕೂಡಲೇ ಧರಣಿ ಹಿಂಪಡೆಯಿರಿ. ಏಳು ಗಂಟೆಯೊಳಗೆ ತೆರವುಗೊಳಿಸುವ ಜವಬ್ದಾರಿ ನನ್ನದು ಎಂದು ಭರವಸೆ ನೀಡಿದ ಬಳಿಕ ಪ್ರತಿಭಟನಕಾರರು ಧರಣಿ ಹಿಂಪಡೆದರು.

ಈ ಸಂದರ್ಭದಲ್ಲಿ ವಿಹೆಚ್‌ಪಿ ಪ್ರಮುಖರಾದ ರಮೇಶ್ ಜಾಧವ್, ಸುರೇಶ್ ಬಾಬು, ಬಿಜೆಪಿ ಪ್ರಮುಖರಾದ ಮೋಹನ್‌ರೆಡ್ಡಿ, ದೀನ್‌ದಯಾಳ್, ಶಿವಾನಂದ, ಕಿರಣ್, ಹಿಂದೂಪರ ಸಂಘಟನೆಯ ಪ್ರಮುಖರು, ಸ್ಥಳೀಯ ನಾಯಕರು ಉಪಸ್ಥಿತರಿದ್ದರು.

ತಾಯಿ, ಶಿಶು ಮರಣ ಪ್ರಮಾಣ ತಗ್ಗಿಸಬೇಕು

ಚಿತ್ರದುರ್ಗ: ತರಬೇತಿ ಪ್ರಯೋಜನ ಪಡೆದು ತಾಯಿ ಮತ್ತು ಶಿಶು ಮರಣ ಪ್ರಮಾಣ ತಗ್ಗಿಸುವಲ್ಲಿ ಕಾರ್ಯೋನ್ಮುಖರಾಗುವಂತೆ ಖಾಸಗಿ ಮಕ್ಕಳ ತಜ್ಞರು ಹಾಗೂ ಪ್ರಸೂತಿ ತಜ್ಞರಿಗೆ ಜಿಲ್ಲಾ ಆರ್.ಸಿ.ಹೆಚ್.ಅಧಿಕಾರಿ ಡಾ. ಅಭಿನವ್ ಡಿ.ಎಂ. ಕರೆ ನೀಡಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಸೆಂಟ್ ಜಾನ್ಸ್ ಮೆಡಿಕಲ್ ಕಾಲೇಜು ಮತ್ತು ಆಸ್ಪತ್ರೆ ಸಹಯೋಗದೊಂದಿಗೆ ಐಶ್ವರ್ಯ ಫೋರ್ಟ್ ಸಭಾಂಗಣದಲ್ಲಿ ಮೂರನೆ ಹಂತದ ಐ.ಸಿ.ಎಂ.ಆರ್. ಪ್ರಾಜೆಕ್ಟ್ ಕುರಿತು ಖಾಸಗಿ ಮಧ್ಯಸ್ಥಗಾರರಿಗೆ ಹಮ್ಮಿಕೊಳ್ಳಲಾಗಿದ್ದ ತರಬೇತಿ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದರು.

ತಾಯಿ ಮತ್ತು ಶಿಶು ಮರಣ ಪ್ರಮಾಣವನ್ನು ನಿಯಂತ್ರಣಗೊಳಿಸಬೇಕಾಗಿದ್ದು ನಾವು ಈ ಬಗ್ಗೆ ಸಮಗ್ರವಾಗಿ ಚರ್ಚಿಸಬೇಕು ಎಂದರು.

ಡಾ.ಮಂಜುನಾಥಯ್ಯ, ತಜ್ಞರು ಯಾವ ರೀತಿ ಕೆಲಸ ಮಾಡಬೇಕೆಂದು ಕುರಿತು ಮಾತನಾಡಿದರು. ಡಾ.ಲತಾ, ಡಾ.ಪೃಥ್ವೀಶ್, ಡಾ.ನಾಗೇಂದ್ರಪ್ಪ, ಡಾ. ಬಸವಂತಪ್ಪ, ಡಾ.ಆಯಿಷಾ ಕೆ.ಹೆಚ್. ವೀಣಾ ಭಾಗವಹಿಸಿದ್ದರು.

ತರಬೇತಿ ಕಾರ್ಯಾಗಾರವನ್ನು ಡಾ.ಅಭಿನವ್ ಉದ್ಘಾಟಿಸಿದರು.

ನಮ್ಮ ಹಳ್ಳಿ ಥಿಯೇಟರ್‌ನ ವಾರ್ಷಿಕ ಪ್ರಶಸ್ತಿ

ಶಿವಮೊಗ್ಗ : ನಮ್ಮ ಹಳ್ಳಿ ಥಿಯೇಟರ್ ನೀಡುವ 2024 – 25 ನೇ ಸಾಲಿನ ವಾರ್ಷಿಕ ಪ್ರಶಸ್ತಿ ಘೋಷಿಸಿದ್ದು ರಂಗಭೂಮಿಯ ಸಾಧನೆಗಾಗಿ ಹಿರಿಯ ರಂಗಕರ್ಮಿ ಹಾಗೂ ಸಾಹಿತಿಯಾದ ಡಾ.ಗಜಾನನ ಶರ್ಮ ಹಾಗೂ ಸಮಾಜಸೇವೆಗಾಗಿ ಡಾ.ಸಂಧ್ಯಾಕಾವೇರಿ ಅವರಿಗೆ ಪ್ರಶಸ್ತಿ ಪ್ರಕಟವಾಗಿದೆ ಎಂದು ನಮ್ಮ ಹಳ್ಳಿ ಥಿಯೇಟರ್ ತಂಡದ ಅಧ್ಯಕ್ಷರು ತಿಳಿಸಿದ್ದಾರೆ.

ಪ್ರಶಸ್ತಿಯು ನಗದು, ಪ್ರಶಸ್ತಿ ಫಲಕ ಹಾಗೂ ಪ್ರಶಸ್ತಿ ಪತ್ರವನ್ನು ಒಳಗೊಂಡಿದೆ. ಈ ಹಿಂದೆ ಈ ಪ್ರಶಸ್ತಿಗೆ ಪದ್ಮಶ್ರೀ ಹಾಜಬ್ಬ, ಡಾ.ವಿ.ಎಲ್.ಎಸ್ ಕುಮಾರ್, ಡಾ.ರಜನಿ.ಎ.ಪೈ, ಮಾಲತಿ. ಎಸ್, ಸಂದೇಶ್ ಜವಳಿ, ಪುರುಷೋತ್ತಮ ತಲವಾಟ, ಸೇತುರಾಂ ಭಾಜನರಾಗಿದ್ದರು.

ಗಿಡ್ಡಮ್ಮ ದೇವಸ್ಥಾನ ವಾರ್ಷಿಕೋತ್ಸವ 2ರಿಂದ

ಶಿವಮೊಗ್ಗ: ಶ್ರೀರಕ್ತೇಶ್ವರಿ ಮತ್ತು ಮಳಲಿ ಗಿಡ್ಡಮ್ಮ ದೇವಸ್ಥಾನದ 8ನೇ ವರ್ಷದ ವಾರ್ಷಿಕೋತ್ಸವ ಸಮಾರಂಭ ಏಪ್ರಿಲ್ 2ರಿಂದ 4 ರವರೆಗೆ ವಿನೋಬನಗರ 60 ಅಡಿ ರಸ್ತೆಯಲ್ಲಿರುವ ದೇವಸ್ಥಾನದ ಆವರಣದಲ್ಲಿ ನಡೆಯಲಿದೆ ಎಂದು ಸೇವಾ ಸಮಿತಿಯ ಪ್ರಧಾನ ಕಾರ್ಯದರ್ಶಿ ಪುರುಷೋತ್ತಮ್ ಹೇಳಿದರು.

ಅವರು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಇದು 8ನೇ ವರ್ಷದ ವಾರ್ಷಿಕೋತ್ಸವ ಸಮಾರಂಭವಾಗಿದೆ. ಏ. 2ರಂದು ಸಂಜೆ 6 ಗಂಟೆಗೆ ಗಣಪತಿ ಹೋಮ ಪುಣ್ಯ ವಾಚನ, ಕಳಸ ಪ್ರತಿಷ್ಠಾಪನೆ, ಸುದರ್ಶನ ಹೋಮ, ವಾಸ್ತು ಹೋಮ ನಡೆಯಲಿದ್ದು, ನಂತರ ಸಂಜೆ 7.30 ರಿಂದ ಶ್ರೀರಾಮ ಪ್ರಿಯ ಭಜನಾ ಮಂಡಳಿಯಿಂದ ಭಜನೆ ಏರ್ಪಡಿಸಲಾಗಿದೆ ಎಂದರು. ಏಪ್ರಿಲ್ 3ರ ಬೆಳಗ್ಗೆ 8ಕ್ಕೆ ಕೂಡಲಿ ಶೃಂಗೇರಿ ಶಾರದಾ ಪೀಠದ ಪೀಠಾಧಿಪತಿಗಳಾದ ಶ್ರೀಡಾ. ವಿದ್ಯಾಭಿನವ ವಿದ್ಯಾರಣ್ಯ ಭಾರತಿ ಮಹಾಸ್ವಾಮಿಗಳ ಸಾನ್ನಿಧ್ಯದಲ್ಲಿ ಅಭಿಷೇಕ ಪೂಜಾ ಕಾರ್ಯಕ್ರಮ ನಡೆಯಲಿದೆ ಎಂದರು.

ಏ.4ರಂದು ಬೆಳಗ್ಗೆ 9 ರಿಂದ ಶ್ರೀಡಾ. ಬಸವ ಮರಳಸಿದ್ದ ಸ್ವಾಮೀಜಿಗಳ ಸಾನಿಧ್ಯದಲ್ಲಿ ಅಮ್ಮನವರಿಗೆ ರಕ್ತೇಶ್ವರಿ ಮಹಾ ಹೋಮ ನಡೆಯಲಿದೆ ಎಂದು ಹೇಳಿದರು. ಪತ್ರಿಕಾಗೋಷ್ಠಿ ಯಲ್ಲಿ ಸೇವಾ ಸಮಿತಿಯ ಅಧ್ಯಕ್ಷ ಭೀಮಣ್ಣ, ಉಪಾಧ್ಯಕ್ಷ ದಯಾನಂದ್, ಪ್ರಮುಖರಾದ ಸುರೇಶ್, ಧನಂಜಯ, ಮುರಳಿ ಮುಂತಾದವರಿದ್ದರು.

ಮಡಿವಾಳ ಸಮಾಜದ ಮಕ್ಕಳಿಗೆ ಹಾಸ್ಟೆಲ್

ಚಿತ್ರದುರ್ಗ: ಮಡಿವಾಳ ಸಮಾಜದ ಮಕ್ಕಳ ಶಿಕ್ಷಣಕ್ಕಾಗಿ ಸರಕಾರ ಹೆಚ್ಚಿನ ರೀತಿಯಲ್ಲಿ ಪ್ರೋತ್ಸಾಹ ನೀಡುವಂತೆ ಜಿಲ್ಲಾ ಮಡಿವಾಳರ ಸಂಘದ ಅಧ್ಯಕ್ಷ ಬಿ.ರಾಮಜ್ಜ ಒತ್ತಾಯಿಸಿದರು.

ಪಂಚಾಚಾರ್ಯ ಕಲ್ಯಾಣ ಮಂಟಪದ ಪಕ್ಕದಲ್ಲಿ ಚಿತ್ರದುರ್ಗ ಮಡಿವಾಳರ ಸಂಘದಿಂದ ಮಡಿವಾಳರ ವಿದ್ಯಾರ್ಥಿ ನಿಲಯ ನಾಮ ಫಲಕ ಉದ್ಘಾಟಿಸಿ ಮಾತನಾಡಿದರು. ಸಾಮಾಜಿಕ, ಶೈಕ್ಷಣಿಕ, ಆರ್ಥಿಕ, ರಾಜಕೀಯವಾಗಿ ಹಿಂದುಳಿದಿರುವ ಮಡಿವಾಳರ ಮಕ್ಕಳ ಶಿಕ್ಷಣಕ್ಕಾಗಿ ಅನುಕೂಲ ಮಾಡುವ ಉದ್ದೇಶದಿಂದ ವಿದ್ಯಾರ್ಥಿನಿಲಯ ನಾಮಫಲಕ ಉದ್ಘಾಟಿಸಿದ್ದು, ಮುಂದೆ ಹಾಸ್ಟೆಲ್ ನಿರ್ಮಾಣ ಮಾಡಲಾಗುವುದು. ಇದಕ್ಕೆ ಸರ್ಕಾರ ಅನುದಾನ ನೀಡಿ ನಮ್ಮ ಜನಾಂಗದ ಮಕ್ಕಳ ಶಿಕ್ಷಣಕ್ಕೆ ನೆರವಾಗುವಂತೆ ಮನವಿ ಮಾಡಿದರು. ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾಡಿರಕ್ಕೆ ಬಂದು ಎರಡು ವರ್ಷಗಳಾಗುತ್ತಿದ್ದು, ನಿಗಮಮಂಡಳಿಗಳ ನೇರು. ದಲ್ಲಿ ಮಡಿವಾಳರಿಗೆ ಆದ್ಯತೆ ನೀಡಿಲ್ಲ. ನಮ್ಮ ಸಮಾಜಕ್ಕೆ ಎಂ.ಎಲ್.ಸಿ. ಸ್ಥಾನ ನೀಡುವಂತೆ ಬಿ.ರಾಮಜ್ಜ ವಿನಂತಿಸಿದರು. ಜಿಲ್ಲಾ ಮಡಿವಾಳರ ಸಂಘದ ಗೌರವಾಧ್ಯಕ್ಷ ಡಾ.ವಿ. ಬಸವರಾಜ್, ಉಪಾಧ್ಯಕ್ಷ ಲಕ್ಷ್ಮಣಪ್ಪ, ಕಾರ್ಯದರ್ಶಿ ಕೆ.ಆರ್. ಮಂಜು ನಾಥ್, ಸಹ ಕಾರ್ಯದರ್ಶಿ ಪಿ.ಶಿವಲಿಂಗಪ್ಪ, ಮತ್ತಿತರರಿದ್ದರು.

ಸೌಹಾರ್ದತೆ ಬೆಳೆಸುವ ಜಾತ್ರೆ

ಚಂದ್ರಗುತ್ತಿ ಬಳಿ ಬಾಡದಬೈಲು ಗ್ರಾಮದ ಮಾರಿಕಾಂಬ ದೇವಿ ಜಾತ್ರೆ ರಸಮಂಜರಿ ಕಾರ್ಯಕ್ರಮಕ್ಕೆ ತಾಪಂ ಮಾಜಿಎಚ್‌ಗಣಪತಿ ಹುಲ್ತಿಕೊಪ್ಪ ಚಾಲನೆ ನೀಡಿದರು.

ಚಂದ್ರಗುತ್ತಿ: ಗ್ರಾಮೀಣ ಪ್ರದೇಶಗಳಲ್ಲಿ ಒಗ್ಗೂಡಿ ಜಾತ್ರೆ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಿದರೆ ಸೌಹಾರ್ದತೆಯ ಮನೋಭಾವ ವೃದ್ಧಿಸುತ್ತದೆ ಎಂದು ತಾಪಂ ಮಾಜಿ ಅಧ್ಯಕ್ಷ ಎಚ್. ಗಣಪತಿ ಹುಲ್ತಿಕೊಪ್ಪ ಹೇಳಿದರು.

ಬಾಡದಬೈಲುಗ್ರಾಮದಲ್ಲಿ ಶ್ರೀ ಮಾರಿಕಾಂಬ ದೇವಿ ಜಾತ್ರೆಯ ನಿಮಿತ್ತ ಎಸ್.ಮಧು ಬಂಗಾರಪ್ಪಅಭಿಮಾನಿ ಬಳಗ ಹಾಗೂ ಗ್ರಾಮಸ್ಥರ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ರಸಮಂಜರಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಧಾರ್ಮಿಕ ಸಾಂಪ್ರದಾಯಕ ಆಚರಣೆಗಳನ್ನು ನಡೆಸುವುದರಿಂದ ನಮ್ಮ ಮುಂದಿನ ಯುವಜನತೆಗೆ ನಂಬಿಕೆಗಳು ಉಳಿಯುತ್ತವೆ. ಗ್ರಾಮಗಳಲ್ಲಿ ದೇವರಜಾತ್ರಾ ವೈಭವಗಳು ಜನರಲ್ಲಿಧಾರ್ಮಿಕ ಮನೋಭಾವನೆ ಮೂಡುತ್ತದೆ. ಬಾಡದಬೈಲುಗ್ರಾಮದಲ್ಲಿ ಮಾರಿಕಾಂಬ ದೇವಿ ಜಾತ್ರೆ ಆಚರಿಸಲಾಗಿದ್ದು ದೇವಿಯು ಭಕ್ತರಿಗೆ ಸುಖ, ಶಾಂತಿ ನೆಮ್ಮದಿ ಕರುಣಿಸಲಿ ಎಂದು ಶುಭ ಹಾರೈಸಿದರು.

ಚಂದ್ರಗುತ್ತಿ ಗ್ರಾಪಂ ಅಭಿವೃದ್ಧಿ ಅಧಿಕಾರಿ ನಾರಾಯಣ ಮೂರ್ತಿ, ಚಂದ್ರಗುತ್ತಿ ಪೊಲೀಸ್ ಆರಕ್ಷಕರಾದ ಎಂ.ಬಿ ನಾಗರಾಜ್, ಪ್ರದೀಪ್, ಲೈನ್ ಮ್ಯಾನ್ ಬಸವರಾಜ್, ಗೋಪಾಲ್ ಮೂರ್ತಿ, ಪಿ.ಹೆಚ್.ಸಿ.ಓ ಉಷಾ ಮಹಾದೇವ ಮಡಿವಾಳ ಅವರಿಗೆ ಸನ್ಮಾನಿಸಿ ಗೌರವಿಸಲಾಯಿತು.

ಗ್ರಾಪಂ ಮಾಜಿ ಉಪಾಧ್ಯಕ್ಷ ಪ್ರದೀಪ್‌ಗೌಡ ಬಾಡದಬೈಲುಅಧ್ಯಕ್ಷತೆ ವಹಿಸಿದ್ದರು. ಗ್ರಾಪಂಉಪಾಧ್ಯಕ್ಷ ಎಂ.ಬಿ. ರೇಣುಕಾಪ್ರಸಾದ್ ಇದ್ದರು.

ವರ್ಷದ ಮೊದಲ ಹಬ್ಬ ಯುಗಾದಿಯಂದು ನ್ಯಾಮತಿ ತಾಲೂಕಿನ ಗುಡ್ಡೇಹಳ್ಳಿ ಗ್ರಾಮದ ರೈತ ಯೋಗರಾಜ್ ತಮ್ಮ ಕುಟುಂಬದೊಂದಿಗೆ ಭೂಮಿಗೆ ಪೂಜೆ ಮಾಡಿ ಕೃಷಿ ಚಟುವಟಿಕೆಯ ಮೊದಲ ಬೇಸಾಯಕ್ಕೆ ಚಾಲನೆ ನೀಡಿದರು.

2 ವರ್ಷಕ್ಕೆ ಹಾಲಿಗೆ 9 ರು. ಏರಿಕೆ: ಬಿಜೆಪಿ ಆಕ್ರೋಶ

ಶಿವಮೊಗ್ಗ: ಅಗತ್ಯ ವಸ್ತುಗಳ ಬೆಲೆ ಏರಿಕೆ ಮಾಡಿ ಕಾಂಗ್ರೆಸ್ ಎಂದಿನಂತೆ ತನ್ನ ದುರ್ಬುದ್ಧಿಯನ್ನು ಪ್ರದರ್ಶಿಸಿದೆ ಎಂದು ಶಿವಮೊಗ್ಗ ನಗರ ಶಾಸಕ ಎಸ್.ಎನ್. ಚನ್ನಬಸಪ್ಪ ದೂರಿದರು.

ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಎರಡು ವರ್ಷದಲ್ಲಿ ಕಾಂಗ್ರೆಸ್ ಹಾಲಿಗೆ 9 ರೂ. ಏರಿಸಿದೆ. ಅಷ್ಟೇ ಅಲ್ಲ, 50 ಎಂಎಲ್ ಹಾಲನ್ನು ಕೂಡ ಈಗ ಕಡಿಮೆ ಮಾಡಿ ನಾಗರಿಕರಿಗೆ ಬರೆ ಹಾಕಿದೆ. ಹಿಂದೆ ಆಲ್ಕೋಹಾಲ್ ದರ ಏರಿಸಿತ್ತು. ಈಗ ಹಾಲಿಗೂ ದರ ಜಾಸ್ತಿ ಮಾಡಿದೆ. ಇದು ಕಾಂಗ್ರೆಸ್ಸಿನ ನೀತಿ ಎಂದು ಟೀಕಿಸಿದರು. ಆಸ್ತಿ ನೋಂದಣಿ ಶುಲ್ಕವನ್ನು ಜಾಸ್ತಿ ಮಾಡಿದೆ. ಆಸ್ಪತ್ರೆ ಸೇವಾ ಶುಲ್ಕವನ್ನು ಕೂಡ ಜಾಸ್ತಿ ಮಾಡಿದೆ. ಬಡ ಮಕ್ಕಳು ಓದುವ ಸರಕಾರಿ ಕಾಲೇಜು ಶುಲ್ಕದಲ್ಲೂ ಹೆಚ್ಚಳ ಮಾಡಿದೆ. ಮುದ್ರಾಂಕ ಶುಲ್ಕ, ಆಸ್ತಿ ತೆರಿಗೆ, ಬೀಜದ ಮೇಲಿನ ದರ. ಕುಡಿಯುವ ನೀರಿನ ಮೇಲಿನ ತೆರಿಗೆ ಹೆಚ್ಚಳ, ವಿದ್ಯುತ್ ದರ ಹೆಚ್ಚಳ, ಬಸ್ ದರ ಹೆಚ್ಚಳ ಮಾಡಿ ಬಡವರ ಜೇಬಿಗೆ ಕತ್ತರಿ ಹಾಕಿದೆ ಎಂದರು. ರಾಜ್ಯದ ಸುಮಾರು 9.4 ಲಕ್ಷ ರೈತರಿಗೆ ಹಾಲಿನ ಪ್ರೋತ್ಸಾಹ ಧನ 657 ಕೋಟಿ ರೂ. ಪಾವತಿ ಬಾಕಿ ಇದೆ. ಅಗತ್ಯ ವಸ್ತುಗಳ ಬೆಲೆಯನ್ನು ಮನಸ್ಸಿಗೆ ಬಂದಂತೆ ಹೆಚ್ಚಳ ಮಾಡುತ್ತಾ ಬಡವರಿಗೆ ಬರೆ ಎಳೆದಿದೆ ಎಂದರು.

ಇದನ್ನು ಖಂಡಿಸಿ ನಾಳೆಯಿಂದ 3ನೇ ತಾರೀಕು ಮಧ್ಯಾಹ್ನದವರೆಗೆ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಅಹೋ ರಾತ್ರಿ ಧರಣಿ ನಡೆಯಲಿದೆ. ಜಿಲ್ಲೆಯಿಂದ 400 ಜನ ಪ್ರಮುಖ ಕಾರ್ಯಕರ್ತರು ಭಾಗವಹಿಸಲಿದ್ದಾರೆ. ಏಪ್ರಿಲ್ 7ರಂದು ಮೈಸೂರಿನಿಂದ ಎರಡನೇ ಹಂತದ ಹೋರಾಟ ಪ್ರಾರಂಭವಾಗಲಿದೆ ಎಂದರು.

ನಗರ ಶಾಸಕ ಎಸ್.ಎನ್. ಚನ್ನಬಸಪ್ಪ ಮಾತನಾಡಿದರು.

ಡಿ.ಎಸ್. ಅರುಣ್ ಮಾತನಾಡಿ, ಕೇಂದ್ರ ಇಂದಿನಿಂದ ಪೆಟ್ರೋಲ್ ಮತ್ತು ಡೀಸೆಲ್ ದರ 30 ಪೈಸೆ ಲೀಟರ್‌ಗೆ ಇಳಿಸಿದೆ. ರಾಜ್ಯ ಸರಕಾರ 86 ರೂ.ಗಳಿಗೆ ಪೆಟ್ರೋಲ್ ನೀಡಬಹುದು. ಆದರೆ, ಪೆಟ್ರೋಲ್, ಡೀಸೆಲ್ ತೆರಿಗೆಯನ್ನು ಏರಿಸಿದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಶಾಸಕ ಡಾ. ಧನಂಜಯ್ ಸರ್ಜಿ, ಬಿಜೆಪಿ ಜಿಲ್ಲಾಧ್ಯಕ್ಷ ಜಗದೀಶ್, ಪ್ರಮುಖರಾದ ಶಿವರಾಜ್, ಹರಿಕೃಷ್ಣ, ವಿನ್ಸೆಂಟ್, ಮಾಲತೇಶ್, ಸುಮಲತಾ ಭೂಪಾಳಂ, ರೇಖಾ ಬೋನ್ಸೆ, ಕೆ.ವಿ. ಅಣ್ಣಪ್ಪ ಚಂದ್ರಶೇಖರ್ ಇದ್ದರು.

ನಗರದ ನೀರಿನ ಸಮಸ್ಯೆ ಆಲಿಸಿದ ಶಾಸಕ ಚನ್ನಬಸಪ್ಪ

ನಗರ ಶಾಸಕ ಎಸ್.ಎನ್. ಚನ್ನಬಸಪ್ಪ ಬಡಾವಣೆಗಳಿಗೆ ಭೇಟಿ ನೀಡಿದರು.

ಶಿವಮೊಗ್ಗ: ನಗರ ಶಾಸಕ ಎಸ್.ಎನ್. ಚನ್ನಬಸಪ್ಪ ಅವರು ಮಹಾನಗರ ಪಾಲಿಕೆ, ಜಲ ಮಂಡಳಿ ಮತ್ತು ಶಿವಮೊಗ್ಗ ಸ್ಮಾರ್ಟ್ ಸಿಟಿ ಲಿಮಿಟೆಡ್ ಎಂಜಿನಿಯರ್‌ಗಳೊಂದಿಗೆ ವಾರ್ಡ್ ನಂ. 21 ತಿಲಕ್ ನಗರ ಬಡಾವಣೆಗೆ ಭೇಟಿ ನೀಡಿ, ಅಲ್ಲಿನ ನೀರಿನ ಸಮಸ್ಯೆ ಕುರಿತು ಸ್ಥಳೀಯ ನಿವಾಸಿಗಳಿಂದ ನೇರವಾಗಿ ಮಾಹಿತಿ ಪಡೆದರು. ಈ ಬೇಸಿಗೆಯಲ್ಲಿ ನೀರಿನ ಸರಬರಾಜು ಅತ್ಯಂತ ಅವಶ್ಯಕವಾಗಿದ್ದು, ಈ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿ, ತಕ್ಷಣವೇ ಸ್ಥಳೀಯ ನಿವಾಸಿಗಳಿಗೆ ಸ್ಪಂದಿಸಿ, ಶೀಘ್ರದಲ್ಲೇ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು. ಈ ವೇಳೆ ಪರ್ಫೆಕ್ಟ್ ಅಲಾಯ್‌ನ ಮಾಲೀಕರಾದ ವಸಂತ ಕೃಷ್ಣ ದಿವೇಕರ್, ಪಕ್ಷದ ಮುಖಂಡರು ಉಪಸ್ಥಿತರಿದ್ದರು.

ದಾವಣಗೆರೆ ವಿವಿ 12ನೇ ಘಟಿಕೋತ್ಸವ ಇಂದು

14,048 ವಿದ್ಯಾರ್ಥಿಗಳಿಗೆ ಪದವಿ, 57 ಜನರಿಗೆ ಪಿಎಚ್‌ಡಿ, ಮೂವರಿಗೆ ಗೌರವ ಡಾಕ್ಟರೇಟ್

ದಾವಣಗೆರೆ: ದಾವಣಗೆರೆ ವಿಶ್ವವಿದ್ಯಾನಿಲಯದ 12ನೇ ಘಟಿಕೋತ್ಸವ ಇಂದು (ಏ.2) ಬೆಳಗ್ಗೆ 11.30ಕ್ಕೆ ವಿವಿ ಆವರಣದ ಜ್ಞಾನಸೌಧ ಶಿವಗಂಗೋತ್ರಿಯಲ್ಲಿ ನಡೆಯಲಿದೆ.

ಈ ಕುರಿತು ದಾವಣಗೆರೆ ವಿವಿಯಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಕುಲಪತಿ ಪ್ರೊ.ಬಿ.ಡಿ.ಕುಂಬಾರ ಮಾತನಾಡಿ, ದಾವಣಗೆರೆ ವಿವಿ ಕುಲಾಧಿಪತಿ, ರಾಜ್ಯಪಾಲರಾದ ಥಾವರ್‌ಚಂದ್ ಗೆಹ್ಲೋಟ್ ಅವರು 12ನೇ ಘಟಿಕೋತ್ಸವದ ಅಧ್ಯಕ್ಷತೆ ವಹಿಸುವರು. ಸಮಕುಲಾಧಿಪತಿ, ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್ ಉಪಸ್ಥಿತರಿರುವರು. ಭಾರತೀಯ ವಿಜ್ಞಾನ ಸಂಸ್ಥೆ ಮಾಜಿ ನಿರ್ದೇಶಕ ಪ್ರೊ.ಪಿ. ಬಲರಾಮ್ ಘಟಿಕೋತ್ಸವ ಭಾಷಣ ಮಾಡಲಿದ್ದಾರೆ ಎಂದು ತಿಳಿಸಿದರು.

ಸ್ನಾತಕ ಮತ್ತು ಸ್ನಾತಕೋತ್ತರ ಪದವಿಯ ಒಟ್ಟು 14,048 ವಿದ್ಯಾರ್ಥಿಗಳು ಪದವಿ ಪಡೆಯಲಿದ್ದಾರೆ. 46 ವಿದ್ಯಾರ್ಥಿಗಳು 87 ಚಿನ್ನದ ಪದಕ ಪಡೆದರೆ, ಈ ಬಾರಿ 21 ಮಹಿಳೆಯರು ಮತ್ತು 36 ಪುರುಷರು ಸೇರಿ ಒಟ್ಟು 57 ಮಂದಿ ಪಿಎಚ್.ಡಿ. ಪದವಿ ಪಡೆಯಲಿದ್ದಾರೆ. ಒಟ್ಟು 23 ವಿವಿಧ ವಿಭಾಗಗಳಲ್ಲಿ ಸಂಶೋಧನೆ ನಡೆಸಿದ್ದಾರೆ. ಕಳೆದ ಶೈಕ್ಷಣಿಕ ವರ್ಷದಲ್ಲಿ ಒಟ್ಟು 87 ಸ್ವರ್ಣ ಪದಕಗಳಿದ್ದು, 35 ವಿದ್ಯಾರ್ಥಿನಿಯರು ಸೇರಿ ಒಟ್ಟು 46 ವಿದ್ಯಾರ್ಥಿಗಳು ಪದಕ ಹಂಚಿಕೊಂಡಿದ್ದಾರೆ ಎಂದರು.

ದಾವಣಗೆರೆ ವಿವಿ ಕುಲಪತಿ ಪ್ರೊ.ಬಿ.ಡಿ.ಕುಂಬಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು. ಕುಲಸಚಿವ ಪ್ರೊ.ಆರ್.ಶಶಿಧರ, ಪರೀಕ್ಷಾಂಗ ಕುಲಸಚಿವ ಪ್ರೊ.ಸಿ.ಕೆ.ರಮೇಶ ಇದ್ದಾರೆ.

ಇನ್ನು ವಿವಿಯ 24 ಕೋರ್ಸ್‌ಗಳಲ್ಲಿ ಒಟ್ಟು 1,919 ವಿದ್ಯಾರ್ಥಿಗಳು ಪಿಜಿ ಪದವಿ ಪಡೆಯಲು ಅರ್ಹರಾಗಿದ್ದು, ಇವರಲ್ಲಿ 1,192 ಮಹಿಳೆಯರು ಮತ್ತು 727 ಪುರುಷ ವಿದ್ಯಾರ್ಥಿಗಳು ಸೇರಿದ್ದಾರೆ. ಸ್ನಾತಕೋತ್ತರ ಪದವಿಯಲ್ಲಿ ಶೇ 96.14ರಷ್ಟು ಫಲಿತಾಂಶ ಬಂದಿದೆ.

ಸ್ನಾತಕೋತ್ತರ ಪದವಿಯಲ್ಲಿ ವಾಣಿಜ್ಯಶಾಸ್ತ್ರ ಅಧ್ಯಯನ ವಿಭಾಗದ ವಿದ್ಯಾರ್ಥಿನಿ ಐ.ಕೆ.ರಿಯಾ 6 ಚಿನ್ನದ ಪದಕ ಗಳಿಸಿದ್ದಾರೆ. ಸ್ನಾತಕ ಪದವಿಯಲ್ಲಿ ದಾವಣಗೆರೆ ಎವಿಕೆ ಕಾಲೇಜಿನ ರಕ್ಷಾ ವಿ. ಅಂಗಡಿ (ಬಿಎಸ್ಸಿ), ಹೊಳಲ್ಕೆರೆ ಸರಕಾರಿ ಕಾಲೇಜಿನ ಎಸ್. ಗಂಗಮ್ಮ (ಬಿ.ಎ), ಚಿತ್ರದುರ್ಗ ಎಸ್.ಆರ್.ಎಸ್ ಶಿಕ್ಷಣ ಮಹಾವಿದ್ಯಾಲಯದ ಎನ್.ಪಿ. ಭವ್ಯಶ್ರೀ (ಶಿಕ್ಷಣ) ತಲಾ ಮೂರು ಪದಕಗಳೊಂದಿಗೆ ಸಾಧನೆ ಮಾಡಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ಕುಲಸಚಿವ ಪ್ರೊ.ಆರ್. ಶಶಿಧರ, ಪರೀಕ್ಷಾಂಗ ಕುಲಸಚಿವ ಪ್ರೊ.ಸಿ.ಕೆ.ರಮೇಶ ಇದ್ದರು.

ಮೂವರಿಗೆ ಗೌರವ ಡಾಕ್ಟರೇಟ್

ದಾವಣಗೆರೆ ವಿವಿಯಿಂದ ಈ ಬಾರಿ ಶಿಕ್ಷಣ, ಸಮಾಜಸೇವೆ ಮತ್ತು ಧಾರ್ಮಿಕ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿದ ಮೂವರು ಗಣ್ಯರಿಗೆ ಗೌರವ ಡಾಕ್ಟರೇಟ್ ನೀಡಿ ಗೌರವಿಸಲಿದೆ. ಶಿಕ್ಷಣ ಕ್ಷೇತ್ರದಿಂದ ಪ್ರೊ.ಎಸ್.ಆರ್. ನಿರಂಜನ, ಧಾರ್ಮಿಕ ಕ್ಷೇತ್ರದಿಂದ ಶ್ರೀ ನಿರಂಜನಾನಂದಪುರಿ ಮಹಾಸ್ವಾಮಿ, ಸಮಾಜಸೇವೆ (ರಾಜಕೀಯ) ಕ್ಷೇತ್ರದಿಂದ ಎಸ್.ಎ. ರವೀಂದ್ರನಾಥ ಆಯ್ಕೆ ಮಾಡಲಾಗಿದೆ.

ಸಮಾಚಾರ ಸಣ್ಣದಲ್ಲ

ಆಳ್ವಾಸ್ ಕಾಲೇಜಿಗೆ ತೃತೀಯ ಸ್ಥಾನ

ವಿದ್ಯಾಗಿರಿ: ಬೆಂಗಳೂರಿನ ಗ್ಲೋಬಲ್ ಅಕಾಡೆಮಿ ಆಫ್ ಟೆಕ್ನಾಲಜಿ ಆತಿಥ್ಯದಲ್ಲಿ ನಡೆದ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಮಟ್ಟದ 24ನೇ ಅಂತರ ಕಾಲೇಜು ಸಾಂಸ್ಕೃತಿಕ ಯುವಜನೋತ್ಸವದಲ್ಲಿ ಆಳ್ವಾಸ್ ಎಂಜಿನಿಯರಿಂಗ್ ಮತ್ತು ತಂತ್ರಜ್ಞಾನ ಮಹಾವಿದ್ಯಾಲಯದ ವಿದ್ಯಾರ್ಥಿಗಳು ತೃತೀಯ ಸ್ಥಾನವನ್ನು ಪಡೆದರು. ಏಕಾದಶಾನನ ಏಕಾಂತ ನಾಟಕ ಹಾಗೂ ಮರ ಮತ್ತು ಮಗು ಕಿರುಪ್ರಹಸನ ಎರಡೂ ಪ್ರಥಮ ಪ್ರಶಸ್ತಿಯನ್ನು ಪಡೆದವು. ಜನಪದ ವಾದ್ಯಮೇಳ ದ್ವಿತೀಯ ಸ್ಥಾನ ಪಡೆದರೆ, ಜನಪದ ನೃತ್ಯ ದಲ್ಲಿ ತೃತೀಯ ಸ್ಥಾನ ಪಡೆದರು. ಈ ಸ್ಪರ್ಧೆಯಲ್ಲಿ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಸಂಯೋಜಿತ 140ಕ್ಕೂ ಅಧಿಕ ಕಾಲೇಜುಗಳು ಭಾಗವಹಿಸಿದ್ದವು. ಶಶಿರಾಜ್ ರಾವ್ ಕಾವೂರು ರಚಿಸಿದ ಏಕಾದಶಾನನವನ್ನು ಜೀವನ್ ರಾಂ ಸುಳ್ಯ ನಿರ್ದೇಶಿಸಿದ್ದರು. ಮಗು ಮತ್ತು ಮರ ಕಿರು ಪ್ರಹಸನವನ್ನು ರಾಜೇಂದ್ರ ಪ್ರಸಾದ್ ಮಂಡ್ಯ ಹಾಗೂ ಪ್ರಶಾಂತ್ ಕೋಟ ನಿರ್ದೇಶಿಸಿದ್ದರು. ಸಾತ್ವಿಕ್ ನೆಲ್ಲಿತೀರ್ಥ ಮತ್ತು ಮಧುಸೂದನ(ನೀನಾಸಂ) ಕೊಡಗು ರಂಗವಿನ್ಯಾಸ ಮಾಡಿದ್ದರು. ಎರಡೂ ನಾಟಕಗಳಿಗೆ ಆಳ್ವಾಸ್ ಪಿ.ಯು.ವಿದ್ಯಾರ್ಥಿ, ಸುಳ್ಯ ರಂಗಮನೆಯ ಮನುಜ ನೇಹಿಗ ಸಂಗೀತ ನೀಡಿದ್ದರು. ವಿಜೇತ ತಂಡವನ್ನು ಸಂಸ್ಥೆಯ ಅಧ್ಯಕ್ಷ ಡಾ ಎಂ ಮೋಹನ ಆಳ್ವ, ಟ್ರಸ್ಟಿ ವಿವೇಕ್ ಆಳ್ವ ಅಭಿನಂದಿಸಿದ್ದಾರೆ. ಆಳ್ವಾಸ್ ರಂಗ ಅಧ್ಯಯನ ಕೇಂದ್ರದಲ್ಲಿ ಡಾ.ಜೀವನ್ ರಾಂ ಸುಳ್ಯರಿಂದ ತರಬೇತುಗೊಂಡ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ವಿದ್ಯಾರ್ಥಿ ಕಲಾವಿದರು ಈಗಾಗಲೇ ರಾಷ್ಟ್ರೀಯ ಮಟ್ಟದಲ್ಲಿ 12 ಬಾರಿ ಪ್ರಶಸ್ತಿ ಪಡೆದಿರುವುದು ಒಂದು ದಾಖಲೆಯಾಗಿದೆ ಎಂದು ಡಾ.ಎಂ.ಮೋಹನ ಆಳ್ವ

ಅಡಕೆಯ ಮಾರುಕಟ್ಟೆ ವಿಸ್ತರಣೆಗೆ ಪ್ರಯತ್ನ

ಮಂಗಳೂರು: ಸರಣಿ ಸವಾಲುಗಳ ಮಧ್ಯೆ, ಅಡಿಕೆಯ ಮಾರುಕಟ್ಟೆಯನ್ನು ಜಾಗತಿಕ ಮಟ್ಟಕ್ಕೆ ವಿಸ್ತರಿಸಿ, ಬೆಳೆಗಾರರಿಗೆ ನೆಮ್ಮದಿಯ ಬದುಕು ಕಟ್ಟಿಕೊಡಲು ಕ್ಯಾಂಪ್ಕೊ ಪಯತ್ನ ಪಡುವುದಾಗಿ ಸಂಸ್ಥೆಯ ಅಧ್ಯಕ್ಷ ಕಿಶೋರ್ ಕುಮಾರ್ ಕೊಡ್ಗಿ ತಿಳಿಸಿದ್ದಾರೆ. ಅಡಿಕೆಯನ್ನು ವಿದೇಶಕ್ಕೆ ರಫ್ತು ಮಾಡುವ ತನ್ನ ಮಹತ್ವಾಕಾಂಕ್ಷಿ ಯೋಜನೆಯ ಅನ್ವಯ ಕ್ಯಾಂಪ್ಕೊ 30 ಟನ್ ಅಡಿಕೆಯನ್ನು ಮಾಲ್ಡಿವ್ ದೇಶಕ್ಕೆ ರಫ್ತು ಮಾಡಿದೆ. ಗುಣಮಟ್ಟದ ವಿಚಾರದಲ್ಲಿ ದೇಶೀಯ ಮಾರುಕಟ್ಟೆ ಯಲ್ಲಿ ತನ್ನದೇ ಛಾಪು ಮೂಡಿಸಿರುವ ಕ್ಯಾಂಪ್ಕೊ, ಉತ್ತಮ ಗುಣ ಮಟ್ಟದ ಅಡಿಕೆಯನ್ನು ವಿದೇಶಕ್ಕೆ ರಫ್ತು ಮಾಡಿ ಜಾಗತಿಕ ಮಾರುಕಟ್ಟೆಗೆ ಭಾರತದ ಅಡಿಕೆಯನ್ನು ಪರಿಚಯಿಸಿ ಕ್ಯಾಂಪ್ಕೊ ಬ್ರಾ ್ಯಂಡ್‌ನ್ನು ಜಾಗತೀಕರ ಣಗೊಳಿಸುವ ಉದ್ದೇಶವನ್ನು ಕ್ಯಾಂಪ್ಕೊ ಹೊಂದಿದೆ.

ಏ.9ರಂದು ಬಿಜೆಪಿಯ ಜನಾಕ್ರೋಶ ಯಾತ್ರೆ

ರಾಜ್ಯ ಸರಕಾರದಿಂದ ಬಡವರಿಗೆ ಬೆಲೆ ಏರಿಕೆಯ ಬರೆ | ಬಿಜೆಪಿ ದ.ಕ. ಜಿಲ್ಲಾಧ್ಯಕ್ಷ ಸತೀಶ್ ಕುಂಪಲ

ಮಂಗಳೂರು: ರಾಜ್ಯ ಸರಕಾರದ ವೈಫಲ್ಯದ ವಿರುದ್ಧ ಬಿಜೆಪಿ ರಾಜ್ಯಾದ್ಯಂತ ಜನಾಕ್ರೋಶ ಯಾತ್ರೆ ಕೈಗೊಂಡಿದ್ದು, ಏ.9ರಂದು ಜನಾಕ್ರೋಶ ಯಾತ್ರೆ ಮಂಗಳೂರಿಗೆ ಆಗಮಿಸಲಿದೆ ಎಂದು ಬಿಜೆಪಿ ದಕ್ಷಿಣ ಕನ್ನಡ ಜಿಲ್ಲಾಧ್ಯಕ್ಷ ಸತೀಶ್ ಕುಂಪಲ ಹೇಳಿದರು.

ದ.ಕ. ಜಿಲ್ಲಾ ಬಿಜೆಪಿ ಕಚೇರಿಯಲ್ಲಿ ಮಂಗಳವಾರ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, ರಾಜ್ಯದ ಜನತೆಗೆ ಯುಗಾದಿ ಹಬ್ಬವನ್ನು ಸಂಭ್ರಮ, ಸಡಗರದಿಂದ ಆಚರಿಸಲು ರಾಜ್ಯ ಕಾಂಗ್ರೆಸ್ ಸರಕಾರ ಅವಕಾಶ ನೀಡಿಲ್ಲ. ಹಾಲು ಮತ್ತು ಮೊಸರಿನ ದರ ಲೀಟರ್‌ಗೆ ನಾಲ್ಕು ರು., ವಿದ್ಯುತ್ ದರ ಯೂನಿಟ್‌ಗೆ 36 ಪೈಸೆ ಹೆಚ್ಚಿಸಿ ಜನತೆಗೆ ಆಘಾತ ನೀಡಿದೆ. ವಾಹನ ಖರೀದಿ ತೆರಿಗೆ, ಮುದ್ರಾಂಕ ಶುಲ್ಕ ಸಹಿತ ಅಗತ್ಯ ವಸ್ತುಗಳ ಬೆಲೆಯೇರಿಕೆ ಮಾಡುವ ಮೂಲಕ ದುಬಾರಿಯ ವಾತಾವರಣವನ್ನು ಕಾಂಗ್ರೆಸ್ ಸರಕಾರ ಸೃಷ್ಟಿಸಿದೆ. ಅಧಿಕಾರಕ್ಕೆ ಬಂದ ಬಳಿಕ ಒಟ್ಟು ಮೂರು ಬಾರಿ ಹಾಲಿನ ದರ ಹೆಚ್ಚಿಸಲಾಗಿದೆ ಎಂದು ಮಾಹಿತಿ ನೀಡಿದರು.

ಸರಕಾರಿ ಆಸ್ಪತ್ರೆಗಳಲ್ಲಿ ಹೊರರೋಗಿ ಚೀಟಿ ದರ ಏರಿಕೆ, ವೈದ್ಯಕೀಯ ಪ್ರಮಾಣ ಪತ್ರದ ದರ 250 ರು.ನಿಂದ 300 ರು.ಗೆ ಏರಿಕೆ , ಮುದ್ರಾಂಕ ಶುಲ್ಕ 50 ರು.ನಿಂದ 500 ರು.ಗೆ ಏರಿಸಲಾಗಿದೆ. ಬಿತ್ತನೆ ಬೀಜದ ದರ, ನೀರಿನ ಬಿಲ್, ಕಸ ವಿಲೇವಾರಿ ಸೆಸ್ ಏರಿಸುವ ಮೂಲಕ ಜನತೆಗೆ ಕಾಂಗ್ರೆಸ್ ಸರಕಾರ ಶಾಪಗ್ರಸ್ತ ಸರಕಾರವಾಗಿ ಪರಿಣಮಿಸಿದೆ ಎಂದು ಆರೋಪಿಸಿದರು.

ಬೆಲೆ ಏರಿಕೆ ಖಂಡಿಸಿ ರಾಜ್ಯ ಕಾಂಗ್ರೆಸ್ ಸರಕಾರದ ವಿರುದ್ಧ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಏ.2 ಮತ್ತು 3ರಂದು ಬಿಜೆಪಿ ವತಿಯಿಂದ ಹಮ್ಮಿಕೊಂಡಿರುವ ಅಹೋರಾತ್ರಿ ಧರಣಿಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಬಿಜೆಪಿ ಪದಾಧಿಕಾರಿಗಳು, ಪ್ರಮುಖರು ಭಾಗವಹಿಸಲಿದ್ದಾರೆ ಎಂದು ಅವರು ತಿಳಿಸಿದರು.

ಶಾಸಕರನ್ನು ಆರು ತಿಂಗಳು ಅಮಾನತು ಮಾಡಿರುವುದು ಸರಿಯಲ್ಲ. ಯು.ಟಿ. ಖಾದರ್ ಅವರು ಸ್ಪೀಕರ್ ಆದಾಗ ದಕ್ಷಿಣ ಕನ್ನಡ ಜಿಲ್ಲೆ ಅಭಿವೃದ್ಧಿಯಾಗುತ್ತದೆ ಎಂಬ ಆಶಾವಾದ ಹೊಂದಲಾಗಿತ್ತು. ಆದರೆ, ಜಿಲ್ಲೆ ಯಲ್ಲಿ ಯಾವುದೇ ಅಭಿವೃದ್ಧಿ ಕಾರ್ಯ ನಡೆಯುತ್ತಿಲ್ಲ. ಸ್ಪೀಕರ್ ಅವರನ್ನು ಅವಿರೋಧವಾಗಿ ಆಯ್ಕೆ ಮಾಡಲಾಗಿತ್ತು. ಆದರೆ, ಅವರು ಕಾಂಗ್ರೆಸ್ ಸ್ಪೀಕರ್ ಆಗಿ ಕಾರ್ಯ ನಿರ್ವಹಿಸಿದ್ದಾರೆ.

ಜಿಲ್ಲೆಯ ಇಬ್ಬರು ಶಾಸಕರು ಏನು ತಪ್ಪು ಮಾಡಿದ್ದಾರೆ ಎಂಬ ಬಗ್ಗೆ ಅವರು ವಿಡಿಯೊ ತೋರಿಸಲಿ. ಶಾಸಕರ ಅಮಾನತಿ ನಿಂದ ಅವರ ಕ್ಷೇತ್ರಗಳಲ್ಲಿ ಮತದಾರರಿಗೆ ತೊಂದರೆಯಾಗುತ್ತಿದೆ. ತಕ್ಷಣ ಅಮಾನತನ್ನು ಹಿಂಪಡೆಯಬೇಕು ಎಂದು ಅವರು ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಬಿಜೆಪಿ ದಕ್ಷಿಣ ಕನ್ನಡ ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಯತೀಶ್ ಆರ್ವಾರ್, ಪ್ರೇಮಾನಂದ ಶೆಟ್ಟಿ, ಜಿಲ್ಲಾ ಮಹಿಳಾ ಮೋರ್ಚಾ ಅಧ್ಯಕ್ಷೆ ಡಾ. ಮಂಜುಳಾ ರಾವ್, ಯುವ ಮೋರ್ಚಾ ಅಧ್ಯಕ್ಷ ನಂದನ್ ಮಲ್ಯ, ಎಸ್‌ಸಿ ಮೋರ್ಚಾ ಅಧ್ಯಕ್ಷ ಜಗನ್ನಾಥ, ಹಿಂದುಳಿದ ವರ್ಗಗಳ ಮೋರ್ಚಾ ಅಧ್ಯಕ್ಷ ಮಹೇಶ್ ಜೋಗಿ, ಜಿಲ್ಲಾ ವಕ್ತಾರ ಅರುಣ್ ಜಿ.ಶೇಟ್, ಮಾಧ್ಯಮ ಸಹ ಸಂಯೋಜಕ ಮನೋಹರ ಶೆಟ್ಟಿ, ಸಂಜಯ ಪ್ರಭು ಉಪಸ್ಥಿತರಿದ್ದರು.

ಸುದ್ದಿಗೋಷ್ಠಿಯಲ್ಲಿ ಬಿಜೆಪಿ ದಕ್ಷಿಣ ಕನ್ನಡ ಜಿಲ್ಲಾಧ್ಯಕ್ಷ ಸತೀಶ್ ಕುಂಪಲ ಅವರು ಮಾತನಾಡಿದರು.

> ರಾಜ್ಯ ಕಾಂಗ್ರೆಸ್ ಸರಕಾರದಿಂದ ಇದೀಗ ಜನಸಾಮಾನ್ಯರಿಗೆ ಬದುಕೇ ಇಲ್ಲದಾಗುವ ಸ್ಥಿತಿ ಒದಗಿದೆ. ಮುಸ್ಲಿಮರಿಗೆ ಪ್ರತ್ಯೇಕ ಬಜೆಟ್ ಮಂಡಿಸಲಾಗುತ್ತಿದೆ. ಗ್ಯಾರಂಟಿ ಯೋಜನೆಗಳನ್ನು ಜನತೆಗೆ ತಲುಪಿಸುವಲ್ಲಿ ಸರಕಾರ ವಿಫಲವಾಗಿದೆ. ಎಸ್‌ಸಿ, ಎಸ್‌ಟಿ ನಿಧಿಯನ್ನು ಬೇರೆ ಉದ್ದೇಶಕ್ಕೆ ಬಳಸುವ ಮೂಲಕ ಎಸ್‌ಸಿ, ಎಸ್‌ಟಿ ಸಮುದಾಯಕ್ಕೆ ಅನ್ಯಾಯ ಎಸಗಲಾಗಿದೆ. ಹಿಂದು ಸಮಾಜಕ್ಕೆ ತೊಂದರೆ ನೀಡುವ ರೀತಿಯಲ್ಲಿ ಸರಕಾರ ಕಾರ್ಯ ಎಸಗುತ್ತಿದೆ.
>
> **ಸತೀಶ್ ಕುಂಪಲ,** ಬಿಜೆಪಿ ದಕ್ಷಿಣ ಕನ್ನಡ ಜಿಲ್ಲಾಧ್ಯಕ್ಷ

18 ಶಾಸಕರ ಅಮಾನತು

ದಕ್ಷಿಣ ಕನ್ನಡ ಜಿಲ್ಲೆಯ ಇಬ್ಬರು ಶಾಸಕರ ಸಹಿತ ಬಿಜೆಪಿ 18 ಮಂದಿ ಶಾಸಕರನ್ನು 6 ತಿಂಗಳ ಕಾಲ ವಿಧಾನ ಸಭೆಯ ಸ್ಪೀಕರ್ ಯು.ಟಿ.ಖಾದರ್ ಅಮಾನತು ಮಾಡಿರು ವುದು ಖಂಡ ನೀಯ ಎಂದು ಸತೀಶ್ ಕುಂಪಲ ಹೇಳಿದರು.

ಗಾದೆ, ಒಗಟು, ಜನಪದವೂ ಆಶು ರಚನೆಗಳೆ ಆಗಿವೆ

ಹೆಬ್ರಿ: ಕನ್ನಡ ಸಾಹಿತ್ಯ ಪರಿಷತ್ ಹೆಬ್ರಿ ತಾಲೂಕು ಘಟಕದ ಆಶ್ರಯದಲ್ಲಿ ಅನ್ನಪೂರ್ಣೇಶ್ವರಿ ದೇವಾಲಯ ಶ್ರೀಕ್ಷೇತ್ರ ದುರ್ಗಕ್ಕೆ ಚಾರಣ ಮತ್ತು ದುರ್ಗದಲ್ಲೊಂದು ಆಶು ಕವನ ಗೋಷ್ಠಿ ಕಾರ್ಯಕ್ರಮ ನಡೆಯಿತು.

ಕವಿಗಳಾದ ಮಹೇಶ ಹೈಕಾಡಿ, ಶೋಭಾ ಆರ್. ಕಲ್ಕೂರ, ನವೀನ ಶೆಟ್ಟಿ ಮಡಾಮಕ್ಕಿ, ಬಾಲಚಂದ್ರ ಸುಬ್ಬಣ್ಣ ಕಟ್ಟೆ, ಬಾಲಚಂದ್ರ ಹೆಬ್ಬಾರ್, ಪುಷ್ಪಾವತಿ ಹೆಬ್ರಿ, ಸುಮಂಗಲಾ ಭಟ್, ಶ್ರೀಜನ್ ವಿದ್ಯಾ ಜನಾರ್ಧನ್ ಭಾಗವಹಿಸಿ ಆಶು ಕವನಗಳನ್ನು ಪ್ರಸ್ತುತ ಪಡಿಸಿದರು. ಶ್ರೀ ಕ್ಷೇತ್ರ ದುರ್ಗದ ಸತೀಶ ಬಾಯರಿ ಮಾತನಾಡಿ, ಶ್ರೀ ಕ್ಷೇತ್ರವು ಹೆಬ್ರಿ ತಾಲೂಕಿನ ಪ್ರಾಚೀನ ದೇವಾಲಯ. ಇಲ್ಲಿ ಚಾರಣದೊಂದಿಗೆ ಆಶು ಕವನ ಗೋಷ್ಠಿ ಮೂಲಕ ಸಾಹಿತ್ಯದ ಸೊಗಸನ್ನು ಪಸರಿಸಿರುವುದು ಶ್ಲಾಘನೀಯ ಎಂದರು.

> ಹಳ್ಳಿ, ಬೆಟ್ಟ, ಗುಡ್ಡ, ದುರ್ಗಗಳಲ್ಲಿ ಇಂತಹ ಕಾರ್ಯಕ್ರಮದ ಮೂಲಕ ಅಲ್ಲಿಯ ಜನಪದರನ್ನು ಸಾಹಿತ್ಯದೆಡೆಗೆ ಸೆಳೆಯುವ ಉದ್ದೇಶವನ್ನು ಹೊಂದಿದ್ದು, ಚಾರಣವನ್ನು ಸಾಹಿತ್ಯ ಪ್ರೇರಣೆಗೆ ಬಳಸಿಕೊಳ್ಳುವ ಮೂಲಕ ಸಾಹಿತ್ಯ ಪರಿಷತ್ತು ತನ್ನದೇ ರೀತಿಯಲ್ಲಿ ಕಾರ್ಯನಿರ್ವಹಿಸುತ್ತಿದೆ.
>
> -**ಮುದ್ದೂರು ಶ್ರೀನಿವಾಸ ಭಂಡಾರಿ,** ಕಸಾಪ ಹೆಬ್ರಿ ಘಟಕದ ಅಧ್ಯಕ್ಷ

ಅನ್ನಪೂರ್ಣೇಶ್ವರಿ ದೇವಾಲಯ ಶ್ರೀಕ್ಷೇತ್ರ ದುರ್ಗಕ್ಕೆ ಚಾರಣ ಮತ್ತು ದುರ್ಗದಲ್ಲೊಂದು ಆಶು ಕವನ ಗೋಷ್ಠಿ ಕಾರ್ಯಕ್ರಮ ನಡೆಯಿತು.

ಗೋಷ್ಠಿಯ ಸಮನ್ವಯಕಾರ ಮಂಜುನಾಥ ಕೆ. ಶಿವಪುರ ಮಾತನಾಡಿ, ಮನದ ಭಾವ ಕವನವಾಗಿ ರಚಿಸಲ್ಪಡುವುದೇ ಆಶು ಕವನ. ಬರವಣಿಗೆ ಇಲ್ಲದ ಕಾಲದಲ್ಲಿ ಆಶು ಕವಿತೆಗಳೆ ಪ್ರಧಾನವಾಗಿದ್ದವು. ಗಾದೆ, ಒಗಟು, ಜನಪದ ಸಾಹಿತ್ಯಗಳೂ ಆಶು ರಚನೆಗಳೆ ಆಗಿದೆ. ಆಧುನಿಕ ಯುಗದಲ್ಲಿ ಆಶು ಕವಿತೆಗಳ ಸಂಖ್ಯೆ ಕಡಿಮೆಯಾಗಿವೆ. ಆಶು ಕವಿತೆಗಳು ಭಾವ, ಪಾಂಡಿತ್ಯ, ಸಮಯ ಸ್ಫೂರ್ತಿ, ಭಾಷಾ ಹಿಡಿತ ಉತ್ತಮವಿದ್ದಾಗ ಸ್ವಯಂ ಸ್ಫೂರ್ತಿಯಿಂದ ಹೊರಹೊಮ್ಮುತ್ತವೆ ಎಂದರು.

ಕನ್ನಡ ಸಾಹಿತ್ಯ ಪರಿಷತ್ತಿನ ಹಿರಿಯ ಸದಸ್ಯ ರಾಧಾಕೃಷ್ಣ ರಾವ್, ಹೆಬ್ರಿ ತಾಲೂಕು ಐದನೆಯ ಸಾಹಿತ್ಯ ಸಮ್ಮೇಳನ ಸಮಿತಿಯ ಅಧ್ಯಕ್ಷರಾಗಿದ್ದ ಗಣೇಶ ಹಾಂಡ ಉಪಸ್ಥಿತರಿದ್ದರು. ಶಿಕ್ಷಕಿ ರತ್ನಾವತಿ ಪ್ರಾರ್ಥಿಸಿದರು. ಮಹೇಶ ಹೈಕಾಡಿ ಸ್ವಾಗತಿಸಿ, ಹೆಚ್. ಜನಾರ್ಧನ ವಂದಿಸಿದರು. ಕಾರ್ಯಕ್ರಮದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಸದಸ್ಯರು, ಕನ್ನಡ ಅಭಿಮಾನಿಗಳು ಮತ್ತು ಸ್ಥಳೀಯರು ಪಾಲ್ಗೊಂಡಿದ್ದರು.

ಮಂವಿವಿ ಸಂಶೋಧನೆಗೆ ಹೆಚ್ಚಿನ ಒತ್ತು

ಮಂಗಳೂರು: ಮಂಗಳೂರು ವಿಶ್ವವಿದ್ಯಾನಿಲಯ ಕ್ಯಾಂಪಸ್ ಒಳಗಿರುವ ಇನ್ನೂ ಬಳಕೆಯಾಗದ ಅಂತಾರಾಷ್ಟ್ರೀಯ ಹಾಸ್ಟೆಲ್ ಕಟ್ಟಡವನ್ನು ಸಾರ್ವಜನಿಕ ಹಾಗೂ ಖಾಸಗಿ ಸಹಭಾಗಿತ್ವದಲ್ಲಿ ಉಪಯೋಗಿಸಿಕೊಳ್ಳುವ ಬಗ್ಗೆ ಆಲೋಚನೆ ಮಾಡಲಾಗುತ್ತಿದೆ ಎಂದು ಮಂಗಳೂರು ವಿವಿ ಕುಲಪತಿ ಪ್ರೊ.ಪಿ.ಎಲ್.ಧರ್ಮ ತಿಳಿಸಿದ್ದಾರೆ.

ಮಂಗಳೂರು ವಿವಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಈ ಕುರಿತ ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದ ಅವರು, ನಗರದಲ್ಲಿ ಸಾಕಷ್ಟು ಖಾಸಗಿ ಮೆಡಿಕಲ್, ಇಂಜಿನಿಯರಿಂಗ್ ಕಾಲೇಜುಗಳಿವೆ. ಅವರಿಗೆ ಈ ಕಟ್ಟಡ ಬಳಕೆಗೆ ಸಾಧ್ಯವಾಗುವ ನಿಟ್ಟಿನಲ್ಲಿ ಬೇರೆ ಯಾವುದಾದರೂ ವಿವಿಯಿಂದ ಇಂತಹ ಕ್ರಮ ಆಗಿದ್ದರೆ ಅದನ್ನು ಪರಿಶೀಲಿಸಿ ಅದರ ಆಧಾರದಲ್ಲಿ ಸರಕಾರದ ಅನುಮತಿ ಪಡೆದು ಕ್ರಮ ವಹಿಸಲು ಚಿಂತಿಸಲಾಗಿದೆ ಎಂದು ಹೇಳಿದರು.

ಸದ್ಯ ನಮ್ಮ ವಿವಿ ಕ್ಯಾಂಪಸ್‌ನ ವಿದ್ಯಾರ್ಥಿಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸುವುದು ಆದ್ಯ ಕರ್ತವ್ಯವಾಗಿದೆ. ಈ ಬಾರಿ 13 ಪೇಟೆಂಟ್‌ಗಳು ಮಂಗಳೂರು ವಿವಿಗೆ ದೊರಕಿವೆ. ನಮ್ಮ ವಿಜ್ಞಾನ ಪ್ರಯೋಗಾಲಯವನ್ನು ನಾವು ನಿರ್ವಹಣೆ ಮಾಡಬೇಕಾಗಿದೆ. ಸಂಶೋಧನಾ ವ್ಯವಸ್ಥೆ ಮಾಡಬೇಕಾಗಿದೆ. ಸಣ್ಣ ಮೊತ್ತವನ್ನಾದರೂ ಸಂಶೋಧನೆಗೆ ಬಳಕೆ ಮಾಡದಿದ್ದರೆ ರಾಷ್ಟ್ರ ಮಟ್ಟದಲ್ಲಿ ನಾವು ಸಮಸ್ಯೆ ಎದುರಿಸಬೇಕಾಗಿದೆ. ಅದಕ್ಕಾಗಿ ನಿರಂತರ ತರಗತಿ ಮತ್ತು ಸಂಶೋಧನೆಗೆ ಹೆಚ್ಚು ಒತ್ತು ನೀಡಬೇಕಾಗಿದೆ ಎಂದವರು ಹೇಳಿದರು.

ಮಂಗಳೂರು ವಿವಿ ಕಾಲೇಜಿನ ಸಂಧ್ಯಾ ಕಾಲೇಜು, ಮಂಗಳಗಂಗೋತ್ರಿ, ಬನ್ನಡ್ಕ, ನೆಲ್ಯಾಡಿ ಸೇರಿ ನಾಲ್ಕು ಘಟಕ ಕಾಲೇಜುಗಳು ಕಾರ್ಯನಿರ್ವಹಿಸುತ್ತಿವೆ. ಖಾಯಂ ಉಪನ್ಯಾಸಕರನ್ನು ನೇಮಕ ಮಾಡದೆ, ಕಾಲೇಜಿಗೆ ಅಧಿಕೃತ ಸ್ಥಾನಮಾನ ಇಲ್ಲದೆ ಕಾಲೇಜು ನಡೆಸುವುದು ವಿದ್ಯಾರ್ಥಿಗಳಿಗೂ ಮಾಡುವ ಅನ್ಯಾಯವಾಗುತ್ತದೆ. ಈ ಕಾರಣದಿಂದ ಸರಕಾರವು ಇವುಗಳನ್ನು ಸರಕಾರಿ ಕಾಲೇಜುಗಳಾಗಿ ಪರಿಗಣಿಸಲು ಮನವಿ ಸಲ್ಲಿಸಲಾಗಿದೆ ಎಂದು ವಿವಿ ಕುಲಪತಿ ಪ್ರೊ.ಪಿ.ಎಲ್.ಧರ್ಮ ಹೇಳಿದರು.

> **ಈಗಿರುವ ಪರಿಸ್ಥಿತಿಯಲ್ಲಿ ಮಂಗಳೂರು ವಿವಿಯ ಘಟಕ ಕಾಲೇಜುಗಳ ನಿರ್ವಹಣೆ ಕಷ್ಟಸಾಧ್ಯವಾಗಿದೆ. ಪದವಿ ಕಾಲೇಜುಗಳಿಗೆ ಖಾಯಂ ಉಪನ್ಯಾಸಕರ ಕೊರತೆ ಇದೆ. ಅತಿಥಿ ಉಪನ್ಯಾಸಕರು ಉತ್ತಮವಾಗಿ ನಿರ್ವಹಣೆ ತೋರುತ್ತಿದ್ದರೂ, ಹಿರಿಯ ಅನುಭವಿ ಅಧ್ಯಾಪಕರ ಅಗತ್ಯ ಇದೆ. ಅದಕ್ಕಾಗಿ ಈ ಘಟಕ ಕಾಲೇಜುಗಳನ್ನು ಸರಕಾರಿ ಕಾಲೇಜು ಆಗಿ ಪರಿವರ್ತಿಸಲು ಮನವಿ ಮಾಡಲಾಗಿದೆ. ಈ ಮೂಲಕ ವಿದ್ಯಾರ್ಥಿಗಳಿಗೂ ನ್ಯಾಯ ದೊರಕಿಸಲು ಸಾಧ್ಯವಾಗಲಿದೆ.**
>
> -**ಪ್ರೊ.ಪಿ.ಎಲ್.ಧರ್ಮ,** ಮಂಗಳೂರು ವಿವಿ ಕುಲಪತಿ

ಸಮಾಚಾರ ಸಣ್ಣದಲ್ಲ

ಪ್ರಕೃತಿಗೆ ಒಲಿದ ಚಿನ್ನದ ಪದಕ

ಬೆಂಗಳೂರು: ಇತ್ತೀಚೆಗೆ ನಡೆದ ಮಂಗಳೂರು ವಿಶ್ವವಿದ್ಯಾಲಯದ ವಾರ್ಷಿಕ ಘಟಿಕೋತ್ಸವದಲ್ಲಿ ಪ್ರಕೃತಿ.ಎಸ್.ಕೆ ಅವರಿಗೆ ಚಿನ್ನದ ಪದಕ ನೀಡಿ ಗೌರವಿಸಲಾಯಿತು. ಪ್ರಕೃತಿ ಅವರು 2024 ನೇ ಸಾಲಿನ ಎಂ.ಎಸ್ಸಿ ಮನಃಶಾಸ್ತ್ರ ಪರೀಕ್ಷೆಯಲ್ಲಿ ಪ್ರಥಮ ಶ್ರೇಯಾಂಕ ಪಡೆದಿದ್ದಾರೆ. ಅವರ ಅವರ ಶೈಕ್ಷಣಿಕ ಶ್ರೇಷ್ಠತೆಗಾಗಿ ಮಂಗಳೂರು ವಿಶ್ವವಿದ್ಯಾಲಯದ 'ಪೂಜ್ಯ ಕೀರ್ತಿಶೇಷ ಧರ್ಮಸ್ಥಳ ಮಂಜಯ್ಯ ಹೆಗಡೆ ಜನ್ಮ ಶತಮಾನೋತ್ಸವ ಸ್ಮರಣಾರ್ಥ' ಚಿನ್ನದ ಪದಕ ನೀಡಿ ಗೌರವಿಸಿದೆ. ಘಟಿಕೋತ್ಸವದಲ್ಲಿ ಉನ್ನತ ಶಿಕ್ಷಣ ಸಚಿವ ಡಾ.ಎಂ. ಸಿ.ಸುಧಾಕರ್, ಸೋಮಯ್ಯ ವಿದ್ಯಾವಿಹಾರ್ ವಿಶ್ವವಿದ್ಯಾನಿಲಯದ ಉಪಕುಲಪತಿ ವಿ.ಎನ್.ರಾಜಶೇಖರನ್ ಪಿಳ್ಳೈ ಉಪಸ್ಥಿತರಿದ್ದರು.

ಆದೇಶ ವಾಪಸ್ ಪಡೆಯುವಂತೆ ಕೋರಿ ಸ್ಪೀಕರ್‌ಗೆ ಪತ್ರ ಬರೆದ ಪ್ರತಿಪಕ್ಷ ನಾಯಕ

18 ಶಾಸಕರ ಅಮಾನತು: ಹತ್ತು ದಿನಗಳ ಬಳಿಕ ಎಚ್ಚೆತ್ತ ಅಶೋಕ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಬಿಜೆಪಿಯ ಶಾಸಕರನ್ನು ಅಮಾನತು ಮಾಡಿದ ಹತ್ತು ದಿನಗಳ ನಂತರ ಎಚ್ಚೆತ್ತುಕೊಂಡಿರುವ ಪ್ರತಿಪಕ್ಷ ನಾಯಕ ಆರ್.ಅಶೋಕ, ತಮ್ಮ ಪಕ್ಷದ ಶಾಸಕರ ಅಮಾನತು ಆದೇಶ ವಾಪಸ್ ಪಡೆಯಲು ಕೋರಿ ಸ್ಪೀಕರ್ ಅವರಿಗೆ ಪತ್ರ ಬರೆದಿದ್ದಾರೆ. ಆದರೆ, ಇದಕ್ಕೂ ಮೊದಲು ಈಗ ಪಕ್ಷದಿಂದಲೇ ಅಮಾನತು ಗೊಂಡಿರುವ ಬಸನಗೌಡ ಪಾಟೀಲ್ ಯತ್ನಾಳ್ ಈ ಕೆಲಸ ಮಾಡಿದ್ದರು.

ಮಾರ್ಚ್ 21ರಂದು ವಿಧಾನಸಭೆ ಅಧಿವೇಶನದ ವೇಳೆ ಸದನದಲ್ಲಿ ಹನಿಟ್ರ್ಯಾಪ್ ಹಾಗೂ ಮುಸ್ಲಿಮರಿಗೆ ಶೇ 4ರಷ್ಟು ಮೀಸಲಾತಿ ವಿಚಾರದ ಚರ್ಚೆಯು ವಿಕೋಪಕ್ಕೆ ತಿರುಗಿದಾಗ ಪ್ರತಿಪಕ್ಷದವರಾದ ನಾವೆಲ್ಲ ಸಭಾಧ್ಯಕ್ಷರ ಪೀಠದ ಸುತ್ತ ನಿಂತು ಪ್ರತಿಭಟನೆ ಮಾಡಿದ್ದೇವೆ. ಈ ಸಂದರ್ಭದಲ್ಲಿ ತಾವು, ಸದನದಲ್ಲಿ ಪೀಠದ ಆದೇಶ ಲೆಕ್ಕಿಸದೇ ಸದನದ ಕಾರ್ಯಕಲಾಪಗಳಿಗೆ ಅಡ್ಡಿಯುಂಟು ಮಾಡಿರುತ್ತಿರೆಂದು, ಅಶಿಸ್ತಿನಿಂದ ಹಾಗೂ ಅಗೌರವದಿಂದ ನಡೆದುಕೊಂಡಿರುತ್ತಿರೆಂದು ವಿಧಾನಸಭೆಯ 18 ಸದಸ್ಯರನ್ನು ಅಮಾನತುಗೊಳಿಸಿದ್ದೀರಿ. ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮಾವಳಿಗಳ ನಿಯಮ 348ರ ಮೇರೆಗೆ ತಕ್ಷಣದಿಂದ ಜಾರಿಗೆ ಬರುವಂತೆ 6 ತಿಂಗಳುಗಳ ಕಾಲ ಸದನಕ್ಕೆ ಬಾರದಂತೆ ತಡೆಹಿಡಿದು ಅಮಾನತು ಮಾಡಲಾಗಿದೆ. ಅದರ ಜತೆಗೆ ಇತರ ನಿರ್ಬಂಧಗಳನ್ನೂ ವಿಧಿಸಲಾಗಿದೆ ಎಂದು ಆರ್.ಅಶೋಕ ತಮ್ಮ ಪತ್ರದಲ್ಲಿ ವಿವರಿಸಿದ್ದು, ಈ ಅಮಾನತು ಆದೇಶ ವಾಪಸ್ ಪಡೆಯುವಂತೆ ಕೋರಿದ್ದಾರೆ.

ಆದೇಶ ಮರುಪರಿಶೀಲಿಸಿ

ಅಮಾನತು ಆದೇಶವನ್ನು ಮತ್ತೊಮ್ಮೆ ಮರು ಪರಿಶೀಲಿಸಲು ಕೋರುತ್ತಾ, ಸದರಿ ಅದೇಶವನ್ನು ಹಿಂಪಡೆಯಿರಿ ನಮ್ಮ ಪ್ರತಿಭಟನೆ ನಿಮ್ಮ ವಿರುದ್ಧ ಇರಲಿಲ್ಲ ಎಂಬುದನ್ನು ಅತ್ಯಂತ ಪ್ರಾಮಾಣಿಕವಾಗಿ ಮತ್ತೊಮ್ಮೆ ಗಮನಕ್ಕೆ ತರಲು ಬಯಸುತ್ತೇನೆ. ಈ ಪತ್ರದ ಆರಂಭದಲ್ಲಿ ತಿಳಿಸಿದಂತೆ ಸದನ ದೊಡ್ಡದು. ಸಭಾಧ್ಯಕ್ಷರು ದೊಡ್ಡವರು ಎಂಬ ಪ್ರಜಾಪ್ರಭುತ್ವದ ಮೂಲಭೂತ ಆಶಯಕ್ಕೆ ಅನುಗುಣವಾಗಿ ಹಾಗೂ ನಾವೆಲ್ಲರೂ ಸೇರಿಕೊಂಡು ಈ ಸಂಸ್ಥೆಯ ಘನತೆ ಹಾಗೂ ಗೌರವ ಉಳಿಸಬೇಕಾಗಿದೆ ಎಂಬ ತತ್ವದಲ್ಲಿ ನಂಬಿಕೆ ಇರಿಸಿ ಅಮಾನತು ಆದೇಶವನ್ನು ಮತ್ತೊಮ್ಮೆ ಮರು ಪರಿಶೀಲಿಸಲು ಕೋರುತ್ತಾ, ಅದೇಶ ಹಿಂಪಡೆಯಬೇಕಾಗಿ ತಮ್ಮನ್ನು ಕೋರುತ್ತೇನೆ ಎಂದು ಆರ್.ಅಶೋಕ ಮನವಿ ಮಾಡಿದ್ದಾರೆ.

ಘಟನೆ ಉದ್ದೇಶಪೂರ್ವಕವಲ್ಲ: ರಾಜ್ಯದ ವಿಧಾನ ಮಂಡಲದ ಉಭಯ ಸದನಗಳು ಪ್ರಜಾಪ್ರಭುತ್ವದ ಅತ್ಯುನ್ನತ ಸ್ಥಳಗಳು. ಪ್ರಜಾಪ್ರಭುತ್ವದ ದೇಗುಲಗಳು ಎಂದು ಕರೆದರೆ ತಪ್ಪೇನೂ ಇಲ್ಲ. ಈ ದೇಗುಲಗಳಲ್ಲಿನ ಸಭಾಧ್ಯಕ್ಷರು ಮತ್ತು ಮಾನ್ಯ ಸಭಾಪತಿಗಳಿಗೆ ಇರುವ ಸ್ಥಾನವೂ ಅಷ್ಟೇ ಗೌರವಾನ್ವಿತವಾದುದು. ಈ ವಿಚಾರದಲ್ಲಿ ನನಗೆ ಯಾವ ಭಿನ್ನಾಭಿಪ್ರಾಯವೂ ಇಲ್ಲ. ಮಾರ್ಚ್ 21ರಂದು ನಡೆದ ಘಟನೆ ಉದ್ದೇಶಪೂರ್ವಕವಾದುದಲ್ಲ. ಅಥವಾ ನಿಮ್ಮ ಪೀಠಕ್ಕೆ ಅಗೌರವ ತರುವ ಉದ್ದೇಶವೂ ಯಾವ ಶಾಸಕರಿಗೂ ಇರಲಿಲ್ಲ. ಕಳೆದ ಎರಡು ವರ್ಷಗಳಲ್ಲಿ ತಾವು ಸದನದ ಕಲಾಪ ನಿರ್ವಹಿಸುವುದನ್ನು ನಾವು ಅತ್ಯಂತ ಹತ್ತಿರದಿಂದ ನೋಡಿದ್ದೇವೆ. ಸಂಸದೀಯ ಚರ್ಚೆಯ ಗುಣಮಟ್ಟ ಭಾಷೆಯ ಬಳಕೆ, ಕಲಾಪಗಳಲ್ಲಿನ ನಿಯಮಗಳ ಪಾಲನೆ ಇತ್ಯಾದಿಗಳೆಲ್ಲವೂ ದಿನದಿಂದ ದಿನಕ್ಕೆ ಕುಸಿಯುತ್ತಿರುವ ಈ ದಿನಗಳಲ್ಲಿ, ಯಾರಿಗೇ ಆಗಲೀ ಇದು ಅತ್ಯಂತ ಕಷ್ಟದ ಕೆಲಸ ಎಂಬುದು ಅರ್ಥವಾಗುತ್ತದೆ. ಅದಕ್ಕಾಗಿಯೇ ನಿಮ್ಮ ಬಗ್ಗೆ ನಮಗೆ ಅಪಾರ ಗೌರವವಿದೆ ಎಂದು ಆರ್.ಅಶೋಕ ತಿಳಿಸಿದ್ದಾರೆ.

ಒಂದು ವೇಳೆ ತಾವು ಅಂದು ನಮ್ಮ ಎಲ್ಲ ಶಾಸಕರನ್ನು ತಮ್ಮ ಕೊಠಡಿಗೆ ಕರೆದು ವಿವರಣೆ ಕೇಳಿದ್ದರೆ ನಾವು ಖಂಡಿತ ಈ ಘಟನೆ ಬಗ್ಗೆ ಸ್ಪಷ್ಟೀಕರಣ ಕೊಡುತ್ತಿದ್ದೆವು. ಆದರೆ ಅದಕ್ಕೆ ಅವಕಾಶ ಸಿಗಲಿಲ್ಲ. ಈಗ ಒಂದಿಷ್ಟು ಕಠೋರ ಎನ್ನುವಂತಹ ನಿರ್ಧಾರ ತಮ್ಮಿಂದ ಪ್ರಕಟವಾಗಿದೆ. ಇದರಿಂದಾಗಿ ಒಟ್ಟು 18 ಶಾಸಕರು ಜನಪ್ರತಿನಿಧಿಯಾಗಿ ಕೆಲಸ ಮಾಡಲು ಅವರ ಮೇಲೆ ಹಲವು ನಿರ್ಬಂಧಗಳನ್ನು ವಿಧಿಸಿದಂತೆ ಆಗಿದೆ. ಈ ನಿರ್ಬಂಧಗಳನ್ನು ಸಡಿಲಿಸಿ, ಎಂದಿನಂತೆ ಒಬ್ಬ ಜನಪ್ರತಿನಿಧಿಯಾಗಿ ಕೆಲಸ ಮಾಡಲು ಅವರಿಗೆ ಅವಕಾಶ ಕೊಡಬೇಕೆಂದು ಕೋರಿ ಈ ಪತ್ರ ಬರೆಯುತ್ತಿದ್ದೇನೆ ಎಂದಿದ್ದಾರೆ.

ಮುಸ್ಲಿಮರಲ್ಲಿ ಹಿಂದುತ್ವ ಜಾಗೃತಗೊಳಿಸಬೇಕಿದೆ: ಹೊಸಬಾಳೆ

← ಮೊದಲಪುಟದಿಂದ

ಇದು ಬದಲಾಗದಿದ್ದರೆ ರಾಜಕೀಯ ಪಕ್ಷಗಳ ಉದ್ದೇಶ, ಹೇಳಿಕೆಗಳು ಬದಲಾಗುವುದಿಲ್ಲ. ಇದೆಲ್ಲದರ ಆಧಾರದಲ್ಲಿ ರಾಜಕೀಯ ನಡೆಯುವುದರಿಂದ ರಾಜಕೀಯ ಒಡಕು ತರುತ್ತದೆ. ದೇಶದಲ್ಲಿ ಅನೇಕ ರಾಜಕೀಯ ಪಕ್ಷಗಳು ಇರುವುದು ಸಮಾಜಕ್ಕೆ ತೊಡಕಲ್ಲ, ಒಡಕಲ್ಲ. ಆದರೆ ರಾಷ್ಟ್ರೀಯತೆಯ ದೃಷ್ಟಿಯಿಂದ ಮನೋಭೂಮಿಕೆ ಒಂದಾಗಬೇಕು, ಉಳಿದಂತೆ ನೀತಿಗಳ ದೃಷ್ಟಿಯಲ್ಲಿ ಭಿನ್ನತೆ ಇರಬಹುದು, ಬರಬಹುದು ಎಂದು ಅಭಿಪ್ರಾಯಪಟ್ಟಿದ್ದಾರೆ.

ಒಂದು ಪಕ್ಷ ಬೆಂಬಲಿಸಬೇಕೆಂದಿಲ್ಲ: ಸಂಘ ಯಾವುದೇ ಒಂದು ರಾಜಕೀಯ ಪಕ್ಷವನ್ನೇ (ಬಿಜೆಪಿ) ಬೆಂಬಲಿಸಬೇಕು ಎನ್ನುವುದು ಮೂಲ ನಿಲುಮೆಯಲ್ಲಿಲ್ಲ. ಸ್ವಯಂಸೇವಕರು ಸಾಮಾಜಿಕ, ರಾಜಕೀಯ ವ್ಯವಸ್ಥೆಯಲ್ಲಿ ಎಲ್ಲಿ ಬೇಕಾದರೂ ಕೆಲಸ ಮಾಡಬಹುದು. ಆದರೆ ನಮ್ಮ ದೇಶದಲ್ಲಿ ರಾಜಕೀಯ ಯಾವ ನಿಟ್ಟಿನಲ್ಲಿ ನಡೆದಿದೆ? ಗಾಂಧೀಜಿ, ಮಾಲವೀಯ, ಪೂರ್ಣಾನಂದರು ಮುಂತಾದವರ ಪರಂಪರೆ ಆ ಪಕ್ಷಗಳಲ್ಲಿ ಉಳಿದಿದೆಯೇ? ಪ್ರಣಬ್ ಮುಖರ್ಜಿಯವರು ತಮ್ಮ ಪಕ್ಷದಲ್ಲಿದ್ದಾಗ ಸಂಘದ ಕಾರ್ಯಕ್ರಮಕ್ಕೆ ಬರಲು ಆಗುತ್ತಿರಲಿಲ್ಲ, ಏಕೆಂದರೆ ಸಂಘವನ್ನು ರಾಜಕೀಯವಾಗಿ ಅಸ್ಪೃಶ್ಯ ಎಂದು ರಾಜಕೀಯ ಪಕ್ಷಗಳು ನಡೆಸಿಕೊಂಡಿದ್ದರಿಂದ. ಕೇರಳದ ಕೊಚ್ಚಿನ್‌ನಲ್ಲಿ ಕಮ್ಯುನಿಸ್ಟ್ ಪಕ್ಷದ ನಾಯಕರೊಬ್ಬರು ಸಂಘದ ಕಾರ್ಯಕ್ರಮಕ್ಕೆ ಬಂದಿದ್ದರು. ಅದೊಂದೇ ಕಾರಣಕ್ಕೆ ಅವರಿಗೆ ನೋಟಿಸ್ ಕೊಟ್ಟು ಪಕ್ಷದಿಂದ ಹೊರಹಾಕಲಾಯಿತು. ಅಂದರೆ ಅಸ್ಪೃಶ್ಯತೆ ಮಾಡುತ್ತಿರುವವರು ಯಾರು?

ಆದ್ದರಿಂದ ಯಾವ ಪಕ್ಷ ನೀನು ಸಂಘದೊಂದಿಗಿನ ಸಂಬಂಧವನ್ನು ತೆಗೆದುಹಾಕಬೇಕಿಲ್ಲ ಎನ್ನುತ್ತದೆಯೋ ಆ ಪಕ್ಷದ ಜತೆಗೆ ಸ್ವಯಂಸೇವಕರು ಸಹಜವಾಗಿ ಗುರುತಿಸಿಕೊಂಡಿದ್ದಾರೆ. ಎಲ್ಲ ಬಾಗಿಲುಗಳೂ ಮುಚ್ಚಿದಾಗ ಯಾವ ಬಾಗಿಲು ತೆರೆದಿದೆಯೋ ಅಲ್ಲಿಗೆ ತಾನೇ ಹೋಗಬೇಕು? ಸಂಘದಲ್ಲಿಯೂ ಇದ್ದೇನೆ, ಪಕ್ಷದಲ್ಲಿಯೂ ಇದ್ದೇನೆ ಎನ್ನುವ ಸ್ಥಿತಿಯನ್ನು ಉಳಿದ ಪಕ್ಷಗಳು ಮಾಡಲಿ. ಒಬ್ಬ ಸಂಘದ ಸ್ವಯಂಸೇವಕ ರಾಜಕೀಯ ಪಕ್ಷಕ್ಕೆ ಹೋದರೆ ಅವರಿಗೆ ಒಬ್ಬ ಪ್ರಾಮಾಣಿಕ ಕಾರ್ಯಕರ್ತ ಸಿಗುತ್ತಾನೆ ತಾನೆ? ಅದನ್ನು ಬಿಟ್ಟು ಅಸ್ಪೃಶ್ಯತೆ ಮಾಡಿದರೆ ಹೇಗೆ? ಎಂದು ಪ್ರಶ್ನಿಸಿದರು. ಸ್ವಯಂಸೇವಕರಲ್ಲಿ ಯಾರಿಗೆ ಇಚ್ಛೆ ಇದೆಯೋ ಅವರು ರಾಜಕೀಯಕ್ಕೆ ಪ್ರವೇಶಿಸಬಹುದು. ಸಂಘ ಒಂದು ರಾಜಕೀಯ ಪಕ್ಷದ ರೀತಿ ವ್ಯವಹಾರ ಮಾಡುವುದಿಲ್ಲ, ಸಂಘವು ರಾಜಕೀಯ ಸಂಘಟನೆ ಆಗುವುದಿಲ್ಲ. ಸಂಘದ ಪದಾಧಿಕಾರಿಗಳು ರಾಜಕೀಯ ಪಕ್ಷದಲ್ಲಿ ಸಕ್ರಿಯ ಭಾಗವಹಿಸುವಿಕೆ ಇರುವುದಿಲ್ಲ. ಆದರೆ ಸಂಘವು ಈ ದೇಶದಲ್ಲಿ ಯಾವ ಬದಲಾವಣೆಯನ್ನು ಮಾಡಬೇಕು ಎಂದುಕೊಂಡಿದೆಯೋ ಅದರಲ್ಲಿ ಸರಕಾರದ ಪಾತ್ರವಿದೆ. ಮಾತೃಭಾಷೆ ಶಿಕ್ಷಣ, 371ನೇ ವಿಧಿ ರದ್ದು, ದೇಶದ ರಕ್ಷಣೆ, ಗೋರಕ್ಷಣೆ, ಮತಾಂತರ ನಿಷೇಧದ ಕಾನೂನನ್ನು ಯಾರು ಮಾಡಬೇಕು? ಸರಕಾರದ ಪಾತ್ರವನ್ನು ನಾವೇನು ಅಲ್ಲಗಳೆಯುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ತುಮಕೂರಿನ ಸಿದ್ದಗಂಗಾ ಮಠದಲ್ಲಿ ಮಂಗಳವಾರ ಆಯೋಜಿಸಿದ್ದ ಡಾ.ಶ್ರೀ ಶಿವಕುಮಾರ ಸ್ವಾಮೀಜಿ 118ನೇ ಜಯಂತಿ ಮತ್ತು ಗುರುವಂದನಾ ಸಮಾರಂಭದಲ್ಲಿ ಕೇಂದ್ರ ರಕ್ಷಣಾ ಸಚಿವ ರಾಜನಾಥ್‌ಸಿಂಗ್, ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸಿದ್ದಲಿಂಗ ಸ್ವಾಮೀಜಿ, ಶಿವಸಿದ್ದೇಶ್ವರ ಸ್ವಾಮೀಜಿ, ಡಿಸಿಎಂ ಡಿ.ಕೆ.ಶಿವಕುಮಾರ್, ಸಂಸದ ವಿ. ಸೋಮಣ್ಣ ಶಾಸಕ ಸುರೇಶ್ ಗೌಡ ಮತ್ತಿತರರು ಭಾಗವಹಿಸಿದ್ದರು.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ.ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು–560020

ಬೆಂಅಪ್ರಾ/ನಯೋಸ/CLU-316/03/2024–25 ದಿನಾಂಕ:01/04/2025

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14-A ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವಸತಿ ವಲಯದಿಂದ ವಾಣಿಜ್ಯ ಉಪಯೋಗಕ್ಕಾಗಿ ಭೂ ಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂ ಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂ ಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಚೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ:	ವಿಸ್ತೀರ್ಣ ಎ–ಗುಂ	ಪರಿಷ್ಕೃತ ಮಹಾಯೋಜನೆ 2015ರ ಪ್ರಕಾರ ಭೂ ಉಪಯೋಗ:	ಬದಲಾವಣೆ ಕೋರಿರುವ ಭೂ ಉಪಯೋಗ:
1	Sri V.Madhu Raj & VKT Realty LLP (GPA Holder)	ಬೆಂಗಳೂರು ಪೂರ್ವ	ವರ್ತೂರು	ಹಾಡೋ ಸಿದ್ದಾಪುರ	54/4	0–17.12	ವಸತಿ	ವಾಣಿಜ್ಯ

ಷರಾ: ಅರ್ಜಿದಾರರು ಈ ಜಮೀನಿನಲ್ಲಿ ವಾಣಿಜ್ಯ ಉದ್ದೇಶಕ್ಕೆ ಅಭಿವೃದ್ಧಿಪಡಿಸುವುದರಿಂದ ಸಾರ್ವಜನಿಕರಿಗೆ ಯೋಗ್ಯ ಬೆಲೆಯಲ್ಲಿ ಖರೀದಿ / ವ್ಯಾಪಾರ ಮಾಡಲು ಅನುಕೂಲವಾಗುತ್ತದೆ. ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗಾವಕಾಶಗಳು ದೊರೆಯುತ್ತದೆ. ಈ ವಿನ್ಯಾಸದ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿಗೆ ಸಹಕಾರಿಯಾಗಲಿದೆ. ಯೋಜನಾ ಬದ್ಧವಾದ ವಿನ್ಯಾಸ ರಚನೆಯಿಂದ ಉತ್ತಮ ರಸ್ತೆಗಳು ಸಾರ್ವಜನಿಕರ ಉಪಯೋಗಕ್ಕೆ ಲಭ್ಯವಾಗುತ್ತದೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ, ಪ್ರಶ್ನಿತ ಜಮೀನುಗಳನ್ನು 'ವಸತಿ' ವಲಯದಿಂದ 'ವಾಣಿಜ್ಯ' ಉಪಯೋಗಕ್ಕೆ ಭೂ ಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/– ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು.

ನೆಲಮಂಗಲ ಯೋಜನಾ ಪ್ರಾಧಿಕಾರ
2ನೇ ಮುಖ್ಯರಸ್ತೆ, ಸದಾಶಿವನಗರ, ನೆಲಮಂಗಲ – 562123.
ದೂರವಾಣಿ: 9663046622 ಇ–ಮೇಲ್: nelamangala.pa@gmail.com

ಸಂಖ್ಯೆ: ನೆಯೋಪ್ರಾ/CLU/01/2025–26 ದಿನಾಂಕ: 01–04–2025

ಸಾರ್ವಜನಿಕ ಪ್ರಕಟಣೆ

ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 134 ಬೆಂರುಪ್ರಾ 2006 ದಿನಾಂಕ: 13–02–2007 ರನ್ವಯ **ಬೆಂಗಳೂರು ಉತ್ತರ ತಾಲ್ಲೂಕು, ದಾಸನಪುರ–1 ಹೋಬಳಿ, ಹೊಸಹಳ್ಳಿಪಾಳ್ಯ** ಗ್ರಾಮವು **"ನೆಲಮಂಗಲ ಸ್ಥಳೀಯ ಯೋಜನಾ ಪ್ರದೇಶದ"** ವ್ಯಾಪ್ತಿಗೆ ಒಳಪಟ್ಟಿದ್ದು, ನೆಲಮಂಗಲ ಸ್ಥಳೀಯ ಯೋಜನಾ ಪ್ರದೇಶಕ್ಕೆ ಸರ್ಕಾರದ ಆದೇಶ ಸಂಖ್ಯೆ: ನಅಇ 150 ಬಿಎಂಆರ್ 2013, ದಿನಾಂಕ: 01–06–2015 ರಲ್ಲಿ ಅನುಮೋದನೆಗೊಂಡಿರುವ ಮಹಾಯೋಜನೆಯಲ್ಲಿ ಈ ಕೆಳಕಂಡ ಜಮೀನನ್ನು **"ವ್ಯವಸಾಯ"** ವಲಯದಲ್ಲಿ ಕಾಯ್ದಿರಿಸಲಾಗಿರುತ್ತದೆ. ಈ ಹಿನ್ನೆಲೆಯಲ್ಲಿ **ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14(ಎ) ರ ಅಡಿಯಲ್ಲಿ "ವಸತಿ"** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಅರ್ಜಿದಾರರು ಕೋರಿರುವಂತೆ **"ವ್ಯವಸಾಯ"** ವಲಯದಿಂದ **"ವಸತಿ"** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡುವ ಸಂಬಂಧ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ **ಸದಸ್ಯ ಕಾರ್ಯದರ್ಶಿಗಳು, ನೆಲಮಂಗಲ ಯೋಜನಾ ಪ್ರಾಧಿಕಾರ, ನೆಲಮಂಗಲ** ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕಂದಾಯ ದಾಖಲಾತಿಗಳಂತೆ ಮಾಲೀಕರ ಹೆಸರು	ತಾಲ್ಲೂಕು / ಹೋಬಳಿ / ಗ್ರಾಮ	ಸ.ನಂ.	ವಿಸ್ತೀರ್ಣ (ಎ–ಗು)	ಅನುಮೋದಿತ ಮಹಾಯೋಜನೆಯಂತೆ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
ಶ್ರೀ ಕೆ. ಕೃಷ್ಣಮೂರ್ತಿ ಬಿನ್ ಲೇಟ್ ಕೆ. ಕೇಶವಮೂರ್ತಿ	ಬೆಂಗಳೂರು ಉತ್ತರ / ದಾಸನಪುರ–1 / ಹೊಸಹಳ್ಳಿಪಾಳ್ಯ	14/3	00-18½	ವ್ಯವಸಾಯ	ವಸತಿ

ಷರಾ:– ಪ್ರಶ್ನಿತ ಸರ್ವೆ ನಂಬರ್ ಜಮೀನಿನ ಪರಿಸರದಲ್ಲಿ ವಸತಿ ಬೆಳವಣಿಗೆಗಳು ಬಂದಿದ್ದು, ಪ್ರಶ್ನಿತ ಜಮೀನಿನಲ್ಲಿ ವಸತಿ ವಿನ್ಯಾಸ ನಕ್ಷೆ ಅನುಮೋದನೆ ಪಡೆದು ಅಭಿವೃದ್ಧಿ ಪಡಿಸುವುದರಿಂದ ಕೂಲಿ ಕಾರ್ಮಿಕರಿಗೆ ಉದ್ಯೋಗವಕಾಶ ಸಿಗುತ್ತದೆ. ಹಾಗೂ ಯೋಜನಾ ಬದ್ದ ಬೆಳವಣಿಗೆಯಾಗುವುದು ಎಂದು ತಿಳಿಸುತ್ತಾ ಸದರಿ ಪ್ರದೇಶವನ್ನು **"ವ್ಯವಸಾಯ"** ವಲಯದಿಂದ **"ವಸತಿ"** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/– ಜಂಟಿ ನಿರ್ದೇಶಕರು
ನಗರ ಮತ್ತು ಗ್ರಾಮಾಂತರ ಯೋಜನೆ ಹಾಗೂ ಸದಸ್ಯ–ಕಾರ್ಯದರ್ಶಿ,
ನೆಲಮಂಗಲ ಯೋಜನಾ ಪ್ರಾಧಿಕಾರ, ನೆಲಮಂಗಲ.

ವಾಸಾಸಂಇ/ವಾ.ಪ್ರ/10/ಅಡ್ವರ್ಟೋ/2025–26

ಗ್ಯಾರಂಟಿಗಳಿಗೆ ಹಣ ಕ್ರೋಡೀಕರಿಸಲು ಸಾಧ್ಯವಾಗದೆ ವಿಲಿವಿಲಿ ಒದ್ದಾಡುತ್ತಿರುವ ಸಿಎಂ: ವಿಜಯೇಂದ್ರ

ಸರಕಾರದ ವಿರುದ್ಧ ಎರಡು ಹಂತದ ಹೋರಾಟ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಬೆಲೆ ಏರಿಕೆ ಸೇರಿದಂತೆ ಹಲವು ವಿಚಾರಗಳ ಸಂಬಂಧ ಬಿಜೆಪಿಯ ಅಹೋರಾತ್ರಿ ಧರಣಿ ಇಂದಿನಿಂದ ಆರಂಭವಾಗಲಿದ್ದು, ಎರಡು ಪ್ರಮುಖ ಹೋರಾಟಗಳನ್ನು ಕೈಗೆತ್ತಿಕೊಂಡಿದೆ.

ಸುದ್ದಿಗಾರರೊಂದಿಗೆ ಮಾತನಾಡಿದ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ಸಿದ್ದರಾಮಯ್ಯ ಮುಖ್ಯಮಂತ್ರಿಯಾದ ಬಳಿಕ ಕಳೆದ 20 ತಿಂಗಳಿನಲ್ಲಿ ಜನರಿಗೆ ಬೆಲೆ ಏರಿಕೆಯ ಗ್ಯಾರಂಟಿ ದಯ ಪಾಲಿಸಿದ್ದಾರೆ. ಸರಕಾರದ ನಿರ್ಧಾರದಿಂದ ಜನಸಾಮಾನ್ಯರಿಗೆ ಸಾಕಷ್ಟು ತೊಂದರೆ ಉಂಟಾಗಿದೆ. ಬೆಲೆ ಏರಿಕೆ ಸೇರಿ ರಾಜ್ಯ ಸರಕಾರದ ನೀತಿಗಳನ್ನು ಖಂಡಿಸಿ ಏ.2ರಂದು ಬೆಳಗ್ಗೆ 11 ಗಂಟೆಗೆ ಫ್ರೀಡಂ ಪಾರ್ಕಿನಲ್ಲಿ ಅಹೋರಾತ್ರಿ ಧರಣಿ ನಡೆಸುತ್ತೇವೆ. ಬಿಜೆಪಿಯ ಎಲ್ಲ ಶಾಸಕರು, ವಿಧಾನ ಪರಿಷತ್ ಸದಸ್ಯರು, ಮಾಜಿ ಶಾಸಕರು, ವಿಧಾನಪರಿಷತ್ ಮಾಜಿ ಸದಸ್ಯರು, ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಿದ ಅಭ್ಯರ್ಥಿಗಳು, ರಾಜ್ಯದ ಎಲ್ಲ ಪದಾಧಿಕಾರಿಗಳು, ಜಿಲ್ಲಾ ಅಧ್ಯಕ್ಷರು, ಕಾರ್ಯಕರ್ತರು ಭಾಗವಹಿಸುತ್ತಾರೆ. ದೊಡ್ಡ ಮಟ್ಟದಲ್ಲಿ ಈ ಹೋರಾಟ ನಡೆಯಲಿದೆ ಎಂದರು. ಸರಕಾರಿ ಕಾಮಗಾರಿಗಳಲ್ಲಿ ಮುಸಲ್ಮಾನರಿಗೆ ಶೇ.4 ಮೀಸಲಾತಿ ನೀಡಿದ್ದಾರೆ. ಇದು ಕಾಂಗ್ರೆಸ್ ಮತ್ತು ಮುಖ್ಯಮಂತ್ರಿಗಳ ಸಂವಿಧಾನ ವಿರೋಧಿ ನಡೆ ಮಾತ್ರವಲ್ಲ. ಹಿಂದೂಗಳಿಗೆ ಅಪಮಾನ ಮಾಡುವ ಕ್ರಮ. ಪರಿಶಿಷ್ಟ ಜಾತಿ–ಪಂಗಡಗಳ ಸಾಮಾಜಿಕ, ಶೈಕ್ಷಣಿಕ ಅಭಿವೃದ್ಧಿಗೆ ಮೀಸಲಿಟ್ಟ ಸುಮಾರು 38 ಸಾವಿರ ಕೋಟಿ ಹಣ ಬೇರೆ ಬೇರೆ ಗ್ಯಾರಂಟಿಗಳಿಗೆ ವರ್ಗಾವಣೆ ಮಾಡುವ ಮೂಲಕ ರಾಜ್ಯ ಸರಕಾರ ಮತ್ತು ಸಿದ್ದರಾಮಯ್ಯನವರು ಆ ಶೋಷಿತ, ಪೀಡಿತ ಸಮುದಾಯಗಳಿಗೆ ಅನ್ಯಾಯ ಮಾಡಿದ್ದಾರೆ. ಬೆಲೆ ಏರಿಕೆ ವಿಚಾರದಲ್ಲಿ ಇವರು ತೆಗೆದುಕೊಳ್ಳುವ ಕೆಟ್ಟ ನಿರ್ಧಾರಗಳಿಗೆ ಕೇಂದ್ರ ಸರಕಾರ ಹೊಣೆ ಎಂದು ದೂರು ಹಾಕುತ್ತಾರೆ. ವಾಸ್ತವಿಕವಾಗಿ ರಾಜ್ಯ ಸರಕಾರ, ಮಾನ್ಯ ಮುಖ್ಯಮಂತ್ರಿಗಳು ತಮ್ಮ ಗ್ಯಾರಂಟಿಗಳಿಗೆ ಹಣ ಕ್ರೋಡೀಕರಿಸಲು ಸಾಧ್ಯವಾಗದೆ, ವಿಲಿವಿಲಿ ಒದ್ದಾಡುತ್ತಿದ್ದಾರೆ ಎಂದರು.

ಸರಕಾರದ ವಿರುದ್ಧ ಮೈಸೂರಿನಿಂದ ಏಪ್ರಿಲ್ 7ರಿಂದ ಎಲ್ಲ ಜಿಲ್ಲೆಗಳ ಪ್ರವಾಸ ಜನಾಕ್ರೋಶ ಯಾತ್ರೆ ಮಾಡುತ್ತೇವೆ. ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಅವರು ಹೋರಾಟಕ್ಕೆ ಚಾಲನೆ ನೀಡಲಿದ್ದಾರೆ. ಯತ್ನಾಳ್ ಅವರು ಈಗ ಬಹಳ ಫ್ರೀಯಾಗಿದ್ದಾರೆ. ಅವರು ಆರೋಪ ಮಾಡಲಿ. ದಾಳಿ ಮಾಡಲಿ. ಅದರ ಬಗ್ಗೆ ನಾನು ತಲೆ ಕೆಡಿಸಿಕೊಳ್ಳುವುದಿಲ್ಲ.

– ಬಿ.ವೈ.ವಿಜಯೇಂದ್ರ ಬಿಜೆಪಿ ರಾಜ್ಯಾಧ್ಯಕ್ಷ

ಅಹೋರಾತ್ರಿ ಧರಣಿಯಲ್ಲಿ ಪಾಲ್ಗೊಳ್ಳುವೆ: ಯಡಿಯೂರಪ್ಪ

ರಾಜ್ಯ ಸರಕಾರ ಜನವಿರೋಧಿ ಬೆಲೆ ಏರಿಕೆ ಕೂಡಲೇ ಹಿಂದಕ್ಕೆ ಪಡೆಯಬೇಕೆಂದು ಆಗ್ರಹಿಸಿ ಬಿಜೆಪಿ ನಾಳೆ ಅಹೋರಾತ್ರಿ ಧರಣಿ ಸತ್ಯಾಗ್ರಹ ಮಾಡಲಿದ್ದು, ನಾನು ಅದರಲ್ಲಿ ಪಾಲ್ಗೊಳ್ಳುತ್ತೇನೆ ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಹೇಳಿದ್ದಾರೆ.

ಬೆಂಗಳೂರಿನ ಡಾಲರ್ಸ್ ಕಾಲೋನಿ ನಿವಾಸದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಎಲ್ಲ ಬೆಲೆ ಏರಿಕೆಯಿಂದ ಜನಸಾಮಾನ್ಯರಿಗೆ ಉಸಿರು ಕಟ್ಟುವ ಪರಿಸ್ಥಿತಿ ಬಂದಿದೆ. ಫ್ರೀಡಂಪಾರ್ಕಿನಲ್ಲಿ ಪ್ರತಿಭಟನೆ ಪ್ರಾರಂಭ ಮಾಡುತ್ತಿದ್ದೇವೆ. ನೋವು ಅನುಭವಿಸುತ್ತಿರುವ ಎಲ್ಲರೂ ಪಕ್ಷಭೇದ ಮರೆತು ಈ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಬೇಕೆಂದರು. ಸಿಎಂ ಕುರ್ಚಿಗಾಗಿ ಕಾಂಗ್ರೆಸ್ಸಿನಲ್ಲಿ ಮುಸುಕಿನ ಗುದ್ದಾಟ ನಡೆದಿದೆ. ಮುಖ್ಯಮಂತ್ರಿ ಯಾರಾಗಬೇಕು ಎಂಬುದು ಅವರಿಗೆ ಮುಖ್ಯವೇ ಹೊರತು ಜನರು ಪ್ರಮುಖರಲ್ಲ. ಅಜೀರ್ಣ ಆಗುವಷ್ಟು ಬಹುಮತವನ್ನು ಜನರು ಕಾಂಗ್ರೆಸ್ ಸರಕಾರಕ್ಕೆ ಕೊಟ್ಟಾಗ ಒಂದು ರೀತಿ ತುಘಲಕ್ ದರ್ಬಾರ್ ನಡೆಸಿ, ಜನಹಿತ ಮರೆತು, ಸಾಮಾನ್ಯ ಜನರು ಬದುಕಲಾಗದಷ್ಟು, ಉಸಿರು ಕಟ್ಟುವ ಪರಿಸ್ಥಿತಿ ತಂದದ್ದು ಸಿದ್ದರಾಮಯ್ಯ ಸರಕಾರದ ಸಾಧನೆ. ಕಾಮಗಾರಿಗಳಲ್ಲಿ ಮುಸ್ಲಿಮರಿಗೆ ಶೇ.4 ಮೀಸಲಾತಿ ನೀಡುವ ಅಲ್ಪಸಂಖ್ಯಾತರ ತುಷ್ಟೀಕರಣ ನೀತಿ ಸರಿಯಲ್ಲ. ಉಳಿದ ಹಿಂದೂಗಳೇನು ಅಪರಾಧ ಮಾಡಿದ್ದಾರೆ ? ನಾವು ಮುಸ್ಲಿಮರ ವಿರೋಧಿಗಳಲ್ಲ. ಎಲ್ಲರನ್ನೂ ಸರಿ ಸಮಾನರಾಗಿ ನೋಡುವುದು ರಾಜ್ಯದ ಮುಖ್ಯಮಂತ್ರಿಯ ಕರ್ತವ್ಯ. ಅದನ್ನು ಮಾಡದೇ ಹಿಂದೂಗಳಿಗೆ ದ್ರೋಹ ಮಾಡಿದ್ದಾರೆ ಎಂದರು.

ಗ್ರಾಹಕರ ಜೇಬಿನಿಂದ ಹಣ ಲೂಟಿ ಮಾಡಲು ಮುಂದಾಗಿರುವ ಸರಕಾರ: ಅಶ್ವತ್ಥನಾರಾಯಣ್

ಸ್ಮಾರ್ಟ್ ಮೀಟರ್ ಹಗರಣ: ತಪ್ಪಿತಸ್ಥರಿಗೆ ಶಿಕ್ಷೆ ಆಗಲೇಬೇಕು

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜ್ಯದಲ್ಲಿ ಸ್ಮಾರ್ಟ್ ಮೀಟರ್ ಹಗರಣ ವ್ಯವಸ್ಥಿತವಾಗಿ ನಡೆದಿದೆ. ಒಂಬತ್ತು ಸುಳ್ಳುಗಳನ್ನು ಹೇಳಿದ್ದಾರೆ ಎಂದು ಮಾಜಿ ಉಪಮುಖ್ಯಮಂತ್ರಿ ಡಾ.ಸಿ.ಎನ್.ಅಶ್ವತ್ಥನಾರಾಯಣ್ ಆರೋಪಿಸಿದ್ದಾರೆ.

ಮಲ್ಲೇಶ್ವರದ ಬಿಜೆಪಿ ಕಾರ್ಯಾಲಯದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಪ್ರಕರಣಕ್ಕೆ ಸಂಬಂಧಿಸಿದಂತೆ ಸಚಿವರು ಮತ್ತು ಇಲಾಖಾ ಉನ್ನತಾಧಿಕಾರಿಗಳು ಸಮರ್ಪಕ ಮಾಹಿತಿ ನೀಡಿಲ್ಲ. ಸರಕಾರ ಗ್ರಾಹಕರ ಜೇಬಿನಿಂದ ಹಣ ಲೂಟಿ ಮಾಡಲು ಮುಂದಾಗಿದೆ. ಇದರಲ್ಲಿ ವ್ಯಾಪಕ ಭ್ರಷ್ಟಾಚಾರ ನಡೆದಿದೆ. ಲೂಟಿ, ಕಳ್ಳತನ ಮಾಡುತ್ತಿದ್ದಾರೆ ಎಂದು ದಾಖಲೆ ಆಧಾರದಿಂದ ತಿಳಿಸಲಾಗುವುದು. ಗ್ರಾಹಕರ ರಕ್ಷಣೆ ಮಾಡುವುದು ನಮ್ಮ ಕರ್ತವ್ಯ. ಅಧಿಕಾರ ದುರ್ಬಳಕೆ ಮಾಡಿಕೊಂಡು ತಮ್ಮ ಸ್ವಾರ್ಥಕ್ಕಾಗಿ, ಲಾಭಕ್ಕಾಗಿ ಸ್ಮಾರ್ಟ್ ಮೀಟರ್ ಅಳವಡಿಸಲು ಮುಂದಾಗಿದ್ದಾರೆ. ಇವರಿಗೆ ಶಿಕ್ಷೆ ಆಗಲೇಬೇಕು. ಇದನ್ನು ತಾರ್ಕಿಕ ಅಂತ್ಯಕ್ಕೆ ಒಯ್ಯುತ್ತೇವೆ ಎಂದರು.

ಕೇಂದ್ರ ಸರಕಾರದ ನಿಗದಿತ ನಿಯಮಗಳ ಪ್ರಕಾರ, ಟೆಂಡರ್ ಮಾಡಿದ್ದಾಗಿ ಹೇಳಿದ್ದಾರೆ. ಪ್ರಿಬಿಡ್ ಟೆಂಡರ್‌ನಲ್ಲಿ ಯಾರೂ ಬಂದಿರಲಿಲ್ಲ ಎಂದು ಇಂಧನ ಸಚಿವರು ಹೇಳಿದ್ದಾರೆ. ಆದರೆ, 10 ಜನರು ಭಾಗವಹಿಸಿದ್ದರು. 117 ಜನರು ಮಾಹಿತಿ ಕೇಳಿದ್ದರು ಎಂದು ಪಿಪಿಟಿ ಮೂಲಕ ವಿವರ ನೀಡಿದರು. ಕೇಂದ್ರದ ನಿಯಮಾವಳಿಯಂತೆ ಐಎಸ್ 16444 ಸ್ಟಾಂಡರ್ಡ್ ಇರುವ ಹತ್ತಾರು ಜನರಿದ್ದಾರೆ. ಅವರನ್ನೇ ರಾಜ್ಯವು ಪರಿಗಣಿಸಬೇಕಿತ್ತು. 1 ಲಕ್ಷ ಸ್ಮಾರ್ಟ್ ಮೀಟರ್ ಉತ್ಪಾದಿಸಿ ವಿತರಿಸಿದ ಅನುಭವ ಬೇಕಿತ್ತು. ಟೆಂಡರ್ 200 ಕೋಟಿಗಿಂತ ಹೆಚ್ಚು ಮೊತ್ತದ್ದಾದರೆ ಗ್ಲೋಬಲ್ ಟೆಂಡರ್ ಕರೆಯಬೇಕಿತ್ತು. ಪ್ರಿಬಿಡ್ ವೇಳೆ ಇದನ್ನು ಹೇಳಿದ್ದರೂ ಅದನ್ನು ಪರಿಗಣಿಸಿಲ್ಲ. ಇಂಧನ ಮೀಟರ್‌ಗೆ ಸಂಬಂಧಿಸಿ ಕರ್ನಾಟಕದಲ್ಲಿ ರಿಟೇಲ್ ಔಟ್‌ಲೆಟ್ ನಲ್ಲಿ 5 ವರ್ಷ ಅನುಭವ ಇರಬೇಕೆಂಬ ನಿಯಮ ಪರಿಗಣಿಸಿಲ್ಲ ಎಂದರು.

ಸಚಿವರು, ತಾತ್ಕಾಲಿಕ ಸಂಪರ್ಕ ಪಡೆಯುವವರಿಗೆ ಹಾಗೂ ಹೊಸ ಗ್ರಾಹಕರಿಗೆ ಕಡ್ಡಾಯ ಎಂದಿದ್ದಾರೆ. ಆದರೆ, ಇದು ಕಡ್ಡಾಯವಲ್ಲ ಎಂದು ಅಧಿಕಾರಿ ತಿಳಿಸಿದ್ದಾರೆ. ಅಲ್ಲದೇ ತಬ್ಬಿಬ್ಬಾಗಿದ್ದಾರೆ. ಎಲ್ಲ ಗ್ರಾಹಕರಿಗೆ, ಫೀಡರ್, ಟ್ರಾನ್ಸ್‌ಫಾರ್ಮರ್‌ಗಳಿಗೆ ಸ್ಮಾರ್ಟ್ ಮೀಟರ್ ಅಳವಡಿಸಿದ ಬಳಿಕವೇ ಹೊಸ ಗ್ರಾಹಕರಿಗೆ ಕಡ್ಡಾಯ ಮಾಡಬಹುದೆಂದು ಕೇಂದ್ರ ವಿದ್ಯುತ್ ಪ್ರಾಧಿಕಾರವು (ಸಿಇಸಿ) ತಿಳಿಸಿದೆ ಎಂದು ಪ್ರಕಟಿತ ಗಜೆಟ್ ದಾಖಲೆ ನೀಡಿದರು.

ಶಾಸಕ ಎಸ್.ಆರ್.ವಿಶ್ವನಾಥ್ ಮಾತನಾಡಿ, ಇದು ಹಿಟ್ ಆಂಡ್ ರನ್ ಅಲ್ಲ. ಮುಂದಿನ ಕ್ರಮಗಳ ಕುರಿತು ಈಗಾಗಲೇ ಚರ್ಚಿಸಿದ್ದೇವೆ ಎಂದು ಹೇಳಿದರು.

ಬೆಂಗಳೂರಿನ ಮಲ್ಲೇಶ್ವರದ ಬಿಜೆಪಿ ಕಾರ್ಯಾಲಯದಲ್ಲಿ ಹಮ್ಮಿಕೊಂಡಿದ್ದ ಸುದ್ದಿಗೋಷ್ಠಿಯಲ್ಲಿ ಮಾಜಿ ಡಿಸಿಎಂ ಡಾ.ಸಿ.ಎನ್.ಅಶ್ವತ್ಥನಾರಾಯಣ್, ಶಾಸಕ ಎಸ್.ಆರ್.ವಿಶ್ವನಾಥ್ ಮಾಜಿ ಶಾಸಕ ಪಿ.ರಾಜೀವ್, ಎ.ಎಸ್.ಪಾಟೀಲ ನಡಹಳ್ಳಿ, ಮಾಳವಿಕಾ ಅವಿನಾಶ್, ಡಾ.ನರೇಂದ್ರ ರಂಗಪ್ಪ ಇದ್ದರು.

ಮೀಟರ್ ಡಾಟಾ ಮ್ಯಾನೇಜ್ಮೆಂಟ್ ಸೊಲ್ಯೂಶನ್ ಅನ್ನು ಗ್ಲೋಬಲ್ ಆಗಿ ತೆಗೆದುಕೊಂಡಿಲ್ಲ. ಡಿಬಾರ್–ಬ್ಲಾಕ್ ಲೀಸ್ಟ್ ಆದವರನ್ನು ಪರಿಗಣಿಸಬಾರದು ಎಂಬ ನಿಯಮವೂ ಇದೆ. ಗ್ಲೋಬಲ್ ಎಂಬುದನ್ನು ಪರಿಗಣಿಸಿಯೇ ಇಲ್ಲ. ಕೇಂದ್ರದ ನಿಯಮಾವಳಿಯಂತೆ ಟೆಂಡರ್ ಕರೆದಿದ್ದೇವೆ ಎಂಬುದೇ ಸುಳ್ಳು. ಕೇಂದ್ರದ ಪ್ರಮುಖ ನಿಯಮಾವಳಿ ಉಲ್ಲಂಘಿಸಿದ್ದಾರೆ.

– ಡಾ.ಸಿ.ಎನ್.ಅಶ್ವತ್ಥನಾರಾಯಣ್ ಮಾಜಿ ಡಿಸಿಎಂ

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ಶಿರಸಿ ವಿಭಾಗ, ಶಿರಸಿ
ಕ್ರಸಂ: ಪಿಬಿ/5054ಜಿಮುರ.ಸು/ಅಧಿಸೂಚನೆ: 2024–25/3168 ದಿನಾಂಕ: 28.03.2025

ಇ–ಟೆಂಡರ್ ಅಧಿಸೂಚನೆ IFT-KW-4 ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ (ಸ್ಟ್ಯಾಂಡರ್ಡ್ ಡಾಕ್ಯುಮೆಂಟ್ ದ್ವಿ ಲಕೋಟೆ ಪದ್ದತಿಯಲ್ಲಿ)(ಅಲ್ಪಾವಧಿ)

ಕರ್ನಾಟಕ ರಾಜ್ಯಪಾಲರ ಪರವಾಗಿ ಲೋಕೋಪಯೋಗಿ, ಇಲಾಖೆಯಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಈ ಕೆಳಗಿನ ಕಾಮಗಾರಿಗಳಿಗಾಗಿ ಇ–ಪ್ರೋಕ್ ಸ್ಟ್ಯಾಂಡರ್ಡ್ ಡಾಕ್ಯುಮೆಂಟ್ ಮುಖಾಂತರ ಟೆಂಡರನ್ನು ದ್ವಿ ಲಕೋಟೆ ಪದ್ಧತಿಯಲ್ಲಿ ಈ ಕೆಳಕಾಣಿಸಿದಂತೆ ಇ–ಪ್ರೋಕ್‌ನಲ್ಲಿ ಅಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ಇ–ಆಡಳಿತ ಕೇಂದ್ರ ಅಥವಾ ವೆಬ್‌ಸೈಟ್ **kppp.karnataka.gov.in** ನಲ್ಲಿ ಪ್ರಕಟಿಸಿದಂತೆ ದಿನಾಂಕ ಹಾಗೂ ಇನ್ನುಳಿದ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರಿಗಾಗಿ ಭಾಗವಹಿಸಬಹುದು. ಹೆಚ್ಚಿನ ವಿವರಗಳಿಗೆ ಈ ಕಚೇರಿಯಿಂದ ಕಚೇರಿ ವೇಳೆಯಲ್ಲಿ ಮಾಹಿತಿ ಪಡೆಯಬಹುದು. ಕಾಮಗಾರಿಗಳ ಇನ್ನುಳಿದ ವಿವರಗಳು ಈ ಕೆಳಗಿನಂತಿವೆ. **ಒಟ್ಟು 1 ಕಾಮಗಾರಿ**

(1) ಟೆಂಡರ್ ಮಾಹಿತಿ ವಿಚಾರಣೆಗೆ ಕೊನೆಯ **ದಿನಾಂಕ: 07–04–2025 (16.00 ಗಂಟೆಗೆ)** (2) ಟೆಂಡರ್ ಸ್ವೀಕರಿಸಲು ಕೊನೆಯ **ದಿನಾಂಕ: 08–04–2025 (16.00 ಗಂಟೆವರೆಗೆ)** (3) ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 09–04–2025 (16.30 ಗಂಟೆವರೆಗೆ)** (4) ಆರ್ಥಿಕ ಬಿಡ್ ತೆರೆಯುವ **ದಿನಾಂಕ: 11–04–2025 (16.00 ಗಂಟೆವರೆಗೆ)**

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು,
ಹಾಗೂ ರಾಜ್ಯ ಹೆದ್ದಾರಿ ಪ್ರಾಧಿಕಾರ ಅಧಿಕಾರಿ,
ಲೋಕೋಪಯೋಗಿ ಇಲಾಖೆ ವಿಭಾಗ, ಶಿರಸಿ (ಉತ್ತರ ಕನ್ನಡ ಜಿಲ್ಲೆ)

DIPR/ADK/KSMCA/04/25-26
dt.01.04.2025

ಬಿಎಸ್‌ವೈ ಒತ್ತಡಕ್ಕೆ ಮಣಿದರೇ ಶಾ?

← ಮೊದಲಪುಟದಿಂದ

ಈ ಹಂತದಲ್ಲಿ ಯಡಿಯೂರಪ್ಪ ಅವರನ್ನು ಕಳೆದುಕೊಳ್ಳುವುದಕ್ಕಿಂತ ಯತ್ನಾಳ್ ಅವರನ್ನು ಪಕ್ಷದಿಂದ ದೂರವಿಡುವುದೇ ಸೂಕ್ತ ಎನ್ನುವ ತೀರ್ಮಾನಕ್ಕೆ ಬಂದು ಉಚ್ಚಾಟನೆ ಮಾಡಲಾಗಿದೆ ಎಂದು ಮೂಲಗಳು ತಿಳಿಸಿವೆ.

ಯಾವ ಸ್ಥಾನವೂ ಬೇಕಿಲ್ಲವೆಂದ ಬಿಎಸ್‌ವೈ?:

ಕಳೆದ ತಿಂಗಳು ಬೆಂಗಳೂರಿನಲ್ಲಿ ನಡೆದ ಖಾಸಗಿ ಆಸ್ಪತ್ರೆಯ ಉದ್ಘಾಟನೆಯ ಕಾರ್ಯಕ್ರಮಕ್ಕೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಆಗಮಿಸಿದ್ದರು. ಈ ವೇಳೆ ಶಾ ಜತೆ ಪ್ರತ್ಯೇಕವಾಗಿ ಮಾತನಾಡಬೇಕು ಎಂದು ಯಡಿಯೂರಪ್ಪ ಮನವಿ ಮಾಡಿದ್ದಾರೆ. ಇದಕ್ಕೆ ಒಪ್ಪಿ, ಪ್ರತ್ಯೇಕ ಚರ್ಚೆ ನಡೆಸಿದ್ದಾರೆ. ಈ ವೇಳೆ ರಾಜ್ಯದಲ್ಲಿ ಕೆಲವರು ರಾಜ್ಯಾಧ್ಯಕ್ಷರಾಗಿರುವ ತಮ್ಮ ಪುತ್ರ ವಿಜಯೇಂದ್ರ ವಿರುದ್ಧ ಮಾತನಾಡುತ್ತಿದ್ದಾರೆ. ರಚನಾತ್ಮಕ ಟೀಕೆಯನ್ನು ಸ್ವಾಗತಿಸುತ್ತೇನೆ. ಆದರೆ ಬಸನಗೌಡ ಪಾಟೀಲ್ ಯತ್ನಾಳ್ ಟೀಕೆಗಿಂತ ಹೆಚ್ಚಾಗಿ ವೈಯಕ್ತಿಕ ತೇಜೋವಧೆಗೆ ಇಳಿದಿದ್ದಾರೆ. ನಿತ್ಯ ಮಾಧ್ಯಮದ ಮುಂದೆ ನನ್ನ ಹಾಗೂ ನನ್ನ ಪುತ್ರನ ವಿರುದ್ಧ ಹೇಳಿಕೆ ನೀಡುತ್ತಿದ್ದಾರೆ. ಈ ರೀತಿಯ ಹೇಳಿಕೆಗೆ ನಮ್ಮ ವ್ಯಕ್ತಿತ್ವಕ್ಕೆ ಧಕ್ಕೆ ತರುವುದಕ್ಕಿಂತ ಹೆಚ್ಚಾಗಿ, ಪಕ್ಷದ ವರ್ಚಸ್ಸಿಗೆ ಧಕ್ಕೆ ಮಾಡುತ್ತಿದ್ದಾರೆ. ಇದರಿಂದ ರಾಜ್ಯದಲ್ಲಿ ಕಾರ್ಯಕರ್ತರು ಸಂಘಟನೆಯಿಂದ ವಿಮುಖರಾಗುತ್ತಿದ್ದಾರೆ. ಈ ರೀತಿ ನಿತ್ಯ ಹೇಳಿಕೆ ನೀಡಿದರೂ ಅವರ ವಿರುದ್ಧ ಕ್ರಮವಹಿಸಲು ನೀವು ಸಿದ್ಧರಿಲ್ಲ ಎನ್ನುವುದಾದರೆ, ನನ್ನನ್ನು, ನನ್ನ ಪುತ್ರನನ್ನು ಪಕ್ಷದ ಜವಾಬ್ದಾರಿಗಳಿಂದ ಮುಕ್ತಗೊಳಿಸಿ ಎನ್ನುವ ಮೂಲಕ ಪಕ್ಷದಿಂದ ಹೊರನಡೆಯುವ ಎಚ್ಚರಿಕೆ ನೀಡಿದ್ದರು.

ಟ್ವೀಟೂ-ಖಾರಾ

ಹೆಚ್.ಡಿ.ಕುಮಾರಸ್ವಾಮಿ, ಸಚಿವ

ದುರಾಡಳಿತದಿಂದ ಸಮೃದ್ಧ ಕರ್ನಾಟಕವನ್ನು ಬರ್ಬಾದ್ ಮಾಡಿರುವ ಕಾಂಗ್ರೆಸ್ ಕಂಪನಿ ಸರಕಾರ ದರಬೀಜಾಸುರ ರೂಪ ತಳೆದು ಜನರ ರಕ್ತ ಹೀರುತ್ತಿದೆ. ದಿನಕ್ಕೊಂದು ಸುಳ್ಳು, ತಿಂಗಳಿಗೊಂದು ದರ ಏರಿಕೆ, ಮಹಮ್ಮದ್ ಘಜ್ನಿ, ಮಹಮ್ಮದ್ ಘೋರಿ ಕೂಡ ನಾಚುವಂತೆ ಕನ್ನಡಿಗರ ಮೇಲೆ ದರ ಏರಿಕೆ ದಂಡಯಾತ್ರೆ ನಡೆಯುತ್ತಿದೆ.

ಬೆಂಗಳೂರು ಮೂಲದ ಟೆಕ್ಕಿ

ನನಗೆ ವೇತನ ಹೆಚ್ಚಳ ಅಂತ ಆಗಿದ್ದು ಶೇ.7.5 ಮಾತ್ರ. ಆದರೆ ಮನೆ ಮಾಲೀಕರು ಶೇ.ರಷ್ಟು ಬಾಡಿಗೆ ಏರಿಕೆ ಮಾಡಿದ್ರು. ಈ ದರದಲ್ಲಿ ಬಾಡಿಗೆ ಏರುತ್ತಾ ಹೋದರೆ ಒಂದು ದಿನ ನನ್ನ ವೇತನಕ್ಕಿಂತ ಹೆಚ್ಚಾದೀತು.

ವಿಶ್ವವಾಣಿ ಕ್ಲಬ್ ಹೌಸ್
02.04.2025
ಸಂಜೆ: 06.55 ರಿಂದ 08.05 ರವರೆಗೆ



ಬುಧವಾರದ ಅತಿಥಿ
ಶ್ರೀ ಗಣೇಶ್ ಭಟ್ ವಾರಣಾಸಿ
ವಿಷಯ
ವಿಶ್ವ ಆಟಿಸಂ ದಿನ

vishwavani.news

ಸಮಾಚಾರ ಸಣ್ಣದಲ್ಲ

ಮಹಾನಾಯಕ ಯಾರು ಹೇಳುವೆ

ಹುಬ್ಬಳ್ಳಿ: ಹನಿಟ್ರ್ಯಾಪ್ ಮಾಡಿಸಿದ ಮಹಾನಾಯಕ ಯಾರು ಎಂಬುದನ್ನು ಸಮಯ ಬಂದಾಗ ತಿಳಿಸುವೆ ಎಂದು ಸಚಿವ ಸತೀಶ್ ಜಾರಕಿಹೊಳಿ ಹೇಳಿದರು. ಸುದ್ದಿಗಾರರೊಂದಿಗೆ ಮಾತನಾಡಿ, ಸದ್ಯ ಪ್ರಕರಣಕ್ಕೆ ಸಂಬಂಧಿಸಿ ಸಚಿವ ಕೆ.ಎನ್.ರಾಜಣ್ಣ ಅವರ ಪುತ್ರ ಪೊಲೀಸರಿಗೆ ದೂರು ನೀಡಿದ್ದಾರೆ. ಮೊದಲು ಪೊಲೀಸರು ತನಿಖೆ ನಡೆಸಲಿ. ಮಹಾನಾಯಕ ಯಾರು ಎಂದು ಕಾದು ನೋಡೋಣ. ಅಧ್ಯಕ್ಷರ ಬದಲಾವಣೆ ನಮ್ಮ ಹಂತದಲ್ಲಿ ಇಲ್ಲ. ಅದರ ಕುರಿತು ನಿರ್ಣಯವನ್ನು ಪಕ್ಷದ ಹೈಕಮಾಂಡ್ ಕೈಗೊಳ್ಳುತ್ತದೆ ಎಂದು ಹೇಳಿದರು.

ಯಾವ ಸ್ಥಾನ ಕೊಟ್ಟರೂ ನಿಭಾಯಿಸುವೆ

ಬಳ್ಳಾರಿ: ಪಕ್ಷ ಯಾವುದೇ ಜವಾಬ್ದಾರಿ ಕೊಟ್ಟರೂ ನಾನು ವಹಿಸಿಕೊಳ್ಳಲು ಸಿದ್ಧ. ನಾನು ಪಕ್ಷದ ಶಿಸ್ತಿನ ಸಿಪಾಯಿ ಎಂದು ಬಳ್ಳಾರಿ-ವಿಜಯನಗರ ಸಂಸದ ಇ. ತುಕಾರಾಂ ಹೇಳಿದರು. ಕಾಂಗ್ರೆಸ್ ಮೊದಲಿನಿಂದಲೂ ಹೈಕಮಾಂಡ್ ಅಣತಿಯಂತೆ ನಡೆಯುತ್ತದೆ. ಯಾರಿಗೆ ಯಾವ ಜವಾಬ್ದಾರಿ ಕೊಡಬೇಕು ಎಂಬುದು ಸೇರಿ ಇತರೆ ವಿಷಯಗಳನ್ನು ಪಕ್ಷದ ಹಿರಿಯರು ಚರ್ಚಿಸಿ, ನಿರ್ಧರಿಸುತ್ತಾರೆ. ಶಾಸಕನಾಗಿದ್ದ ನನಗೆ ಲೋಕಸಭೆಗೆ ಸ್ಪರ್ಧಿಸಲು ಸೂಚಿಸಲಾಯಿತು. ಶಾಸಕ ನಾಗಿದ್ದುಕೊಂಡೇ ಸಂಸದನಾದೆ. ಪಕ್ಷ ಯಾವುದೇ ಜವಾಬ್ದಾರಿ ಕೊಟ್ಟರೂ ಹೊರುವೆ ಎಂದರು.

ನನ್ನ ಗೆಲುವಿಗೆ ಬಿಎಸ್‌ವೈ ಕೊಡುಗೆ ಅಪಾರ

ವಿಜಯಪುರ: ಎಲ್ಲರ ಪ್ರಾಮಾಣಿಕ ಪ್ರಯತ್ನದಿಂದ ನಾನು ಲೋಕಸಭಾ ಚುನಾವಣೆಯಲ್ಲಿ ಗೆದ್ದಿದ್ದೇನೆ. ಚಿತ್ರದುರ್ಗಕ್ಕೆ ಹೊಸಬನಾಗಿದ್ದರೂ ನನ್ನ ಗೆಲುವಿಗೆ ಕ್ಷೇತ್ರದ ನಾಯಕರು, ಕಾರ್ಯಕರ್ತರು ಶ್ರಮಿಸಿದರು ಎಂದು ಚಿತ್ರದುರ್ಗದ ಸಂಸದ ಗೋವಿಂದ ಕಾರಜೋಳ ಹೇಳಿದರು. ಯಡಿಯೂರಪ್ಪ ಅವರು 3 ಬಾರಿ ಕ್ಷೇತ್ರಕ್ಕೆ ಬಂದು ಪ್ರಚಾರ ಮಾಡಿದ್ದಾರೆ. ನನ್ನ ಗೆಲುವಿಗೆ ಅವರ ಕೊಡುಗೆ ತುಂಬಾ ಇದೆ. ಯಾರೂ ನನ್ನನ್ನು ಸೋಲಿಸಲು ಪ್ರಯತ್ನಿಸಿಲ್ಲ ಎಂದರು.

{ **ಡಾ.ಜಿ.ಪರಮೇಶ್ವರ** } ಗೃಹ ಸಚಿವ

ಸಚಿವ ಸಂಪುಟ ಪುನಾರಚನೆ ಪ್ರಸ್ತಾಪವೇ ಇನ್ನೂ ಬಂದಿಲ್ಲ. ಈ ವಿಚಾರವೇ ಚರ್ಚೆಯಲ್ಲಿ ಇಲ್ಲದಿರುವಾಗ ಇನ್ನು ತಿಕ್ಕಾಟ ಎಲ್ಲಿಂದ ಬಂತು? ಸಚಿವ ಸಂಪುಟ ಪುನಾರಚನೆ ಬಗ್ಗೆ ಯಾವುದೇ ಚರ್ಚೆ ಆಗಿಲ್ಲ. ಈ ಬಗ್ಗೆ ಹೈಕಮಾಂಡ್ ನೋಡಿಕೊಳ್ಳಲಿದೆ.



ಮಧುಗಿರಿ ಡಿವೈಎಸ್‌ಪಿ ಮಂಜುನಾಥ್ ಬದಲು ಮಾಗಡಿ ಡಿವೈಎಸ್‌ಪಿ ಪ್ರವೀಣ್‌ಗೆ ತನಿಖೆ ಹೊಣೆ

ರಾಜೇಂದ್ರ ಕೊಲೆ ಯತ್ನ ತನಿಖಾ ತಂಡ ಬದಲು

ತುಮಕೂರು: ವಿಧಾನ ಪರಿಷತ್ ಸದಸ್ಯ ಆರ್.ರಾಜೇಂದ್ರ ಕೊಲೆ ಸಂಚು ಪ್ರಕರಣದ ತನಿಖಾ ತಂಡ ಬದಲಾಗಿದ್ದು, ಮಾಗಡಿ ಡಿವೈಎಸ್ಪಿ ಪ್ರವೀಣ್ ಅವರಿಗೆ ತನಿಖೆಯ ಹೊಣೆ ನೀಡಲಾಗಿದೆ.

ಈ ಮುಂಚೆ ಮಧುಗಿರಿ ಡಿವೈಎಸ್‌ಪಿ ಮಂಜುನಾಥ್ ನೇತೃತ್ವದಲ್ಲಿ ವಿಶೇಷ ತನಿಖಾ ತಂಡ ರಚಿಸಲಾಗಿತ್ತು. ಶಿರಾ ಗ್ರಾಮಾಂತರ ಠಾಣೆಯ ಇನ್‌ಸ್ಪೆಕ್ಟರ್ ರಾಘವೇಂದ್ರ, ಕ್ಯಾತ್ಸಂದ್ರ ಠಾಣೆಯ ಪಿಎಸ್‌ಐ ಚೇತನ್ ಅವರನ್ನು ಒಳಗೊಂಡ ತಂಡ ನೇಮಕ ಮಾಡಲಾಗಿತ್ತು. ಇದೀಗ ಹೊಸ ತಂಡ ರಚಿಸಲಾಗಿದೆ. ಕ್ಯಾತ್ಸಂದ್ರ ಇನ್‌ಸ್ಪೆಕ್ಟರ್ ರಾಮ್ ಪ್ರಸಾದ್, ಜಿಲ್ಲಾ ಪೊಲೀಸ್ ಕಚೇರಿಯ ಇನ್‌ಸ್ಪೆಕ್ಟರ್ ಅವಿನಾಶ್, ಶಿರಾ ಗ್ರಾಮಾಂತರ ಠಾಣೆಯ ಇನ್‌ಸ್ಪೆಕ್ಟರ್ ರಾಘವೇಂದ್ರ ಅವರ ತಂಡ ಆರೋಪಿಗಳನ್ನು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದೆ.

ರಾಜೇಂದ್ರ ಕೊಲೆಗೆ ಸಂಚು ರೂಪಿಸಿದ ಬಗ್ಗೆ ಸೋಮವಾರ ಆಡಿಯೊ ಹರಿದಾಡಿತ್ತು. ಪುಷ್ಪಾ ಮತ್ತು ರಾಕಿ ಎಂಬುವವರ ಮಧ್ಯೆ ನಡೆದ ಸಂಭಾಷಣೆ ಸದ್ದು ಮಾಡಿತ್ತು. ಆಡಿಯೊದಲ್ಲಿ ಸೋಮ ಮತ್ತಿತರರು ರಾಜೇಂದ್ರ ಕೊಲೆಗೆ ಯತ್ನಿಸಿದ ಬಗ್ಗೆ ಪುಷ್ಪಾ ಮಾತನಾಡಿರುವುದು ದಾಖಲಾಗಿತ್ತು. ಪೊಲೀಸರು ಪುಷ್ಪಾ ಮತ್ತು ಯಶೋಧ ಎಂಬುವರನ್ನು ವಶಕ್ಕೆ ಪಡೆದು ವಿಚಾರಣೆಗೆ ಒಳಪಡಿಸಿದ್ದಾರೆ.

ಜೈಲು ಸೇರಿದ್ದ ಪುಷ್ಪಾ: ಸೋಮನ ವಿರುದ್ಧ ಕೊಲೆ ಯತ್ನದ ಆರೋಪ ಮಾಡಿರುವ ಪುಷ್ಪಾ 2023ರಲ್ಲಿ ಡಕಾಯಿತಿ ಪ್ರಕರಣದಲ್ಲಿ ಸೋಮನ ಜತೆಗೆ ಜೈಲು ಸೇರಿದ್ದರು. 63 ವರ್ಷದ ವೃದ್ಧೆಯ ಬಾಯಿಗೆ ಬಟ್ಟೆ ತುರುಕಿ ₹2 ಲಕ್ಷ ಮೌಲ್ಯದ 60 ಗ್ರಾಂ ಮಾಂಗಲ್ಯ ಸರ ದೋಚಿದ್ದ ಆರೋಪ ಎದುರಿಸುತ್ತಿದ್ದಾರೆ. ತುಮಕೂರಿನ ಕೃಷ್ಣ ನಗರದಲ್ಲಿ ಈ ಕೃತ್ಯವೆಸಗಿದ್ದರು. 2023ರ ಸೆ.20ರಂದು ಬಟ್ಟೆ ಹೊಲಿಸುವ ನೆಪದಲ್ಲಿ ಚಂದ್ರಮ್ಮ ಎಂಬುವವರ ಮನೆಗೆ ಹೋಗಿ ಸರ ಕಿತ್ತಿದ್ದರು. ಚಂದ್ರಮ್ಮ ಕೈ ಕಟ್ಟಿ ಹಾಕಿ, ಬಾಯಿಗೆ ಬಟ್ಟೆ ತುರುಕಿ ಚಿನ್ನಾಭರಣ ಕಿತ್ತುಕೊಂಡು ಹೋಗಿದ್ದರು. ಎನ್ ಇಪಿಎಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಪ್ರಕರಣದ ಕುರಿತು ತನಿಖೆ ನಡೆಸಿದ ಪೊಲೀಸರು ಇಬ್ಬರನ್ನು ಬಂಧಿಸಿ ಜೈಲಿಗೆ ಕಳುಹಿಸಿದ್ದರು.

ಪುಷ್ಪಾ ಈ ಹಿಂದೆ ಕೆಲ ಸ್ಥಳೀಯ ಮುಖಂಡರನ್ನು ಹನಿಟ್ರ್ಯಾಪ್‌ಗೆ ಬೀಳಿಸಿದ ಉದಾಹರಣೆಗಳಿವೆ. ರೈಲು ನಿಲ್ದಾಣ ರಸ್ತೆಯ ಉಪ್ಪಾರಹಳ್ಳಿ ಕೆಳ ಸೇತುವೆ ಬಳಿ ಹೋಟೆಲ್ ನಡೆಸುತ್ತಿದ್ದರು. ಸೋಮನ ಆಪ್ತ ಬಣದಲ್ಲಿ ಗುರುತಿಸಿಕೊಂಡಿದ್ದ ಪುಷ್ಪಾ ಆತನ ವಿರುದ್ಧವೇ ಆರೋಪ ಮಾಡಿರುವುದು ಹಲವು ಅನುಮಾನಗಳಿಗೆ ಎಡೆ ಮಾಡಿಕೊಟ್ಟಿದೆ.

ಹನಿಟ್ರ್ಯಾಪ್: ತನಿಖೆ ವಿಚಾರ ಸಿಎಂಗೆ ಬಿಟ್ಟದ್ದು

ಹನಿಟ್ರ್ಯಾಪ್ ಪ್ರಕರಣಕ್ಕೆ ಸಂಬಂಧಿಸಿದಂತೆ ಎಸ್‌ಐಟಿ ಸೇರಿದಂತೆ ಯಾವುದೇ ತನಿಖೆ ನಡೆಸುವುದು ಮುಖ್ಯಮಂತ್ರಿ, ಗೃಹ ಸಚಿವರಿಗೆ ಬಿಟ್ಟ ವಿಚಾರ ಎಂದು ಸಹಕಾರ ಸಚಿವ ಕೆ.ಎನ್.ರಾಜಣ್ಣ ಹೇಳಿದರು. ಸುದ್ದಿಗಾರರೊಂದಿಗೆ ಮಾತನಾಡಿ, ಪ್ರಕರಣದ ತನಿಖೆ ನಡೆಯುತ್ತಿದೆ. ಈಗ ಏನು ಮಾತನಾಡುವುದು? ನೋಟಿಸ್ ಕೊಟ್ಟರೆ ಕೊಡಲಿ, ಯಾವ ತನಿಖೆ ಆಗುತ್ತದೋ ಆಗಲಿ. ಕೆಲವು ವಿಚಾರ ಹೇಳಲು ಆಗುವುದಿಲ್ಲ ಎಂದರು. ನಮ್ಮ ಪಕ್ಷ, ಬೇರೆ ಪಕ್ಷದವರು ಪ್ರಯತ್ನ ಮಾಡಿರಬಹುದು. ಬೆಂಗಳೂರು, ಮುಂಬೈನವರೂ ಇರಬಹುದು. ರಾಜಕೀಯೇತರ ವ್ಯಕ್ತಿಗಳು ಮಾಡಿರಬಹುದು. ಯಾರೇ ಮಾಡಿದರೂ ಇದು ಖಂಡನಾರ್ಹ. ಕಾನೂನು ಬಾಹಿರ ಕ್ರಮಕ್ಕೆ ಕುಮ್ಮಕ್ಕು ನೀಡಿದವರಿಗೆ, ಪ್ರಯತ್ನಿಸಿದವರಿಗೆ ದೇವರು ಒಳ್ಳೆಯದು ಮಾಡಲ್ಲ ಎಂದರು.

ನಾಲ್ವರ ವಿಚಾರಣೆ

ನನ್ನ ಕೊಲೆಗೆ ಸಂಚು ರೂಪಿಸಿದ್ದು, ತನಿಖೆ ನಡೆಸಿ ಅಗತ್ಯ ಕ್ರಮಕೈಗೊಳ್ಳಬೇಕು ಎಂದು ಆರ್. ರಾಜೇಂದ್ರ ನೀಡಿದ ದೂರಿನನ್ವಯ ಸೋಮ, ಭರತ್, ಅಮಿತ್, ಗುಂಡಾ, ಯತೀಶ್ ಇತರರ ವಿರುದ್ಧ ಕ್ಯಾತ್ಸಂದ್ರ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ. ಎ-1 ಆರೋಪಿ ಸೋಮ ತಲೆ ಮರೆಸಿಕೊಂಡಿದ್ದಾನೆ. ಈತನ ಪತ್ತೆಗೆ ಪೊಲೀಸರು ಬಲೆ ಬೀಸಿದ್ದಾರೆ. ಭರತ್, ಯತೀಶ್‌ನನ್ನು ವಶಕ್ಕೆ ಪಡೆದು ವಿಚಾರಣೆ ಮುಂದುವರಿಸಿದ್ದಾರೆ.

ಹನಿಟ್ರ್ಯಾಪ್‌ನಂತಹ ಹೀನಕೃತ್ಯ ಮಾಡುವವರು ರಾಜಕೀಯದಲ್ಲಿ ಇರಬಾರದು. ನಾನು ಹೇಳೋದು ಬೇರೆಯವರಿಗೋಸ್ಕರ ಅಲ್ಲ, ನನ್ನನ್ನು ಸೇರಿಸಿ ಹೇಳ್ತಿರೋದು. ಎಂಎಲ್‌ಸಿ ರಾಜೇಂದ್ರ ಹತ್ಯೆಗೆ ಸುಪಾರಿ ನೀಡಿರುವ ವಿಚಾರದ ಬಗ್ಗೆ ಚರ್ಚಿಸಿರುವ ಆಡಿಯೋ ವೈರಲ್ ಆಗಿದ್ದು ಈ ತನಿಖೆ ನಡೆಯುತ್ತಿದೆ.

-**ಕೆ.ಎನ್.ರಾಜಣ್ಣ** ಸಹಕಾರ ಸಚಿವ

ಯತ್ನಾಳ ಹೊಸ ಪಕ್ಷ ಕಟ್ಟಲ್ಲ, ಬಿಜೆಪಿ ಬಿಡಲ್ಲ

ಬೆಳಗಾವಿ: ಯತ್ನಾಳ ಅವರೂ ಸೇರಿದಂತೆ ನಮ್ಮ ತಂಡದ ಯಾರೂ ಬಿಜೆಪಿ ಬಿಟ್ಟು ಹೋಗುವುದಿಲ್ಲ. ಯತ್ನಾಳ ಹೊಸ ಪಕ್ಷವನ್ನೂ ಕಟ್ಟುವುದಿಲ್ಲ. ಮರಳಿ ಬಿಜೆಪಿಗೆ ಸೇರಿಸಿಕೊಳ್ಳುವ ವಿಶ್ವಾಸವಿದೆ ಎಂದು ಶಾಸಕ ರಮೇಶ ಜಾರಕಿಹೊಳಿ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಯತ್ನಾಳ ಹೊಸ ಪಕ್ಷ ಕಟ್ಟುವ ನಿರ್ಧಾರ ಮಾಡಿಲ್ಲ. ಮಾಧ್ಯಮಗಳಲ್ಲಿ ಅದು ಬೇರೆ ಅರ್ಥ ಕಲ್ಪಿಸುವಂತೆ ಪ್ರಕಟವಾಗಿದೆ ಎಂದರು.

ಯತ್ನಾಳ ಅವರ ವಿಚಾರವಾಗಿ ಕೆಲವರು ಈಗ ಏನೇನೋ ಮಾತನಾಡುತ್ತಿದ್ದಾರೆ. ಕೆಲವೇ ತಿಂಗಳ ಹಿಂದೆ ಅವರೇ ಮಾತನಾಡಿದ ಮಾತುಗಳು ಯುಟ್ಯೂಬ್‌ನಲ್ಲಿವೆ. ಯತ್ನಾಳ ನಮ್ಮ ಅಣ್ಣ, ಚಿಕ್ಕಪ್ಪನ ಸಮಾನ. ಅವರನ್ನು ಮುಖ್ಯಮಂತ್ರಿ ಮಾಡಿಯೇ ತೀರುತ್ತೇವೆ ಎಂದೆಲ್ಲ ಮಾತನಾಡಿದ್ದಾರೆ. ಈಗ ಉಲ್ಟಾ ಹೊಡೆದಿದ್ದಾರೆ ಎಂದು ಅವರು ಸಚಿವೆ ಲಕ್ಷ್ಮೀ ಹೆಬ್ಬಾಳಕರ ಅವರಿಗೆ ತಿರುಗೇಟು ನೀಡಿದರು. ಯತ್ನಾಳ ಅವರ ಬೆನ್ನಿಗೆ ಪಂಚಮಸಾಲಿ ಸಮಾಜ ಏಕೆ ನಿಲ್ಲುತ್ತಿಲ್ಲ? ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಯಾವುದೇ ಸಮಾಜ ಯಾವ ಪಕ್ಷಕ್ಕೂ ಸೀಮಿತವಾಗಿಲ್ಲ. ನಾನು ಆ ಸಮಾಜದ ಬಗ್ಗೆ ಏನೂ ಹೇಳುವುದಿಲ್ಲ ಎಂದರು. ಏ.2ರಂದು ವಿಜಯೇಂದ್ರ ನೇತೃತ್ವದಲ್ಲಿ ಹಮ್ಮಿಕೊಂಡ ಪ್ರತಿಭಟನೆಯಲ್ಲಿ ಪಾಲ್ಗೊಳ್ಳುವ ಕುರಿತು ವಿಚಾರ ಮಾಡಿಲ್ಲ. ದೇವರು ಏನು ಬುದ್ಧಿ ಕೊಡುತ್ತಾನೋ ಅದನ್ನು ಮಾಡುತ್ತೇವೆ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು. ರಮೇಶ ಜಾರಕಿಹೊಳಿ, ಅರವಿಂದ ಲಿಂಬಾವಳಿ ಅವರನ್ನು ಉಚ್ಚಾಟನೆ ಮಾಡುವ ಚರ್ಚೆ ನಡೆದಿದೆಯೇ? ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ರಮೇಶ, ಇದೆಲ್ಲ ಸುಳ್ಳು. ಹಾಗೆ ಹೇಳಿದವರು ಯಾರೆಂದು ತಿಳಿಸಿ ನೋಡೋಣ ಎಂದು ಮರುಪ್ರಶ್ನೆ ಮಾಡಿದರು.

ಪಕ್ಷಕ್ಕೆ ಮುಜುಗರ ತರುವ ರೀತಿ ಮಾತನಾಡಬೇಡಿ ಎಂದಷ್ಟೇ ನಾನು ಯತ್ನಾಳರಿಗೆ ಮನವಿ ಮಾಡಿಕೊಂಡಿದ್ದೇನೆ. ಬೆಂಗಳೂರಿನಲ್ಲಿ ನಡೆಸಿದ ಸಭೆಯಲ್ಲಿ ಮಹತ್ವದ ವಿಷಯ ಚರ್ಚೆ ಮಾಡಿದ್ದೇವೆ. ಎಲ್ಲವನ್ನೂ ಮಾಧ್ಯಮದವರ ಮುಂದೆ ಹೇಳುವುದಿಲ್ಲ.

-**ರಮೇಶ ಜಾರಕಿಹೊಳಿ** ಶಾಸಕ

ಬಿಜೆಪಿಯವರು ಕೇಂದ್ರದ ವಿರುದ್ಧ ಹೋರಾಡಬೇಕು

ಬೆಳಗಾವಿ: ಅಗತ್ಯ ವಸ್ತುಗಳ ಬೆಲೆ ಏರಿಸುವ ಮೂಲಕ ಕೇಂದ್ರ ಸರಕಾರ ಜನಸಾಮಾನ್ಯರಿಗೆ ಹೊರೆ ಮಾಡಿದೆ. ಕರ್ನಾಟಕ ಬಿಜೆಪಿ ನಾಯಕರು ಮೊದಲು ಕೇಂದ್ರ ಸರಕಾರದ ವಿರುದ್ಧ ಪ್ರತಿಭಟಿಸಲಿ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳಕರ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಕೇಂದ್ರವು ಇಂಧನ ಬೆಲೆ, ಗ್ಯಾಸ್ ಸೇರಿ ಪ್ರತಿಯೊಂದು ದಿನಸಿ ಬೆಲೆಗಳ ಏರಿಸಿದೆ. ಇದರಿಂದ ಜನರಿಗೆ ತೊಂದರೆಯಾಗಿದೆ. ನಾವು ಹಾಲಿನ ದರ ಏರಿಸಿದ್ದೇವೆ. ಇದರಿಂದ ರೈತರಿಗೆ ಅನುಕೂಲ ಆಗಲಿದೆ ಎಂದರು. ರಾಜ್ಯ ಬಿಜೆಪಿಯಲ್ಲಿ ಘಟಾನುಘಟಿ ನಾಯಕರಿದ್ದಾರೆ. ರಾಜ್ಯಕ್ಕೆ ನ್ಯಾಯ ಕೊಡಿಸಲಿ. ನಮ್ಮ ತೆರಿಗೆ ಪಾಲು ಕೊಡಿಸಲಿ. ಕೇಂದ್ರ ಸರಕಾರವನ್ನು ಪ್ರಶ್ನಿಸುವ ಧೈರ್ಯ ರಾಜ್ಯ ಬಿಜೆಪಿ ನಾಯಕರಿಗೆ ಇದೆಯೇ? ಅದನ್ನು ಮರೆತು ಕಾಂಗ್ರೆಸ್ ವಿರುದ್ಧ ಹೋರಾಟ ಮಾಡಿದರೆ ಹಾಸ್ಯಾಸ್ಪದವಾಗುತ್ತದೆ ಎಂದರು.

ರಾಜ್ಯದಲ್ಲಿ ಈ ಹಿಂದಿನ ಬಿಜೆಪಿ ಸರಕಾರ ಮಾಡಿದ ತಪ್ಪಿನಿಂದಾಗಿ ಗುತ್ತಿಗೆದಾರರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಸಿಕ್ಕ ಸಿಕ್ಕಂತೆ ಟೆಂಡರ್ ಮಾಡಿ, ಯಾವುದೇ ಹಣ ಬಿಡುಗಡೆ ಮಾಡದೇ ಹೋದರು. ಇದೀಗ ಹಣ ಬಿಡುಗಡೆ ಮಾಡಿ ಎಂದು ನಮ್ಮನ್ನು ಕೇಳುತ್ತಿದ್ದಾರೆ.

- **ಲಕ್ಷ್ಮೀ ಹೆಬ್ಬಾಳಕರ** ಸಚಿವೆ

ಹನಿಟ್ರ್ಯಾಪ್ ಬಲೆ ಬೀಸಿದವರು ಸಿಲುಕಿದವರೂ ಒಳ್ಳೆಯವರಲ್ಲ

ಸಕಲೇಶಪುರ: ಸದನವು ದೊಡ್ಡ ದೇವಸ್ಥಾನದಂತೆ. ಅಲ್ಲಿ ಹನಿಟ್ರ್ಯಾಪ್‌ನಂತಹ ಘಟನೆಗಳ ಬಗ್ಗೆ ಚರ್ಚೆಯಾಗುವುದು ತಲೆತಗ್ಗಿಸುವ ವಿಷಯ. ಇದರಿಂದ ಯಾರಿಗೆ ಒಳ್ಳೆಯದಾಗುತ್ತದೆ? ಹನಿಟ್ರ್ಯಾಪ್ ಬೀಸಿದವನೂ ಒಳ್ಳೆಯವ ನಲ್ಲ, ಸಿಕ್ಕಿಹಾಕಿಕೊಂಡವನೂ ಒಳ್ಳೆಯವನಲ್ಲ ಎಂದು ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಪ್ರಜಾಪ್ರಭುತ್ವದ ಮೌಲ್ಯವನ್ನು ಎಲ್ಲರೂ ಅರಿಯಬೇಕು. ಹಿಂದಿನ-ಈಗಿನ ರಾಜಕಾರಣಕ್ಕೆ ಬಹಳ ಅಂತರವಿದೆ. ದುಡ್ಡು ಕೊಟ್ಟು ಗೆದ್ದು ಬಂದು, ಬೆಂಗಳೂರಿನಲ್ಲಿ ಕುಳಿತು ದುಡ್ಡು ಮಾಡಿ, ಮತ್ತೆ ದುಡ್ಡು ಖರ್ಚು ಮಾಡಿ ಆಯ್ಕೆಯಾಗುವ ಪರಿಪಾಠವಿದೆ. ಎಲ್ಲಿಯವರೆಗೆ ದುಡ್ಡು ಕೊಟ್ಟು ಮತ ಹಾಕಿಸಿಕೊಳ್ಳುತ್ತಾರೆಯೋ, ಅಲ್ಲಿಯವರೆಗೆ ಪ್ರಜಾಪ್ರಭುತ್ವವನ್ನು ಕೇಳುವವರು ಇರುವುದಿಲ್ಲ. ಪರಿಸ್ಥಿತಿ ಹೀಗೆಯೇ ಮುಂದುವರಿದರೆ ರಾಜೀನಾಮೆ ಕೊಡಬೇಕೆಂದು ತೀರ್ಮಾನಿಸಿದ್ದೇನೆ ಎಂದು ತಿಳಿಸಿದರು.

ಸದನಕ್ಕೆ ಕಾಲಿಟ್ಟರೆ ಎಲ್ಲರೂ ಶಾಸಕರೇ. ವಯಸ್ಸಿನ ಪ್ರಶ್ನೆ ಇಲ್ಲ. ಅನುಭವಿಗಳು ಹೇಳಿದ್ದನ್ನು ಕೇಳುವುದಿಲ್ಲ. ಯಾರಿಗೂ ಯಾರ ಹೆದರಿಕೆಯೂ ಇಲ್ಲ. ದುಡ್ಡು ಕೊಟ್ಟು ಆರಿಸಿ ಬರುತ್ತೇನೆ ಎಂಬ ಭಾವನೆ ಇದೆ. ಇನ್ನೊಂದೆಡೆ ಜಾತಿ ವ್ಯವಸ್ಥೆಯೂ ಇದೆ.

-**ಬಸವರಾಜ ಹೊರಟ್ಟಿ** ವಿಧಾನಪರಿಷತ್ ಸಭಾಪತಿ

ನಿರಂಜನಾನಂದಪುರಿ ಸ್ವಾಮೀಜಿ ಸೇರಿ ಮೂವರಿಗೆ ಗೌಡಾ

ದಾವಣಗೆರೆ: ಕಾಗಿನೆಲೆ ಗುರುಪೀಠದ ನಿರಂಜನಾನಂದ ಪುರಿ ಸ್ವಾಮೀಜಿ, ಮಾಜಿ ಸಚಿವ ಎಸ್.ಎ.ರವೀಂದ್ರನಾಥ್ ಹಾಗೂ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ಉಪಾಧ್ಯಕ್ಷ ಪ್ರೊ.ಎಸ್. ಆರ್.ನಿರಂಜನ ಅವರಿಗೆ ದಾವಣಗೆರೆ ವಿಶ್ವವಿದ್ಯಾಲಯ ಗೌರವ ಡಾಕ್ಟರೇಟ್ ಘೋಷಣೆ ಮಾಡಿದೆ.

ಏ.2ರಂದು ನಡೆಯಲಿರುವ ವಿಶ್ವವಿದ್ಯಾಲಯದ 12ನೇ ಘಟಿಕೋತ್ಸವದಲ್ಲಿ ಕುಲಾಧಿಪತಿಯೂ ಆಗಿರುವ ರಾಜ್ಯಪಾಲ ಥಾವರಚಂದ್ ಗೆಹಲೋತ್ ಗೌರವ ಡಾಕ್ಟರೇಟ್ ಪ್ರದಾನ ಮಾಡಲಿದ್ದಾರೆ. ಜೀವರಸಾಯನ ವಿಜ್ಞಾನಿ ಪ್ರೊ.ಪಿ.ಬಲರಾಮ್ ಘಟಿಕೋತ್ಸವ ಭಾಷಣ ಮಾಡಲಿದ್ದು, ಉನ್ನತ ಶಿಕ್ಷಣ ಸಚಿವ ಎಂ.ಸಿ.ಸುಧಾಕರ್ ಉಪಸ್ಥಿತರಿರುವರು ಎಂದು ಕುಲಪತಿ ಪ್ರೊ.ಬಿ.ಡಿ.ಕುಂಬಾರ ತಿಳಿಸಿದ್ದಾರೆ.

ನಿರಂಜನಾನಂದಪುರಿ ಸ್ವಾಮೀಜಿ, ಎಸ್.ಎ. ರವೀಂದ್ರನಾಥ್ ಹಾಗೂ ಪ್ರೊ.ಎಸ್.ಆರ್.ನಿರಂಜನ

ಗೌರವ ಡಾಕ್ಟರೇಟ್‌ಗೆ ಬಂದಿದ್ದ ಅರ್ಜಿಗಳಲ್ಲಿ 5 ಮಾತ್ರ ಕ್ರಮಬದ್ಧವಾಗಿದ್ದವು. ಆಯ್ಕೆ ಸಮಿತಿಯು ಇವುಗಳಲ್ಲಿ ಮೂವರನ್ನು ಪರಿಗಣಿಸಿ ಕುಲಾಧಿಪತಿ ಕಚೇರಿಗೆ ರವಾನಿಸಿತ್ತು. ಧಾರ್ಮಿಕ, ರಾಜಕೀಯ ಹಾಗೂ ಶಿಕ್ಷಣ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದವರಿಗೆ ಗೌರವ ಡಾಕ್ಟರೇಟ್ ಪ್ರದಾನ ಮಾಡಲು ಸಿಂಡಿಕೇಟ್ ಅನುಮೋದನೆ ನೀಡಿದೆ ಎಂದು ಮಾಹಿತಿ ನೀಡಿದರು.

ಯುಗಾದಿ ದಿನ ಬೇಟೆಯಾಡಿದ ಮೊಲಗಳನ್ನು ಕೊಡಲಿ, ಭರ್ಜಿಗೆ ಸಿಕ್ಕಿಸಿಕೊಂಡು ಮೆರವಣಿಗೆ

ಶಾಸಕ ತುರ್ವಿಹಾಳ ಪುತ್ರನ ವಿರುದ್ಧ ಎಫ್‌ಐಆರ್

ರಾಯಚೂರು: ಸಿಂಧನೂರು ತಾಲೂಕಿನ ತುರ್ವಿಹಾಳ ಪಟ್ಟಣದಲ್ಲಿ ಮಸ್ಕಿ ಶಾಸಕ ಆರ್.ಬಸನಗೌಡ ತುರ್ವಿಹಾಳ ಅವರ ಪುತ್ರ ಹಾಗೂ ಸಹೋದರನ ವಿರುದ್ಧ ಯುಗಾದಿ ದಿನ ಬೇಟೆಯಾಡಿದ ಮೊಲಗಳನ್ನು ಕೊಡಲಿ ಹಾಗೂ ಭರ್ಜಿಗೆ ಸಿಕ್ಕಿಸಿಕೊಂಡು ಮೆರವಣಿಗೆ ಮಾಡಿದ ಆರೋಪದಡಿ ಅರಣ್ಯ ಇಲಾಖೆ ಪ್ರಕರಣ ದಾಖಲಿಸಿದೆ.

ಶಾಸಕರ ಪುತ್ರ ಆರ್.ಸತೀಶಗೌಡ ತುರ್ವಿಹಾಳ, ಸಹೋದರ ಸಿದ್ದನಗೌಡ ತುರ್ವಿಹಾಳ ಹಾಗೂ ಇತರರ ವಿರುದ್ಧ ವನ್ಯಜೀವಿ ಸಂರಕ್ಷಣಾ ಕಾಯ್ದೆ ಅಡಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ರಾಯಚೂರು ಡಿಸಿಎಫ್ ಪ್ರವೀಣ ತಿಳಿಸಿದ್ದಾರೆ.

ಸಾವಿರಾರು ಜನರ ಎದುರೇ ಕೊಡಲಿಗೆ ಮೊಲಗಳನ್ನು ಸಿಕ್ಕಿಸಿಕೊಂಡು ವಿಜೃಂಭಿಸುತ್ತಿರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಮೆರವಣಿಗೆಯಲ್ಲಿ ಪಾಲ್ಗೊಂಡ ಕೆಲವರು ಕೊಡಲಿಗಳಿಗೆ ಮೊಲಗಳನ್ನು ತೂಗು ಹಾಕಿ ಹಿಂಸೆ ನೀಡಿರುವುದನ್ನು ಅರಣ್ಯ ಇಲಾಖೆ ಗಂಭೀರವಾಗಿ ಪರಿಗಣಿಸಿದೆ. ಯುಗಾದಿ ಹಬ್ಬದಲ್ಲಿ ಕೆಲವು ಸಂಪ್ರದಾಯಗಳನ್ನು ಮುಂದುವರಿಸಿಕೊಂಡು ಬರಲಾಗಿದೆ. ನಮ್ಮ ಕುಟುಂಬದ ಸದಸ್ಯರು ಮೊಲಗಳನ್ನು ಬೇಟೆಯಾಡಿಲ್ಲ. ಆದರೆ, ಮೆರವಣಿಗೆಯಲ್ಲಿ ಬಂದ ಯುವಕರು ನಮ್ಮವರನ್ನು ಹೆಗಲ ಮೇಲೆ ಕೂರಿಸಿಕೊಂಡು ಮೆರವಣಿಗೆ ಮಾಡಿದ್ದಾರೆ ಅಷ್ಟೇ. ಮೊಲಗಳನ್ನು ಬೇಟೆಯಾಡುವುದು ತಪ್ಪು. ಇಂಥ ಕೃತ್ಯಗಳನ್ನು ನಡೆಸದಂತೆ ಸಾರ್ವಜನಿಕರಿಗೆ ತಿಳುವಳಿಕೆ ನೀಡಲಾಗುವುದು ಎಂದು ಮಸ್ಕಿ ಕ್ಷೇತ್ರದ ಕಾಂಗ್ರೆಸ್ ಶಾಸಕ ಆರ್.ಬಸನಗೌಡ ತುರ್ವಿಹಾಳ ಪ್ರತಿಕ್ರಿಯಿಸಿದ್ದಾರೆ.

ಬೇಟೆಯಾಡಿದ ಮೊಲಗಳನ್ನು ಕೊಡಲಿ ಹಾಗೂ ಭರ್ಜಿಗೆ ಸಿಕ್ಕಿಸಿಕೊಂಡು ಮೆರವಣಿಗೆ ಮಾಡುತ್ತಿರುವ ದೃಶ್ಯ.

ವನ್ಯಜೀವಿ ಸಂರಕ್ಷಣಾ ಕಾಯ್ದೆಯನ್ನು ಉಲ್ಲಂಘಿಸಿದವರು ಯಾರೇ ಇದ್ದರೂ ಅವರನ್ನು ರಕ್ಷಣೆ ಮಾಡುವುದಿಲ್ಲ. ಬೇಟೆಯಾಡಿದ್ದರೆ ಶಾಸಕರ ಪುತ್ರ ಹಾಗೂ ಸಹೋದರನ ವಿರುದ್ಧ ಕ್ರಮ ತೆಗೆದುಕೊಳ್ಳಲಾಗುವುದು.

- **ಈಶ್ವರ ಖಂಡ್ರೆ** ಅರಣ್ಯ ಇಲಾಖೆ ಸಚಿವ

ವಿಶ್ವವಾಣಿ ಯುಗಾದಿ ಸಂಚಿಕೆ ಬಿಡುಗಡೆ



ವಿಶ್ವವಾಣಿ ಯುಗಾದಿ ವಿಶೇಷಾಂಕವನ್ನು ಮಂಗಳೂರಿನಲ್ಲಿ ವಿಧಾನಸಭೆ ಸಭಾಧ್ಯಕ್ಷರಾದ ಯು.ಟಿ ಖಾದರ್ ಅವರು ಬಿಡುಗಡೆಗೊಳಿಸಿದರು. ಈ ಸಂದರ್ಭದಲ್ಲಿ ವಿಶ್ವವಾಣಿ ಜಿಲ್ಲಾ ವರದಿಗಾರ ಜಿತೇಂದ್ರ ಕುಂದೇಶ್ವರ ಹಾಗೂ ಜಾಹೀರಾತು ವಿಭಾಗದ ಮಹಮ್ಮದ್ ಅಕ್ರಮ್ ಜತೆಯಲ್ಲಿದ್ದರು.

ವಿಶ್ವವಾಣಿ ಯುಗಾದಿ ವಿಶೇಷಾಂಕವನ್ನು ಮಂಗಳೂರಿನ ಎಸ್‌ಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಡಾ.ಎಂ.ಎನ್.ರಾಜೇಂದ್ರ ಕುಮಾರ್ ಬಿಡುಗಡೆಗೊಳಿಸಿದರು. ವಿಶ್ವವಾಣಿ ಜಿಲ್ಲಾ ವರದಿಗಾರ ಜಿತೇಂದ್ರ ಕುಂದೇಶ್ವರ ಹಾಗೂ ಜಾಹೀರಾತು ವಿಭಾಗದ ಮಹಮ್ಮದ್ ಅಕ್ರಮ್ ಜತೆಯಲ್ಲಿದ್ದರು.

ವಿಶ್ವವಾಣಿ ಯುಗಾದಿ ವಿಶೇಷಾಂಕವನ್ನು ಮಾಜಿ ಉಪಮುಖ್ಯ ಮಂತ್ರಿ ಕೆ.ಎಸ್. ಈಶ್ವರಪ್ಪ ಅವರು ಶಿವಮೊಗ್ಗದಲ್ಲಿ ಮಂಗಳವಾರ ಬಿಡುಗಡೆ ಗೊಳಿಸಿದರು.

ವಿಶ್ವವಾಣಿ ಯುಗಾದಿ ವಿಶೇಷಾಂಕವನ್ನು ದಾವಣಗೆರೆ ಸಂಸದರಾದ ಡಾ.ಪ್ರಭಾ ಮಲ್ಲಿಕಾರ್ಜುನ್ ಅವರು ಬಿಡುಗಡೆ ಮಾಡಿದರು.

ವಿಶ್ವವಾಣಿ ಯುಗಾದಿ ವಿಶೇಷಾಂಕವನ್ನು ಬೆಳಗಾವಿ ಜಿಲ್ಲಾ ಪಂಚಾಯತಿ ಸಿಇಒ ರಾಹುಲ್ ಶಿಂದೆ ಅವರು ಬಿಡುಗಡೆಗೊಳಿಸಿದರು. ವಿಶ್ವವಾಣಿಯ ಜಾಹೀರಾತು ವಿಭಾಗದ ರವಿ ಪೂಜಾರ್ ಜತೆಯಲ್ಲಿದ್ದರು.

ವಿಶ್ವವಾಣಿ ಯುಗಾದಿ ವಿಶೇಷಾಂಕವನ್ನು ರಾಜ್ಯದ ಜವಳಿ, ಸಕ್ಕರೆ, ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ ಅವರು ಬಿಡುಗಡೆಗೊಳಿಸಿದರು. ಈ ಸಂದರ್ಭದಲ್ಲಿ ನ್ಯಾಯವಾದಿ ರವಿ ರಾಠೋಡ, ಮುಖಂಡ ಪರಶುರಾಮ ಅಡಗಿಮನಿ, ಅಜೀಜ ಬಾಗವಾನ, ರವಿ ನಾಯ್ಕೋಡಿ ಹಾಗೂ ವಿಶ್ವವಾಣಿ ಪತ್ರಿಕೆಯ ವರದಿಗಾರ ಮಂಜು ಕಲಾಲ ಇದ್ದರು.

ವಿಶ್ವವಾಣಿ ದಿನಪತ್ರಿಕೆಯ ಯುಗಾದಿ ವಿಶೇಷಾಂಕವನ್ನು ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಚಾಮರಾಜ ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕರು ಹಾಗೂ ಬಿಜೆಪಿ ಮೈಸೂರು ನಗರಾಧ್ಯಕ್ಷರಾದ ಎಲ್.ನಾಗೇಂದ್ರ ಬಿಡುಗಡೆಗೊಳಿಸಿದರು. ವಿಶ್ವವಾಣಿ ಪತ್ರಿಕೆ ವಿಭಾಗೀಯ ವ್ಯವಸ್ಥಾಪಕ ಎನ್.ನಂದನ್ ಕುಮಾರ್, ಮಾಧ್ಯಮ ವಕ್ತಾರ ಮಹೇಶ್ ರಾಜೇ ಅರಸ್, ಮುಖಂಡ ಬಿ.ಎಂ.ರಘು ಉಪಸ್ಥಿತರಿದ್ದರು.

ವಿಶ್ವವಾಣಿ ದಿನಪತ್ರಿಕೆಯ ಯುಗಾದಿ ವಿಶೇಷಾಂಕವನ್ನು ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಕೃಷ್ಣರಾಜ ವಿಧಾನಸಭಾ ಕ್ಷೇತ್ರದ ಶಾಸಕರಾದ ಶ್ರೀವತ್ಸ ಬಿಡುಗಡೆ ಮಾಡಿದರು. ವಿಶ್ವವಾಣಿ ಪತ್ರಿಕೆ ವಿಭಾಗೀಯ ವ್ಯವಸ್ಥಾಪಕ ಎನ್.ನಂದನ್ ಕುಮಾರ್, ಬಿಜೆಪಿ ಮಾಜಿ ನಗರಾಧ್ಯಕ್ಷ ಶಿವಕುಮಾರ್, ಮಾಧ್ಯಮ ವಕ್ತಾರ ಮಹೇಶ್ ರಾಜೇ ಅರಸ್ ಉಪಸ್ಥಿತರಿದ್ದರು.

ವಿಶ್ವವಾಣಿ ಪತ್ರಿಕೆಯ ಯುಗಾದಿ ವಿಶೇಷಾಂಕವನ್ನು ನಾಗಮಂಗಲ ಮಾಜಿ ಶಾಸಕ ಸುರೇಶ್ ಗೌಡ ಅವರು ಬಿಡುಗಡೆ ಮಾಡಿದರು.

ವಿಶ್ವವಾಣಿ

ಸಂಪಾದಕೀಯ

ಎಚ್ಚರಿಕೆ ಗಂಟೆಯಾಗಲಿ

ಕುಂಬಾರನಿಗೆ ಒಂದು ವರ್ಷ, ದೊಣ್ಣೆಗೆ ಒಂದು ನಿಮಿಷ' ಎಂಬುದೊಂದು ಮಾತಿದೆ. ಬೆವರು ಸುರಿಸಿ, ಪೈಸೆಗೆ ಪೈಸೆ ಸೇರಿಸಿ ಕಟ್ಟಿದ ಮನೆ, ವಾಣಿಜ್ಯ ಸಮುಚ್ಚಯದಂಥ ಕಟ್ಟಡಗಳು ಕೆಲವೇ ಕ್ಷಣದಲ್ಲಿ ಮಣ್ಣು ಪಾಲಾದಾಗಿನ ಸಂಕಟವಿದೆಯಲ್ಲಾ, ಅದನ್ನು ಪದಗಳಲ್ಲಿ ವಿವರಿಸಲಾಗದು. ಇತ್ತೀಚೆಗೆ ಮ್ಯಾನ್ಮಾರ್, ಬ್ಯಾಂಕಾಕ್ ಮುಂತಾದ ಕಡೆಗಳಲ್ಲಿ ಪ್ರಬಲ ಭೂಕಂಪ ಸಂಭವಿಸಿದ್ದನ್ನು ವಿಶ್ವವಿಡೀ ಕಣ್ತುಂಬಿಕೊಂಡಿದೆ. ಬ್ಯಾಂಕಾಕ್‌ನಲ್ಲಿ ಗಗನಚುಂಬಿ ಕಟ್ಟಡಗಳು ಬೆಂಕಿ ಪೊಟ್ಟಣಗಳಂತೆ ಕಳಚಿ ಬಿದ್ದು ಮಣ್ಣು ಪಾಲಾಗಿದ್ದು ನಿಜಕ್ಕೂ ತಲ್ಲಣ ಹುಟ್ಟಿಸುವಂತಿತ್ತು. ಮತ್ತೊಂದೆಡೆ ಮ್ಯಾನ್ಮಾರ್ ಭೂಕಂಪದಿಂದಾಗಿ ಸಾವಿಗೀಡಾದವರ ಸಂಖ್ಯೆ 2000ವನ್ನೂ ದಾಟಿದೆ, ಹತ್ತಿರ 4000 ಮಂದಿ ಗಾಯಗೊಂಡಿದ್ದಾರೆ ಹಾಗೂ 270 ಮಂದಿ ಕಾಣೆಯಾಗಿದ್ದಾರೆ, ನಿರಾಶ್ರಿತರಾದವರ ಸಂಖ್ಯೆ 35 ಲಕ್ಷವನ್ನು ಮುಟ್ಟಿದೆ ಎಂಬುದು ಲಭ್ಯ ಮಾಹಿತಿ. ಒಟ್ಟಾರೆ ಹೇಳುವುದಾದರೆ, ಭೂಕಂಪ ಸಂತ್ರಸ್ತ ಪ್ರದೇಶ ಒಂದರ್ಥದಲ್ಲಿ ಸ್ಮಶಾನವಾಗಿ ಮಾರ್ಪಟ್ಟಿದೆ. ಭೂಕಂಪದಂಥ ಪ್ರಕೃತಿ ವಿಕೋಪಗಳನ್ನು ತಡೆಯುವುದು ಹುಲುಮಾನವರಿಂದ ಆಗದ ಕೆಲಸ ಎಂಬುದೇನೋ ಸರಿ; ಆದರೆ, ಇಂಥ ವಿಪತ್ತುಗಳು ಜರುಗುವಲ್ಲಿ ತನ್ನ ಪಾತ್ರ ಎಷ್ಟಿದೆ ಎಂಬುದರ ಅವಲೋಕನಕ್ಕೆ ಮನುಷ್ಯ ಒಡ್ಡಿಕೊಳ್ಳಬೇಕಾದ್ದು ಈ ಕ್ಷಣದ ಅನಿವಾರ್ಯತೆ. ಬ್ಯಾಂಕಾಕ್ ಮತ್ತು ಮ್ಯಾನ್ಮಾರ್‌ನ ದುರಂತಗಳು ಬೆಂಗಳೂರು ಸೇರಿದಂತೆ ದೇಶದ ಹಲವು ಮಹಾನಗರ ಮತ್ತು ಪಟ್ಟಣಗಳಿಗೆ ಪಾಠವಾಗಬೇಕಿದೆ. ಊರೂರುಗಳ ಜೀವನಾಡಿಯೇ ಆಗಿದ್ದ ಕೆರೆಗಳನ್ನು ಅತಿಕ್ರಮಿಸಿ/ಮುಚ್ಚಿ ಅಲ್ಲಿ ಗಗನಚುಂಬಿ ಕಟ್ಟಡಗಳನ್ನು ನಿರ್ಮಿಸುವ, ಮಣ್ಣಿನ ಸವಕಳಿಯನ್ನು ಪರಿಣಾಮಕಾರಿಯಾಗಿ ತಡೆಗಟ್ಟಬಲ್ಲ ವೈವಿಧ್ಯಮಯ ಮರಗಳ ಬುಡಕ್ಕೇ ಕೊಡಲಿಪೆಟ್ಟು ನೀಡುವ ಸ್ವಾರ್ಥಬುದ್ಧಿಯನ್ನು ಮನುಷ್ಯ ಇನ್ನಾದರೂ ಬಿಡಬೇಕಾಗಿದೆ. 'ನಡೆವುದೊಂದೇ ಭೂಮಿ, ಕುಡಿಯಲೊಂದೇ ನೀರು' ಎಂದಿದ್ದಾನೆ ಸರ್ವಜ್ಞ ಕವಿ. ಆದರೆ ಮನುಷ್ಯನ ಸ್ವಾರ್ಥಬುದ್ಧಿ, ದುರಾಸೆಗಳು ಇವಕ್ಕೂ ಸಂಚಕಾರ ತಂದರೆ, ಅದರಿಂದಾಗಿ ನಿಂತ ನೆಲವೇ ಕುಸಿದು ಬದುಕು ಮೂರಾಬಟ್ಟೆಯಾದರೆ, ಯಾರ ಬಳಿ ಅಳಲನ್ನು ತೋಡಿಕೊಳ್ಳಬೇಕು? ಈಗಲೂ ಕಾಲ ಮಿಂಚಿಲ್ಲ. ಪ್ರಕೃತಿಗೆ ಎದುರಾಗಿ ತೊಡೆತಟ್ಟಿದರೆ, ಒಂದು ದಿನ ಪ್ರಕೃತಿಯೇ ಮತ್ತೊಂದು ರೂಪದಲ್ಲಿ ನಮ್ಮನ್ನು ಆಪೋಶನಕ್ಕೆ ತೆಗೆದುಕೊಂಡುಬಿಡುತ್ತದೆ ಎಂಬುದನ್ನು ಅರಿಯೋಣ.

ಸೊಂಪಾದಕೀಯ

ಸ್ಟ್ಯಾಂಡ್ ಅಪ್ ಕಾಮಿಡಿ

ಸಾರ್ವಜನಿಕ ಸಾರಿಗೆಯಲ್ಲಿ ಪ್ರಯಾಣಿಸುವವರಿಗೆ ಎಷ್ಟು ಕಷ್ಟ ಅನ್ನೋದು ಎಲ್ಲರಿಗೂ ಗೊತ್ತು. ಹಾಗಾಗಿಯೇ ಇಂದು ಎಲ್ಲರ ಮನೆಯಲ್ಲೂ 3-4 ಟೂ ವೀಲರ್‌ಗಳು, ಕಾರುಗಳು ಬಂದು ಪರಿಸರ ಹದಗೆಟ್ಟಿದೆ. ಅದರಲ್ಲೂ ದೇಶದ ರಾಜಧಾನಿ ದೆಹಲಿ ಪರಿಸ್ಥಿತಿ ಎಕ್ಕುಟ್ಟೋಗಿದೆ. ಆದರೆ ಇದು ವಿಮಾನಯಾನದಲ್ಲಿ ಸವಲತ್ತುಗಳು ಎಕ್ಕುಟ್ಟಿ ಹೋಗಿರೋ ವಿಷಯ. ಸಾಮಾನ್ಯವಾಗಿ ಬಸ್ಸುಗಳಲ್ಲಿ, ಪ್ಯಾಸೆಂಜರ್ ರೈಲುಗಳಲ್ಲಿ ಏನ್

ಅವ್ಯವಸ್ಥೆ ಇದ್ದರೂ ಜನ 'ಹೋಗ್ಲಿ ಬಿಡು' ಅಂತ ಅಡ್ಜಸ್ಟ್ ಮಾಡಿಕೊಳ್ತಾರೆ. ಆದರೆ ಅಷ್ಟೊಂದು ಹಣ ಕೊಟ್ಟು ವಿಮಾನದಲ್ಲಿ ಹೋಗಬೇಕಾದ್ರೂ ಅಡ್ಜಸ್ಟ್ ಮಾಡಿಕೊಳ್ಳಬೇಕು ಅಂದ್ರೆ ಹೆಂಗೆ? ಇದು ಇಂಡಿಗೋ ಏರ್‌ಲೈನ್ಸ್‌ನ ದುರವಸ್ಥೆ. ಅಲ್ಲಿ ಪ್ರಯಾಣಿಕರಿಗೆ ಸರಿಯಾದ ಊಟ ಕೊಟ್ಟಿಲ್ಲ,ಡ್ರಿಂಕ್ಸ್ ಎಕ್‌ಸ್ಟ್ರಾ ಕೊಟ್ಟಿಲ್ಲ ಅನ್ನೋದಾದ್ರೆ, ಹೆಂಗೋ ಸಹಿಸಿಕೊಳ್ಳಬಹುದೇನೋ. ಆದ್ರೆ ಇದು ಸಿಟ್ಟಿಂಗ್ ಪ್ರಾಬ್ಲಮ್. ದಂಪತಿಗಳಿಬ್ಬರು ವಿಮಾನದ ತಮ್ಮ ಸೀಟಲ್ಲಿ ಕೂತುಕೊಳ್ಳಲು ಹೋದರೆ ಅಲ್ಲಿ ಸೀಟಿನ ಕುಶನ್ ಇಲ್ಲದೆ 'ಶಿಟ್' ಅಂತ ಸಿಟ್ಟಾದರಂತೆ. ಸಿಟ್ಟಿಂಗ್ ಕುಶನ್‌ಗೆ ಕನ್ನ ಹಾಕಿದ ಈ ಸಮಸ್ಯೆ ಸರಕಾರದ ಪರಿಮಿತಿಯಲ್ಲಿ ಬರುವಂತಾಗಿದ್ರೆ, ಸಿಟ್ಟಿಂಗ್ ಎಂಎಲ್‌ಎಗೆ ಹೇಳಿ ನಮಗೆ ಸಿಟ್ಟಿಂಗ್ ಪ್ರಾಬ್ಲಂ ಆಗ್ತಿದೆ ಅನ್ನಬಹುದಿತ್ತು. ಆದ್ರೆ ವಿಮಾನ ಖಾಸಗಿಯವರದ್ದಾದ್ದರಿಂದ ಇದು ಪ್ರಯಾಣಿಕರ ಖಾಸಗಿ ಸಮಸ್ಯೆ. ಇದು ಇನ್ನೂ ಮುಂದುವರಿದು ದಂಪತಿ ಅಲ್ಲಿನ ಸಿಬ್ಬಂದಿಗೆ ದೂರು ಹೇಳಿದರೆ, 'ಎಲ್ಲೋ ಕೆಳಗೆ ಬಿದ್ದಿರಬೇಕು ನೋಡಿ' ಅನ್ನೋ ಉಡಾಫೆಯ ಉತ್ತರ ಬಂದಿದೆ. ಇದರಿಂದ ದಂಪತಿ ಕಂಗಾಲಾಗಿ, ಕೆಳಗೆ ಬಿದ್ದಿದೆ ಅಂದ್ರೆ, ಸೀಟಿನ ಕೆಳಗಾ ಅಥವಾ ವಿಮಾನದಿಂದ ಕೆಳಗಾ ಅಂತ ಕನ್‌ಫ್ಯೂಸ್ ಆಗಿ ಅದನ್ನೂ ನಾವೇ ಹುಡುಕಿಕೊಂಡು ಬಂದು ಕೂರಬೇಕಾ ಅಂತ ಗಾಬರಿ ಆದರಂತೆ.

ಸಂಪಾದಕರ ಸದ್ಯಶೋಧನೆ

ರಿಯೋಕನ್ ವಾಸ

ಜಪಾನಿಗೆ ಹೋದಾಗ ಅಲ್ಲಿನ ಹೋಟೆಲುಗಳಲ್ಲಿ ಉಳಿದುಕೊಳ್ಳುವ ಬದಲು ಸ್ಥಳೀಯ ಸೊಗಡನ್ನು ಅನುಭವಿಸಬೇಕೆಂದರೆ ರಿಯೋಕನ್‌ನಲ್ಲಿ ಉಳಿದುಕೊಳ್ಳಿ'' ಎಂದು ಹೇಳುವುದನ್ನು ಕೇಳಿದ್ದೇನೆ. ಇನ್ನು ಕೆಲವರು, ''ನೀವು ರಿಯೋಕನ್‌ನಲ್ಲಿ ಉಳಿದುಕೊಂಡಿಲ್ಲವಾ? ಹಾಗಾದರೆ ನೀವು ಅಷ್ಟರಮಟ್ಟಿಗೆ ಜಪಾನಿನ ಒಂದು ಒಳ್ಳೆಯ ಅನುಭವದಿಂದ ವಂಚಿತರಾದಿರಿ'' ಎಂದು ಹೇಳುವುದನ್ನು ಕೇಳಿದ್ದೇನೆ. ಅಂದ ಹಾಗೆ, ರಿಯೋಕನ್ (Ryokan) ಎನ್ನುವುದು ಒಂದು ಸಾಂಪ್ರದಾಯಿಕ ಜಪಾನಿನ ವಸತಿಗೃಹ. ಇದು ಜಪಾನಿನ ಸಂಸ್ಕೃತಿ ಮತ್ತು ಆತಿಥ್ಯದ ಒಂದು ವಿಶಿಷ್ಟ ಅನುಭವ ನೀಡುವುದರಲ್ಲಿ ಸಂದೇಹವಿಲ್ಲ. ರಿಯೋಕನ್‌ಗಳು ಸಾಮಾನ್ಯವಾಗಿ ಟಾಟಾಮಿ ನೆಲಹಾಸು, ಫ್ಯೂಟಾನ್ (futon) ಹಾಸಿಗೆಗಳು, ಸ್ಥಳೀಯ ಯುಕಾಟಾ ನಿಲುವಂಗಿಗಳು ಮತ್ತು ಸಾಂಪ್ರದಾಯಿಕ ಜಪಾನಿ ಊಟಗಳನ್ನು ಒಳಗೊಂಡಿರುತ್ತವೆ. ರಿಯೋಕನ್‌ಗಳಲ್ಲಿ ಉಳಿಯುವುದು ಜಪಾನಿನ ಸಂಸ್ಕೃತಿ ಮತ್ತು ಆತಿಥ್ಯವನ್ನು ಅನುಭವಿಸಲು ಒಂದು ಅದ್ಭುತ ಮಾರ್ಗವೇ ಸರಿ. ರಿಯೋಕನ್‌ಗಳು ಎಡೋ ಅವಧಿಯಲ್ಲಿ (1603-1868) ಯಾತ್ರಿಕರಿಗೆ ಮತ್ತು ಪ್ರಯಾಣಿಕರಿಗೆ ವಸತಿ ಒದಗಿಸಲು ಅಭಿವೃದ್ಧಿಗೊಂಡವು. ಆ ಸಮಯದಲ್ಲಿ ಪ್ರಯಾಣವು ಕಷ್ಟಕರವಾಗಿತ್ತು. ಯಾತ್ರಿಕರು ಮತ್ತು ಪ್ರಯಾಣಿಕರು ಸಾಮಾನ್ಯವಾಗಿ ದೀರ್ಘ ಪ್ರಯಾಣದ ನಂತರ ವಿಶ್ರಾಂತಿ ಪಡೆಯಲು ಸ್ಥಳವನ್ನು ಹುಡುಕುತ್ತಿದ್ದರು. ರಿಯೋಕನ್‌ಗಳು ಈ ಅಗತ್ಯವನ್ನು ಪೂರೈಸಿದವು ಮತ್ತು ಪ್ರಯಾಣಿಕರಿಗೆ ಆರಾಮದಾಯಕ ಮತ್ತು ನೆಮ್ಮದಿಯ ವಾಸ್ತವ್ಯ ವ್ಯವಸ್ಥೆಯನ್ನು ನೀಡಿದವು. ರಿಯೋಕನ್‌ಗಳು ಹಲವು ವಿಶಿಷ್ಟ ಲಕ್ಷಣಗಳನ್ನು ಹೊಂದಿವೆ, ಅವುಗಳಲ್ಲಿ ಕೆಲವು ಹೀಗಿವೆ- ● ರಿಯೋಕನ್‌ಗಳಲ್ಲಿನ ಕೋಣೆಗಳು ಸಾಮಾನ್ಯವಾಗಿ ಟಾಟಾಮಿ ನೆಲಹಾಸುಗಳನ್ನು ಹೊಂದಿರುತ್ತವೆ. ಟಾಟಾಮಿ ನೆಲಹಾಸುಗಳು ಅಕ್ಕಿ ಹುಲ್ಲಿನಿಂದ ಮಾಡಲ್ಪಟ್ಟಿದ್ದು ಅವು ಕೋಣೆಗಳಿಗೆ ಬೆಚ್ಚಗಿನ ಮತ್ತು ಆಹ್ಲಾದಕರ ವಾತಾವರಣವನ್ನು ನೀಡುತ್ತವೆ. ● ಫ್ಯೂಟಾನ್ರಿ ಹಾಸಿಗೆ: ಯೋಕನ್‌ಗಳಲ್ಲಿನ ಹಾಸಿಗೆಗಳನ್ನು ಫ್ಯೂಟಾನ್‌ಗಳು ಎಂದು ಕರೆಯುತ್ತಾರೆ. ಫ್ಯೂಟಾನ್‌ಗಳು ನೆಲದ ಮೇಲೆ ಹರಡಿರುವ ಸಾಂಪ್ರದಾಯಿಕ ಜಪಾನಿನ ಹಾಸಿಗೆಗಳಾಗಿವೆ. ● ಯುಕಾಟಾ ನಿಲುವಂಗಿಗಳು: ರಿಯೋಕನ್‌ಗಳಲ್ಲಿನ ಅತಿಥಿಗಳಿಗೆ ಯುಕಾಟಾ ನಿಲುವಂಗಿಗಳನ್ನು ಒದಗಿಸಲಾಗುತ್ತದೆ. ಯುಕಾಟಾವು ಹತ್ತಿಯಿಂದ ಮಾಡಲ್ಪಟ್ಟ ಹಗುರವಾದ ನಿಲುವಂಗಿಯಾಗಿದೆ. ● ಕೈಸೆಕಿ ಊಟ (Kaiseki Meals): ರಿಯೋಕನ್‌ಗಳು ಸಾಮಾನ್ಯವಾಗಿ ಅತಿಥಿಗಳಿಗೆ ಕೈಸೆಕಿ ಊಟಗಳನ್ನು ಒದಗಿಸುತ್ತವೆ. ಕೈಸೆಕಿ ಊಟಗಳು ಜಪಾನಿನ ಬಹು ಆಹಾರ ಸಾಂಪ್ರದಾಯಿಕ ಊಟವಾಗಿದೆ. ● ಒನ್ಸೆನ್ ಸ್ನಾನ: ಅನೇಕ ರಿಯೋಕನ್‌ಗಳು ಒನ್ಸೆನ್ ಸ್ನಾನಗಳನ್ನು ಸಹ ಹೊಂದಿವೆ. ಒನ್ಸೆನ್ ನೈಸರ್ಗಿಕ ಬಿಸಿನೀರಿನ ಬುಗ್ಗೆಗಳಿಂದ ತುಂಬಿದ ಸ್ನಾನಗೃಹಗಳಾಗಿವೆ. ಹಾಗಾದರೆ ರಿಯೋಕನ್‌ನಲ್ಲಿ ಉಳಿಯುವುದರ ಪ್ರಯೋಜನಗಳೇನು? ● ಮುಖ್ಯವಾಗಿ, ಜಪಾನಿನ ಸಂಸ್ಕೃತಿಯನ್ನು ಅನುಭವಿಸುವ ಅವಕಾಶ ಲಭಿಸುವುದು. ರಿಯೋಕನ್‌ಗಳು ಸ್ಥಳೀಯ ಸಂಸ್ಕೃತಿ ಮತ್ತು ಆತಿಥ್ಯವನ್ನು ಅನುಭವಿಸಲು ಒಂದು ಅನನ್ಯ ಅವಕಾಶವನ್ನು ನೀಡುತ್ತವೆ. ● ವಿಶ್ರಾಂತಿ ಮತ್ತು ಶಾಂತಿಯ ಸ್ಥಳ: ರಿಯೋಕನ್‌ಗಳು ಸಾಮಾನ್ಯವಾಗಿ ಶಾಂತಿಯುತ ಮತ್ತು ವಿಶ್ರಾಂತಿ ಸ್ಥಳಗಳಾಗಿವೆ. ● ರುಚಿಕರವಾದ ಜಪಾನಿನ ಊಟಗಳು: ರಿಯೋಕನ್‌ಗಳು ರುಚಿಕರವಾದ ಸಾಂಪ್ರದಾಯಿಕ ಜಪಾನಿನ ಊಟಗಳನ್ನು ಒದಗಿಸುತ್ತವೆ. ರಿಯೋಕನ್‌ನಲ್ಲಿ ಉಳಿಯುವಾಗ ಪರಿಗಣಿಸಬೇಕಾದ ಅಂಶಗಳೇನು? ರಿಯೋಕನ್‌ನಲ್ಲಿ ಉಳಿಯುವಾಗ ಕೆಲವು ಅಂಶಗಳನ್ನು ಪರಿಗಣಿಸುವುದು ಮುಖ್ಯವಾಗಿದೆ. ● ಬೆಲೆ: ರಿಯೋಕನ್‌ಗಳು ಹೋಟೆಲ್‌ಗಳಿಗಿಂತ ಹೆಚ್ಚು ದುಬಾರಿಯಾಗಬಹುದು. ● ಸೌಲಭ್ಯಗಳು: ಎಲ್ಲ ರಿಯೋಕನ್‌ಗಳು ಒಂದೇ ರೀತಿಯ ಸೌಲಭ್ಯಗಳನ್ನು ನೀಡುವುದಿಲ್ಲ. ● ಸ್ಥಳ: ರಿಯೋಕನ್‌ಗಳು ಸಾಮಾನ್ಯವಾಗಿ ಗ್ರಾಮೀಣ ಪ್ರದೇಶಗಳಲ್ಲಿರುತ್ತವೆ. ●ಸಂಸ್ಕೃತಿ: ರಿಯೋಕನ್‌ಗಳು ಪಾಶ್ಚಿಮಾತ್ಯ ಸಂಸ್ಕೃತಿಗಿಂತ ಭಿನ್ನವಾಗಿವೆ. ರಿಯೋಕನ್‌ನಲ್ಲಿ ಉಳಿಯುವಾಗ ಕೆಲವು ಶಿಷ್ಟಾಚಾರಗಳನ್ನೂ ಅನುಸರಿಸಬೇಕು. ರಿಯೋಕನ್ ಪ್ರವೇಶಿಸುವಾಗ ಬೂಟುಗಳನ್ನು ತೆಗೆಯುವುದು, ಯುಕಾಟಾ ಧರಿಸುವುದು ಶಿಷ್ಟಾಚಾರ, ಊಟದ ಸಮಯದಲ್ಲಿ ಮೌನವಾಗಿರುವುದು ಕಡ್ಡಾಯ.

ಎಂದೆಂದಿಗೂ 'ಮೌಗ್ಲಿ' ಆಗದ ಅವೇರಾನಿನ ವಿಕ್ಟರ್

ಮನುಷ್ಯರ ಮಕ್ಕಳು, ತಮ್ಮ ಹೆತ್ತವರಿಂದ ಹೇಗೋ ತಪ್ಪಿಸಿಕೊಂಡು ಕಾಡಿನಲ್ಲಿ ಪ್ರಾಣಿಗಳ ಸಂಪರ್ಕಕ್ಕೆ ಬರುತ್ತವೆ. ಪ್ರಾಣಿಗಳು ಮಕ್ಕಳನ್ನು ಕೊಲ್ಲದೆ ಕಾಪಾಡುತ್ತವೆ. ಆ ಮಗುವು ಪ್ರಾಣಿಗಳ ಜತೆಯಲ್ಲಿದ್ದು ಪ್ರಾಣಿಗಳ ಜೀವನವನ್ನೇ ರೂಢಿಸಿಕೊಳ್ಳುತ್ತವೆ. ಅಕಸ್ಮಾತ್ ಮನುಷ್ಯರ ಕೈಗೆ ಸಿಕ್ಕಿಬೀಳುತ್ತವೆ. ನಾನಾ ರೀತಿಯ ಕಷ್ಟಗಳಿಗೆ ಸಿಲುಕುತ್ತವೆ. ಇದು ಕೇವಲ ಕಥೆಯಲ್ಲ, ವಾಸ್ತವ.

ಹಿಂದಿರುಗಿ ನೋಡಿದಾಗ
ಡಾ. ನಾ.ಸೋಮೇಶ್ವರ
vveditoped@gmail.com

ಮೌಗ್ಲಿ ಹೆಸರನ್ನು ನಾವೆಲ್ಲರೂ ಕೇಳಿದ್ದೇವೆ. ಕಥೆಯಾಗಿ, ಚಲನಚಿತ್ರವಾಗಿ, ಟೆಲಿವಿಷನ್ ಧಾರಾವಾಹಿಯಾಗಿ ಕಾಮಿಕ್ ಪುಸ್ತಕವಾಗಿ ಆಬಾಲವೃದ್ಧರಾದಿಯಾಗಿ ಎಲ್ಲರನ್ನೂ ಅದು ಆಕರ್ಷಿಸಿದೆ. ಇದನ್ನು ಬರೆದವನು ಜೋಸೆಫ್ ರಡ್ಯರ್ಡ್ ಕಿಪ್ಲಿಂಗ್ (1865-1936) ಎಂಬ ಇಂಗ್ಲಿಷ್ ಪತ್ರಕರ್ತ, ಕವಿ, ಕಥೆಗಾರ ಹಾಗೂ ಕಾದಂಬರಿಕಾರ. ಇವನು ಬ್ರಿಟಿಷ್ ಇಂಡಿಯಾದಲ್ಲಿ ಹುಟ್ಟಿದ. 1907ರಲ್ಲಿ ಸಾಹಿತ್ಯ ನೊಬೆಲ್ ಪಾರಿತೋಷಕವನ್ನು ಪಡೆದ ಕಿಪ್ಲಿಂಗ್, ಇವತ್ತು ಭಾರತದಲ್ಲಿ ಮನೆ ಮಾತಾಗಿರುವುದಕ್ಕೆ ಕಾರಣ, ಆತನು ಬರೆದ 'ಜಂಗಲ್ ಬುಕ್' ಎನ್ನುವ ಪುಸ್ತಕ ಹಾಗೂ ಅದರಲ್ಲಿ ಚಿತ್ರಿಸಿದ 'ಮೌಗ್ಲಿ' ಎಂಬ ಪಾತ್ರ. ಮೌಗ್ಲಿ ಓರ್ವ ಹುಡುಗನು ಹೆಸರು. ಇವನದ್ದು ಕಾಲ್ಪನಿಕ ಪಾತ್ರ. ಮಧ್ಯಪ್ರದೇಶದ 'ಸಿಯೋನಿ' ಪ್ರಾಂತ. ಅಲ್ಲಿ 'ಪೆಂಚ್' ಎಂಬ ಕಾಡು. ಅಲ್ಲಿ ಶೇರ್‌ಖಾನ್ ಎಂಬ ಹುಲಿ. ಆ ಹುಲಿಯ ಆಕ್ರಮಣದಿಂದ ತಪ್ಪಿಸಿಕೊಳ್ಳಲು, ಮೌಗ್ಲಿಯ ಹೆತ್ತವರು ಶಿಶುವನ್ನು ಎತ್ತಿಕೊಂಡು ಕಾಡಿನಲ್ಲಿ ಓಡಿಹೋಗುವಾಗ, ಶಿಶುವನ್ನು ಕಳೆದುಕೊಳ್ಳುತ್ತಾರೆ. ಆ ಶಿಶುವು ಕೊನೆಗೆ ಒಂದು ತೋಳದ ಗುಹೆಯನ್ನು ಸೇರುತ್ತದೆ. ಅಮ್ಮ ತೋಳವು ಈ ಮನುಷ್ಯನ ಕೂಸನ್ನು ಸಾಕುತ್ತದೆ. ಹಾಗಾಗಿ ಆ ಕೂಸು ಪ್ರಾಣಿಗಳ ಭಾಷೆ ಮತ್ತು ವರ್ತನೆಯನ್ನು ಮೈಗೂಡಿಸಿಕೊಳ್ಳುತ್ತದೆ. ನಂತರ ಮನುಷ್ಯರ ಸಂಪರ್ಕಕ್ಕೆ ಬರುತ್ತದೆ. ಮನುಷ್ಯರ ಭಾಷೆ ಹಾಗೂ ಸಾಮಾಜಿಕ ವ್ಯವಹಾರಗಳನ್ನು ಕಲಿತು, ಶಾಂತಿ ಎನ್ನುವ ಹುಡುಗಿಯ ಸ್ನೇಹವನ್ನು ಗಳಿಸುತ್ತದೆ. ಹೀಗೆ ನಡೆಯುವ ಈ ಕಥೆಯು ಎಲ್ಲರಿಗೂ ತಿಳಿದಿರುವಂಥದ್ದೆ!

ಮನುಷ್ಯರ ಮಕ್ಕಳು, ತಮ್ಮ ಹೆತ್ತವರಿಂದ ಹೇಗೋ ತಪ್ಪಿಸಿಕೊಂಡು ಕಾಡಿನಲ್ಲಿ ಪ್ರಾಣಿಗಳ ಸಂಪರ್ಕಕ್ಕೆ ಬರುತ್ತವೆ. ಪ್ರಾಣಿಗಳು ಮಕ್ಕಳನ್ನು ಕೊಲ್ಲದೆ ಕಾಪಾಡುತ್ತವೆ. ಆ ಮಗುವು ಪ್ರಾಣಿಗಳ ಜತೆಯಲ್ಲಿದ್ದು ಪ್ರಾಣಿಗಳ ಜೀವನವನ್ನೇ ರೂಢಿಸಿಕೊಳ್ಳುತ್ತವೆ. ಅಕಸ್ಮಾತ್ ಮನುಷ್ಯರ ಕೈಗೆ ಸಿಕ್ಕಿಬೀಳುತ್ತವೆ. ನಾನಾ ರೀತಿಯ ಕಷ್ಟಗಳಿಗೆ ಸಿಲುಕುತ್ತವೆ. ಇದು ಕೇವಲ ಕಥೆಯಲ್ಲ, ವಾಸ್ತವ. ಇಂಥ ಹತ್ತು ಹಲವು ಕಥೆಗಳು ನಮ್ಮ ಇತಿಹಾಸದಲ್ಲಿ ಪದೇ ಪದೇ ಕಾಣಿಸಿಕೊಳ್ಳುತ್ತವೆ. ಮನುಷ್ಯನ ಮಗುವನ್ನು ತೋಳಗಳು, ಮಂಗಗಳು, ಬಬೂನುಗಳು, ಕರಡಿಗಳು, ಕುರಿಗಳು, ದನಗಳು ಸಾಕಿದ ಪ್ರಕರಣಗಳು ಸಾಕಷ್ಟು ವರದಿಯಾಗಿವೆ. ಹೀಗೆ ಪ್ರಾಣಿಗಳು ಸಾಕಿದ ಮನುಷ್ಯರ ಮಕ್ಕಳನ್ನು 'ಕಾಡಿನ ಕಂದಮ್ಮಗಳು' ಅಥವಾ 'ಫೆರಲ್ ಚಿಲ್ರನ್' ಎಂದು ಕರೆಯುವ ಪದ್ಧತಿಯಿದೆ. 12-13ನೆಯ ಶತಮಾನದಿಂದ ಆರಂಭಿಸಿ ಇಂದಿನವರೆಗೆ ಇಂಥ ಪ್ರಕರಣಗಳು ಪದೇ ಪದೆ ವರದಿಯಾಗಿವೆ. ಇವುಗಳಲ್ಲಿ ಅತ್ಯಂತ ಕುತೂಹಲಕರವಾದದ್ದು, ಪೂರ್ಣ ವೈಜ್ಞಾನಿಕ ಅಧ್ಯಯನಕ್ಕೆ ಒಳಪಟ್ಟದ್ದು, ವಿಜ್ಞಾನಿಗಳಿಗೂ, ಭಾಷಾ ತಜ್ಞರಿಗೂ, ಶಿಕ್ಷಣ ತಜ್ಞರಿಗೂ ಹಾಗೂ ದಾರ್ಶನಿಕರಿಗೂ ಏಕರೂಪದ ಸವಾಲನ್ನು ಒಡ್ಡಿದ ಪ್ರಕರಣವೆಂದರೆ 'ಅವೇರಾನಿನ ವಿಕ್ಟರ್' ಅಥವಾ 'ವಿಕ್ಟರ್ ಆಫ್ ಅವೇರಾನ್' (1788-1828) ಎಂಬ ನೈಜ ಪ್ರಕರಣ.

17ನೆಯ ಶತಮಾನದಲ್ಲಿ, ಯುರೋಪಿನ ಬುದ್ಧಿಜೀವಿಗಳನ್ನು ಹಲವು ಪ್ರಮುಖ ಪ್ರಶ್ನೆಗಳು ಕಾಡುತ್ತಿದ್ದವು. ''ಒಂದು ಮಗುವಿನ ಬುದ್ಧಿವಂತಿಕೆಯನ್ನು ಅದರ ಹುಟ್ಟು ನಿರ್ಧರಿಸುತ್ತದೆಯೋ ಅಥವಾ ಆ ಮಗುವು ಬೆಳೆಯುವ ಪರಿಸರವು ನಿರ್ಧರಿಸುತ್ತದೆಯೋ'' ಎನ್ನುವುದು ಮೊದಲನೆಯದು. ಕೆಲವರು ಹುಟ್ಟೇ- ಅಂದರೆ ಹೆತ್ತವರಿಂದ ಮಕ್ಕಳಿಗೆ ಬರುವ ವಂಶವಾಹಿಗಳು ಅಥವಾ ಜೀನ್ಸ್- ಅವರ ಬುದ್ಧಿವಂತಿಕೆಯನ್ನು ನಿರ್ಧರಿಸುತ್ತದೆ ಎಂದರು. ಹಲವರು ಮಗು ಹುಟ್ಟಿದ ಮೇಲೆ, ಆ ಮಗುವು ಬೆಳೆಯುವ ಪರಿಸರವು ಆ ಮಗುವಿನ ಬುದ್ಧಿವಂತಿಕೆಯನ್ನು ರೂಪಿಸುತ್ತದೆ ಎಂದು ವಾದಿಸುತ್ತಿದ್ದರು. ಈ ವಾಗ್ವಾದವು ಪ್ಲೇಟೋ ಮತ್ತು ಅರಿಸ್ಟಾಟಲ್ ಕಾಲದಿಂದಲೂ 17-18ನೆಯ ಶತಮಾನದವರೆಗೆ ಸಾಗಿಬಂದಿತ್ತು. ಈ ಎರಡೂ ಪಂಥಗಳಲ್ಲಿ ಯಾರೊಬ್ಬರೂ ತಮ್ಮ ವಾದಕ್ಕೆ ಅಗತ್ಯವಾದ ಹಾಗೂ ನಂಬಲರ್ಹವಾದ ಪುರಾವೆಯನ್ನು ಒದಗಿಸುವಲ್ಲಿ ವಿಫಲರಾಗಿದ್ದರು.

ವಿಕ್ಟರ್, ಓರ್ವ ಕಾಡಿನ ಕಂದಮ್ಮನಾಗಿದ್ದ. 9 ವರ್ಷ ವಯಸ್ಸಾಗುವವರೆಗೂ ಕಾಡಿನಲ್ಲಿದ್ದ. ಇವನನ್ನು ತೋಳಗಳು ಬೆಳೆಸಿದವು ಎಂದು ಪ್ರತೀತಿ. ಈತನ ತಂದೆ-ತಾಯಿಯರು ಯಾರು, ಇವನು ನಾಡನ್ನು ಬಿಟ್ಟು ಕಾಡಿಗೆ ಹೇಗೆ ಸೇರಿಕೊಂಡ ಎಂಬ ವಿಷಯವು ಯಾರಿಗೂ ತಿಳಿದಿರಲಿಲ್ಲ. 1797. ದಕ್ಷಿಣ ಫ್ರಾನ್ಸಿನ ಅವೇರಾನ್ ಪ್ರಾಂತ. ಮೂವರು ಬೇಟೆಗಾರರು ಕಾಡಿಗೆ ಹೋಗಿದ್ದರು. ಆಗ ಅವರಿಗೆ ವಿಕ್ಟರ್ ಕಂಡ. ಬೇಟೆಗಾರರನ್ನು ನೋಡುತ್ತಿರುವಂತೆಯೇ ವಿಕ್ಟರ್ ಮರಹತ್ತಿ ಕುಳಿತ. ಬೇಟೆಗಾರರು ಅವನನ್ನು ಉಪಾಯವಾಗಿ ಹಿಡಿದುಕೊಂಡು ನಗರಕ್ಕೆ ಕರೆತಂದರು. ಆದರೆ ಅವನು ಬೇಟೆಗಾರರಿಂದ ತಪ್ಪಿಸಿಕೊಂಡು ಕಾಡಿಗೆ ಹಿಂದಿರುಗಿದ. ಹೀಗೆ 9 ಸಲ ಅವನನ್ನು ಹಿಡಿಯುವುದು ಹಾಗೂ ಅವನು ತಪ್ಪಿಸಿಕೊಂಡು ಕಾಡಿಗೆ ಓಡಿಹೋಗುವುದು ನಡೆಯಿತು. ಕೊನೆಗೆ ಜನವರಿ 8, 1800ರಂದು ಅವನನ್ನು ಅಂತಿಮವಾಗಿ ಹಿಡಿದರು. ಅನಾಥಾಲಯಗಳಲ್ಲಿ ಅವನನ್ನು ಇರಿಸುವ ಹಲವು ವಿಫಲ ಪ್ರಯತ್ನಗಳನ್ನು ಮಾಡಿದರು. ಕೊನೆಗೆ ಅವನನ್ನು ಫ್ರಾನ್ಸಿನ ಅತ್ಯಂತ ದೊಡ್ಡ ಹಾಗೂ ಪ್ರಮುಖ, ಬಿಸೆತ್ರ ಆಸ್ಪತ್ರೆಗೆ ಕರೆದುಕೊಂಡು ಬಂದರು. ಅಲ್ಲಿದ್ದ ಫಿಲಿಪ್ ಪೈನೆಲ್ (1745-1826) ಎಂಬ ಮನೋವೈದ್ಯನು ವಿಕ್ಟರನನ್ನು ಪರೀಕ್ಷಿಸಿದನು.

ವಿಕ್ಟರ್ ನಗ್ನನಾಗಿ ಓಡಾಡುತ್ತಿದ್ದ. ಅವನಿಗೆ ಮಾತು ಬರುತ್ತಿರಲಿಲ್ಲ. ಚಳಿ, ಮಳೆ, ಗಾಳಿಗಳ ಪರಿವೆಯಿರಲಿಲ್ಲ. ಹೇಳಿದ್ದು ಏನೂ ತಿಳಿಯುತ್ತಿರಲಿಲ್ಲ. ಹಸಿ ಮಾಂಸವನ್ನು ಹಾಗೂ ಹಸಿ ತರಕಾರಿಯನ್ನು ತಿನ್ನುತ್ತಿದ್ದ. ಎರಡು ಕಾಲುಗಳ ಮೇಲೆ ಅಡ್ಡಾದಿಡ್ಡಿಯಾಗಿ ನಡೆಯುತ್ತಿದ್ದ. ಸಾಮಾಜಿಕ ನಯ-ನಾಜೂಕುಗಳು ಲವಲೇಶವೂ ಇರಲಿಲ್ಲ. ಪ್ರಾಣಿಗಳ ಹಾಗೆ ಮೈಕೈ ಕೆರೆದುಕೊಳ್ಳುತ್ತಿದ್ದ. ಹತ್ತಿರಬಂದರೆ ಕಚ್ಚಲು ಮುಂದಾಗುತ್ತಿದ್ದ. ಅವನ ವರ್ತನೆಗಳೆಲ್ಲ ಪ್ರಾಣಿಗಳ ಹಾಗೇ ಇದ್ದವು. ಹಾಗಾಗಿ ಪೈನೆಲ್ ಅವನನ್ನು 'ಮಾನಸಿಕವಾಗಿ ಅಸ್ವಸ್ಥ'ನೆಂದು ತೀರ್ಮಾನಿಸಿ, ಅವನನ್ನು 'ಹುಟ್ಟಾ ಹೆಡ್ಡ' ಅಥವಾ 'ಈಡಿಯಟ್' ಎಂದು ಕರೆದ.

ಫ್ರಾನ್ಸಿನ ಮಹಾಕ್ರಾಂತಿಯು ಮುಗಿದಿತ್ತು. ಬುದ್ಧಿಜೀವಿಗಳು ತಮ್ಮ ಕ್ರಾಂತಿಕಾರಕ ವಿಚಾರಗಳನ್ನು ಎಲ್ಲೆಡೆ ಹರಡಲಾರಂಭಿಸಿದರು. ಜನರು ಹೊಸ ಹೊಸ ರೀತಿಯಲ್ಲಿ ಯೋಚಿಸಲು ಆರಂಭಿಸಿದರು. ಹಾಗಾಗಿ ಈ ಕಾಲಘಟ್ಟವನ್ನು 'ಜ್ಞಾನೋದಯದ ಯುಗ' ಅಥವಾ 'ಏಜ್ ಆಫ್ ಎನ್‌ಲೈಟನ್‌ಮೆಂಟ್' ಎಂದು ಕರೆಯುತ್ತಿದ್ದರು. ಇವರು ''ಭಾಷೆ ಹಾಗೂ ಶಿಕ್ಷಣದ ಮೂಲಕ, ಎಂಥ ಹೆಡ್ಡನನ್ನಾದರೂ ನಾಗರಿಕನನ್ನಾಗಿ ಮಾಡಲು ಸಾಧ್ಯ'' ಎಂದು ನಂಬಿದ್ದರು. ಇದು ಯುರೋಪಿನ ಬುದ್ಧಿಜೀವಿಗಳನ್ನು ಕಾಡುತ್ತಿದ್ದ ಎರಡನೆಯ ಪ್ರಮುಖ ವಿಷಯವಾಗಿತ್ತು.

ಕಾರ್ಲ್ ಲಿನೇಯಸ್ (1707-1778) ಜಗತ್ತಿನ ಪ್ರತಿಯೊಂದು ಜೀವರಾಶಿಯನ್ನು ನಿಖರವಾಗಿ ಗುರುತಿಸಲು 'ವೈಜ್ಞಾನಿಕ ದ್ವಿನಾಮಕರಣ' ಅಥವಾ 'ಬೈನಾಮಿಯಲ್ ನಾಮನ್‌ಕ್ಲೇಚರ್' ಪದ್ಧತಿಯನ್ನು ಜಾರಿಗೆ ತಂದಿದ್ದು, 'ಸಿಸ್ಟೆಮ ನ್ಯಾಚುರೆ' ಎಂಬ ಗ್ರಂಥವನ್ನು ಬರೆದಿದ್ದು. ಈ ನಿಯಮದ ಅನ್ವಯ 'ಹೋಮೋ ಸೇಪಿಯನ್ಸ್' ಎನ್ನುವುದು ಮನುಷ್ಯನ ದ್ವಿನಾಮಕರಣದ ಹೆಸರಾಗಿತ್ತು. ಕಾಡಿನ ಕಂದಮ್ಮಗಳಿಗೆ ಅವನು 'ಹೋಮೋ ಫೆರಸ್' ಎಂಬ ಹೆಸರನ್ನು ನೀಡಿದ್ದ. 'ಕಾಡಿನ ಮಕ್ಕಳು ಊರ ಮಕ್ಕಳಿಗಿಂತ ಭಿನ್ನ' ಎನ್ನುವುದು ಅವನ ಅಭಿಪ್ರಾಯವಾಗಿತ್ತು. ಈ ಹಿನ್ನೆಲೆಯಲ್ಲಿ 'ಸೆಪಿಯನ್ ಮಗುವಿಗೂ ಫೆರಸ್ ಮಗುವಿಗೂ ಏನು ವ್ಯತ್ಯಾಸ' ಎನ್ನುವ ಪ್ರಶ್ನೆಯು ಹುಟ್ಟಿತು. ಇದಕ್ಕೆ 'ಉದಾತ್ತ ಅನಾಗರಿಕ' ಅಥವಾ 'ನೋಬಲ್ ಸೇವೇಜ್' ಉತ್ತರ ಎಂದು ಭಾವಿಸಿದ್ದರು. ಅಂದರೆ 'ಒಂದು ಮಗುವನ್ನು ಸಂಪೂರ್ಣವಾಗಿ ನಿಸರ್ಗದ ನಡುವೆ ಬೆಳೆಸಿದರೆ, ಆ ಮಗುವು ಮನುಷ್ಯ ಹಾಗೂ ಮನುಷ್ಯನ ನಾಗರಿಕತೆಯ ಸೋಂಕಿಲ್ಲದೆ ಮುಗ್ಧವಾಗಿ, ಸೌಮ್ಯವಾಗಿ, ಏಕಾಂತ ಪ್ರಿಯನಾಗಿ, ದುಷ್ಟತನದ ಬಗ್ಗೆ ಸಂಪೂರ್ಣ ಅನಭಿಜ್ಞನಾಗಿ ಹಾಗೂ ಪ್ರಜ್ಞಾಪೂರ್ವಕನಾಗಿ ಮತ್ತೊಬ್ಬರಿಗೆ ಹಾನಿಯನ್ನುಂಟು ಮಾಡದ ಉದಾತ್ತ ವ್ಯಕ್ತಿಯಾಗಿ ಬೆಳೆಯುತ್ತಾನೆ' ಎನ್ನುವುದಾಗಿತ್ತು.

ಈ ಎಲ್ಲ ಪ್ರಶ್ನೆಗಳ ಹಿನ್ನೆಲೆಯಲ್ಲಿ ಅವೇರಾನಿನ ವಿಕ್ಟರ್ ಅವರಿಗೆ ಅತ್ಯುತ್ತಮ ಪ್ರಯೋಗ ಪರೀಕ್ಷಾ ಮಾದರಿಯಾದ. ವಿಕ್ಟರನಿಗೆ ಮಾತು ಬರದಿದ್ದರೂ ಕಿವಿಯು ಚೆನ್ನಾಗಿ ಕೇಳುತ್ತಿತ್ತು. ಹಾಗಾಗಿ ಅವನನ್ನು ಫ್ರಾನ್ಸಿನ 'ರಾಷ್ಟ್ರೀಯ ಕಿವುಡರ

ಸಂಸ್ಥೆ'ಗೆ ಕರೆದುಕೊಂಡು ಹೋದರು. ಆ ಸಂಸ್ಥೆಯಲ್ಲಿ ರೋಶ್ ಆಂಬ್ರೋಸ್ ಕ್ಯುಕುರಾನ್ ಸಿಕರ್ಡ್ (1742-1822) ಎಂಬ ಕಿವುಡರ ಅಧ್ಯಾಪಕನಿದ್ದ. ಕಿವುಡರಿಗೆ ಮಾತನ್ನು ಕಲಿಸುವುದರಲ್ಲಿ ಇವನು ನಿಸ್ಸೀಮನಾಗಿದ್ದ. ಅವನು 'ವಿಕ್ಟರನಿಗೆ ಭಾಷೆಯನ್ನು ಕಲಿಸಿದರೆ, ಎಲ್ಲರ ಹಾಗೆ ಮನುಷ್ಯನಾಗುತ್ತಾನೆ' ಎಂದು ನಂಬಿದ್ದ. ತಾನು ಕಲಿತ ಎಲ್ಲ ವಿದ್ಯೆಯನ್ನು ವಿಕ್ಟರನ ಮೇಲೆ ಒಂದು ವರ್ಷಕಾಲ ಪ್ರಯೋಗಿಸಿದ. ವಿಕ್ಟರ್ ಭಾಷೆಯನ್ನು ಬಿಡಿ, ಕೆಲವು ಶಬ್ದಗಳನ್ನೂ ಕಲಿಯಲಿಲ್ಲ. ಸೋತು ಹತಾಶನಾದ ಸಿಕರ್ಡ್, ವಿಕ್ಟರನಿಗೆ 'ಮಾತನ್ನು ಕಲಿಸಲು ಸಾಧ್ಯವಿಲ್ಲ' ಎಂಬ ನಿರ್ಧಾರಕ್ಕೆ ಬಂದ.

ಜೀನ್ ಮಾರ್ಕ್ ಗ್ಯಾಸ್ಪರ್ಡ್ ಇಟಾರ್ಡ್ (1774-1838) ಓರ್ವ ವೈದ್ಯಕೀಯ ವಿದ್ಯಾರ್ಥಿಯಾಗಿದ್ದ. ಇವನು ವಿಕ್ಟರನನ್ನು ದತ್ತು ತೆಗೆದುಕೊಂಡ. ಆ ಕಾಡು ಕಂದಮ್ಮನಿಗೆ 'ವಿಕ್ಟರ್' ಎಂದು ನಾಮಕರಣವನ್ನು ಮಾಡಿದ. ತನ್ನ ಮನೆಗೆ ಕರೆದುಕೊಂಡು ಬಂದ. ಮನುಷ್ಯ ಮತ್ತು ಪ್ರಾಣಿಗಳ ನಡುವೆ ಎರಡು ವ್ಯತ್ಯಾಸಗಳಿವೆ ಎಂದ. ಮೊದಲನೆಯದು 'ಸಹಾನುಭೂತಿ' ಅಥವಾ 'ಎಂಪತಿ' ಹಾಗೂ ಎರಡನೆಯದು ಭಾಷೆ. ವಿಕ್ಟರನಿಗೆ ಭಾಷೆಯನ್ನು ಕಲಿಸಬೇಕು, ಅವನು ತನ್ನ ಮನಸ್ಸಿನಲ್ಲಿರುವ ಎಲ್ಲ ಭಾವನೆಗಳನ್ನು ಹಂಚಿಕೊಳ್ಳುವ ರೀತಿಯಲ್ಲಿ ಅವನನ್ನು ಬೆಳೆಸಬೇಕು ಎಂದು ಅವನಿಗೆ ಭಾಷೆಯನ್ನು ಕಲಿಸಲು ಆರಂಭಿಸಿದ. ಆರಂಭದಲ್ಲಿ ವಿಕ್ಟರ್ ಭಾಷೆಯನ್ನು ಕಲಿಯುವ ದಿಶೆಯಲ್ಲಿ ಆಸಕ್ತಿಯನ್ನು ತೋರಿದ. ಒಂದೆರಡು ಶಬ್ದಗಳನ್ನು ಕಲಿತ. ಅಷ್ಟೇ. ಅವನು ಹೊಸ ಶಬ್ದಗಳನ್ನು ಕಲಿಯಲು ಆಸಕ್ತಿಯನ್ನು ತೋರಲೇ ಇಲ್ಲ. ವಿಕ್ಟರನ ಕಿವಿಗಳು ಕಾಡಿನಲ್ಲಿ ಸಂಭವಿಸಬಹುದಾದ ಅಪಾಯಕಾರಿ ಶಬ್ದಗಳನ್ನು ಆಲಿಸಿ ಆತ್ಮರಕ್ಷಣೆಯನ್ನು ಮಾಡಿಕೊಳ್ಳುವುದಕ್ಕೆ ಮಾತ್ರ ಸೀಮಿತವಾಗಿದ್ದವು. ಆತನ ಕಿವಿ (ಮಿದುಳು) ಇತರ ಯಾವುದೇ ರೀತಿಯ ಶಬ್ದಗಳನ್ನು ಸ್ವೀಕರಿಸಲಾಗದ ಸ್ಥಿತಿಯಲ್ಲಿತ್ತು. ವಿಕ್ಟರ್ ಮಾತನ್ನು ಕಲಿಯದಿದ್ದರೂ, ಅವನಿಗೆ ಮಾತನ್ನು ಕಲಿಸಲು ಇಟಾರ್ಡ್ ರೂಪಿಸಿದ್ದ ಪಾಠಗಳೆಲ್ಲ, ಭವಿಷ್ಯದಲ್ಲಿ ಕಿವುಡು ಮಕ್ಕಳಿಗೆ ಮಾತನ್ನು ಕಲಿಸಲು ಉಪಯುಕ್ತವಾದವು. ಇಟಾರ್ಡನ ಶಿಷ್ಯ ಎಡ್ವರ್ಡ್ ಸೆಗಿನ್ ಎನ್ನುವವನ ಪ್ರಭಾವಕ್ಕೆ ಒಳಗಾದ ಮೇರಿಯ ಮಾಂಟೆಸರಿ ಎನ್ನುವ ಮಹಿಳೆಯು 'ಮಾಂಟೆಸರಿ ಶಿಕ್ಷಣ' ಎನ್ನುವ ಹೊಸ ಶಿಕ್ಷಣ ಪದ್ಧತಿಯನ್ನು ಆರಂಭಿಸಿದಳು. ಅದು ಇಂದಿಗೂ ಅಸ್ತಿತ್ವದಲ್ಲಿದೆ.

ವಿಕ್ಟರ್ ಮಾತನ್ನು ಕಲಿಯದಿದ್ದರೂ ಭಾವನೆಗಳನ್ನು ಅರ್ಥಮಾಡಿಕೊಳ್ಳುವುದರಲ್ಲಿ ಒಂದು ಹೆಜ್ಜೆಯನ್ನು ಮುಂದೆ ಇಟ್ಟಿದ್ದ. ವಿಕ್ಟರನ ಯೋಗಕ್ಷೇಮವನ್ನು ನೋಡಿಕೊಳ್ಳಲು, ಗುರಿನ್ ಎಂಬ ಮಹಿಳೆಯನ್ನು ಇಟಾರ್ಡ್ ನೇಮಿಸಿದ್ದ. ಒಂದು ದಿನ ಗುರಿನ್ ಸತ್ತ ತನ್ನ ಗಂಡನನ್ನು ನೆನೆಸಿಕೊಂಡು ಕಣ್ಣೀರನ್ನು ಹರಿಸುತ್ತಿದ್ದಳು. ಇದನ್ನು ನೋಡಿದ ವಿಕ್ಟರ್ ತಾನು ಮಾಡುತ್ತಿದ್ದ ಕೆಲಸವನ್ನು ನಿಲ್ಲಿಸಿದ, ಸಮಾಧಾನ ಮಾಡಲೆಂಬಂತೆ ಆಕೆಯ ಬಳಿಗೆ ಬಂದ. ಆತನ ಮುಖದಲ್ಲಿ ಸಹಾನುಭೂತಿಯಿತ್ತು. ಇಷ್ಟರ ಮಟ್ಟಿಗೆ 'ಕಾಡುಹುಡುಗ' ನಾಡುಹುಡುಗನಾಗಿದ್ದ. ಇದಕ್ಕೆ ಐದು ವರ್ಷಗಳು ಹಿಡಿದಿದ್ದವು.

ಐದು ವರ್ಷಗಳಲ್ಲಿ ವಿಕ್ಟರ್ ಎರಡು ಶಬ್ದಗಳನ್ನು ಮಾತ್ರ ಕಲಿತಿದ್ದ. ಕೆಲವು ಸನ್ನೆಗಳನ್ನು ಅರ್ಥ ಮಾಡಿಕೊಳ್ಳಬಲ್ಲವನಾಗಿದ್ದ ಹಾಗೂ ಮಾನವೀಯ ಭಾವನೆಗಳನ್ನು ಅಲ್ಪಮಟ್ಟಿಗೆ ವ್ಯಕ್ತಪಡಿಸಬಲ್ಲವನಾಗಿದ್ದ. ಆದರೆ ಮಾತು, ಭಾಷೆ ಹಾಗೂ ವ್ಯಾಕರಣವನ್ನು ಕಲಿತು ಎಲ್ಲರಂತೆ ಮಾತನಾಡುವುದು ಅವನಿಗೆ ಅಸಾಧ್ಯವಾಗಿತ್ತು. ಈ ಹಿನ್ನೆಲೆಯಲ್ಲಿ ಎರಿಕ್ ಲೆನ್ನೆಬರ್ಗ್ (1921-1975) ಎನ್ನುವ ನರವಿಜ್ಞಾನಿ ಹಾಗೂ ಭಾಷಾತಜ್ಞನು ''ಒಂದು ನಿಗದಿತ ಅವಧಿಯಲ್ಲಿ ಮಗುವು ಭಾಷೆಯನ್ನು ಕಲಿಯದಿದ್ದರೆ, ಆ ನಂತರ ಅದು ಕಲಿಯುವ ಸಾಮರ್ಥ್ಯವನ್ನು ಸದಾ ಕಾಲಕ್ಕೂ ಕಳೆದುಕೊಳ್ಳುತ್ತದೆ'' ಎನ್ನುವ ಸಿದ್ಧಾಂತವನ್ನು ಮಂಡಿಸಿದ. ಒಂದು ಮಗುವು ಬುದ್ಧಿವಂತ ಮಗುವಾಗಬೇಕಾದರೆ, ಆ ಮಗುವು ಬೆಳೆಯುವ ಪರಿಸರವು ಮುಖ್ಯವೆಂದ. ಶಿಕ್ಷಣದಿಂದ ಕಾಡು ಮನುಷ್ಯನನ್ನು 'ನಾಡುಮನುಷ್ಯ'ನನ್ನಾಗಿ ಮಾಡಬೇಕಾದರೆ, ಒಂದು ನಿಗದಿತ ಅವಧಿಯೊಳಗೆ ಅಗತ್ಯ ಶಿಕ್ಷಣ ದೊರೆಯಬೇಕು: ಇಲ್ಲದಿದ್ದರೆ ಆ ಮಗುವು ಭಾಷೆಯನ್ನು ಎಂದಿಗೂ ಕಲಿಯಲಾರದು ಎಂದ. ಮಾನವೀಯತೆಯ ಗುಣಲಕ್ಷಣಗಳು ಮಗುವಿನ ವಂಶವಾಹಿಗಳಲ್ಲಿರುತ್ತವೆ. ಅವನ್ನು ಜಾಗೃತಗೊಳಿಸಲು ಸೂಕ್ತ ಪರಿಸರವು ಅಗತ್ಯ ಎನ್ನುವ ವಿಚಾರವನ್ನು ವಿಶದಪಡಿಸಿದ.

ವಿಕ್ಟರ್, ಇಟಾರ್ಡನ ಮನೆಯನ್ನು ಬಿಟ್ಟು ಗುರಿನ್ ಜತೆಯಲ್ಲಿ ವಾಸ ಮಾಡಲಾರಂಭಿಸಿದ. ಮಾತನ್ನು ಕಲಿಯದಿದ್ದರೂ ಅವನ ವರ್ತನೆಯಲ್ಲಿ ಬದಲಾವಣೆಯಾಗಿತ್ತು. ಮೊದಲಿನ ಹಾಗೆ ಪ್ರಾಣಿಸದೃಶ ವರ್ತನೆಗಳನ್ನು ತೊರೆದು ಶಾಂತವಾಗಿದ್ದ. 1828ರಲ್ಲಿ ಗುರಿನ್ ಮನೆಯಲ್ಲಿದ್ದ ವಿಕ್ಟರ್, ನ್ಯುಮೋನಿಯಕ್ಕೆ ತುತ್ತಾಗಿ ಮರಣಿಸಿದ.

ರಡ್ಯರ್ಡ್ ಕಿಪ್ಲಿಂಗ್ ಬರೆದ ಮೌಗ್ಲಿ ಸಂಪೂರ್ಣ ಕಾಲ್ಪನಿಕ ಕಥೆ. ಕಥೆಯಲ್ಲಿ ಕಾಡು ಹುಡುಗನನ್ನು ನಾಡ ಹುಡುಗನನ್ನಾಗಿ ಮಾಡುವುದು ಸುಲಭ. ಆದರೆ ವಾಸ್ತವದಲ್ಲಿ ಮೌಗ್ಲಿಯಂಥ ಕಾಡು ಕಂದಮ್ಮಗಳು ನಾಡ ಮಕ್ಕಳಾಗಲು ಸಾಧ್ಯವೇ ಇಲ್ಲ.

ಬಿಬಿಎಂಪಿ ಚುನಾವಣೆಯ ಅಸಲಿ ಕಹಾನಿ

ನಗರಕ್ಕೆಲ್ಲಾ ಒಂದೇ ಪಾಲಿಕೆಯಿರುವಾಗಲೇ ಕಳಪೆ ಕಾಮಗಾರಿಗೆ ಮತ್ತು ಭ್ರಷ್ಟಾಚಾರಕ್ಕೆ ಅಂಕುಶ ಹಾಕಲಿಲ್ಲ. ಈಗ ಆರು ಪಾಲಿಕೆಯು ರಚನೆಯಾದ ತರುವಾಯ ಅಧಿಕಾರಿಗಳ ಸಂಖ್ಯೆ ದುಪ್ಪಟ್ಟಾಗಿ ಪಾಲಿಕೆಯಲ್ಲಿ ಭ್ರಷ್ಟಾಚಾರ ಯಾವ ಎತ್ತರಕ್ಕೆ ಹೋಗಬಹುದು ಎಂದು ಊಹಿಸಲೂ ಭಯವಾಗುತ್ತದೆ. ಬೆಂಗಳೂರಿಗಿಂತ ದೊಡ್ಡ ನಗರಗಳಾದ ದೆಹಲಿ, ಮುಂಬೈ, ಕೋಲ್ಕತ್ತಾ, ಚೆನ್ನೈಗಳಲ್ಲಿ ಒಂದೇ ಪಾಲಿಕೆಯು ಅಸ್ತಿತ್ವದಲ್ಲಿರುವುದು; ಅವುಗಳನ್ನು ವಿಭಜಿಸಿ ಎಂಬ ಕೂಗು ಅಲ್ಲಿಲ್ಲ.

ಪ್ರಕಾಶಪಥ
ಪ್ರಕಾಶ್ ಶೇಷರಾಘವಾಚಾರ್
vveditoped@gmail.com

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಶಾಪಗ್ರಸ್ತವಾ? ಅಥವಾ ರಾಜಕೀಯ ಪಕ್ಷಗಳ ಕಾರ್ಯಕರ್ತರು ಅನಾಥರಾ? 2001ರಿಂದ, ಪಾಲಿಕೆಯ ಅವಧಿಯು ಮುಗಿದ ತರುವಾಯ, ಚುನಾವಣೆಯನ್ನು ಮುಂದೂಡುವ ಕಾರ್ಯತಂತ್ರಗಳೇ ಕಾಣುತ್ತವೆ. ಪ್ರಜಾಪ್ರಭುತ್ವದ ಮೂರನೇ ಹಂತದ ಆಡಳಿತ ವ್ಯವಸ್ಥೆಯ ಬಗ್ಗೆ ಸರಕಾರಗಳಿಗೆ ಲವಲೇಶವೂ ಗೌರವವಿಲ್ಲದೆ, ಏನಾದರೂ ಸರ್ಕಸ್ ಮಾಡಿ ಚುನಾವಣೆಯನ್ನು ನಡೆಸದಿರುವಲ್ಲಿ ಅವು ಯಶಸ್ವಿಯಾಗುತ್ತಿವೆ.

ಕಳೆದ 2 ದಶಕದಿಂದ, ಪಾಲಿಕೆಯ ಚುನಾವಣೆ ನಡೆಸುವ ನಿಟ್ಟಿನಲ್ಲಿ ಸರಕಾರಗಳು ತೋರುತ್ತಿರುವ ಅಸಡ್ಡೆಗೆ ಕಡಿವಾಣವೇ ಇಲ್ಲವಾಗಿದೆ. ಕ್ಷೇತ್ರಗಳ ಹೆಚ್ಚಳ ಮತ್ತು ಕ್ಷೇತ್ರಗಳ ಮೀಸಲಾತಿ ನಿಗದಿ- ಇವು ಪ್ರತಿ ಬಾರಿಯೂ ಚುನಾವಣೆಯನ್ನು ಮುಂದೂಡಲು ಸರಕಾರಗಳು ಬಳಸುತ್ತಿರುವ ಅಸ್ತ್ರವಾಗಿವೆ; ಕ್ಷೇತ್ರವಾರು ಮೀಸಲಾತಿಯು ಪ್ರಕಟವಾಗುತ್ತಿದ್ದ ಹಾಗೆ ಅದರ ವಿರುದ್ಧ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಿ ಚುನಾವಣಾ ಪ್ರಕ್ರಿಯೆಗೆ ತಡೆ ತರುತ್ತಾರೆ. ಒಂದು ಪೀಠವು ಚುನಾವಣೆ ನಡೆಸಲು ಗಡುವು ನಿಗದಿಮಾಡಿದರೆ, ಮತ್ತೊಂದು ಪೀಠವು ಚುನಾವಣೆಗೆ ತಡೆ ಕೊಡುತ್ತದೆ. ಈ ಆಟ ಸಾಗುತ್ತಲೇ ಇದೆ.

ಬೆಂಗಳೂರು ಮಹಾನಗರ ಪಾಲಿಕೆಗೆ 2001ರಲ್ಲಿ 100 ಸ್ಥಾನಗಳಿಗೆ ಚುನಾವಣೆ ನಡೆಯಿತು. 2007ರಲ್ಲಿ ಜೆಡಿಎಸ್-ಬಿಜೆಪಿ ಮೈತ್ರಿಕೂಟವು ಅಧಿಕಾರಕ್ಕೆ ಬಂದ ತರುವಾಯ, ನಗರದ ಹೊರವಲಯದ ಆರು ಪುರಸಭೆಗಳನ್ನು ವಿಲೀನ ಮಾಡಿ, 2006ರಲ್ಲಿ ಆದಾಗಲೇ ನಡೆಯಬೇಕಿದ್ದ ಚುನಾವಣೆಯು ಮುಂದಕ್ಕೆ ಹೋಯಿತು. ಬಿಜೆಪಿ ಸರಕಾರವು 2010ರಲ್ಲಿ ಒಟ್ಟು ಸ್ಥಾನವನ್ನು ಹೆಚ್ಚಿಸಿ 198 ಸ್ಥಾನಗಳಿಗೆ ಚುನಾವಣೆ ನಡೆಸಿತು. 2015ರಲ್ಲಿ ಹಣ ದುರುಪಯೋಗದ ಆರೋಪ ಮಾಡಿ ಸಿದ್ದರಾಮಯ್ಯರ ಸರಕಾರವು ಪಾಲಿಕೆಯ ಅವಧಿ ಮುಗಿಯಲು 3 ದಿನವಿರುವಾಗ ಅದನ್ನು ವಿಸರ್ಜಿಸಿತು. 2015ರಲ್ಲಿ, ಚುನಾವಣೆಯನ್ನು ಮುಂದೂಡಲು ಕಾಂಗ್ರೆಸ್ ಸರಕಾರವು ಮಹಾನಗರಪಾಲಿಕೆಯನ್ನು ಪುನರ್‌ರಚಿಸುವ ತಂತ್ರಕ್ಕೆ ಮೊರೆಹೋಯಿತು. ಇದರ ಫಲವಾಗಿ, ಬಿ.ಎಸ್.ಪಾಟೀಲ್, ಪಿ.ರವಿಚಂದ್ರನ್ ಮತ್ತು ಸಿದ್ದಯ್ಯ ನೇತೃತ್ವದ ತ್ರಿಸದಸ್ಯ ಸಮಿತಿಯ ನೇಮಕವಾಯಿತು. ಈ ಸಮಿತಿಯು ತನ್ನ ವರದಿಯಲ್ಲಿ, ನಗರವನ್ನು ಮೂರು ಭಾಗಗಳಾಗಿ ವಿಭಜಿಸಲು ಶಿಫಾರಸು ಮಾಡಿತು. ಇದನ್ನು ಮುಂದಿಟ್ಟುಕೊಂಡು ಚುನಾವಣೆಯನ್ನು ಮುಂದೂಡಲು ನ್ಯಾಯಾಲಯದಲ್ಲಿ ಮನವಿ ಮಾಡಲಾಯಿತು. ಆದರೆ ಈ ಮನವಿಯನ್ನು ತಿರಸ್ಕರಿಸಿದ ನ್ಯಾಯಾಲಯವು 198 ಸ್ಥಾನಗಳಿಗೆ ಚುನಾವಣೆ ನಡೆಸಲು ಆದೇಶಿಸಿತು.

2019ರಲ್ಲಿ ರಾಜ್ಯದಲ್ಲಿ ಬಿಜೆಪಿ ಸರಕಾರ ರಚನೆಯಾಗಿ ಪಾಲಿಕೆಯ ಅಧಿಕಾರವು ಬಿಜೆಪಿಯವರ ಪಾಲಾಯಿತು. ಆದರೆ 2020ರಲ್ಲಿ ಚುನಾವಣೆ ನಡೆಸುವ ಬದಲು, ಬೆಂಗಳೂರು ನಗರಕ್ಕೆ ಪ್ರತ್ಯೇಕ ಕಾಯ್ದೆಯನ್ನು ರಚಿಸಿ, ಪಾಲಿಕೆಯ ಒಟ್ಟು ಸ್ಥಾನವನ್ನು 243ಕ್ಕೆ ಹೆಚ್ಚಳ ಮಾಡಿ, ಕ್ಷೇತ್ರ ವಿಂಗಡಣೆಯ ನೆಪವೊಡ್ಡಿ ಚುನಾವಣೆಯನ್ನು ಮುಂದೂಡುವಲ್ಲಿ ಅವರು ಯಶಸ್ವಿಯಾದರು. 2023ರಲ್ಲಿ ರಾಜ್ಯದಲ್ಲಿ ಕಾಂಗ್ರೆಸ್ಸಿಗರು ಮರಳಿ ಅಧಿಕಾರಕ್ಕೆ ಬಂದಾಗ, ಚುನಾವಣೆ ನಡೆಸಲು ಅವರಿಗೂ ಆಸಕ್ತಿಯಿಲ್ಲದೆ ಮತ್ತೆ ಕ್ಷೇತ್ರ ಮರುವಿಂಗಡಣೆ ಕೈಗೊಂಡು 225 ವಾರ್ಡ್‌ಗಳನ್ನು ರಚಿಸಿದರು. ನಗರದ ಆಡಳಿತ ವ್ಯವಸ್ಥೆಯನ್ನು ಪುನರ್‌ರಚಿಸಲು ಮತ್ತೊಮ್ಮೆ ಅದೇ ಬಿ.ಎಸ್.ಪಾಟೀಲ್, ಪಿ.ರವಿಚಂದ್ರನ್ ಮತ್ತು ಮಾಜಿ ಆಯುಕ್ತ ಸಿದ್ದಯ್ಯ ನೇತೃತ್ವದ ಮೂರು ಜನರ ಸಮಿತಿಯ ನೇಮಕವಾಯಿತು. ಇದರ ಆಧಾರದ ಮೇಲೆ ಚುನಾವಣೆಯನ್ನು ಮುಂದೂಡಲು ಸರಕಾರ ಮನವಿ ಮಾಡಿತು. ಆದರೆ ನ್ಯಾಯಾಲಯ ಇದನ್ನು ತಿರಸ್ಕರಿಸಿ 198 ಸ್ಥಾನಗಳಿಗೆ ಚುನಾವಣೆ ನಡೆಸುವಂತೆ ಆದೇಶಿಸಿತು. ಈ ತೀರ್ಪಿನ ವಿರುದ್ಧ ಸರಕಾರವು ಮೇಲ್ಮನವಿ ಸಲ್ಲಿಸಿ ತಡೆಯಾಜ್ಞೆಯನ್ನು ಪಡೆಯಿತು. ವಿವಾದವು ಸುಪ್ರೀಂ ಕೋರ್ಟ್‌ನ ಮೆಟ್ಟಿಲೇರಿದಾಗ, ಬೆಂಗಳೂರಿನ ಕೆಲವು ಪ್ರಬಲ ಶಾಸಕರ ಪ್ರಯತ್ನದೊಂದಿಗೆ, ಕಳೆದ 5 ವರ್ಷದಿಂದ ಚುನಾವಣೆ ನಡೆಸಲು ಆದೇಶ ಕೋರಿ ಸಲ್ಲಿಸಿದ್ದ ಅರ್ಜಿಯು ವಿಚಾರಣೆಗೇ ಬಾರದಂತೆ ತಡೆಯುವಲ್ಲಿ ಯಶಸ್ವಿಯಾದರು.

198 ಕ್ಷೇತ್ರಗಳ ರಚನೆಯಾದಾಗ ವಾರ್ಡ್‌ಗಳಿಗೆ ಹೊಸ ಹೆಸರು ನೀಡಿದ ಕಾರಣ, ವಾರ್ಡ್‌ಗಳಲ್ಲಿನ ಬೋರ್ಡ್‌ಗಳು ಬದಲಾದವು. ಆ ನಂತರ ಕ್ಷೇತ್ರಗಳು 235 ಆಗಿ ಬದಲಾದಾಗ, ಮತ್ತೆ ಹೊಸ ಬೋರ್ಡ್‌ಗಳು ಬದಲಾದವು. ಆನಂತರ ಕಾಂಗ್ರೆಸ್‌ನವರು 225 ಕ್ಷೇತ್ರಕ್ಕೆ ಅದನ್ನು ಕಡಿತಗೊಳಿಸಿದರು, ಮತ್ತೆ ಹೊಸದಾಗಿ ಬೋರ್ಡ್‌ಗಳು ಬದಲಾದವು. ಪಾಲಿಕೆಯಲ್ಲಿ ಜನರ ತೆರಿಗೆ ಹಣಕ್ಕೇನೂ ಬೆಲೆಯಿಲ್ಲದ ಕಾರಣ ಹೊಸ ಬೋರ್ಡ್‌ಗಳನ್ನು ಬರೆಸುತ್ತಲೇ ಇರುತ್ತಾರೆ!

ಇದರ ನಡುವೆ, ಪಾಲಿಕೆಯ ಸದಸ್ಯರ ಸಂಖ್ಯೆಯನ್ನು 198ರಿಂದ 243ಕ್ಕೆ ಹೆಚ್ಚಳ ಮಾಡಿದಾಗ, ಸದಸ್ಯರು ಸಭೆ ಸೇರುವ ಕೌನ್ಸಿಲ್ ಹಾಲ್‌ನಲ್ಲಿ ಸಂಖ್ಯೆಗೆ ತಕ್ಕ ಹಾಗೆ ಸ್ಥಳಾವಕಾಶ ಕಲ್ಪಿಸಲು ಪಾಲಿಕೆಯು ಕಳೆದ 2 ವರ್ಷದಲ್ಲಿ 25 ಕೋಟಿ ರುಪಾಯಿಗೂ ಹೆಚ್ಚು ಹಣವನ್ನು ವೆಚ್ಚ ಮಾಡಿದೆ. ಈಗ ನೂತನ ಕಾಯ್ದೆಯು ದುರದೃಷ್ಟವಶಾತ್ ಜಾರಿಗೆ ಬಂದರೆ, ಸದಸ್ಯರ ಸಂಖ್ಯೆಯು ನೂರು ದಾಟದಿರುವುದರಿಂದ, ನವೀಕರಿಸಲು ಮಾಡಿರುವ 25 ಕೋಟಿ ರುಪಾಯಿಯು ನೀರಿನಲ್ಲಿ ಬೂದಿಯನ್ನು ಕಲೆಸಿದ ಹಾಗೆ ಆಗುತ್ತದೆ.

ಅವೈಜ್ಞಾನಿಕವಾಗಿರುವ ಮೀಸಲಾತಿ ನಿಗದಿಯು ಚುನಾವಣೆಯನ್ನು ಮುಂದೂಡುವಲ್ಲಿ ಬಹುದೊಡ್ಡ ಪಾತ್ರವನ್ನು ವಹಿಸುತ್ತದೆ. 2021ರಲ್ಲಿ, 243 ಸ್ಥಾನಗಳಿಗೆ ಮೀಸಲಾತಿಯನ್ನು, ನ್ಯಾಯಾಲಯದಲ್ಲಿ ಪ್ರಶ್ನಿಸಿದ ಕೂಡಲೇ ನಿಶ್ಚಿತವಾಗಿ ಅದು ರದ್ದಾಗುವ ಹಾಗೆ ಕೈಗೊಳ್ಳಲಾಯಿತು. ಮೀಸಲಾತಿ ನಿಗದಿಪಡಿಸಲು ಸರಕಾರವು 2001ರ ಜನಗಣತಿಯನ್ನು ಆಧಾರವಾಗಿ ಇಟ್ಟುಕೊಳ್ಳುವುದರಿಂದ, ಸುಲಭವಾಗಿ ನ್ಯಾಯಾಲಯದಲ್ಲಿ ಪ್ರಶ್ನಿಸಲು ಅವಕಾಶ ಕಲ್ಪಿಸಿದಂತಾಗುತ್ತದೆ.

ಪಾಲಿಕೆಗೆ ಚುನಾವಣೆ ನಡೆಯದಿರಲು ರಣತಂತ್ರ ರೂಪಿಸಿ ಕಾಂಗ್ರೆಸ್ ಸರಕಾರವು 'ಗ್ರೇಟರ್ ಬೆಂಗಳೂರು ಪ್ರಾಧಿಕಾರದ ವಿಧೇಯಕ'ಕ್ಕೆ ವಿಧಾನಸಭೆಯಲ್ಲಿ ತರಾತುರಿಯಲ್ಲಿ ಅನುಮೋದನೆ ಪಡೆದಿದೆ. ಹೊಸ ಕಾಯ್ದೆಯನ್ವಯ ನಗರವನ್ನು ಆರು ಪಾಲಿಕೆಗಳಾಗಿ ವಿಭಜಿಸಲಾಗುವುದು. ಪ್ರತಿ ಪಾಲಿಕೆಯಲ್ಲಿ ನೂರು ಸದಸ್ಯರು ಇರುತ್ತಾರೆ. 600 ಸದಸ್ಯರಿಗೆ 600 ಕ್ಷೇತ್ರಗಳನ್ನು ರಚಿಸಬೇಕು. 600 ಕ್ಷೇತ್ರಗಳಲ್ಲಿ ಮೀಸಲಾತಿ ನಿಗದಿಪಡಿಸಬೇಕು.

ಕಳೆದ 5 ವರ್ಷದಿಂದ ಜನಪ್ರತಿನಿಧಿಗಳಿಲ್ಲದೆ ಬೆಂಗಳೂರು ಅನಾಥವಾಗಿದೆ. ಸಂವಿಧಾನದ ಬಗ್ಗೆ ಉದ್ದುದ್ದ ಭಾಷಣ ಮಾಡುವ ರಾಜಕೀಯ ನಾಯಕರುಗಳು ಸಂವಿಧಾನಕ್ಕೆ ಅಪಚಾರವೆಸಗುತ್ತಿದ್ದಾರೆ. ತಮಗಾಗಿ ದುಡಿಯುವ ಕಾರ್ಯಕರ್ತರಿಗೆ ಅಧಿಕಾರ ನೀಡಬೇಕು, ಅವರನ್ನು ನಾಯಕರನ್ನಾಗಿ ಬೆಳೆಸಿ ಪಕ್ಷವನ್ನು ಗಟ್ಟಿಗೊಳಿಸಬೇಕು ಎಂಬ ಉದಾರತೆಯೇ ಶಾಸಕರುಗಳಲ್ಲಿ ಇಲ್ಲ; ಎಲ್ಲ ಅಧಿಕಾರವೂ

ತಮ್ಮಲ್ಲೇ ಇರಬೇಕೆಂಬ ಸಂಕುಚಿತ ಮನೋಭಾವವನ್ನು ಅವರು ಹೊಂದಿದ್ದಾರೆ. 2026ರಲ್ಲಿ ದೇಶದ ಜನಗಣತಿಗೆ ಕ್ಷಣಗಣನೆ ಆರಂಭವಾಗಿದೆ. ಅದರೊಂದಿಗೆ ಕ್ಷೇತ್ರಗಳ ಮರುವಿಂಗಡಣೆ ಹಾಗೂ ಶೇ.33ರಷ್ಟು ಮಹಿಳಾ ಮೀಸಲಾತಿ ಜಾರಿಗೆ ಬರುತ್ತವೆ. ಹೀಗಾಗಿ, ಕ್ಷೇತ್ರಗಳ ಮರುವಿಂಗಡಣೆ ಸಮಿತಿಯು ರಚನೆಯಾಗಿ, ಅದು ಅಂತಿಮ ವರದಿ ಸಲ್ಲಿಸುವವರೆಗೂ ಕಾಯುವುದು ಅನಿವಾರ್ಯವಾಗುವುದು. ಇದರಿಂದಾಗಿ, ಇನ್ನೂ ಮೂರರಿಂದ ನಾಲ್ಕು ವರ್ಷದವರೆಗೆ ಪಾಲಿಕೆಯ ಚುನಾವಣೆಯನ್ನು ಸುಲಭವಾಗಿ ಮುಂದೂಡಲು ಬಲವಾದ ಕಾರಣ ದೊರೆಯುತ್ತದೆ. ಮುಂದಿನ ಕನಿಷ್ಠ ಮೂರು ವರ್ಷದವರೆಗಾದರೂ ಪಾಲಿಕೆಗೆ ಚುನಾವಣೆ ನಡೆಯದಂತೆ ನೋಡಿಕೊಳ್ಳುವ ಹುನ್ನಾರ ನಡೆದಿದೆ.

2009ರಲ್ಲಿ ಸೇರ್ಪಡೆಯಾದ ನಗರದ ಹೊರವಲಯದ 150 ಹಳ್ಳಿಗಳಿಗೆ ಮೂಲಸೌಕರ್ಯ ನೀಡಲು ಪಾಲಿಕೆ ಪರದಾಡುತ್ತಿದೆ. ಸಂಪನ್ಮೂಲ ಮತ್ತು ಸೂಕ್ತ ಯೋಜನೆಗಳ ಕೊರತೆಯಿಂದ ಈ ಹಳ್ಳಿಗಳು ಸೌಲಭ್ಯವಂಚಿತವಾಗಿವೆ. ಈಗ ರಾಮನಗರ ಜಿಲ್ಲೆ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಗಳನ್ನು ಗ್ರೇಟರ್ ಬೆಂಗಳೂರು ಪ್ರಾಧಿಕಾರದಲ್ಲಿ ಸೇರ್ಪಡೆ ಮಾಡಿ, ಅಲ್ಲಿ ಮಹಾನಗರ ಮಟ್ಟದ ಸೌಕರ್ಯ ವಿಸ್ತರಿಸುವ ಹಗಲುಗನಸನ್ನು ಜನರಲ್ಲಿ ಬಿತ್ತುತ್ತಿದ್ದಾರೆ. ಇವರ ಈ ಕಾಯ್ದೆಯಿಂದಾಗಿ ಹೊರವಲಯದಲ್ಲಿ ಭೂಮಿಯ ಬೆಲೆಯು ಚಿನ್ನದಷ್ಟಾಗಿ, ರಿಯಲ್ ಎಸ್ಟೇಟ್ ಉದ್ದಿಮೆದಾರರಿಗೆ ಅಪಾರ ಲಾಭವಾಗುವುದರಲ್ಲಿ ಸಂದೇಹವಿಲ್ಲ. ಕಾಯ್ದೆಯಿಂದ ಬಡತನ ನಿರ್ಮೂಲನವಾಗುತ್ತದೆ ಮತ್ತು ಸರಕಾರದ ಆಡಳಿತವು ಪಾರದರ್ಶಕವಾಗುತ್ತದೆ ಎಂಬ ಭ್ರಮೆಯನ್ನು ಕಾಂಗ್ರೆಸ್ ಪಕ್ಷವು ದಶಕಗಳಿಂದ ಜನರಲ್ಲಿ ಬಿಂಬಿಸಿದೆ. ಈಗ ಗ್ರೇಟರ್ ಬೆಂಗಳೂರು ಪ್ರಾಧಿಕಾರ ಕಾಯ್ದೆಯನ್ನು ಜಾರಿಗೊಳಿಸಿ, ಬೆಂಗಳೂರು ನಗರಕ್ಕೆ ವಿಶ್ವದರ್ಜೆಯ ಸೌಲಭ್ಯ-ಸೌಕರ್ಯ ನೀಡುತ್ತೇವೆ ಎಂಬ ಬೊಗಳೆ ಬಿಡುತ್ತಿದ್ದಾರೆ.

ನಗರಕ್ಕೆಲ್ಲಾ ಒಂದೇ ಪಾಲಿಕೆಯಿರುವಾಗಲೇ ಕಳಪೆ ಕಾಮಗಾರಿಗೆ ಮತ್ತು ಭ್ರಷ್ಟಾಚಾರಕ್ಕೆ ಅಂಕುಶ ಹಾಕಲಿಲ್ಲ. ಈಗ ಆರು ಪಾಲಿಕೆಯು ರಚನೆಯಾದ ತರುವಾಯ ಅಧಿಕಾರಿಗಳ ಸಂಖ್ಯೆ ದುಪ್ಪಟ್ಟಾಗಿ ಪಾಲಿಕೆಯಲ್ಲಿ ಭ್ರಷ್ಟಾಚಾರ ಯಾವ ಎತ್ತರಕ್ಕೆ ಹೋಗಬಹುದು ಎಂದು ಊಹಿಸಲೂ ಭಯವಾಗುತ್ತದೆ. ಬೆಂಗಳೂರಿಗಿಂತ ದೊಡ್ಡ ನಗರಗಳಾದ ದೆಹಲಿ, ಮುಂಬೈ, ಕೋಲ್ಕತ್ತಾ, ಚೆನ್ನೈಗಳಲ್ಲಿ ಒಂದೇ ಪಾಲಿಕೆಯು ಅಸ್ತಿತ್ವದಲ್ಲಿರುವುದು; ಅವುಗಳನ್ನು ವಿಭಜಿಸಿ ಎಂಬ ಕೂಗು ಅಲ್ಲಿಲ್ಲ. ಸಂವಿಧಾನದ 74ನೇ ತಿದ್ದುಪಡಿಯಲ್ಲಿರುವ ಅಧಿಕಾರ ವಿಕೇಂದ್ರೀಕರಣ ನೀತಿಗೆ ವಿರುದ್ಧವಾಗಿ ಸರಕಾರವು ಅಧಿಕಾರ ಕೇಂದ್ರೀಕರಣವಾಗುವ ಗ್ರೇಟರ್ ಬೆಂಗಳೂರು ಪ್ರಾಧಿಕಾರವನ್ನು ರಚಿಸಿದೆ. ಹೊಸ ಸರಕಾರ ರಚನೆಯಾಗಿ ಎರಡು ವರ್ಷವಾದರೂ, ನಗರದ ಹಿತದೃಷ್ಟಿಯಿಂದ ಒಂದೇ ಒಂದು ನಾಗರಿಕ-ಸ್ನೇಹಿ ಯೋಜನೆಯನ್ನು ರೂಪಿಸಲು ಸಾಧ್ಯವಾಗಿಲ್ಲ. ಗುಂಡಿ ಬೀಳದ ಗುಣಮಟ್ಟದ ರಸ್ತೆಯನ್ನು ನಿರ್ಮಿಸಲಿಲ್ಲ, ಕಸಮುಕ್ತ ಮಾಡಲಿಲ್ಲ. ಒಂದೇ ಒಂದು ವಾಹನ ನಿಲುಗಡೆ ಸಮುಚ್ಚಯ ನಿರ್ಮಿಸಲಿಲ್ಲ. ನಗರದ ಸಮಸ್ಯೆಗಳನ್ನು ಬಗೆಹರಿಸುವ ಇಚ್ಛಾಶಕ್ತಿಯೇ ಸಚಿವರಲ್ಲಿ ಅಥವಾ ಅಧಿಕಾರಿಗಳಲ್ಲಿ ಇಲ್ಲದಿರುವಾಗ, ಹೊಸ ಕಾಯ್ದೆಯು ಸೃಷ್ಟಿಸುವ ವ್ಯವಸ್ಥೆಯಲ್ಲಿ ಅದೇ ಅಧಿಕಾರಿಗಳು, ಸಿಬ್ಬಂದಿಗಳು, ಮೇಲಾಗಿ ಅದೇ ಸಚಿವರಿಂದ ಅದ್ಯಾವ ಬದಲಾವಣೆ ಬರಲು ಸಾಧ್ಯ?

ಬೆಂಗಳೂರು ನಗರಕ್ಕೆ ಕಾಯ್ದೆಯ ಮೇಲೆ ಕಾಯ್ದೆ ರೂಪಿಸಿ, ಚುನಾವಣೆಯನ್ನು ನಡೆಸದಂತೆ ಕುತಂತ್ರ ಮಾಡಿ, ಎಲ್ಲಾ ಪಕ್ಷದ ಕಾರ್ಯಕರ್ತರನ್ನು ಅಧಿಕಾರದಿಂದ ವಂಚಿಸಲಾಗಿದೆ. ಲೋಕಸಭೆ, ರಾಜ್ಯಸಭೆ, ವಿಧಾನಸಭೆ ಹಾಗೂ ವಿಧಾನ ಪರಿಷತ್ ಚುನಾವಣೆಗಳು ನಿರ್ದಿಷ್ಟ ಅವಧಿಗೆ ನಿಯತವಾಗಿ ನಡೆಯುತ್ತವೆ; ಆದರೆ ಸ್ಥಳೀಯ ಸಂಸ್ಥೆ ಚುನಾವಣೆಗೆ ಈ ರೀತಿಯ ಕಟ್ಟುಪಾಡು ಹಾಕದಿರುವ ಕಾರಣ, ಕುಂಟುನೆಪವೊಡ್ಡಿ ಪದೇ ಪದೆ ಚುನಾವಣೆಯನ್ನು ಮುಂದೂಡುವಲ್ಲಿ ಯಶಸ್ವಿಯಾಗುತ್ತಿದ್ದಾರೆ. ಇದನ್ನು ತಡೆಯಬೇಕಾದ ರಾಜ್ಯ ಚುನಾವಣಾ ಆಯೋಗವು ಹಲ್ಲು ಕಿತ್ತ ಹಾವಾಗಿರುವುದು ಶೋಚನೀಯ.

(ಲೇಖಕರು ಬಿಜೆಪಿಯ ವಕ್ತಾರರು)

ಭಟ್ಟರ್ ಸ್ಕಾಚ್

- **ಸಗ್ರಿ ಹಯವದನ, ವಿದ್ಯಾಪೀಠ**
ಭಟ್ರೇ, ಮನುಷ್ಯನಾದವನಿಗೆ ಹೆಣ್ಣು, ಹೊನ್ನು, ಮಣ್ಣಿನ ಪ್ರಲೋಭನೆ ಅನಿವಾರ್ಯವೇ?
– **ಹನಿ ಟ್ರ್ಯಾಪ್, ಗೋಲ್ಡ್ ಸ್ಮಗ್ಲಿಂಗ್, ಸೈಟು ಹಂಚಿಕೆ ಹಗರಣಗಳನ್ನು ನೋಡಿಯೂ ಅನುಮಾನ ಬಂತಾ?!**

- **ತಗಡೂರು ಸುಬ್ಬಣ್ಣ, ನಂಜನಗೂಡು**
ಭಟ್ರೇ, ಮುಂದೊಂದು ದಿನ ನೀವು ಟ್ರಂಪ್ ಭೇಟಿ ಮಾಡಿದ್ರೆ ಅವರಿಗೆ ಏನನ್ನು ಉಡುಗೊರೆ ಕೊಡುತ್ತೀರಿ?
– **ಮೊಯಿಲಿ ಮಹಾಕಾವ್ಯ!**

- **ಕಲಮಂಗಿ ಆಚಾರ್, ಪವಮಾನಪುರ**
ಭಟ್ರೇ, ಮೊದಲ ಸೊಸೆ ಕಾಶ್ಮೀರ (ಅಪಲ್), ಎರಡನೆಯವಳು ಸಾಂಗ್ಲಿ (ದ್ರಾಕ್ಷಿ), ಕೊನೆಯವಳು ರತ್ನಗಿರಿ (ಮಾವು), ಏನಂತೀರಿ?
– **ಆಚಾರ್ರೇ, ನಿಮ್ಮ ಮನೆಯಲ್ಲಿ ಹಣ್ಣುಗಳಿಗೆ (ಹೆಣ್ಣುಗಳಿಗೆ) ಬರವಿಲ್ಲ ಅಂತಾಯ್ತು, ಬಿಡಿ!**

- **ಚಂಚಲ ಚಿಟಗುಪ್ಪಿ, ಮೈಸೂರು**
ಭಟ್ರೇ, ಹುಣಸೂರು ಕೃಷ್ಣಮೂರ್ತಿಯವರ ಯಾವ ಹಾಡು ಕೇಳಿದಾಗ ಹೊಸ ಬಟ್ಟೆ ಕೊಳ್ಳಲು ಮನಸ್ಸೇ ಅಗಲ್ಲ?
– **'ಬರುವಾಗ ಬೆತ್ತಲೆ ಹೋಗುವಾಗ ಬೆತ್ತಲೆ, ಬಂದು ಹೋಗುವ ನಡುವೆ ಬರೀ ಕತ್ತಲೆ..'!**

- **ಚಂದ್ರಶೇಖರ ನಾಗೂರು, (ಇಮೇಲ್ ಮೂಲಕ)**
ಭಟ್ರೇ, ನೆಮ್ಮದಿಯ ಸಂಸಾರಕ್ಕೆ ಇಬ್ಬರು ಅಪಾಯಕಾರಿಗಳಂತೆ, ಹೌದಾ?
– **ಹೂಂ.. ಗಂಡನ 'ಗೆಳತಿ' ಮತ್ತು ಹೆಂಡತಿಯ 'ಗೆಳೆಯ'!**

- **ಮಹಾನಂದ ಪಾಟೀಲ, (ಇಮೇಲ್ ಮೂಲಕ)**
ಭಟ್ರೇ, ನಮ್ಮಲ್ಲೂ ಆಫೀಸಿನಲ್ಲಿ ಬೆಳಗಿನ ಪ್ರಾರ್ಥನೆ ಮಾಡಿದರೆ ಹೇಗಿರುತ್ತೆ?
– **ಮನುಸ್ಮೃತಿ ಆರಾಧನೆ ಅಂತ ಪ್ರಗತಿಪರರು ಶುರು ಹಚ್ಕೋತಾರೆ!**

- **ಉಜ್ಜನಿ ಜಲೇಂದ್ರ, ಮಲ್ಲುಂಗೆರೆ**
ಭಟ್ರೇ, ಒಳ್ಳೆಯ ಪ್ರಶ್ನೆ ಕೇಳಿದರೆ ಬಿಡಿಎ ಸೈಟ್ ಕೊಡುವಂತಿದ್ದರೆ?
– **ಆಗ ಪ್ರಶ್ನೆಗಳನ್ನೂ ನಾನೇ ಕೇಳುತ್ತಿದ್ದೆ!**

ನಾವು ಇನ್ನೆಷ್ಟು ಉದಾರಿಗಳಾಗಿರಬೇಕು?

ಅನ್ಯರಾಜ್ಯಗಳ ವಿಚಾರದಲ್ಲಿ ನಾವು ಸಹೋದರತೆಯ ಭಾವದಿಂದ ವರ್ತಿಸದೆ, ರಾಜ್ಯದ ಹಿತಾಸಕ್ತಿಯೊಂದನ್ನೇ ಮುಂದಿಟ್ಟುಕೊಂಡು ಸಾಗಿದ್ದರೆ ಚೆನ್ನೈ ನಗರಕ್ಕೆ ಕುಡಿಯುವ ನೀರು ಕಲ್ಪಿಸಿದ ತೆಲುಗು-ಗಂಗಾ ಯೋಜನೆಗೆ ಕರ್ನಾಟಕ ಅಡ್ಡಗಾಲು ಹಾಕಬಹುದಿತ್ತು. ತಮಿಳುನಾಡಿನ ಹೊಗೇನಕಲ್ ಯೋಜನೆಯನ್ನು ತಡೆಯಬಹುದಿತ್ತು.

ಲೋಕಮತ

ಲೋಕೇಶ್ ಕಾಯರ್ಗ
kaayarga@gmail.com

ಕಾವೇರಿ ವಿವಾದ ಮತ್ತೊಮ್ಮೆ ಭುಗಿಲೆದ್ದ ಕಾಲವದು. 2012ರಲ್ಲಿ ಕಾವೇರಿ ನದಿ ಪ್ರಾಧಿಕಾರದ ಅಧ್ಯಕ್ಷರಾಗಿ ಪ್ರಧಾನಿ ಮನಮೋಹನ್ ಸಿಂಗ್ ಅವರು ತಮಿಳುನಾಡಿಗೆ ದಿನಕ್ಕೆ 9,000 ಕ್ಯೂಸೆಕ್ ನೀರನ್ನು ಬಿಡುಗಡೆ ಮಾಡುವಂತೆ ಆದೇಶ ನೀಡಿದ್ದರು. ಇದನ್ನು ಒಪ್ಪದ ಕರ್ನಾಟಕ ಉನ್ನತ ಮಟ್ಟದ ಸಭೆಯಿಂದ ಹೊರ ನಡೆದಿತ್ತು. ಮುಂದೆ ಈ ವಿಚಾರ ಸುಪ್ರೀಂಕೋರ್ಟ್ ಮೆಟ್ಟಿಲೇರಿದಾಗ, ನ್ಯಾಯ ಮೂರ್ತಿಯೊಬ್ಬರು, '' ಕರ್ನಾಟಕ ತನ್ನ ನೆರೆಹೊರೆಯ ಎಲ್ಲ ರಾಜ್ಯಗಳೊಂದಿಗೆ ವಿವಾದ ಹೊಂದಿದೆ. ನಿಮ್ಮದು ಜಗಳಗಂಟಿ ರಾಜ್ಯ' ಎಂದು ರಾಜ್ಯವನ್ನು ಪ್ರತಿನಿಧಿಸುವ ವಕೀಲರ ಮುಂದೆ ಅಭಿಪ್ರಾಯ ವ್ಯಕ್ತಪಡಿಸಿದ್ದರು.

ಇತಿಹಾಸದುದ್ದಕ್ಕೂ ತಮ್ಮ ಹೃದಯ ವೈಶಾಲ್ಯ ಮತ್ತು ಉದಾರತೆಗೆ ಹೆಸರಾದ ಕನ್ನಡಿಗರು ವಿನಾ ಕಾರಣ ಈ ರೀತಿಯ ಅಪವಾದ ಹೊತ್ತುಕೊಳ್ಳಬೇಕಾಯಿತು. ನೆಲ, ಜಲ, ಭಾಷೆಯ ವಿಚಾರದಲ್ಲಿ ಬಹುಶ: ಕರ್ನಾಟಕಕ್ಕೆ ಆಗಿರುವಷ್ಟು ಅನ್ಯಾಯ ಇನ್ನಾವುದೇ ರಾಜ್ಯಕ್ಕೆ ಆಗಿರುವ ಸಾಧ್ಯತೆ ಇಲ್ಲ. ಕಾವೇರಿ, ಕೃಷ್ಣಾ , ಮಹದಾಯಿ ಜಲವಿವಾದದಿಂದ ಹಿಡಿದು ಇತ್ತೀಚಿನ ಪಿನಾಕಿನಿ ನದಿ ನೀರು ಹಂಚಿಕೆ ವಿವಾದದವರೆಗೂ ನಾವು ಸಂತ್ರಸ್ತರು. ಇಲ್ಲಿ ನೆರೆ ರಾಜ್ಯಗಳ ಹಠಮಾರಿತನ ಮಾತ್ರವಲ್ಲ ನಮ್ಮ ಉದಾರ ಮತ್ತು ಉಡಾಫೆ ನೀತಿಯಿಂದಲೂ ನಾವು ಅನ್ಯಾಯಕ್ಕೆ ಒಳಗಾಗಿದ್ದೇವೆ.

ನಮ್ಮ ನಾಯಕರ ಕಾರಣದಿಂದ ಮತ್ತೊಮ್ಮೆ ಈ ಅನ್ಯಾಯದ ಪರಂಪರೆ ಮುಂದುವರಿಯುವ ಸ್ಪಷ್ಟ ಸೂಚನೆಗಳು ಸಿಕ್ಕಿವೆ. ಬಂಡೀಪುರ ಅಭಯಾರಣ್ಯದಲ್ಲಿ ರಾತ್ರಿ ವೇಳೆ ವಾಹನ ಸಂಚಾರಕ್ಕೆ ಅವಕಾಶ ನೀಡುವ ವಿಚಾರದಲ್ಲಿ ನಮ್ಮ ನಾಯಕರು ನೀಡುತ್ತಿರುವ ಎಡಬಿಡಂಗಿ ಹೇಳಿಕೆಗಳನ್ನು ಗಮನಿಸಿದರೆ ಕೇರಳ ಲಾಬಿಗೆ ಮಣೆ ಹಾಕುವುದು ಖಚಿತವಾಗಿದೆ. ಇನ್ನೊಂದೆಡೆ ಛತ್ತೀಸ್‌ಗಢದ ತಮ್ನಾರ್‌ನಿಂದ ಗೋವಾಕ್ಕೆ ವಿದ್ಯುತ್ ಪ್ರಸರಣಕ್ಕೆ ಅವಕಾಶ ನೀಡುವ 400 ಕೆ.ವಿ. ವಿದ್ಯುತ್ ಮಾರ್ಗಕ್ಕೆ ಕರ್ನಾಟಕದ 435 ಎಕರೆ ಅರಣ್ಯ ಪ್ರದೇಶ ಒದಗಿಸುವ ಪ್ರಸ್ತಾವವನ್ನು ಸರಕಾರ ಸದ್ದಿಲ್ಲದೆ ಒಪ್ಪಿಕೊಂಡಿದೆ. ರಾಜ್ಯ ಅರಣ್ಯ ಇಲಾಖೆ ಕಳೆದ ಮಾರ್ಚ್‌ನಲ್ಲಿ ತಿರಸ್ಕರಿಸಿದ್ದ ಈ ಯೋಜನೆಗೆ ಈಗ ಒಪ್ಪಿಗೆ ದೊರೆತಿರುವುದು ಹೇಗೆ ಎನ್ನುವುದು ಅಚ್ಚರಿಯ ಸಂಗತಿ.

ಹುಲಿ ಕಾಡೊಳಗೆ ವಿದ್ಯುತ್ ಲೈನ್

ಧಾರವಾಡ ಜಿಲ್ಲೆಯ ನರೇಂದ್ರದಿಂದ ಗೋವಾಕ್ಕೆ ವಿದ್ಯುತ್ ಮಾರ್ಗ ನಿರ್ಮಿಸಲು ಉದ್ದೇಶಿಸಿರುವ 'ಗೋವಾ-ತಮ್ನಾರ್ ಟ್ರಾನ್ಸ್‌ಮಿಷನ್ ಪ್ರಾಜೆಕ್ಟ್ ಲಿಮಿಟೆಡ್' ಧಾರವಾಡ ಜಿಲ್ಲೆಯಲ್ಲಿ 4.70 ಹೆಕ್ಟೇರ್, ಬೆಳಗಾವಿ ಜಿಲ್ಲೆಯಲ್ಲಿ 101 ಹೆಕ್ಟೇರ್, ಉತ್ತರ ಕನ್ನಡ ಜಿಲ್ಲೆಯಲ್ಲಿ 70 ಹೆಕ್ಟೇರ್ ಅರಣ್ಯವನ್ನು ಯೋಜನೆಗೆ ಬಳಸಿಕೊಳ್ಳಲು ಉದ್ದೇಶಿಸಿದೆ. ಈ ಮಾರ್ಗವು ಭದ್ರಾ ಹುಲಿ ಕಾರಿಡಾರ್, ಕಾಳಿ ಹುಲಿ ಮೀಸಲಿನ ಪರಿಸರ ಸೂಕ್ಷ್ಮ ಪ್ರದೇಶ, ದಾಂಡೇಲಿ ಅಭಯಾರಣ್ಯ ಹಾಗೂ ದಾಂಡೇಲಿ ಆನೆಧಾಮದ ಮೂಲಕ ಹಾದು ಹೋಗಲಿದ್ದು 72000 ಕ್ಕೂ ಹೆಚ್ಚಿನ ಮರಗಳನ್ನು ಬಲಿ ಪಡೆಯಲಿದೆ. ರಾಜ್ಯದ ಪಶ್ಚಿಮ ಘಟ್ಟ ಪ್ರದೇಶದ 177 ಹೆಕ್ಟೇರ್ ದಟ್ಟ ಕಾಡು ನಾಶವಾಗಲಿದೆ.

ಗೋವಾ ತಮ್ನಾರ್ ಯೋಜನೆಯು ರಾಷ್ಟ್ರೀಯ ವಿತರಣಾ ಜಾಲದ ಯೋಜನೆಯಾಗಿದ್ದು, ಇದಕ್ಕೆ ಸಹಕಾರ ನೀಡಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಕಳೆದ ವರ್ಷ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿದ್ದರು. ಇದಕ್ಕೆ ಪ್ರತಿಯಾಗಿ ಮಹದಾಯಿ ಯೋಜನೆಗೆ ಅನುಮೋದನೆ ಕೊಟ್ಟರೆ ಗೋವಾ-ತಮ್ನಾರ್‌ಗೆ ಸಹಕಾರ ನೀಡುವುದಾಗಿ ಸಿಎಂ ಮರುಪತ್ರ ಬರೆದು ಸ್ಪಷ್ಟಪಡಿಸಿದ್ದರು. ಒಂದು ವೇಳೆ ಗೋವಾ ಪರಿಸರ ಹಾನಿ ನೆಪವನ್ನು ಮುಂದಿಟ್ಟುಕೊಂಡು ಕಳಸಾ ಯೋಜನೆಯನ್ನು ವಿರೋಧಿಸಿದರೆ ಪಶ್ಚಿಮ ಘಟ್ಟ ಪ್ರದೇಶದಲ್ಲಿ ಹಾದು ಹೋಗಲಿರುವ ಗೋವಾ-ತಮ್ನಾರ್ ಪ್ರಸರಣ ಯೋಜನೆಗೆ ಕರ್ನಾಟಕ ಅನುಮೋದನೆ ನೀಡುವುದಿಲ್ಲ ಎಂದು ಈ ಪತ್ರದಲ್ಲಿ ಸಿದ್ದರಾಮಯ್ಯ ಸ್ಪಷ್ಟಪಡಿಸಿದ್ದರು.

ಆದರೆ ಮಹದಾಯಿ ಯೋಜನೆಗೆ ರಾಷ್ಟ್ರೀಯ ವನ್ಯಜೀವಿ ಮಂಡಳಿಯ ಅನುಮೋದನೆ ಪಡೆಯುವ ರಾಜ್ಯದ ಪ್ರಯತ್ನ ಇನ್ನೂ ಈಡೇರಿಲ್ಲ. ಕಳೆದ ಸೆಪ್ಟೆಂಬರ್‌ನಲ್ಲಿ ನಡೆದ ಮಂಡಳಿಯ 79ನೇ ಸಭೆಯಲ್ಲಿ ಮಹದಾಯಿ ಯೋಜನೆಯ ಪ್ರಸ್ತಾಪವನ್ನು ಬದಿಗಿಟ್ಟು, ಗೋವಾ-ತಮ್ನಾರ್ ಯೋಜನೆಗೆ ಷರತ್ತುಬದ್ಧ ಅನುಮೋದನೆ ನೀಡಲಾಗಿದೆ. ಮಹದಾಯಿ ಜಲ ವಿವಾದ ನ್ಯಾಯಮಂಡಳಿ ಕಳಸಾ- ಬಂಡೂರಿ ನಾಲಾ ಮೂಲಕ 3.9 ಟಿಎಂಸಿ ನೀರನ್ನು ಕುಡಿಯುವ ನೀರಿನ ಉದ್ದೇಶಕ್ಕಾಗಿ ಬಳಸಲು 2018ರಲ್ಲಿಯೇ ಅನುಮೋದನೆ ನೀಡಿದೆ. ಆದರೆ ವನ್ಯಸಂಪತ್ತಿನ ನಷ್ಟವನ್ನು ಮುಂದಿಟ್ಟುಕೊಂಡು ಗೋವಾ ಮತ್ತೆ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದೆ. ಉತ್ತರ ಕರ್ನಾಟಕ ಜನತೆಯ ಕುಡಿಯುವ ನೀರಿನ ಅಗತ್ಯವನ್ನು ಪೂರೈಸುವ ಯೋಜನೆ ಇನ್ನೂ ಕನಸಾಗಿದೆ. ಇನ್ನೊಂದೆಡೆ ರಾಜ್ಯದಲ್ಲಿ ಹುಲಿಗಳ ಸಂಖ್ಯೆ ಕುಸಿತವಾಗುತ್ತಿದೆ ಎಂಬ ವರದಿಗಳ ನಡುವೆ ಹುಲಿ ಮೀಸಲು ಅರಣ್ಯದಲ್ಲಿ ಗೋವಾದ ಯೋಜನೆ ಜಾರಿಗೆ ರಾಜ್ಯ ಸರಕಾರ ಒಪ್ಪಿಗೆ ಸೂಚಿಸಿದೆ. ಈಗ ಹೇಳಿ ಕನ್ನಡಿಗರಷ್ಟು ಉದಾರಿಗಳು ಇನ್ನಾರಿದ್ದಾರೆ ?

ತಮಿಳುನಾಡು, ಆಂಧ್ರಪ್ರದೇಶ ಮತ್ತು ಕೇರಳದಲ್ಲಿ ಪ್ರಾದೇಶಿಕ ಪಕ್ಷಗಳ ಪ್ರಾಬಲ್ಯವಿದ್ದ ಕಾರಣಕ್ಕೆ ಇವು ಕೇಂದ್ರದ ಮೇಲೆ ಒತ್ತಡ ಹೇರಿ ತಮ್ಮ ಯೋಜನೆಗಳಿಗೆ ಅನುಮತಿ ಪಡೆದುಕೊಳ್ಳುತ್ತಿವೆ ಎನ್ನುವುದು ಇಲ್ಲಿವರೆಗೆ ಕೇಳಿ ಬರುತ್ತಿರುವ ಮಾತಾಗಿತ್ತು. ಆದರೆ ಕೇವಲ ಇಬ್ಬರು ಲೋಕಸಭಾ ಸದಸ್ಯರನ್ನು ಹೊಂದಿರುವ ಗೋವಾ ಕೇಂದ್ರದ ಮೇಲೆ ಒತ್ತಡ ಹೇರಿ ತನ್ನ ಕಾರ್ಯ ಸಾಧಿಸಿಕೊಳ್ಳುತ್ತಿದೆ. ಆದರೆ 28 ಸಂಸದರ ಬಲವಿದ್ದರೂ ಕರ್ನಾಟಕದ ಯಾವ ಯೋಜನೆಗಳಿಗೂ ಕೇಂದ್ರ ಮಟ್ಟದಲ್ಲಿ ಅನುಮತಿ ಸಿಗುತ್ತಿಲ್ಲ.

ಅನ್ಯರಾಜ್ಯಗಳ ವಿಚಾರದಲ್ಲಿ ನಾವು ಸಹೋದರತೆಯ ಭಾವದಿಂದ ವರ್ತಿಸದೆ, ರಾಜ್ಯದ ಹಿತಾಸಕ್ತಿಯೊಂದನ್ನೇ ಮುಂದಿಟ್ಟುಕೊಂಡು ಸಾಗಿದ್ದರೆ ಚೆನ್ನೈ ನಗರಕ್ಕೆ ಕುಡಿಯುವ ನೀರು ಕಲ್ಪಿಸಿದ ತೆಲುಗು-ಗಂಗಾ ಯೋಜನೆಗೆ ಕರ್ನಾಟಕ ಅಡ್ಡಗಾಲು ಹಾಕಬಹುದಿತ್ತು. ತಮಿಳುನಾಡಿನ ಹೊಗೇನಕಲ್ ಯೋಜನೆಯನ್ನು ತಡೆಯಬಹುದಿತ್ತು. ಹಿಂದೊಮ್ಮೆ ಇದೇ ಗೋವಾ ಮಹದಾಯಿ ಯೋಜನೆಗೆ ತನ್ನ ಅನುಮತಿ ನೀಡಿತ್ತು. ಉಲ್ಟಾ ಹೊಡೆಯುವ ಸಾಧ್ಯತೆ ತಿಳಿದಿದ್ದರೆ ಅಂದೇ ತ್ವರಿತವಾಗಿ ನಾಲಾ ಕೆಲಸ ಮುಗಿಸಿ ಬಿಡಬಹುದಿತ್ತು. ಆದರೆ ನಮ್ಮ ಅಮಾಯಕತನ ಮತ್ತು ಅಸಡ್ಡೆ ನೆರೆ ರಾಜ್ಯಗಳಿಗೆ ಅನುಕೂಲವಾಗಿದೆ. ಸದ್ಯ ಕೇಂದ್ರದ ಅನುಮತಿ ಬಾಕಿ ಇರುವ, ಅನ್ಯ ರಾಜ್ಯಗಳು ತಗಾದೆ ತೆಗೆದಿರುವ ಯೋಜನೆಗಳನ್ನೇ ತೆಗೆದುಕೊಳ್ಳಿ. ಮೇಕೆದಾಟು ಹಲವು ದಶಕಗಳ ಹಿಂದೆಯೇ ಜಾರಿಯಾಗಬೇಕಿದ್ದ ಯೋಜನೆ. ಈ ಅಣೆಕಟ್ಟೆಯಿಂದ ನಮಗಿಂತಲೂ ತಮಿಳುನಾಡಿಗೆ ಹೆಚ್ಚು ಅನುಕೂಲ. ಆದರೆ ರಾಜಕೀಯ ಕಾರಣಗಳಿಗಾಗಿ ಅಲ್ಲಿನ ಸರಕಾರ ಈ ಯೋಜನೆಗೆ ಅಡ್ಡಗಾಲು ಹಾಕಿದೆ. ಆಲಮಟ್ಟಿ ಅಣೆಕಟ್ಟನ್ನು 524.25 ಮೀಟರ್‌ಗೆ ಎತ್ತರಿಸಲು ಸುಪ್ರೀಂಕೋರ್ಟ್ ಹಲವು ವರ್ಷಗಳ ಹಿಂದೆಯೇ ಅನುಮತಿ ನೀಡಿದೆ. ಇದರ ಗೆಜೆಟ್ ನೋಟಿಫಿಕೇಶನ್‌ಗೆ ಕೇಂದ್ರ ಸರಕಾರ ಇನ್ನೂ ಮನಸ್ಸು ಮಾಡಿಲ್ಲ. ಈಗ ಆಂಧ್ರಪ್ರದೇಶ, ಮಹಾರಾಷ್ಟ್ರದ ಜತೆ ತೆಲಂಗಾಣವೂ ಈ ವ್ಯಾಜ್ಯದಲ್ಲಿ ಭಾಗಿಯಾಗಿವೆ. ದಶಕಗಳಿಂದ ಶುದ್ಧ ಕುಡಿಯುವ ನೀರಿಗಾಗಿ ಹಪಹಪಿಸುವ ಕೋಲಾರ ಮತ್ತು ಬೆಂಗಳೂರು ಗ್ರಾಮಾಂತರ ಭಾಗದ ಜನತೆಗೆ ಆಸರೆಯಾಗಬಹುದಾಗಿದ್ದ ದಕ್ಷಿಣ ಪಿನಾಕಿನಿ ಯೋಜನೆಗೂ ಈಗ ತಮಿಳುನಾಡು ತಕರಾರು ಎತ್ತಿದೆ.

ನೆರೆ ರಾಜ್ಯಗಳು ಬೆಳೆ ಸಂರಕ್ಷಣೆ ಮತ್ತು ಕುಡಿಯುವ ನೀರಿನ ಉದ್ದೇಶಕ್ಕಾಗಿ ನೀರು ಕೇಳಿದಾಗ ಉದಾರವಾಗಿ ನೀರು ಕೊಟ್ಟವರು ನಾವು. ಆದರೆ ಕುಡಿಯುವ ನೀರಿನ ಉದ್ದೇಶಕ್ಕೆ ನೀರು ಬಿಡುಗಡೆ ಮಾಡಿಸಿಕೊಳ್ಳಲು ನಾವು ನೆರೆ ರಾಜ್ಯಕ್ಕೆ ಹಣ ತೆತ್ತಿರುವ ಉದಾಹರಣೆಗಳಿವೆ. ನಮ್ಮ ಉದಾರ ಚರಿತೆಯ ಬಗ್ಗೆ ಒಂದಿಷ್ಟು ಮಾಹಿತಿ ಇದ್ದರೆ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಯೊಬ್ಬರು ಕರ್ನಾಟಕವನ್ನು ಜಗಳಗಂಟಿ ಎಂದು ಕರೆಯುತ್ತಿರಲಿಲ್ಲ. ಕಾಸರಗೋಡು ಅಪ್ಪಟ ಕನ್ನಡ ನೆಲವೆಂದು ಗೊತ್ತಿದ್ದರೂ, ನಾವು ಈ ಭಾಗವನ್ನು ಉಳಿಸಿಕೊಳ್ಳಲು ಹಠ ಹಿಡಿಯಲಿಲ್ಲ. ಬೆಂಗಳೂರು-ಮುಂಬೈ ನಡುವೆ ಸಂಪರ್ಕ ಸೇತುವಾಗಬೇಕಿದ್ದ ಕೊಂಕಣ ರೈಲ್ವೆಯನ್ನು ಕೇರಳ ಪೂರ್ತಿಯಾಗಿ ತನ್ನ ಅನುಕೂಲಕ್ಕೆ ಬಳಸಿಕೊಂಡರೂ ನಾವು ಕಮಕ್, ಕಿಮಕ್ ಅಂದಿಲ್ಲ. ಇನ್ನೊಂದೆಡೆ ನಮ್ಮದೇ ನೆಲ ಬೆಳಗಾವಿಯಲ್ಲಿ ಕನ್ನಡಿಗರ ಮೇಲೆ ದೌರ್ಜನ್ಯ ನಡೆದರೂ ಸಹಿಸಿಕೊಂಡು ಬಂದಿದ್ದೇವೆ. ನಮ್ಮ ರಾಜಧಾನಿ ಬೆಂಗಳೂರನ್ನೂ ಇಡಿಯಾಗಿ ಅಖಿಲ ಭಾರತೀಯರಿಗೆ ಬಿಟ್ಟುಕೊಟ್ಟಿದ್ದೇವೆ. ನಾವು ಇನ್ನೆಷ್ಟು ಉದಾರಿಗಳಾಗಲು ಸಾಧ್ಯ ?

ಬಂಡೀಪುರದಲ್ಲಿ ಕೇರಳ ಬಂಡಿ

ಬಂಡೀಪುರ ಅರಣ್ಯದಲ್ಲಿ ಹಾದು ಹೋಗುವ ರಾಷ್ಟ್ರೀಯ ಹೆದ್ದಾರಿ 766ರಲ್ಲಿ ರಾತ್ರಿ ವಾಹನ ಸಂಚಾರಕ್ಕೆ ಅವಕಾಶ ದೊರೆತರೆ ನಮ್ಮ ನಮ್ಮ ಹೃದಯ ವೈಶಾಲ್ಯಕ್ಕೆ ಇನ್ನೊಂದು ಗರಿ ಮೂಡಬಹುದು. ವಯನಾಡು ಲೋಕಸಭೆ ಉಪ ಚುನಾವಣೆ ವೇಳೆ, ಪಕ್ಷದ ಅಭ್ಯರ್ಥಿ ಪ್ರಿಯಾಂಕಾ ಗಾಂಧಿ ಅವರು 'ಬಂಡೀಪುರದಲ್ಲಿ ರಾತ್ರಿ ವಾಹನ ಸಂಚಾರಕ್ಕೆ ಅವಕಾಶ ಕಲ್ಪಿಸುವ ವಿಚಾರ ನನಗೆ ಬಿಡಿ' ಎಂದು ಹೇಳಿದ್ದರು. ಇಲ್ಲಿನ ಸಂಸದೆಯಾಗಿ ಆಯ್ಕೆಯಾದ ತಮ್ಮ ನಾಯಕಿಯ ಮಾತನ್ನು ನೆರವೇರಿಸಲು, ರಾಜ್ಯದ ನಾಯಕರು ಈ ವಿಚಾರ ನಮಗೆ ಬಿಡಿ ಎಂದಿದ್ದಾರೆ.

ಮೊನ್ನೆ ದಿಲ್ಲಿಯಲ್ಲಿ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಅವರನ್ನು ಭೇಟಿ ಮಾಡಿದ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅರಣ್ಯ ಸಚಿವ ಈಶ್ವರ್ ಬಿ ಖಂಡ್ರೆ, ಎರಡೂ ರಾಜ್ಯಗಳ ಬಾಂಧವ್ಯವನ್ನು ಗಮನದಲ್ಲಿಟ್ಟುಕೊಂಡು ಬಂಡೀಪುರದಲ್ಲಿ ವಾಹನ ಸಂಚಾರಕ್ಕೆ ಅನುಮತಿ ನೀಡುವ ಬಗ್ಗೆ ನಿರ್ಧಾರ ಕೈಗೊಳ್ಳಲಾಗುವುದೆಂದು ತಿಳಿಸಿದ್ದರು. ಡಿಸಿಎಂ ಡಿಕೆ ಶಿವಕುಮಾರ್ ಅವರಂತೂ ವಯನಾಡಿನ ನೆಲದಲ್ಲಿಯೇ ವಾಹನ ಸಂಚಾರ ನಿಷೇಧ ತೆರವು ಬಗ್ಗೆ ಪರಿಶೀಲಿಸುವ ಭರವಸೆ ನೀಡಿದ್ದರು.

ಬಂಡೀಪುರ ಅಭಯಾರಣ್ಯ ದೇಶದಲ್ಲಿಯೇ ಅತಿ ಹೆಚ್ಚು ಹುಲಿ, ಆನೆಗಳು ಮತ್ತು ಇತರ ಸಸ್ತನಿಗಳ ಆವಾಸ ಸ್ಥಾನವಾಗಿರುವುದು ನಮ್ಮ ಸಚಿವರಿಗೆ ತಿಳಿಯದ ವಿಚಾರವೇನಲ್ಲ. ಈ ಅಭಯಾರಣ್ಯದೊಳಗೆ ಹಾದು ಹೋಗುವ ಕೇರಳ ಮತ್ತು ತಮಿಳುನಾಡಿಗೆ ಸಂಪರ್ಕ ಕಲ್ಪಿಸುವ ಹೆದ್ದಾರಿಯಲ್ಲಿ ರಾತ್ರಿ ಸಂಚಾರವನ್ನು ನಿಷೇಧಿಸುವ ಮುಂಚೆ 2004-2009ರ ನಡುವೆ 93 ವನ್ಯ ಪ್ರಾಣಿಗಳು ರಸ್ತೆ ಅವಘಡದಲ್ಲಿ ಮೃತಪಟ್ಟಿದ್ದವು. ನಿಷೇಧ ಹೇರಿದ ಬಳಿಕ 2010-2018ರಲ್ಲಿ ಈ ಸಂಖ್ಯೆ 34ಕ್ಕೆ ಇಳಿದಿತ್ತು. ಈ ಕಾರಣಕ್ಕಾಗಿಯೇ ಸುಪ್ರೀಕೋರ್ಟ್ ಸಂಚಾರ ನಿರ್ಬಂಧದ ರಾಜ್ಯದ ತೀರ್ಮಾನವನ್ನು ಎತ್ತಿ ಹಿಡಿದಿದೆ.

ಕೇರಳ ಸರಕಾರ ಈ ಸಂಬಂಧ ಸುಪ್ರೀಂಕೋರ್ಟ್‌ನಲ್ಲಿ ಸಲ್ಲಿಸಿರುವ ಮೇಲ್ಮನವಿ ವಿಚಾರಣೆ ಬಾಕಿ ಇರುವಾಗಲೇ ಎರಡೂ ರಾಜ್ಯಗಳ ಬಾಂಧವ್ಯದ ಮೇಲೆ ತೀರ್ಮಾನ ಕೈಗೊಳ್ಳಲು ರಾಜ್ಯಸರಕಾರಕ್ಕೂ ಅವಕಾಶವಿಲ್ಲ. ಆದರೆ ರಾಜ್ಯದ ನಾಯಕರು ತಮ್ಮ ನಾಯಕಿಯ ಮಾತನ್ನು ನೆರವೇರಿಸಲೇಬೇಕೆಂಬ ಹುಮ್ಮಸ್ಸು ತೋರಿದರೆ ಸರ್ವೋಚ್ಚ ನ್ಯಾಯಾಲಯದಲ್ಲಿ ರಾಜ್ಯದ ವಾದವನ್ನು ದುರ್ಬಲಗೊಳಿಸಲು ಅವಕಾಶವಿದೆ. ಅರಣ್ಯ ನಾಶದ ನೆಪ ಇಟ್ಟುಕೊಂಡು ನಮ್ಮದೇ ರಾಜ್ಯದ ಹುಬ್ಬಳ್ಳಿ - ಅಂಕೋಲಾ ರೈಲ್ವೆ ಮಾರ್ಗಕ್ಕೆ, ಸಕಲೇಶಪುರ- ಸುಬ್ರಮಣ್ಯ ನಡುವಣ ದ್ವಿಪಥ ಪರಿವರ್ತನೆಗೆ ಅರಣ್ಯ ಭೂಮಿ ಬಿಟ್ಟು ಕೊಡಲು ಒಪ್ಪದ ನಮ್ಮ ನಾಯಕರು ಅನ್ಯ ರಾಜ್ಯಗಳ ಕೋರಿಕೆ ಕ್ಷಿಪ್ರವಾಗಿ ಸ್ಪಂದಿಸುವ ಈ ಪರಿಯೇ ಸೋಜಿಗ.

ಸದ್ಯಕ್ಕೆ ನಮ್ಮ ಉದಾರ ಚರಿತೆಗೆ ಸ್ವಲ್ಪವಾದರೂ ಕಡಿವಾಣ ಹಾಕಿ ರಾಜ್ಯದ ನೆಲ, ಜಲ, ಭಾಷೆಯ ಸಂರಕ್ಷಣೆ ದೃಷ್ಟಿಯಿಂದ ಗಟ್ಟಿ ನಿರ್ಧಾರ ತೆಗೆದುಕೊಳ್ಳಬೇಕಾದ ಕಾಲವಿದು. ಈ ನಿಟ್ಟಿನಲ್ಲಿ ನಾಯಕರ ಬದಲು ಪ್ರಭುಗಳಾದ ನಾವೇ ಧ್ವನಿ ಎತ್ತಬೇಕಾಗಿದೆ.

ಔರಂಗಜೇಬನ ಬಗ್ಗೆ ಆರ್‌ಎಸ್‌ಎಸ್ ನಿಲುವು ಸಂಪೂರ್ಣ ಸರಿ



ಅಕ್ಬರ್‌ನಾಮಾ

ಎಂ.ಜೆ.ಅಕ್ಬರ್
vveditoped@gmail.com

ರಾಷ್ಟ್ರೀಯ ಸ್ವಯಂಸೇವಕ ಸಂಘ (ಆರ್‌ಎಸ್‌ಎಸ್) ಹೇಳಿದ್ದು ನೂರಕ್ಕೆ ನೂರು ಸರಿ. ಈಗಿನ ಭಾರತಕ್ಕೆ ಔರಂಗಜೇಬನೆಂಬ ವ್ಯಕ್ತಿಯೇ ಅಪ್ರಸ್ತುತ. ಹಾಗೆ ನೋಡಿದರೆ ಔರಂಗಜೇಬ ಪಾಕಿಸ್ತಾನದ ಪಿತಾಮಹ. ಅವನು ಪಾಕ್‌ಗೆ ಸೈದ್ಧಾಂತಿಕ ಮೂಲಪುರುಷ. ಪಾಕಿಸ್ತಾನ ಹುಟ್ಟಿಕೊಂಡಿದ್ದು ಮುಸ್ಲಿಮರ ಮೇಲಿನ ಪ್ರೀತಿಯಿಂದಲ್ಲ, ಬದಲಿಗೆ ಹಿಂದೂಗಳ ಮೇಲಿನ ದ್ವೇಷದಿಂದ. ಬ್ರಿಟಿಷರ ಜತೆಗೆ ಚೆನ್ನಾಗಿ ಹೊಂದಾಣಿಕೆ ಮಾಡಿಕೊಂಡಿದ್ದ 'ತ್ರೀ ಪೀಸ್ ಸೂಟ್'ನ ಮೊಹಮ್ಮದ್ ಅಲಿ ಜಿನ್ನಾ ಪಾಕಿಸ್ತಾನದ ಸೂಲಗಿತ್ತಿಯಾಗಿದ್ದರಷ್ಟೆ.

ತನ್ನ ಆಳ್ವಿಕೆಯ ಕಾಲದಲ್ಲಿ ಔರಂಗಜೇಬ ಹಿಂದೂಗಳು ಮತ್ತು ಮುಸ್ಲಿಮರ ನಡುವೆ ಇದ್ದ ಮತಭೇದವನ್ನು ಅಧಿಕೃತ ಮೌಲ್ಯವೆಂಬಂತೆ ಬೇರ್ಪಡಿಸಿ ಎರಡೂ ಧರ್ಮಗಳ ನಡುವಿನ ಅಂತರವನ್ನು ಸಾಂಸ್ಥಿಕಗೊಳಿಸಿದ್ದ. ಅವನ ಕಾಲದಲ್ಲೂ ಹಿಂದೂಗಳು ಮತ್ತು ಮುಸ್ಲಿಮರ ನಡುವೆ ದೈನಂದಿನ ಜೀವನದಲ್ಲಿ ಭಾಷೆ ಮತ್ತು ಸಂಸ್ಕೃತಿಯಲ್ಲಿ ಸಮನ್ವಯವಿತ್ತು. ಆದರೆ ಅದನ್ನು ಅವನು ತಲೆಕೆಳಗು ಮಾಡಿದ. ಉದಾಹರಣೆಗೆ, ಅವರಿಗೆ ಹೋಳಿ ಹಬ್ಬವನ್ನು ಆಚರಣೆ ಮಾಡುವುದು ಅಥವಾ ತಿಲಕವಿಡುವ ಪದ್ಧತಿಯನ್ನು ಎರಡೂ ಧರ್ಮದವರೂ ಅನುಸರಿಸುತ್ತಿದ್ದರು. ಅದೊಂದು ಸಹಜ ಸಾಮಾಜಿಕ ಪದ್ಧತಿಯಂತೆ ಇತ್ತು. ಅದು ಔರಂಗಜೇಬನ ಕಾಲದಲ್ಲಿ ನಿಂತಿತು. ಬ್ರಿಟಿಷರು ಈ ಅಂತರವನ್ನು ತಮ್ಮ ಲಾಭಕ್ಕೆ ಬಳಸಿಕೊಂಡು, ಎರಡೂ ಧರ್ಮೀಯರ ನಡುವೆ ಇದ್ದ ಭಿನ್ನಮತವನ್ನು ಇನ್ನಷ್ಟು ಪೋಷಿಸಿ, ಕಾನೂನುಬದ್ಧವಾಗಿಯೇ ಉಭಯತ್ರರನ್ನು ಬೇರ್ಪಡಿಸಿದರು. ಉದಾಹರಣೆಗೆ, ರೈಲ್ವೆ ನಿಲ್ದಾಣಗಳಲ್ಲಿ 'ಹಿಂದೂ ನೀರು' ಮತ್ತು 'ಮುಸ್ಲಿಂ ನೀರು' ಎಂದು ಪ್ರತ್ಯೇಕವಾಗಿ ಇರಿಸಲು ಆರಂಭಿಸಿದ್ದು ಬ್ರಿಟಿಷರು. ಪ್ರತ್ಯೇಕ ಮತದಾರರ ಪಟ್ಟಿಯಂಥ ವ್ಯವಸ್ಥೆಗಳನ್ನು ತಂದು ಶಾಸನಬದ್ಧವಾಗಿಯೇ ಅವರು ಮತಭೇದವನ್ನು ಸಾಂಸ್ಥಿಕಗೊಳಿಸಿದರು. ಮುಸ್ಲಿಮರಿಗೆ ಪ್ರತ್ಯೇಕ ಮತದಾರರ ಪಟ್ಟಿ ತಯಾರಿಸುವಂಥ ವ್ಯವಸ್ಥೆಯೇ ಮುಂದೆ ಬೇರೆ ಬೇರೆ ತಿರುವು ಪಡೆದು ದೇಶ ವಿಭಜನೆಯವರೆಗೂ ಹೋಯಿತು. ಆದರೆ ಉಭಯ ಧರ್ಮೀಯರ ನಡುವೆ ಒಂದು ಸಂಪರ್ಕದ ತಂತುವಂತೂ ಹಾಗೇ ಉಳಿದಿತ್ತು.

ಆಧುನಿಕ ಭಾರತದ ಭವಿಷ್ಯವನ್ನು ಇಂಥ ಐತಿಹಾಸಿಕ ಮತ್ತು ದ್ವೇಷಮಯ ಮತಾಂಧತೆಯಿಂದ ಕಟ್ಟಲು ಸಾಧ್ಯವಿಲ್ಲ. ನಮ್ಮ ದೇಶವೀಗ ಬೆಳೆದು ನಿಂತಿರುವ ರೀತಿಯೇ ಅದಕ್ಕೆ ನಿದರ್ಶನ. ಉಜ್ವಲ ಭವಿಷ್ಯವನ್ನು ಕಟ್ಟಿಕೊಳ್ಳುವ ಭಾರತದ ತಾಕತ್ತಿಗೆ ನಾವೀಗ ಬದುಕುತ್ತಿರುವ ಕಾಲಘಟ್ಟವೇ ಸಾಕ್ಷಿ. ನಾವು ಹಿಂದೆ ನೋಡುತ್ತಾ, ಹಳೆಯ ದ್ವೇಷವನ್ನೇ ಮೆಲುಕು ಹಾಕುತ್ತಾ ಕುಳಿತುಕೊಳ್ಳುವ ಜನರಲ್ಲ. ಭಾರತ ಇಂದು 21ನೇ ಶತಮಾನದ ಹೊಳೆಯುವ ನಕ್ಷತ್ರವಾಗಿದ್ದರೆ, ಪಾಕಿಸ್ತಾನ ತನ್ನದೇ ಎಡವಟ್ಟುಗಳಿಂದ 19ನೇ ಶತಮಾನಕ್ಕೆ ಕುಸಿದಿದೆ. ಅದಕ್ಕೆ ಕಾರಣ ಎರಡೂ ದೇಶಗಳ ಜನರು ಬೇರೆ ಬೇರೆ ಎಂಬುದಲ್ಲ. ನಿಜವಾದ ಕಾರಣ ಎರಡೂ ದೇಶಗಳು ಹೇಗೆ ತಮ್ಮನ್ನು ತಾವು ನಿರ್ಮಿಸಿಕೊಳ್ಳಬೇಕು ಎಂಬುದನ್ನು ನಿರ್ಧರಿಸಿದ ರೀತಿಯಲ್ಲಿರುವ ವ್ಯತ್ಯಾಸ.

ಆರ್‌ಎಸ್‌ಎಸ್‌ನ ಉನ್ನತ ನಾಯಕರು ಯಾರಾದರೂ ಮಾತನಾಡಿದರೆ ಅವರು ತಮ್ಮ ವೈಯಕ್ತಿಕ ಅಭಿಪ್ರಾಯವನ್ನು ಹೇಳುತ್ತಿರುವುದಿಲ್ಲ, ಅಂಥ ಸ್ವಾತಂತ್ರ್ಯವನ್ನು ಅವರು ತೆಗೆದುಕೊಳ್ಳುವುದಿಲ್ಲ. ದೇಶದ ರಾಜಕೀಯ ಸಂಸ್ಕೃತಿಯಲ್ಲಿ ಕೈಯಾಡಿಸುವುದು ಆರ್‌ಎಸ್‌ಎಸ್‌ಗೆ ಬೇಕಿಲ್ಲ. ಆರ್‌ಎಸ್‌ಎಸ್‌ನಲ್ಲಿ ಅಪ್ಪಟ ಪ್ರಾಯೋಗಿಕ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಾರೆ. ಅದರ ಹಿಂದೆ ಒಂದು ಶಿಸ್ತುಬದ್ಧ ಪ್ರಕ್ರಿಯೆಯಿರುತ್ತದೆ. ಆರ್‌ಎಸ್‌ಎಸ್‌ನ ವಕ್ತಾರರು ಹೊರಗೆ ಮಾತನಾಡುವಾಗ ಆ ಕ್ಷಣಕ್ಕೆ ತೋಚಿದ್ದನ್ನು ಯಾವತ್ತೂ ಹೇಳುವುದಿಲ್ಲ, ಅವರು ತಾವೇ ಏನನ್ನೂ ಹುಟ್ಟಿಸಿಕೊಂಡು ಮಾತನಾಡುವುದಿಲ್ಲ ಅಥವಾ ನಿರ್ದಿಷ್ಟ ಘಟನೆಗಳ ಜತೆಗೆ ತಮಗಿರುವ ಸಂಬಂಧವನ್ನೂ ಮಧ್ಯೆ ತರುವುದಿಲ್ಲ. ರಾಜಕೀಯ ಪಕ್ಷಗಳ ವಕ್ತಾರರು ತೆಗೆದುಕೊಳ್ಳುವ ಸ್ವಾತಂತ್ರ್ಯವನ್ನು ಆರ್‌ಎಸ್‌ಎಸ್ ವಕ್ತಾರರು ತೆಗೆದುಕೊಳ್ಳುವುದಿಲ್ಲ. ಯಾವುದೇ ವಿಷಯದ ಬಗ್ಗೆ ಸಂಘ ಒಂದು ನಿಲುವು ಪ್ರಕಟಿಸುತ್ತದೆ ಅಂದರೆ ಅದರ ಹಿಂದೆ ಸಾಕಷ್ಟು ಚಿಂತನ ಮಂಥನಗಳು, ಸಮಾಲೋಚನೆಗಳು ಹಾಗೂ ಚರ್ಚೆಗಳು ನಡೆದಿರುತ್ತವೆ. ಇದನ್ನು ಒಪ್ಪಿಕೊಳ್ಳಲು ನೀವು ಆರ್‌ಎಸ್‌ಎಸ್ ಸಂಘಟನೆಯ ಬಗ್ಗೆ ಒಲವು ಹೊಂದಿರುವ ವ್ಯಕ್ತಿಯೂ ಆಗಿರಬೇಕಿಲ್ಲ ಅಥವಾ ಭಿನ್ನಮತ ಹೊಂದಿರುವವರೂ ಆಗಿರಬೇಕಿಲ್ಲ.

ಇತ್ತೀಚೆಗೆ ಮಹಾರಾಷ್ಟ್ರದ ನಾಗ್ಪುರದಲ್ಲಿ ಆರನೇ ಶತಮಾನದ ಮೊಘಲ್ ರಾಜ ಔರಂಗಜೇಬನ ಸಮಾಧಿಯ ಕುರಿತು ವಿವಾದ ಭುಗಿಲೆದ್ದಾಗ ಆರ್‌ಎಸ್‌ಎಸ್‌ನ ಪ್ರಚಾರ ಪ್ರಮುಖ ಸುನಿಲ್ ಅಂಬೇಕರ್ ಮಾತನಾಡಿ, ''21ನೇ ಶತಮಾನದ ಭಾರತಕ್ಕೆ ಔರಂಗಜೇಬ ಪ್ರಸ್ತುತ ಅಲ್ಲ'' ಎಂದು ಹೇಳಿದರು. ಬಳಿಕ ಸಂಘದ ಪ್ರಭಾವಿ ಪ್ರಧಾನ ಕಾರ್ಯದರ್ಶಿ ದತ್ತಾತ್ರೇಯ ಹೊಸಬಾಳೆ ಮಾತನಾಡಿ, ''ನಮಗೆ ಭಾರತೀಯ ಸಂಸ್ಕೃತಿಯ ಮೌಲ್ಯಗಳನ್ನು ಗೌರವಿಸುವ ಹಾಗೂ ಸಹಬಾಳ್ವೆಯ ತತ್ವದ ಮೇಲೆ ಎದ್ದುನಿಂತ ಸಶಕ್ತ ದೇಶ ಬೇಕಿದೆ'' ಎಂದು ಹೇಳಿದರು. ಇವರಿಬ್ಬರೂ ಈ ಮಾತುಗಳನ್ನು ಹೇಳುವುದಕ್ಕಿಂತ ಮುಂಚೆ ಆರ್‌ಎಸ್‌ಎಸ್ ಒಳಗೆ ಸಾಕಷ್ಟು ಚರ್ಚೆಗಳು ನಡೆದಿದ್ದವು. ದೇಶ ಇಂಥ ವಿಷಯಗಳಲ್ಲಿ ಯಾವ ನಿಲುವನ್ನು ತೆಗೆದುಕೊಳ್ಳಬೇಕು ಎಂದು ಆರ್‌ಎಸ್‌ಎಸ್ ಒಂದು ಸಂಸ್ಥೆಯಾಗಿ ಬಯಸುತ್ತದೆಯೋ ಅದನ್ನೇ ಅವರು ಸ್ಪಷ್ಟವಾಗಿ ತಿಳಿಸಿದ್ದರು. ಸಂಸ್ಕೃತಿ ಅಂದರೆ ನಂಬಿಕೆ ಅಲ್ಲ. ಇವೆರಡನ್ನೂ ಒಂದೇ ಎಂದು ಬಿಂಬಿಸಲು ಸಾಕಷ್ಟು ಪ್ರಯತ್ನಿಸಿದ ಮೂಢರು ಇದ್ದಾರಾದರೂ ಇವು ಯಾವತ್ತಿದ್ದರೂ ಪ್ರತ್ಯೇಕ ಸಂತಿಗಳೇ. ಬೇಕಿದ್ದರೆ ಗಮನಿಸಿ ನೋಡಿ. ಇಂಡೋನೇಷ್ಯಾದ ಬಹುತೇಕ ಜನರು ಮತ್ತು ಅರಬ್ ರಾಷ್ಟ್ರಗಳ ಜನರು ಹೆಚ್ಚುಕಮ್ಮಿ ಒಂದೇ ನಂಬಿಕೆಯನ್ನು ಹೊಂದಿದ್ದಾರೆ. ಆದರೆ ಅವರಿಬ್ಬರ ಸಂಸ್ಕೃತಿಗಳೂ ಬೇರೆ ಬೇರೆ. ಹಿಂದೂ ಮತ್ತು ಮುಸ್ಲಿಂ ಇಂಡೋನೇಷ್ಯನ್ನರು 'ಬಹಸಾ' ಎಂಬ ಒಂದೇ ಭಾಷೆ ಮಾತನಾಡುತ್ತಾರೆ, ಆದರೆ ಅರಬ್ ಕ್ರಿಶ್ಚಿಯನ್ನರು ಅರೇಬಿಕ್ ಮಾತನಾಡುತ್ತಾರೆ.

ಪ್ರತಿ ಭಾಷೆಗೂ ಒಬ್ಬೊಬ್ಬ ಪ್ರವಾದಿಯನ್ನು ಅಲ್ಲಾ ಕಳುಹಿಸಿದ್ದ ಎಂದು ಕುರಾನ್ ಹೇಳುತ್ತದೆ. ಏಕೆಂದರೆ ಭಾಷೆ ಕೂಡ ದೇವರ ಸೃಷ್ಟಿ. ಅವನು ತಾನೇ ಸೃಷ್ಟಿಸಿದ ಭಾಷೆಗಳ ನಡುವೆ ತಾರತಮ್ಯ ಮಾಡಲು ಸಾಧ್ಯವಿಲ್ಲ. ಧರ್ಮವನ್ನು ನಂಬುವವರಿಗೆ ನಾವೆಲ್ಲರೂ ದೇವರ ಸೃಷ್ಟಿಗಳು. ಕುರಾನ್ ಗ್ರಂಥವನ್ನು ಬಾಯಿಪಾಠ ಮಾಡಿಕೊಂಡವರು ಹೇಳುವಂತೆ ಔರಂಗಜೇಬನಿಗೂ 'ಲಾ ಕುಮ್ ದೀನ್ ಓ ಕುಮ್ ವಾ ಇಲ್ ಯಾ ದೀನ್' ಎಂಬ ಸಾಲು ಬಾಯಿಪಾಠವಿತ್ತು. 'ನಿನ್ನ ನಂಬಿಕೆ ನಿನ್ನದು, ನನ್ನ ನಂಬಿಕೆ ನನ್ನದು' ಎಂಬುದು ಇದರ ಅರ್ಥ. ಇದನ್ನು ಕಂಠಪಾಠ ಮಾಡಿಕೊಂಡು ಹೇಳುತ್ತಿದ್ದ ಔರಂಗಜೇಬ ಈ ವಾಕ್ಯದ ಅರ್ಥವನ್ನು ತಿಳಿದುಕೊಳ್ಳುವ ಗೋಜಿಗೇ ಹೋಗಲಿಲ್ಲ, ಏಕೆಂದರೆ ಇದರ ಅರ್ಥವು ಔರಂಗಜೇಬನ ಪೂರ್ವಗ್ರಹಗಳಿಗೆ ವಿರುದ್ಧವಾಗಿದ್ದವು.

ನಮ್ಮ ನಂಬಿಕೆ ಮತ್ತು ದೃಷ್ಟಿಕೋನಗಳಿಗೆ ಎಷ್ಟೊಂದು ಕತ್ತಲು ಬಳಿಯಲಾಗಿದೆ ಅಂದರೆ, ದೇಶದ ಹಿತಕ್ಕಾಗಿ ನಾವು ಸಮಗ್ರವಾಗಿ ಮತ್ತು ಸಮತೋಲಿತವಾಗಿ ಯೋಚಿಸಲು ಆಗಾಗ ನಮ್ಮ ಚಿಂತನೆಗಳನ್ನು ನಾವೇ ಮರುಜೋಡಣೆ ಮಾಡಿಕೊಳ್ಳುವ ಅಗತ್ಯ ಉದ್ಭವಿಸಿದೆ. ಉದಾಹರಣೆಗೆ, ಔರಂಗಜೇಬನ ಕಾಲದಲ್ಲಿ ಜಾರಿಗೆ ತಂದಿದ್ದ ತೆರಿಗೆ ಪದ್ಧತಿಯನ್ನೇ ತೆಗೆದುಕೊಳ್ಳಿ. ಬಹುಶಃ ಅದನ್ನು ವಿಭಿನ್ನ ಧರ್ಮೀಯರ ನಡುವೆ ದ್ವೇಷ ಬೆಳೆಸುವುದಕ್ಕೆಂದೇ ಜಾರಿಗೆ ತರಲಾಗಿತ್ತು. 1679ರಲ್ಲಿ ಜಜಿಯಾ ಎಂಬ ತೆರಿಗೆಯನ್ನು ಔರಂಗಜೇಬ ವಿಧಿಸಲು ಆರಂಭಿಸಿದ್ದ. ಅದರ ವಿರುದ್ಧ ಜನರು ದಂಗೆಯೆದ್ದರು. ಎಲ್ಲೆಡೆ ಪ್ರತಿಭಟನೆಗಳು ಮತ್ತು ಹಿಂಸಾಚಾರಗಳು ನಡೆದವು. ಕೊನೆಗೆ ಆ ತೆರಿಗೆಯು ಮೊಘಲರು ಮತ್ತು ರಜಪೂತರ ನಡುವಿನ ಮೈತ್ರಿಗೇ ಭಂಗ ತಂದಿತು.

ಇಲ್ಲೊಂದು ಸಂಗತಿಯನ್ನು ಗಮನಿಸಬೇಕು. ಔರಂಗಜೇಬನಿಗೂ ಮುನ್ನ ನೂರಾರು ವರ್ಷಗಳ ಕಾಲ ದೇಶವನ್ನಾಳಿದ್ದ ಮೊಘಲರು ಈ ಮತೀಯ ತೆರಿಗೆಯನ್ನು ರದ್ದುಪಡಿಸಿದ್ದರು. ಅಕ್ಬರ್ ಕಟ್ಟಿದ ಮೊಘಲ್ ಸಾಮ್ರಾಜ್ಯದ ಸಹಬಾಳ್ವೆಯ ಸಂಸ್ಕೃತಿಗೆ ಇಂಥ ಮತೀಯ ತಾರತಮ್ಯವು ಮಾರಕ ಎಂದು ಆ ರಾಜರು ನಂಬಿದ್ದರು. ಸ್ವತಃ ಅಕ್ಬರನ ತಮ್ಮ ಮೊಹಮ್ಮದ್ ಹಕೀಮನೇ ಸಂಪ್ರದಾಯಸ್ಥ ಮುಸ್ಲಿಮರ ತಲೆಕೆಡಿಸಿ 'ಅಕ್ಬರ್ ಒಬ್ಬ ಧರ್ಮಭ್ರಷ್ಟ ರಾಜ' ಎಂದು ಬಿಂಬಿಸಲು ಹೊರಟಿದ್ದ. ಅವನ ನೇತೃತ್ವದಲ್ಲಿ ದಂಗೆ ಕೂಡ ನಡೆದಿತ್ತು. ಆದರೆ ಕಾಬೂಲ್‌ನಲ್ಲಿ ರಾಜಾ ಮಾನ್‌ಸಿಂಗ್ ಈ ಬಂಡುಕೋರರನ್ನು ನಾಮಾವಶೇಷ ಮಾಡಿದ.

ಚೋದ್ಯವೆಂಬಂತೆ ಔರಂಗಜೇಬನ ಜಜಿಯಾ ತೆರಿಗೆ ಕೂಡ ಮೊಘಲರ ಬೊಕ್ಕಸಕ್ಕೆ ಸಾಕಷ್ಟು ಹಣ ಹರಿದು ಬರುವಂತೆ ಮಾಡಲಿಲ್ಲ. ಏಕೆಂದರೆ ಅಧಿಕಾರಿಗಳಲ್ಲಿ ಅಷ್ಟೊಂದು ಭ್ರಷ್ಟಾಚಾರವಿತ್ತು. ತನ್ಮೂಲಕ, ಪೂರ್ವಗ್ರಹಗಳಿಗಿಂತ ಭ್ರಷ್ಟಾಚಾರವೇ ಹೆಚ್ಚು ಶಕ್ತಿಶಾಲಿ ಎಂಬುದು ಸಾಬೀತಾಯಿತು. ''ಜಜಿಯಾ ತೆರಿಗೆ ಪದ್ಧತಿಯು ಔರಂಗಜೇಬನಿಗೆ ಪ್ರಭಾವಿ ಉಲೇಮಾಗಳ ಮೇಲೆ ಯಾವುದೇ ಹಿಡಿತವನ್ನು ತಂದುಕೊಡಲಿಲ್ಲ. ಜಜಿಯಾ ತೆರಿಗೆ ಸಂಗ್ರಹಿಸುವವರ ವಿರುದ್ಧ ಹೋರಾಟಗಳು ನಡೆದವು. ಇಡೀ ವ್ಯವಸ್ಥೆ ಅಸ್ತವ್ಯಸ್ತವಾಯಿತು. ಪರಿಣಾಮ, ಜನರಿಂದ ಸಂಗ್ರಹಿಸಿದ ದೊಡ್ಡ ಮೊತ್ತದ ಹಣ ತೆರಿಗೆ ಸಂಗ್ರಾಹಕರ ಕಿಸೆಯನ್ನು ದಾಟಿ ಬೊಕ್ಕಸಕ್ಕೆ ಹೋಗಲೇ ಇಲ್ಲ. ಅಂಥ ಹಗಲು ದರೋಡೆಯನ್ನು ತಡೆಯಲು ಔರಂಗಜೇಬನಲ್ಲಿ ತಾಕತ್ತಿರಲಿಲ್ಲ'' ಎಂದು 'ಔರಂಗಜೇಬ್: ದಿ ಮ್ಯಾನ್ ಆ್ಯಂಡ್ ದಿ ಮಿತ್' ಕೃತಿಯಲ್ಲಿ ಬರೆಯುತ್ತಾರೆ ಇತಿಹಾಸಕಾರ್ತಿ ಔಡ್ರೆ ಟ್ರುಶ್ಕೆ.

1679ರಲ್ಲಿ ಔರಂಗಜೇಬ 'ಝರೋಕಾ ದರ್ಶನ್' ಬಂದ್ ಮಾಡಿದ. ಅದು ಅಕ್ಬರನ ಕಾಲದಲ್ಲಿ ಆರಂಭವಾಗಿದ್ದ ಆಚರಣೆಯಾಗಿತ್ತು. ಅರಮನೆಯ ಬಾಲ್ಕನಿಯಲ್ಲಿ ಪ್ರತಿದಿನ ರಾಜ ಎರಡು ಅಥವಾ ಮೂರು ಬಾರಿ ಬಂದು ನಿಂತು ಪ್ರಜೆಗಳನ್ನು ಉದ್ದೇಶಿಸಿ ಮಾತನಾಡುತ್ತಿದ್ದ. ಆದರೆ ಈ ಆಚರಣೆಯ ಮೂಲ ಹಿಂದೂ ಧರ್ಮದಲ್ಲಿದೆ ಎಂಬ ಕಾರಣಕ್ಕೆ ಔರಂಗಜೇಬ ಇದನ್ನು ನಿಲ್ಲಿಸಿದ. ಅದೇ ರೀತಿ, ಮೊಘಲರು ಹಿಂದೂಗಳನ್ನು ಭೇಟಿಯಾದಾಗ ಹಣೆಗೆ ತಿಲಕ ಇಟ್ಟು ಶುಭ ಕೋರುವ ಸಂಪ್ರದಾಯವಿತ್ತು. ಅದನ್ನೂ ನಿಲ್ಲಿಸಿದ. ಅವನ ಮೌಢ್ಯಾಚರಣೆಯಲ್ಲಿ ಲಿಂಗ ತಾರತಮ್ಯವೂ ಸಾಕಷ್ಟಿತ್ತು. ಮಹಿಳೆಯರು ಮುಸ್ಲಿಂ ಪ್ರಾರ್ಥನಾ ಮಂದಿರಗಳಿಗೆ ತೆರಳುವುದನ್ನು ನಿಷೇಧಿಸಿದ್ದ.

ಔರಂಗಜೇಬ ಇದನ್ನೆಲ್ಲ ನಿಲ್ಲಿಸಬೇಕು ಅಂದರೆ ಈ ಆಚರಣೆಗಳು ಅಲ್ಲಿಯವರೆಗೆ ಭಾರತದಲ್ಲಿ ಶತಮಾನಗಳಿಂದ ಜನಸಾಮಾನ್ಯರ ನಡುವೆ ರೂಢಿಯಲ್ಲಿದ್ದ ಸಹಜವಾದ್ದ ಆಚರಣೆಗಳಾಗಿದ್ದವು.

ಔರಂಗಜೇಬನ ಪರ ವಹಿಸಿಕೊಂಡು ಬರುವವರು ಅವನನ್ನು 21ನೇ ಶತಮಾನದ ದೃಷ್ಟಿಕೋನದಿಂದ ಅಳೆಯಬಾರದು ಎಂದು ಹೇಳುತ್ತಾರೆ. ಅದು ಸರಿಯೇ. ಆದರೆ, ಅವನು ಆ ಕಾಲದಲ್ಲೇ ಅವನದೇ ಕುಟುಂಬ, ಅವನದೇ ತಂದೆ, ಅವನದೇ ತಾತ ಹಾಗೂ ಮುತ್ತಾತನ ದೃಷ್ಟಿಯಿಂದಲೂ ತಪ್ಪಿತಸ್ಥನಾಗಿದ್ದ. ಅವನ ಆಳ್ವಿಕೆಯಲ್ಲಿ ಅಖ್ಲಾಕ್ ಮತ್ತು ಆದಾಬ್‌ಗಳಿರಲಿಲ್ಲ. ಅಂದರೆ ಅವನದು ಮೌಲ್ಯಗಳಿಲ್ಲದ ಮತ್ತು ಸಹಬಾಳ್ವೆಯ ತತ್ವಗಳಿಲ್ಲದ ಆಡಳಿತವಾಗಿತ್ತು. ಅವನ ತಂದೆ ಶಹಜಹಾನ್ ಹೋಳಿ ಹಬ್ಬವನ್ನು 'ಈದ್-ಇ-ಗುಲಾಬಿ' ಎಂಬ ಹೆಸರಿನಲ್ಲಿ ಆಚರಿಸುತ್ತಿದ್ದ. ಅದನ್ನು ಗುಲಾಬಿ ಈದ್ ಎಂದೂ, ಆಬ್-ಎ-ಪಾಶಿ ಅಥವಾ ಹೂವುಗಳ ಹಬ್ಬವೆಂದೂ ಕರೆಯುತ್ತಿದ್ದರು. ಹೋಳಿ ದಿನ, ಅಂದರೆ ಗುಲಾಬಿ ಈದ್ ದಿನ ಶಹಜಹಾನನ ಆಸ್ಥಾನದ ಉನ್ನತ ಅಧಿಕಾರಿಗಳು ವಿಶೇಷವಾಗಿ ವಿನ್ಯಾಸಗೊಳಿಸಿದ ಲೋಹದ ಹೂಜಿಗಳಿಂದ ಪರಸ್ಪರರ ಮೇಲೆ ಗುಲಾಬಿಯ ನೀರು ಸಿಂಪಡಿಸುತ್ತಿದ್ದರು. ಹಿನ್ನೆಲೆಯಲ್ಲಿ ನಗಾರಿಗಳ ಸದ್ದು ಇರುತ್ತಿತ್ತು. ತೆಹ್ಜೀಬ್-ಇ-ಅಖ್ಲಾಕ್ ಅಥವಾ ಸಹಬಾಳ್ವೆಯ ಸಂಕೇತ ಎಂಬ ಹೆಸರಿನಲ್ಲಿ ರಾಜನ ಹಣೆಗೆ ಎಲ್ಲರೂ ಸೇರಿ ಬಣ್ಣ ಹಚ್ಚುತ್ತಿದ್ದರು.

ತನ್ನ ಸಂಕುಚಿತ ದೃಷ್ಟಿಕೋನಕ್ಕೆ ಸರಿಹೊಂದದ ಎಲ್ಲವನ್ನೂ ಬದಲಿಸುವ ಖಯಾಲಿಯನ್ನು ಔರಂಗಜೇಬ ಹೊಂದಿದ್ದ. ಅಲ್ಲಿಯವರೆಗೆ ಇದ್ದ 12 ತಿಂಗಳ ಪರ್ಷಿಯನ್ ಕ್ಯಾಲೆಂಡರನ್ನು ಅವನು ಅರೇಬಿಕ್ ಕ್ಯಾಲೆಂಡರ್‌ಗೆ ಬದಲಿಸಿದ. ಪರ್ಷಿಯನ್ ಕ್ಯಾಲೆಂಡರ್ ಮಾರ್ಚ್‌ನ ನವರೋಜ್‌ನಿಂದ ಆರಂಭವಾಗುತ್ತಿತ್ತು. ಅದನ್ನು ಬದಲಿಸಿದರೆ ತೆರಿಗೆ ಸಂಗ್ರಹಕ್ಕೆ ಸಮಸ್ಯೆಯಾಗುತ್ತದೆ ಎಂದು ಅಧಿಕಾರಿಗಳು ಆಕ್ಷೇಪ ವ್ಯಕ್ತಪಡಿಸಿದರೂ ಔರಂಗಜೇಬ ಕೇಳಲಿಲ್ಲ. ಅವನ ಆಡಳಿತದಲ್ಲಿ ವಾಸ್ತವ ಮತ್ತು ಪ್ರಚಾರದ ನಡುವೆ ಬಹಳ ಅಂತರವಿತ್ತು. ಅವನನ್ನು ಹೊಗಳುವವರು ಔರಂಗಜೇಬ ಬಹಳ ಸರಳವಾದ ಜೀವನ ನಡೆಸುತ್ತಿದ್ದ, ಪವಿತ್ರ ಗ್ರಂಥಗಳ ನಕಲು ಪ್ರತಿಗಳನ್ನು ಬರೆದು ಅದರಿಂದ ಬಂದ ಹಣದಲ್ಲಿ ಹಾಗೂ ನಮಾಜಿನ ಟೋಪಿಗಳನ್ನು ಹೊಲಿದು ಜೀವಿಸುತ್ತಿದ್ದ ಎಂದು ಹೇಳುತ್ತಾರೆ. ಆದರೆ ಅದೆಲ್ಲ ಶುದ್ಧ ನಾನ್‌ಸೆನ್ಸ್. ಔರಂಗಜೇಬ ಅಪ್ಪಟ ಚಕ್ರವರ್ತಿಯಂತೆ ವೇಷಭೂಷಣ ಧರಿಸುತ್ತಿದ್ದ ಮತ್ತು ಥೇಟ್ ಚಕ್ರವರ್ತಿಯ ರೀತಿಯಲ್ಲೇ ಐಷಾರಾಮಿ ಬದುಕು ನಡೆಸುತ್ತಿದ್ದ. ಅವನ ಕಾಲದಲ್ಲಿ ಕಾಶ್ಮೀರಕ್ಕೆ ಪ್ರವಾಸ ಮಾಡಿದ್ದ ಬರ್ನಿಯರ್ ಹೀಗೆ ಬರೆಯುತ್ತಾನೆ: ''ಔರಂಗಜೇಬ ಬಹಳ ದುಬಾರಿಯಾದ ಅದ್ಭುತ ಬಟ್ಟೆ ಧರಿಸಿದ್ದ. ನಯವಾದ ಬಿಳಿಯ ಅಂಗಿಗೆ ರೇಷ್ಮೆ ಮತ್ತು ಚಿನ್ನದ ಎಂಬ್ರಾಯ್ಡರಿ ಇರುತ್ತಿತ್ತು. ಅವನ ಮುಂಡಾಸಿನಲ್ಲಿ ಚಿನ್ನದಿಂದ ತಯಾರಿಸಿದ ಬಟ್ಟೆಯ ಹೊದಿಕೆಯಿತ್ತು. ಅದರ ಮೇಲೆ ವಜ್ರಗಳನ್ನು ಪೋಣಿಸಲಾಗಿತ್ತು. ಅವು ಭರ್ಜರಿ ಗಾತ್ರದ ವಜ್ರಗಳೇ ಆಗಿದ್ದವು. ಅವನು ಧರಿಸಿದ ಕಂಠೀಹಾರದಲ್ಲಿ ಜಗತ್ತಿನ ನಾನಾ ಕಡೆಗಳಿಂದ ತರಿಸಿದ ಮುತ್ತು ರತ್ನಗಳಿದ್ದವು. ಆ ಹಾರವು ಕುತ್ತಿಗೆಯಿಂದ ಹೊಟ್ಟೆಯ ಕೆಳಗಿನವರೆಗೂ ಬರುತ್ತಿತ್ತು''. ಬರ್ನಿಯರ್‌ನ ಬರಹಗಳಲ್ಲೇ ಔರಂಗಜೇಬನ ಬಗ್ಗೆ ಇನ್ನೂ ಸಾಕಷ್ಟು ವಿವರಣೆಗಳಿವೆ. ಅವನನ್ನು ನೋಡಲು ಬರುವ ಕೆಲ ಉನ್ನತ ಅಧಿಕಾರಿಗಳು ಮತ್ತು ಪ್ರಭಾವಿಗಳು ಬಹಳ ದುಬಾರಿ ಉಡುಗೊರೆಗಳನ್ನು ತರುತ್ತಿದ್ದರು. ತಾವು ಎಸಗಿದ ಅಕ್ರಮಗಳ ಬಗ್ಗೆ ರಾಜ ತನಿಖೆಗೆ ಆದೇಶ ನೀಡದೆ ಇರಲಿ ಎಂಬ ಕಾರಣಕ್ಕೆ ಅಥವಾ ತಮಗೆ ಇನ್ನೂ ಉನ್ನತ ಹುದ್ದೆ ನೀಡಲಿ ಎಂಬ ಕಾರಣಕ್ಕೆ ಅವರು ಔರಂಗಜೇಬನಿಗೆ ಅತಿಯಾದ ವಿಧೇಯತೆ ತೋರುತ್ತಿದ್ದರು. ಇದೆಲ್ಲ ರಾಜರ ಆಳ್ವಿಕೆಯಲ್ಲಿ ಸಾಮಾನ್ಯವೇ ಬಿಡಿ. ಆದರೆ ವಿಷಯ ಏನೆಂದರೆ, ಔರಂಗಜೇಬ ಎಂಬ ವ್ಯಕ್ತಿ ಸಿಂಹಾಸನದ ಮೇಲೆ ಕುಳಿತ ಸಂತ ಖಂಡಿತ ಆಗಿರಲಿಲ್ಲ.

ಪಾಕಿಸ್ತಾನದಲ್ಲಿರುವ ಔರಂಗಜೇಬನ ಭಕ್ತರು ತಮ್ಮ 20ನೇ ಶತಮಾನದ ಹೀರೋ ಮೊಹಮ್ಮದ್ ಅಲಿ ಜಿನ್ನಾ ಒಬ್ಬ ಶಿಯಾ ಆಗಿದ್ದರು ಎಂಬ ವಿರೋಧಾಭಾಸದ ವಾದ ಮಂಡಿಸುತ್ತಾರೆ. ಶಿಯಾಗಳಿಗೆ ಔರಂಗಜೇಬನನ್ನು ಕಂಡರೆ ಆಗುತ್ತಿರಲಿಲ್ಲ. ಔರಂಗಜೇಬ ಕೂಡ ಶಿಯಾಗಳನ್ನು ತುಂಬಾ ವಿರೋಧಿಸುತ್ತಿದ್ದ. ಅವರನ್ನು ಘುಲ್-ಇ-ಬಯಾಬಾನಿ (ಹೆಣ ತಿನ್ನುವ ರಾಕ್ಷಸರು) ಅಥವಾ ಬತಿಲ್ ಮಜಬಾನ್ (ಧರ್ಮಭ್ರಷ್ಟರು) ಎಂದು ಅವನು ಕರೆಯುತ್ತಿದ್ದ. ಶಿಯಾ ಸುಲ್ತಾನರ ಆಳ್ವಿಕೆಯಲ್ಲಿದ್ದ ಬಿಜಾಪುರ ಮತ್ತು ಗೋಲ್ಕೊಂಡಾ ಮೇಲೆ ದಾಳಿ ನಡೆಸುವಾಗ ಔರಂಗಜೇಬ ಅದನ್ನು ಧರ್ಮಯುದ್ಧ ಎಂದು ಕರೆದಿದ್ದ. ಆ ವಾದವನ್ನು ಅವನದೇ ಶೇಖ್-ಉಲ್-ಇಸ್ಲಾಂ ಅಥವಾ ಮುಖ್ಯ ಧಾರ್ಮಿಕ ಸಲಹೆಗಾರ ಸಹಿಸಿಕೊಳ್ಳಲು ಆಗದೆ ರಾಜೀನಾಮೆ ನೀಡಿದ್ದ. ಆದರೆ ತನ್ನ ಸೇನೆಯಲ್ಲಿ ಅನಿವಾರ್ಯವಾಗಿ ಅವನು ಒಂದಷ್ಟು ಶಿಯಾ ಪರ್ಷಿಯನ್‌ಗಳನ್ನು ಇರಿಸಿಕೊಂಡಿದ್ದ. ಏಕೆಂದರೆ ಅವರು ಶಕ್ತಿಶಾಲಿ ಯೋಧರಾಗಿದ್ದರು. ಅವರಿಗೂ ಸುನ್ನಿ ಮಾದರಿಯ ನಮಾಜ್ ಮಾಡುವಂತೆ ಅವನು ಆದೇಶ ನೀಡಿದ್ದ.

ಮೊಘಲ್ ಆಳ್ವಿಕೆಯಲ್ಲಿ ಜನರು ಉದಾರವಾದಿಯಾದ ಮತ್ತು ಎಲ್ಲರನ್ನೂ ಜತೆಗೆ ಕರೆದುಕೊಂಡು ಹೋಗುತ್ತಿದ್ದ ದಾರಾ ಶಿಕೋನ ಜತೆಗೆ ಇದ್ದರೇ ಹೊರತು ತೀವ್ರವಾದಿ ಧಾರ್ಮಿಕ ಚಿಂತನೆಗಳನ್ನು ಅನುಸರಿಸುತ್ತಿದ್ದ ಹಾಗೂ ಸಾಂಸ್ಕೃತಿಕ ಪರಂಪರೆಯ ಅರಿವಿಲ್ಲದೆ ಆಡಳಿತ ನಡೆಸುತ್ತಿದ್ದ ಔರಂಗಜೇಬನ ಜತೆಗೆ ಇರಲಿಲ್ಲ. ಔರಂಗಜೇಬ ಸಿಂಹಾಸನವನ್ನು ಗೆದ್ದಿದ್ದನೇ ಹೊರತು ಜನರ ಹೃದಯವನ್ನು ಗೆದ್ದಿರಲಿಲ್ಲ. ದಾರಾ ಶಿಕೋ ಸೋತ ನಂತರ ಅವನ ತಲೆ ಕಡಿದಾಗ ಜನರ ಪ್ರತಿಕ್ರಿಯೆ ಹೇಗಿತ್ತು ಎಂಬುದನ್ನು ಬರ್ನಿಯರ್ ದಾಖಲಿಸಿದ್ದಾನೆ. ಜನರು ಅಕ್ಷರಶಃ ಕಣ್ಣೀರು ಹಾಕಿದ್ದರು. ದಾರಾ ಶಿಕೋನ ಸಾವಿಗೆ ಮಮ್ಮಲ ಮರುಗಿದ್ದರು. ಮುಂಡದಿಂದ ಬೇರ್ಪಟ್ಟಿದ್ದ ದಾರಾ ಶಿಕೋನ ರುಂಡವನ್ನು ನೋಡಿ ಸ್ವತಃ ಔರಂಗಜೇಬ ಕೂಡ 'ಅಯ್ಯೋ ನನ್ನ ದುರ್ವಿಧಿಯೇ' ಎಂದು ಅತ್ತಿದ್ದ.

ಶಹಜಹಾನ್ ತನ್ನ ಉತ್ತರಾಧಿಕಾರಿ ದಾರಾ ಶಿಕೋ ಆಗಲಿ ಎಂದು ಬಯಸಿದ್ದ. ಯುದ್ಧಗಳಲ್ಲಿ ಬಂದ ಸಂಪತ್ತನ್ನು ದಾರಾ ಶಿಕೋನ ಕುಟುಂಬಕ್ಕೇ ಅವನು ನೀಡುತ್ತಾ ಬಂದಿದ್ದ. ದಾರಾ ಶಿಕೋ 'ವಹದ್-ಅಲ್ ವುಜೂದ್' ಅಥವಾ ಎಲ್ಲಾ ಜನಾಂಗಗಳ ಏಕತೆಯಲ್ಲಿ ನಂಬಿಕೆ ಇರಿಸಿದ್ದ. ಅವನು ಹಿಂದೂ ಸಂತರು ಹಾಗೂ ಸಾಮಂತರ ಜತೆಗೆ ಬೌದ್ಧಿಕ ಮತ್ತು ಭಾವನಾತ್ಮಕ ಸಂಪರ್ಕ ಸೇತುವನ್ನು ಕಟ್ಟಿಕೊಂಡಿದ್ದ. ಅವನು ಗೋಕುಲದ ಗೋಸಾಯಿ ವಿಠ್ಠಲರಾಯಿಗೆ 1643ರಲ್ಲಿ ಬಳುವಳಿಯಾಗಿ ಒಂದಷ್ಟು ಭೂಮಿಯನ್ನು ಪಡೆಯಲು ಸಹಾಯ ಮಾಡಿದ್ದ. ಪಂಜಾಬಿನ ಧಾರ್ಮಿಕ ನಾಯಕ ಬಾಬಾ ಲಾಲ್ ಜತೆಗೆ ಅವನು ನಡೆಸಿದ ಸುದೀರ್ಘ ಮಾತುಕತೆಗಳನ್ನು ಅಕ್ಷರ ಮತ್ತು ಚಿತ್ರಗಳ ರೂಪದಲ್ಲಿ ದಾಖಲಿಸಲಾಗಿದೆ. ತನ್ನಂಥ ಫಕೀರನಿಗೆ ರಾಜನ ಸಿಂಹಾಸನ ಪಡೆದು ಏನಾಗಬೇಕಿದೆ ಎಂದು ಅವನು ಬಾಬಾ ಲಾಲ್ ಬಳಿ ಕೇಳಿದ್ದ. ಅದಕ್ಕೆ ಆ ಹಿಂದೂ ಸನ್ಯಾಸಿಯು, 'ತನ್ನನ್ನು ತಾನು ಅರಿತುಕೊಂಡು, ತನಗಾಗಿ ಬದುಕದೆ ಜನರ ಸೇವೆ ಮಾಡಲು ರಾಜತ್ವ ಬೇಕು' ಎಂದು ಹೇಳಿದ್ದ.

ದಾರಾ ಶಿಕೋ ಸಂಸ್ಕೃತವನ್ನು ಜ್ಞಾನದ ನಿಧಿ ಎಂದು ಗೌರವಿಸುತ್ತಿದ್ದ. 'ಪ್ರಬೋಧ ಚಂದ್ರೋದಯ' ಎಂಬ 11ನೇ ಶತಮಾನದ ಸಂಸ್ಕೃತ ನಾಟಕವನ್ನು ಸೂಫಿ ನಾಟಕವಾಗಿ ಪರಿವರ್ತಿಸಿ ಪರ್ಷಿಯನ್‌ಗೆ ಅನುವಾದ ಮಾಡಿದ ಬನ್ವಾಲಿ ದಾಸ್‌ಗೆ ಅವನು ಆಶ್ರಯ ನೀಡಿದ್ದ. ಅದ್ವೈತ ವೇದಾಂತದ ಗ್ರಂಥಗಳಾದ 'ಅಷ್ಟಾವಕ್ರಗೀತಾ', 'ಆತ್ಮವಿಲಾಸ' ಹಾಗೂ 'ಭಗವದ್ಗೀತೆ'ಯನ್ನು ಪರ್ಷಿಯನ್ ಭಾಷೆಗೆ ಅನುವಾದಿಸಲು ಅವನು ಹಣ ನೀಡಿದ್ದ. 1656ರ ಚಳಿಗಾಲದಲ್ಲಿ ಅವನು ಕಾಶಿಯಲ್ಲಿ ಸಂಸ್ಕೃತ ಪಂಡಿತರ ಬೃಹತ್ ಕೂಟವೊಂದನ್ನು ಆಯೋಜಿಸಿ, ಅವರಿಂದ ಉಪನಿಷತ್‌ಗಳನ್ನು ಪರ್ಷಿಯನ್ ಭಾಷೆಗೆ ಅನುವಾದ ಮಾಡಿಸಿದ್ದ. ಅದು ಮರುವರ್ಷದ ಜುಲೈ ತಿಂಗಳಲ್ಲಿ ಪೂರ್ಣಗೊಂಡಿತ್ತು. ಅದಕ್ಕೆ ದಾರಾ 'ಸಿರ್-ಇ-ಅಕ್ಬರ್' (ದೊಡ್ಡ ರಹಸ್ಯ) ಎಂದು ಶೀರ್ಷಿಕೆ ನೀಡಿ, ತಾನೇ ಸ್ವತಃ ಮುನ್ನುಡಿ ಬರೆದಿದ್ದ. ಅದರಲ್ಲಿ ''ಇಸ್ಲಾಮಿನ ತೌಹೀದ್ (ದೇವರಲ್ಲಿ ಐಕ್ಯವಾಗುವ) ಸಿದ್ಧಾಂತವೇ ಉಪನಿಷತ್‌ನಲ್ಲೂ ಕಂಡುಬರುತ್ತದೆ. ಇದು ಪವಿತ್ರ ಕುರಾನ್‌ಗೆ ಮೌಲ್ಯಯುತ ವ್ಯಾಖ್ಯಾನವಿದ್ದಂತೆ'' ಎಂದು ಹೇಳಿದ್ದ.

ಮೂಢನಂಬಿಕೆಯ ವಿರೋಧಿಯಾಗಿದ್ದ ದಾರಾ, ಪರ್ಷಿಯನ್ ಮಾತನಾಡುವ ಅರ್ಮೇನಿಯಾದ ಪವಾಡ ಪುರುಷ ಶಾ ಸರ್ಮದ್‌ನ ಜತೆಗೂಡಿ ಧಾರ್ಮಿಕ ಸಾಮರಸ್ಯಕ್ಕಾಗಿ ಕೆಲಸ ಮಾಡಿದ್ದ. ಶಾ ಸರ್ಮದ್ ಭಾರತವನ್ನೇ ತನ್ನ ಮನೆಯಾಗಿಸಿಕೊಂಡು, ಎಲ್ಲಾ ಧರ್ಮಗಳೂ ದೇವರನ್ನು ಸೇರುವ ಬೇರೆ ಬೇರೆ ಮಾರ್ಗಗಳು ಎಂದು ಬೋಧಿಸುತ್ತಿದ್ದ. ಅವನು ಕುರಾನ್ ಗ್ರಂಥವನ್ನು ಗೌರವಿಸುವಂತೆಯೇ, ಹಿಂದೂ ನಂಬಿಕೆಗಳನ್ನೂ ಪಾಲಿಸುತ್ತಿದ್ದ. ಹಾಗೆಯೇ ಕ್ರಿಶ್ಚಿಯನ್ ಸನ್ಯಾಸಿಯಾಗಿ, ಯಹೂದಿಗಳ ರಬ್ಬೈ ಆಗಿ, ಅದೇ ವೇಳೆ ಮುಸ್ಲಿಂ ಮೌಲ್ವಿಯಾಗಿಯೂ ಕಾಣಿಸಿಕೊಳ್ಳುತ್ತಿದ್ದ. ಸರ್ಮದ್‌ನನ್ನು ದಾರಾ ತನ್ನ ಮಾರ್ಗದರ್ಶಿ ಹಾಗೂ ತತ್ವಜ್ಞಾನದ ಗುರು ಎಂದು ಪರಿಗಣಿಸಿದ್ದ. 1661ರಲ್ಲಿ, ಅಥವಾ ಔರಂಗಜೇಬನ ಆಳ್ವಿಕೆಯ ಮೂರನೇ ವರ್ಷದಲ್ಲಿ, ಸರ್ಮದ್‌ನನ್ನು ಧರ್ಮದ್ರೋಹದ ಆರೋಪದ ಮೇಲೆ ತಲೆ ಕಡಿದು ಹತ್ಯೆ ಮಾಡಲಾಯಿತು. ಅವನನ್ನು ದೆಹಲಿಯಲ್ಲಿ ದಫನ್ ಮಾಡಿದರು.

ಚಕ್ರವರ್ತಿ ಶಹಜಹಾನ್‌ನ ಪರವಾಗಿ ಪುತ್ರ ದಾರಾ ಶಿಕೋ ಮೊಘಲ್ ಆಡಳಿತದಲ್ಲಿ ಹಿಂದೂಗಳ ಸ್ಥಾನಮಾನ ಏನಿರಬೇಕು ಎಂಬ ಬಗ್ಗೆ ಚರ್ಚಿಸಲು ಅಲಹಾಬಾದ್‌ನ ಧಾರ್ಮಿಕ ಪಂಡಿತ ಶೇಖ್ ಮುಹಿಬುಲ್ಲಾ (1587–1648) ಬಳಿಗೆ ಹೋಗಿದ್ದ. ಅವನು ನೀಡಿದ ಉತ್ತರವೇ 17ನೇ ಶತಮಾನದಲ್ಲಿ ಜಾತ್ಯತೀತತೆಯ ವ್ಯಾಖ್ಯೆಯಾಗಿತ್ತು. ''ಆಡಳಿತ ನಡೆಸುವವರಿಗೆ ಜನರ ಕಲ್ಯಾಣವೇ ಪ್ರಮುಖ ಉದ್ದೇಶವಾಗಿರಬೇಕು. ಆಗ ಆಡಳಿತದಲ್ಲಿ ನ್ಯಾಯ ಇರುತ್ತದೆ. ಜನರು ಆಸ್ತಿಕರಾಗಿರಲಿ ಅಥವಾ ನಾಸ್ತಿಕರಾಗಿರಲಿ, ಅವರು ದೇವರಿಂದ ಸೃಷ್ಟಿಯಾದವರೇ ಆಗಿರುತ್ತಾರೆ. ಸರಕಾರ ಎಲ್ಲಾ ಪ್ರಜೆಗಳನ್ನೂ ಸಮಾನವಾಗಿ ಕಾಣಬೇಕು. ದೇವರು ಕಳಿಸಿದ ಪ್ರವಾದಿಯು ಎಲ್ಲ ಸತ್ಯವಂತರು ಹಾಗೂ ದುಷ್ಟರ ಬಗ್ಗೆಯೂ ಕರುಣಾಮಯಿಯೇ ಆಗಿರುತ್ತಾನೆ'' ಎಂದು ಶೇಖ್ ಮುಹಿಬುಲ್ಲಾ ಹೇಳಿದ್ದ (ದಿ ಇಂಡಿಯನ್ ಮುಸ್ಲಿಮ್ಸ್, ಮಕ್ತುಬತ್-ಇ-ಶಾ ಮುಹಿಬುಲ್ಲಾ ಇಲಹಾಬಾದಿ, ಆಜಾದ್ ಲೈಬ್ರರಿ, ಅಲೀಘಡ ಮುಸ್ಲಿಂ ವಿವಿ).

ಪ್ರಶ್ನೆಯೇನು ಅಂದರೆ, 17ನೇ ಶತಮಾನದ ಫ್ಯೂಡಲಿಸಂ ನಿರ್ಧಾರಗಳನ್ನು 21ನೇ ಶತಮಾನದ ಪ್ರಜಾಪ್ರಭುತ್ವದಲ್ಲಿ ವಾಸಿಸುವ ಜನರ ಮೇಲೆ ಏಕೆ ಹೇರಬೇಕು?

ಮುಂಬರುವ ನನ್ನ 'ಆಸ್ಟಾಲಜಿ ಇನ್ ದಿ ಮುಘಲ್ ಎಂಪೈರ್' ಕೃತಿಯಲ್ಲಿ ಔರಂಗಜೇಬನ ಬದುಕಿನ ಕೊನೆಯ ದಿನಗಳ ಬಗ್ಗೆ ವಿಸ್ತಾರವಾಗಿ ಬರೆದಿದ್ದೇನೆ. ಅವನೊಬ್ಬ ಒಳ್ಳೆಯ ವ್ಯಕ್ತಿಯಾಗಿ ಕೊನೆಯುಸಿರೆಳೆದು ಸ್ವರ್ಗಕ್ಕೆ ಹೋಗಲಿಲ್ಲ. ಅದರ ಬದಲು, ಅದ್ಭುತ ಸಾಮ್ರಾಜ್ಯವೊಂದರ ಅವನತಿಗೆ ಕಾರಣನಾದ ಅತೃಪ್ತ ಹಾಗೂ ತಿರಸ್ಕೃತ ನಾಯಕನಾಗಿ ಅಂತ್ಯ ಕಂಡ.

ಅಂಥ ವ್ಯಕ್ತಿಯ ಬಗ್ಗೆ ಜನರಿಂದು ಕಿತ್ತಾಡುತ್ತಿದ್ದಾರೆ.

(ಲೇಖಕರು ಹಿರಿಯ ಪತ್ರಕರ್ತರು)

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Edited & Published by : VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942, Printed at M/s Digantha Mudhrana Ltd. NT Road, Shivamogga - 577 201
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:10, Issue:78

ಸಮಾಚಾರ ಸಣ್ಣದಲ್ಲ

ಪ.ಬಂಗಾಳ: ಪಟಾಕಿ ಆಕಸ್ಮಿಕಕ್ಕೆ 7 ಜೀವಬಲಿ

ಕೋಲ್ಕತ್ತ: ಪಶ್ಚಿಮ ಬಂಗಾಳದ ದಕ್ಷಿಣ 24 ಪರಗಣ ಜಿಲ್ಲೆಯ ಪರ್ಥ ಪ್ರತಿಮಾದಲ್ಲಿರುವ ಮನೆಯಲ್ಲಿ ಪಟಾಕಿಗಳನ್ನು ಸಂಗ್ರಹಿಸಿಡಲಾಗಿದ್ದು, ಆಕಸ್ಮಿಕವಾಗಿ ಕಿಡಿ ತಾಗಿದ್ದರಿಂದ ಪಟಾಕಿಗಳು ಸಿಡಿಯಲಾರಂಭಿಸಿವೆ. ಇದೇ ವೇಳೆ ಅಡುಗೆ ಅನಿಲ ಸಿಲಿಂಡರ್‌ಗೂ ಬೆಂಕಿ ತಗುಲಿದ್ದು, ಸಿಲಿಂಡರ್ ಸ್ಫೋಟಗೊಂಡಿದೆ. ಪರಿಣಾಮ, 7 ಜನ ಮೃತಪಟ್ಟಿದ್ದಾರೆ. ಮನೆಯಲ್ಲಿ ಸಂಗ್ರಹಿಸಿಟ್ಟಿದ್ದ ಪಟಾಕಿಗೆ ಸೋಮವಾರ ರಾತ್ರಿ 9ರಲ್ಲಿ ಬೆಂಕಿ ತಗುಲಿದ್ದೇ ಅವಘಡಕ್ಕೆ ಕಾರಣ. ಬಳಿಕ ಸಿಲಿಂಡರ್ ಸ್ಫೋಟವಾಗಿದೆ. ನಾಲ್ವರು ಮಕ್ಕಳು, ಇಬ್ಬರು ಮಹಿಳೆಯರು, ಒಬ್ಬ ಪುರುಷ ಸಾವಿಗೀಡಾಗಿದ್ದಾರೆ. ಒಬ್ಬ ಮಹಿಳೆ ಕೂಡ ಗಾಯಗೊಂಡಿದ್ದಾರೆ. ಮೃತರು ಮತ್ತು ಗಾಯಾಳು ಎಲ್ಲರೂ ಒಂದೇ ಕುಟುಂಬದವರು ಎಂದು ಪೊಲೀಸ್ ಅಧಿಕಾರಿ ತಿಳಿಸಿದ್ದಾರೆ.

ಅನಿಲ ಸೋರಿಕೆ: ಮೂವರ ಸಾವು

ಜೈಪುರ: ರಾಜಸ್ಥಾನದ ಬೀವರ್ ಜಿಲ್ಲೆಯಲ್ಲಿನ ರಾಸಾಯನಿಕ ಕಾರ್ಖಾನೆಯಲ್ಲಿದ್ದ ಟ್ಯಾಂಕರ್‌ನಿಂದ ಸೋಮವಾರ ರಾತ್ರಿ ನೈಟ್ರಿಕ್ ಆಸಿಡ್ ಸೋರಿಕೆಯಾಗಿ ಕಾರ್ಖಾನೆ ಮಾಲೀಕ ಸೇರಿದಂತೆ ಮೂವರು ಸಾವಿಗೀಡಾಗಿದ್ದಾರೆ. 53 ಜನರು ಅಸ್ವಸ್ಥರಾಗಿದ್ದಾರೆ. ಸದ್ಯ ಅನಿಲ ಸೋರಿಕೆ ನಿಲ್ಲಿಸಲಾಗಿದೆ. ಅಲ್ಲದೆ, ಕಾರ್ಖಾನೆ ಸುತ್ತಲಿನ ಜನರನ್ನು ಸ್ಥಳಾಂತರಿಸಲಾಗಿದೆ ಎಂದು ಜಿಲ್ಲಾಧಿಕಾರಿ ಮಹೇಂದ್ರ ಖಡ್ಗಾವತ್ ತಿಳಿಸಿದ್ದಾರೆ. ಕಾರ್ಖಾನೆ ಮಾಲೀಕ ಸುನಿಲ್ ಸಿಂಘಾಲ್(47) ಸೋಮವಾರ ರಾತ್ರಿ, ಸ್ಥಳೀಯ ನಿವಾಸಿಗಳಾದ ದಯಾರಾಮ್ (52) ಮತ್ತು ನರೇಂದ್ರ ಸೋಲಂಕಿ (40) ಮಂಗಳವಾರ ನಿಧನರಾದರು. ಅಜ್ಮೀರ್‌ನ ಜೆಎಲ್‌ಎನ್ ಆಸ್ಪತ್ರೆಯಲ್ಲಿರುವ ಇಬ್ಬರ ಸ್ಥಿತಿ ಗಂಭೀರ ವಾಗಿದೆ ಎಂದು ಅಧಿಕಾರಿ ತಿಳಿಸಿದ್ದಾರೆ. ಬಡಿಯಾದ ವಸತಿ ಪ್ರದೇಶದಲ್ಲಿನ ರಾಸಾಯನಿಕ ಕಾರ್ಖಾನೆ ಅಕ್ರಮವಾಗಿ ಕಾರ್ಯ ನಿರ್ವಹಿಸುತ್ತಿತ್ತು ಎನ್ನಲಾಗಿದೆ.

ಚಾಲಕನಿಂದ ಜರ್ಮನಿ ಯುವತಿ ಅತ್ಯಾಚಾರ

ಹೈದರಾಬಾದ್: ತೆಲಂಗಾಣದ ಹೈದರಾಬಾದ್‌ನಲ್ಲಿನ ವಿಮಾನ ನಿಲ್ದಾಣಕ್ಕೆ ಜರ್ಮನ್ ಯುವತಿಯನ್ನು ಸೋಮವಾರ ರಾತ್ರಿ ಕರೆದೊಯ್ಯಲು ಬಂದಿದ್ದ ಕ್ಯಾಬ್ ಚಾಲಕ ಅತ್ಯಾಚಾರ ನಡೆಸಿದ್ದಾನೆ. ಜರ್ಮನಿಯ 25 ವರ್ಷದ ಯುವತಿ ಗೆಳೆಯನ ಭೇಟಿ ಮಾಡಲು ಹೈದರಾಬಾದ್‌ಗೆ ಬಂದಿದ್ದು, ಇತರೆ ಸ್ನೇಹಿತರ ಜತೆಗೂಡಿ ಕ್ಯಾಬ್‌ನಲ್ಲಿ ನಗರವನ್ನು ಸುತ್ತಾಡಿದ್ದರು. ಸಂಜೆ ಎಲ್ಲರನ್ನೂ ಅವರ ಮನೆಗಳಿಗೆ ಬಿಟ್ಟು ಬಳಿಕ ವಿಮಾನ ನಿಲ್ದಾಣಕ್ಕೆ ತೆರಳುತ್ತಿದ್ದರು. ದಾರಿ ಮಧ್ಯೆ ಕಾರು ನಿಲ್ಲಿಸಿದ ಚಾಲಕ ಜರ್ಮನಿ ಯುವತಿಯ ಮೇಲೆ ಅತ್ಯಾಚಾರ ನಡೆಸಿ ಪರಾರಿಯಾಗಿದ್ದಾನೆ ಎಂದು ಯುವತಿ ದೂರು ನೀಡಿದ್ದಾರೆ. ಯುವತಿ ತುರ್ತು ಸಹಾಯವಾಣಿಗೆ ಕರೆ ಮಾಡಿ ದೂರು ನೀಡಿದ್ದು, ಸ್ಥಳಕ್ಕೆ ತೆರಳಿದ ಪೊಲೀಸರು ಆಕೆಯನ್ನು ರಕ್ಷಿಸಿ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಿದ್ದಾರೆ. ಸದ್ಯ ಆಕೆ ಆರೋಗ್ಯವಾಗಿದ್ದಾರೆ ಎಂದು ವೈದ್ಯರು ತಿಳಿಸಿದ್ದಾರೆ. ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ತನಿಖೆ ಆರಂಭಿಸಿದ್ದು, ಆರೋಪಿ ಚಾಲಕನ ಬಂಧನಕ್ಕೆ ಶೋಧ ನಡೆಸಿದ್ದಾರೆ.

ಅತ್ಯಾಚಾರಿ ಬಜೀಂದರ್ ಸಿಂಗ್‌ಗೆ ಜೀವಾವಧಿ ಶಿಕ್ಷೆ

ಮೊಹಾಲಿ: ಪಂಜಾಬ್‌ನ ಮೊಹಾಲಿಯಲ್ಲಿ 2018ರಲ್ಲಿ ಬಾಲಕಿ ಮೇಲೆ ನಡೆದ ಅತ್ಯಾಚಾರ ಪ್ರಕರಣದಲ್ಲಿ ಧರ್ಮಬೋಧಕ(ಪಾಸ್ಟರ್) ಬಜೀಂದರ್ ಸಿಂಗ್ ದೋಷಿ ಎಂದು ತೀರ್ಪು ನೀಡಿದ ಮೊಹಾಲಿಯ ಪೋಕ್ಸೊ ನ್ಯಾಯಾಲಯ, ಅಪರಾಧಿಗೆ ಜೀವಾವಧಿ ಶಿಕ್ಷೆ ವಿಧಿಸಿ ಮಂಗಳವಾರ ಆದೇಶ ಹೊರಡಿಸಿದೆ.

ಸ್ವಯಂ ಘೋಷಿತ ಕ್ರೈಸ್ತ ಧರ್ಮ ಪ್ರಚಾರಕ ಬಜೀಂದರ್ ಸಿಂಗ್ ಬಾಲಕಿ ಮೇಲೆ ಅತ್ಯಾಚಾರ ನಡೆಸಿರುವುದು ದೃಢಪಟ್ಟಿದೆ ಎಂದು ಜೀವಾವಧಿ ಶಿಕ್ಷೆ ವಿಧಿಸಿದ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ಕೋರ್ಟ್ ನ್ಯಾಯಾಧೀಶ ವಿಕ್ರಾಂತ್ ಕುಮಾರ್ ತೀರ್ಪಿನಲ್ಲಿ ತಿಳಿಸಿದ್ದಾರೆ. ವಿದೇಶಕ್ಕೆ ಕರೆದೊಯ್ಯುವುದಾಗಿ ಆಸೆ ಹುಟ್ಟಿಸಿದ ಬಜೀಂದರ್, ಅತ್ಯಾಚಾರ ಎಸಗಿ ವಿಡಿಯೊ ಮಾಡಿದ್ದ ಎಂದು ಬಾಲಕಿ ದೂರಿದ್ದಳು. ಸಿಂಗ್ ವಿರುದ್ಧ ಲೈಂಗಿಕ ಕಿರುಕುಳಕ್ಕೆ ಸಂಬಂಧಿಸಿದ ಭಾರತೀಯ ದಂಡ ಸಂಹಿತೆಯ ಸೆಕ್ಷನ್ 376(ಅತ್ಯಾಚಾರ), 323(ಸ್ವಯಂಪ್ರೇರಿತ ನೋವು ಮಾಡುವುದು) ಮತ್ತು 506(ಕ್ರಿಮಿನಲ್ ಬೆದರಿಕೆ) ಸೆಕ್ಷನ್‌ಗಳಡಿ ಶಿಕ್ಷೆ ವಿಧಿಸಲಾಗಿದೆ. ಆದರೆ, ಸಾಕ್ಷ್ಯಾಧಾರ ಕೊರತೆ ಕಾರಣ 5 ಆರೋಪಿಗಳನ್ನು ಖುಲಾಸೆಗೊಳಿಸಲಾಗಿದೆ. ಮಂಗಳವಾರ ಶಿಕ್ಷೆ ಪ್ರಕಟ ಹಿನ್ನೆಲೆಯಲ್ಲಿ ನ್ಯಾಯಾಲಯದ ಆವರಣದಲ್ಲಿ ಹೆಚ್ಚಿನ ಸಂಖ್ಯೆಯ ಪೊಲೀಸರನ್ನು ನಿಯೋಜಿಸಲಾಗಿತ್ತು.

{ **ಅಶ್ವಿನಿ ವೈಷ್ಣವ್** } ಕೇಂದ್ರ ಸಚಿವ

ಕೃತಕ ಬುದ್ಧಿಮತ್ತೆ(ಎಐ) ಬಂದ ನಂತರ ಪರಿಸ್ಥಿತಿ ಬದಲಾಗಿದೆ. ‘ಎಐ’ನಿಂದಾಗಿ ಆರ್ಥಿಕ, ಸಾಮಾಜಿಕ, ತಾಂತ್ರಿಕ ಕ್ಷೇತ್ರಗಳಲ್ಲಿನ ಬದಲಾವಣೆಗಳನ್ನು ಗಮನದಲ್ಲಿಟ್ಟುಕೊಂಡು ಕೇಂದ್ರ ತನಿಖಾ ದಳ (ಸಿಬಿಐ) ತನಿಖಾ ವಿಧಾನ ಬದಲಿಸಿಕೊಳ್ಳಬೇಕಿದೆ. ಸಿಬಿಐ ತಂಡ ಹೆಚ್ಚಿನ ಸಿನರ್ಜಿ ಮತ್ತು ಸಮನ್ವಯ ಪರಿಗಣಿಸಬೇಕು.

ಇಂದಿನಿಂದ ಅಧ್ಯಕ್ಷ ಟ್ರಂಪ್ ಹೊಸ ಸುಂಕ ನೀತಿ ಜಾರಿ

ಚೀನಾ, ಕೆನಡಾ, ಮೆಕ್ಸಿಕೊ ಮಣಿಸಲು ‘ಪ್ರತಿ ಸುಂಕ’

ಅಮೆರಿಕ ವ್ಯಾಪಾರ ಕ್ಷೇತ್ರಕ್ಕೆ ಲಿಬರೇಷನ್ ಡೇ: ಟ್ರಂಪ್

ದೆಹಲಿ: ಈ ಮೊದಲೇ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಘೋಷಣೆ ಮಾಡಿರುವಂತೆ ಬುಧವಾರ(ಏ.2) ಚೀನಾ, ಮೆಕ್ಸಿಕೊ, ಕೆನಡಾ ಮತ್ತಿತರ ದೇಶಗಳ ವಿರುದ್ಧ ‘ರೆಸಿಪ್ರೋಕಲ್ ಟ್ಯಾರಿಫ್ ಪಾಲಿಸಿ’(ಪರಸ್ಪರ ಸುಂಕ ನೀತಿ) ಜಾರಿಗೊಳ್ಳಲಿದೆ.

ಏ.2ರಿಂದ ಪರಸ್ಪರ ಸುಂಕ ನೀತಿ ಆರಂಭಿಸುತ್ತಿದ್ದೇವೆ. ಅದು ಆಯಾ ದೇಶಗಳ ಸುಂಕ ನೀತಿಯನ್ನು ಅಧರಿಸಿರುತ್ತದೆ. ಈ ದಿನವನ್ನು ‘ಅಮೆರಿಕದ ವ್ಯಾಪಾರಕ್ಕೆ ಸ್ವಾತಂತ್ರ್ಯದ ದಿನ’ ಆಗಿರಲಿದೆ ಎಂದು ಶ್ವೇತಭವನದ ಓವಲ್ ಕಚೇರಿಯಲ್ಲಿನ ಸುದ್ದಿಗೋಷ್ಠಿಯಲ್ಲಿ ಅಧ್ಯಕ್ಷ ಟ್ರಂಪ್ ಘೋಷಿಸಿದ್ದಾರೆ.

ಈ ಹೊಸ ಸುಂಕ ನೀತಿಯ ಪ್ರಕಾರ ಅಮೆರಿಕದ ಉತ್ಪನ್ನಗಳ ಮೇಲೆ ಯಾವ ದೇಶ ಎಷ್ಟು ಪ್ರಮಾಣದ ಸುಂಕ ವಿಧಿಸುತ್ತದೆಯೋ, ಅಷ್ಟೇ ಪ್ರಮಾಣದಲ್ಲಿ ಆಯಾ ದೇಶಗಳ ಸರಕುಗಳ ಆಮದು ಮೇಲೆ ಅಮೆರಿಕ ಸರಕಾರವೂ ಸುಂಕ ವಿಧಿಸಲಿದೆ.

ನಾವು ತುಂಬಾ ಒಳ್ಳೆಯವರಾಗಿರುತ್ತೇವೆ. ತುಲನಾತ್ಮಕವಾಗಿ ಹೇಳುವುದಾದರೆ, ಬಹಳ ರಿಯಾಯಿತಿ ನಿಲುವಿನಲ್ಲೇ ಇರುತ್ತೇವೆ. ಆ ಬಗ್ಗೆ ಸ್ಪಷ್ಟ ಚಿತ್ರಣ ಏ.2ರಂದು ತಿಳಿಯಲಿದೆ ಎಂದಿದ್ದಾರೆ.

ಚೀನಾ, ಕೆನಡಾ, ಮೆಕ್ಸಿಕೊ ಮತ್ತು ಯುರೋಪ್ ಒಕ್ಕೂಟದಂತಹ ಅಮೆರಿಕದ ಪ್ರಮುಖ ವ್ಯಾಪಾರಿ ಪಾಲುದಾರ ದೇಶಗಳನ್ನು ಟ್ರಂಪ್ ಅವರ ಪರಸ್ಪರ ಸುಂಕ ನೀತಿಯು ಗುರಿಯಾಗಿಸಲಿದೆ. ಜತೆಗೆ, ತೆರಿಗೆ ಸಂಗ್ರಹಣೆ ಪ್ರಕ್ರಿಯೆಯಲ್ಲಿ ಮೌಲ್ಯವರ್ಧಿತ ತೆರಿಗೆ ಸಬ್ಸಿಡಿ ಮತ್ತು ವಿನಿಮಯ ದರಗಳನ್ನೂ ಪರಿಗಣಿಸಲಾಗುತ್ತಿದೆ ಎಂದು ಅಮೆರಿಕದ ಹಣಕಾಸು ಸಚಿವಾಲಯದ ಅಧಿಕಾರಿಗಳು ತಿಳಿಸಿದ್ದಾರೆ.

ಚೀನಾದಿಂದ ಆಮದಾಗುವ ಸರಕುಗಳ ಮೇಲೆ ಶೇ.20ರಷ್ಟು ಸುಂಕವನ್ನು ಟ್ರಂಪ್ ಆಡಳಿತ ಮಾರ್ಚ್‌ನಲ್ಲಿಯೇ ಘೋಷಿಸಿದೆ. ಕೆನಡಾ ಮತ್ತು ಮೆಕ್ಸಿಕೊದಿಂದ ಆಮದಾಗುವ ಹೆಚ್ಚಿನ ಸರಕುಗಳ ಮೇಲಂತೂ ಶೇ.25ರಷ್ಟು ಸುಂಕ ವಿಧಿಸಿದೆ. ಏಪ್ರಿಲ್ 2ರಿಂದ ಈ ಸುಂಕ ಪ್ರಮಾಣ ಆಯಾ ದೇಶಗಳು ಅಮೆರಿಕದ ಜತೆ ನಡೆಸುವ ರಫ್ತು ವಹಿವಾಟಿನ ಮೇಲೆ ಪರಿಣಾಮ ಬೀರಲಿದೆ.

ಸುಂಕ ಗಣನೀಯ ಕಡಿತಕ್ಕೆ ಭಾರತ ನಿರ್ಧಾರ: ಟ್ರಂಪ್

ಭಾರತ ಸದ್ಯದಲ್ಲಿಯೇ ಅಮೆರಿಕದ ಸರಕುಗಳ ಮೇಲಿನ ಸುಂಕವನ್ನು ಗಣನೀಯ ಪ್ರಮಾಣದಲ್ಲಿ ಕಡಿತಗೊಳಿಸಲಿದೆ. ಆ ಬಗ್ಗೆ ನನಗೆ ಬಹಳ ವಿಶ್ವಾಸವಿದೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ. ಭಾರತದ ಜತೆಗಿನ ಸಂಬಂಧ ಮತ್ತು ಪ್ರಧಾನಿ ನರೇಂದ್ರ ಮೋದಿ ಅವರ ವಿಚಾರದಲ್ಲಿ ಸ್ನೇಹಭಾವ ಮತ್ತು ತುಸು ಮೃದುಧೋರಣೆ ಹೊಂದಿರುವ ಟ್ರಂಪ್, ‘ಪರಸ್ಪರ ಸುಂಕ ನೀತಿ’ಯಲ್ಲಿ ಭಾರತಕ್ಕೆ ರಿಯಾಯಿತಿ ತೋರಬಹುದೆಂಬ ನಿರೀಕ್ಷೆ ಇದೆ. ಅವರೂ ಕೂಡಾ ಭಾರತ ಸರಕಾರದಿಂದ ಸುಂಕ ಕಡಿತ ಕ್ರಮವನ್ನೇ ನಿರೀಕ್ಷಿಸುತ್ತಿದ್ದಾರೆ. ಏ.2ರಂದು ಪರಸ್ಪರ ಸುಂಕ ನೀತಿ ಜಾರಿಗೊಳ್ಳಲಿದೆ. ಅದಕ್ಕೂ ಮುಂಚೆಯೇ ಭಾರತ ಸರಕಾರ, ಅಮೆರಿಕದ ಉತ್ಪನ್ನಗಳ ಮೇಲಿನ ಸುಂಕವನ್ನು ಗಣನೀಯವಾಗಿ ಕಡಿತಗೊಳಿಸಲಿದೆ. ಈ ಬಗ್ಗೆ ಗೆಳೆಯ ಮೋದಿ ಸರಕಾರ ಅದಾಗಲೇ ನಿರ್ಧರಿಸಿದೆ ಎಂದು ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ. ಹಾಗಾಗಿ ಭಾರತದ ವಿಚಾರದಲ್ಲಿ ಟ್ರಂಪ್ ಪರಸ್ಪರ ಸುಂಕ ನೀತಿ ಜಾರಿಗೊಳಿಸುವುದಿಲ್ಲ ಎಂಬ ನಿರೀಕ್ಷೆ ಇದೆ.

ಸುಂಕ ಕಡಿತ: ಟ್ರಂಪ್ ವಿಶ್ವಾಸ

ಅಮೆರಿಕದ ಪರಸ್ಪರ ಸುಂಕ ನೀತಿಗೆ ವಿರೋಧ ವ್ಯಕ್ತಪಡಿಸಿರುವ ಅಮೆರಿಕದ ಮಿತ್ರ ದೇಶಗಳು ಚೀನಾದತ್ತ ವಾಲಬಹುದೇ? ಎಂಬ ಪ್ರಶ್ನೆಗೆ ಡೊನಾಲ್ಡ್ ಟ್ರಂಪ್, ಹಾಗೇನೂ ಆಗುವುದಿಲ್ಲ. ಮಿತ್ರ ದೇಶಗಳು ಅಮೆರಿಕ ಜತೆಗೇ ಇರುತ್ತವೆ. ಯೂರೋಪ್ ಒಕ್ಕೂಟ ಅದಾಗಲೇ ಅಮೆರಿಕದ ಕಾರುಗಳಿಗೆ ವಿಧಿಸುತ್ತಿದ್ದ ಸುಂಕ ದರದಲ್ಲಿ ಶೇ.2.5ರಷ್ಟು ಕಡಿತ ಪ್ರಕಟಿಸಿದೆ. ಭಾರತ ಕೂಡಾ ಸುಂಕ ದರ ಕಡಿತ ಮಾಡಲು ನಿರ್ಧರಿಸಿದೆ. ಉಳಿದ ಮಿತ್ರ ದೇಶಗಳೂ ಮುಂದೆ ಇದೇ ರೀತಿ ಸುಂಕ ಪ್ರಮಾಣ ತಗ್ಗಿಸಲಿವೆ ಎಂದು ಉತ್ತರಿಸಿದರು.

ಯಾವ ದೇಶ-ಎಷ್ಟು ಸುಂಕ?

ಪ್ರಸ್ತುತ ಅಮೆರಿಕದ ಕೃಷಿ ಉತ್ಪನ್ನಗಳ ಮೇಲೆ ಭಾರತ ಶೇ.100ರಷ್ಟು ಸುಂಕ ವಿಧಿಸುತ್ತಿದೆ. ಯೂರೋಪ್ ಒಕ್ಕೂಟ ಅಮೆರಿಕದ ಕ್ಷೀರೋತ್ಪನ್ನಗಳಿಗೆ ಶೇ.50ರಷ್ಟು ಸುಂಕ ವಿಧಿಸುತ್ತಿದೆ. ಅಮೆರಿಕದ ಅಕ್ಕಿಗೆ ಜಪಾನ್ ಶೇ.700ರಷ್ಟು ಭಾರೀ ಸುಂಕ ವಿಧಿಸುತ್ತಿದೆ. ಅಮೆರಿಕದಿಂದ ರಫ್ತಾಗುವ ಬೆಣ್ಣೆ ಮತ್ತು ಚೀಜ್‌ಗೆ ಕೆನಡಾ ಶೇ.300ರಷ್ಟು ಸುಂಕ ವಿಧಿಸುತ್ತಿದೆ. ಆದರೆ, ಏ.2ರಂದು ಅಮೆರಿಕ ಸರಕಾರ ‘ಪರಸ್ಪರ ಸುಂಕ ನೀತಿ’ ಜಾರಿಗೊಳಿಸುವುದರಿಂದ ಈ ಮಿತ್ರ ದೇಶಗಳು ವಿಧಿಸುವ ಸುಂಕ ಪ್ರಮಾಣವೂ ಗಣನೀಯವಾಗಿ ಕಡಿಮೆ ಆಗಲಿದೆ ಎಂದು ಶ್ವೇತಭವನದ ಪತ್ರಿಕಾ ಕಾರ್ಯದರ್ಶಿ ಕೆರೊಲಿನಾ ಲೀವಿಟ್ ಹೇಳಿದ್ದಾರೆ.

ಚೀನಾದಿಂದ ತ್ರಿದೇಶ ಸೂತ್ರ

ಅಮೆರಿಕದ ಪರಸ್ಪರ ಸುಂಕ ನೀತಿಯನ್ನು ಸಮರ್ಥವಾಗಿ ಎದುರಿಸಲು ಚೀನಾ ಹೊಸ ಸೂತ್ರಕ್ಕೆ ಮುಂದಾಗಿದೆ. ಜಪಾನ್, ದಕ್ಷಿಣ ಕೊರಿಯ ದೇಶಗಳನ್ನು ಸೇರಿಸಿಕೊಂಡು ಮೂರೂ ದೇಶಗಳು ಒಟ್ಟಾಗಿ ಅಮೆರಿಕ ವಿರುದ್ಧ ಸುಂಕ ಸಮರ ಸಾರುವುದಕ್ಕೆ ಯೋಜನೆ ರೂಪಿಸಿದೆ. ಅಮೆರಿಕ ಅಧ್ಯಕ್ಷ ಟ್ರಂಪ್ ತಮ್ಮ ದೇಶಗಳ ಸರಕುಗಳಿಗೆ ಹೆಚ್ಚಿನ ಸುಂಕ ವಿಧಿಸಿದರೆ ಪ್ರತಿಯಾಗಿ ತಾವೂ ಅಷ್ಟೇ ದರದ ಸುಂಕ ವಿಧಿಸಬೇಕು ಎಂಬ ನಿರ್ಧಾರಕ್ಕೆ ಮೂರೂ ದೇಶಗಳು ಬಂದಿವೆ. ಈ ಸೂತ್ರಕ್ಕೆ ಚೀನಾ ದೇಶವೇ ಮುಂದಾಳುವಾಗಿದೆ.

ಬಿಜೆಪಿ ತ.ನಾಡು ಅಧ್ಯಕ್ಷ ಅಣ್ಣಾಮಲೈ ರಾಜೀನಾಮೆ?

ಚೆನ್ನೈ: ಭಾರತೀಯ ಜನತಾ ಪಕ್ಷದ(ಬಿಜೆಪಿ) ತಮಿಳುನಾಡು ಘಟಕದ ಅಧ್ಯಕ್ಷ ಸ್ಥಾನಕ್ಕೆ ಕೆ. ಅಣ್ಣಾಮಲೈ ರಾಜೀನಾಮೆ ನೀಡುವ ಸಾಧ್ಯತೆ ಇದೆ. ಪಕ್ಷದ ಹೈಕಮಾಂಡ್ ಅಧ್ಯಕ್ಷ ಸ್ಥಾನಕ್ಕೆ ಬೇರೆಯವರ ನೇಮಕ ಮಾಡಲಿದೆ ಎಂದು ಪಕ್ಷದ ಮೂಲಗಳಿಂದ ಮಂಗಳವಾರ ತಿಳಿದುಬಂದಿದೆ.

ಕರ್ನಾಟಕ ಕೇಡರ್‌ನ ಐಪಿಎಸ್ ಅಧಿಕಾರಿಯಾಗಿದ್ದ ಅಣ್ಣಾಮಲೈ, ಪೊಲೀಸ್ ಸಮವಸ್ತ್ರ ಕಳಚಿ ರಾಜಕೀಯಕ್ಕೆ ಧುಮುಕಿದ್ದರು. ಬಳಿಕ ತಮಿಳುನಾಡಿನಲ್ಲಿ ಬಿಜೆಪಿಯನ್ನು ಬಲಿಷ್ಠಗೊಳಿಸಿ ಅಧಿಕಾರಕ್ಕೆ ತರುವ ಗುರಿಯೊಂದಿಗೆ ಪಕ್ಷದ ರಾಜ್ಯ ಘಟಕದ ಅಧ್ಯಕ್ಷರಾದರು. ಆದರೆ, 2023ರಲ್ಲಿ ಅಖಿಲ ಭಾರತ ಅಣ್ಣಾ ದ್ರಾವಿಡ ಮುನ್ನೇತ್ರ ಕಳಗಂ(ಎಐಎಡಿಎಂಕೆ) ಮತ್ತು ಬಿಜೆಪಿ ಮೈತ್ರಿ ಕೊನೆಗೊಳ್ಳಲು ಅಣ್ಣಾಮಲೈ ಕಾರಣರಾದರು ಎಂಬ ಮಾತುಗಳಿವೆ.

ತಮಿಳುನಾಡು ವಿಧಾನಸಭೆಗೆ 2026ರ ಏಪ್ರಿಲ್-ಮೇ ತಿಂಗಳಲ್ಲಿ ನಡೆಯಲಿರುವ ಹಿನ್ನೆಲೆ ಬಿಜೆಪಿ, ರಾಜ್ಯದಲ್ಲಿ ಪಕ್ಷ ಸಂಘಟನೆ ಮತ್ತು ಬಲಿಷ್ಠ ಮೈತ್ರಿಕೂಟ ರಚನೆಗೆ ಮುಂದಾಗಿದೆ. ಈ ದಿಶೆಯಲ್ಲಿ ಮಾಜಿ ಮಿತ್ರ ಪಕ್ಷ ಎಐಎಡಿಎಂಕೆ ಸೇರಿದಂತೆ ರಾಜ್ಯದಲ್ಲಿನ ವಿವಿಧ ಪಕ್ಷಗಳ ಜತೆಗೆ ಮೈತ್ರಿಗೆ ಮುಂದಾಗಿದೆ. ಸದ್ಯ ಎಐಎಡಿಎಂಕೆ ನಾಯಕರ ಜತೆಗೆ ಮಾತುಕತೆ ನಡೆದಿದೆ. ಜಾತಿ ಸಮೀಕರಣ, ಮತಗಳು ಚದುರಿ ಹೋಗದಂತೆ ತಡೆಯುವ ಸಲುವಾಗಿ ಬಿಜೆಪಿ ವರಿಷ್ಠರಿಗೆ ಎಐಎಡಿಎಂಕೆ ಜತೆ ಮೈತ್ರಿ ಅಗತ್ಯವಾಗಿದೆ.

ಜಾತಿ ಮತಗಳ ಲೆಕ್ಕಾಚಾರ!

ಅಣ್ಣಾಮಲೈ ಮತ್ತು ಎಐಎಡಿಎಂಕೆ ಮುಖ್ಯಸ್ಥ ಎಡಪ್ಪಾಡಿ ಕೆ.ಪಳನಿಸ್ವಾಮಿ ಇಬ್ಬರೂ ಪ್ರಬಲ ಹಿಂದುಳಿದ ಸಮುದಾಯಕ್ಕೆ ಸೇರಿದವರು. ಇಬ್ಬರೂ ಗೌಡರ್‌ಗಳ ಪ್ರಾಬಲ್ಯವಿರುವ ಪಶ್ಚಿಮ ಕೊಂಗು ಪ್ರದೇಶದಿಂದ ಬಂದವರು. ಎರಡೂ ಪಕ್ಷಗಳ ಮುಖಂಡರೂ ಒಂದೇ ಸಮುದಾಯದವರಾಗಿದ್ದರೆ ಮತ ಗಳಿಕೆಗೆ ಪ್ರಯೋಜನವಾಗದು ಎಂದು ಎಐಎಡಿಎಂಕೆ ಮುಖಂಡರು ಬಿಜೆಪಿ ವರಿಷ್ಠರ ಗಮನ ಸೆಳೆದಿದ್ದಾರೆ. ಈ ಜಾತಿ ಮತಗಳ ಲೆಕ್ಕಾಚಾರವನ್ನು ಬಿಜೆಪಿ ವರಿಷ್ಠರೂ ಅರ್ಥ ಮಾಡಿಕೊಂಡಿದ್ದಾರೆ. ಹಾಗಾಗಿಯೇ ಅಣ್ಣಾಮಲೈ ಪದತ್ಯಾಗಕ್ಕೆ ಸೂಚನೆ ನೀಡಿದ್ದಾರೆ ಎನ್ನಲಾಗಿದೆ. ಗದೆಹಲಿಯಲ್ಲಿ ಅಮಿತ್ ಶಾ ಅವರನ್ನು ಪಳನಿಸ್ವಾಮಿ ಅವರು ಭೇಟಿ ಮಾಡಿದ ನಂತರ ಅಣ್ಣಾಮಲೈ ಅವರಿಗೆ ಈ ನಿರ್ಧಾರವನ್ನು ಬಿಜೆಪಿ ವರಿಷ್ಠ, ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ತಿಳಿಸಿದ್ದಾರೆ ಎಂದು ಮೂಲಗಳಿಂದ ತಿಳಿದುಬಂದಿದೆ.

ಶರವೇಗದಲ್ಲಿ ನಂ.1 ಸ್ಥಾನಕ್ಕೆ ಮರಳಿದ ‘ವ್ಯಾಗನ್ ಆರ್’

2024ರಲ್ಲಿ ನಂ.1 ಸ್ಥಾನದಲ್ಲಿದ್ದ ಟಾಟಾ ಪಂಚ್ ಈಗ ಎರಡನೇ ಸ್ಥಾನಕ್ಕೆ

ದೆಹಲಿ: ಭಾರತದ ಜನಪ್ರಿಯ ಕಾರು ಮಾರುತಿ ಸುಜುಕಿ ಕಂಪನಿಯ ವಿಶಿಷ್ಟ ಸ್ವರೂಪದ ಪ್ರಯಾಣಿಕ ವಾಹನ ‘ವ್ಯಾಗನ್ ಆರ್’ ಟಾಪ್ ಗೇರ್‌ನಲ್ಲಿ ಚಲಿಸುತ್ತಾ ಮರಳಿ ನಂ.1 ಸ್ಥಾನಕ್ಕೇರಿದೆ. 2024ನೇ ವರ್ಷದಲ್ಲಿ ಟಾಟಾ ಕಂಪನಿಯ ‘ಪಂಚ್’ ವಾಹನಕ್ಕೆ ಮುಂಚೂಣಿ ಸ್ಥಾನ ಬಿಟ್ಟುಕೊಡಬೇಕಾಗಿ ಬಂದಿದ್ದರಿಂದ ನಂ.1 ಸ್ಥಾನ ಕಳೆದುಕೊಂಡ ‘ವ್ಯಾಗನ್ ಆರ್’, 2025ರಲ್ಲಿ ಅತ್ಯಧಿಕ ಸಂಖ್ಯೆಯಲ್ಲಿ ಮಾರಾಟವಾಗಿ ಮರಳಿ ನಂ.1 ಸ್ಥಾನಕ್ಕೇರಿದೆ.

‘ಸೊಸೈಟಿ ಆಫ್ ಇಂಡಿಯನ್ ಆಟೊಮೊಬೈಲ್ ಮ್ಯಾನುಫ್ಯಾಕ್ಚರರ್ಸ್’(ಎಸ್‌ಐಎಎಂ-ಸಿಯಾಂ)ನ ಅಂಕಿ ಅಂಶಗಳ ಪ್ರಕಾರ 2024ರ ಏಪ್ರಿಲ್‌ನಿಂದ 2025ರ ಫೆಬ್ರವರಿ ನಡುವಿನ 11 ತಿಂಗಳ ಅವಧಿಯಲ್ಲಿ 1,81,276 ವ್ಯಾಗನ್ ಆರ್ ವಾಹನಗಳು ಮಾರಾಟವಾಗಿವೆ. ಇದೇ 11 ತಿಂಗಳ ಅವಧಿಯಲ್ಲಿ ಟಾಟಾ ಕಂಪನಿಯ ಪಂಚ್, 1,78,858 ವಾಹನ ಮಾರಾಟವಾಗಿದೆ. ಅಂದರೆ, ವ್ಯಾಗನ್ ಆರ್ ವಾಹನ ಮಾರಾಟ 2418ರಷ್ಟು ಅಧಿಕವಾಗಿದೆ. ಹಣಕಾಸು ವರ್ಷದ ಮುಕ್ತಾಯಕ್ಕೆ ಇನ್ನೊಂದು (ಮಾರ್ಚ್) ತಿಂಗಳಷ್ಟೇ ಬಾಕಿ ಇದೆ. ವಾಹನ ಮಾರಾಟದಲ್ಲಿ ‘ವ್ಯಾಗನ್ ಆರ್’ ಇದೇ ಅಂತರ ಕಾಯ್ದುಕೊಳ್ಳುವ ನಿರೀಕ್ಷೆ ಇದ್ದು, ಹಣಕಾಸು ವರ್ಷದಲ್ಲಿ ನಂ.1 ಸ್ಥಾನ ಬಹುತೇಕ ಖಚಿತವಾಗಿದೆ.

ಅಲ್ಲದೆ, ಒಂದೇ ಶ್ರೇಣಿಯ ಎರಡೂ ವಾಹನಗಳ ಮಾಸಿಕ ಮಾರಾಟದ ಅಂಕಿ ಅಂಶ ಗಮನಿಸಿದರೆ ’ಪಂಚ್’ ಮಾರಾಟ ತಿಂಗಳಿಂದ ತಿಂಗಳಿಗೆ ಇಳಿಮುಖವಾಗುತ್ತಿರುವುದು ಸ್ಪಷ್ಟ ಗೋಚರ. 2024ರ ಏಪ್ರಿಲ್‌ನಲ್ಲಿ 19,158 ವಾಹನಗಳ ಮಾರಾಟವಾಗಿದ್ದ ‘ಪಂಚ್’, 2025 ಫೆಬ್ರವರಿಯಲ್ಲಿ 14,559 ವಾಹನಗಳಿಗೆ ಕುಸಿತವಾಗಿದೆ. ಇದೇ ವೇಳೆ ವ್ಯಾಗನ್ ಆರ್ ಮಾರಾಟ ಏರುಗತಿಯಲ್ಲಿರುವುದು ದಾಖಲಾಗಿದೆ. 2025ರ ಜನವರಿ-ಫೆಬ್ರವರಿಯಲ್ಲೇ 43,957 ವ್ಯಾಗನ್ ಆರ್ ವಾಹನ ಮಾರಾಟವಾಗಿವೆ.

ಈ ಮಧ್ಯೆ, ಹುಂಡೈನ ‘ಕ್ರೆಟಾ’ 1,76,812 ಕಾರುಗಳ ಮಾರಾಟದೊಂದಿಗೆ ಈ ಶ್ರೇಣಿಯ ಮಾರಾಟ ವಿಭಾಗದಲ್ಲಿ 2025ನೇ ಹಣಕಾಸು ವರ್ಷದಲ್ಲಿ 3ನೇ ಸ್ಥಾನದಲ್ಲಿದೆ. ಇತ್ತೀಚೆಗೆ ‘ಕ್ರೆಟಾ’ ಕಾರಿನ ಎಲೆಕ್ಟ್ರಿಕ್ ಮಾದರಿಯೂ ಮಾರುಕಟ್ಟೆ ಪ್ರವೇಶಿಸಿದ್ದು, ಬೇಡಿಕೆ ಗಳಿಸಿಕೊಂಡಿದೆ.

ಮಾರುತಿ ಸುಜುಕಿ ಮೇಲುಗೈ: ಪ್ರಸಕ್ತ ಹಣಕಾಸು ವರ್ಷದಲ್ಲಿ ಹುಂಡೈನ ಕ್ರೆಟಾ ಕಾರಿನ ನಂತರದ 5 ಸ್ಥಾನಗಳಲ್ಲಿಯೂ ಮಾರುತಿ ಸುಜುಕಿಯ ಕಾರುಗಳೇ ಇವೆ. 4ನೇ ಸ್ಥಾನದಲ್ಲಿ ಎರ್ಟಿಗಾ(1,74,168), 5ರಲ್ಲಿ ಬ್ರೆಜ್ಜಾ (1,72,617), 6ರಲ್ಲಿ ಸ್ವಿಫ್ಟ್ (1,61,895), 7ನೇ ಸ್ಥಾನದಲ್ಲಿ ಬಲೆನೊ(1,54,804) ಮತ್ತು 8ರಲ್ಲಿ ಫ್ರಾಂಕ್ಸ್ (1,52,547) ಇವೆ. 9ನೇ ಸ್ಥಾನದಲ್ಲಿ ಮಹೀಂದ್ರಾ ಕಂಪನಿಯ ‘ಸ್ಕಾರ್ಪಿಯೊ’ ಇದೆ. ಆದರೆ, 10ನೇ ಸ್ಥಾನದಲ್ಲಿ ಮತ್ತೆ ಮಾರುತಿ ಸುಜುಕಿ ವಾಹನ ‘ಡಿಜೈರ್’(1,49,561) ಇದೆ ಎಂಬುದು ಗಮನಾರ್ಹ.

2024ರ ಅಕ್ಟೋಬರ್‌ವರೆಗೂ ಟಾಪ್ 10 ಲಿಸ್ಟ್‌ನಲ್ಲಿದ್ದ ಟಾಟಾ ನೆಕ್ಸಾನ್ ಕಾರನ್ನು ನವೆಂಬರ್‌ನಲ್ಲಿ ಪಲ್ಲಟಗೊಳಿಸಿದ ಮಾರುತಿ ಸುಜುಕಿಯ ‘ಡಿಜೈರ್’ ಹೆಚ್ಚು ಬೇಡಿಕೆ ಗಳಿಸುವ ಮೂಲಕ 10ನೇ ಸ್ಥಾನಕ್ಕೇರಿದೆ. ನೆಕ್ಸಾನ್ ಮಾರಾಟ ಸಂಖ್ಯೆ 1,46,722ಕ್ಕೆ ಇಳಿಕೆಯಾಗಿದೆ.

ಹ್ಯಾಚ್‌ಬ್ಯಾಕ್ ಮಾದರಿ ಕಾರುಗಳ ವಿಭಾಗದಲ್ಲಿ ವ್ಯಾಗನ್ ಆರ್ ಕಾರಿನ ಮಾರಾಟ ಯಶಸ್ವಿಯಾಗಿ ಮುಂದುವರಿದಿರುವ ಮಧ್ಯೆಯೇ ‘ಸ್ಪೋರ್ಟ್ಸ್ ಯುಟಿಲಿಟಿ ವೆಹಿಕಲ್ಸ್’(ಎಸ್‌ಯುವಿ) ಮಾರುಕಟ್ಟೆಯಲ್ಲಿ ಮುಂಚೂಣಿಯಲ್ಲಿವೆ. 2025ನೇ ಹಣಕಾಸು ವರ್ಷದಲ್ಲಿನ ಟಾಪ್ 10 ಕಾರುಗಳ ಮಾರಾಟ ವಿಭಾಗದಲ್ಲಿ ಮೊದಲ 5 ವಾಹನಗಳು ‘ಎಸ್‌ಯುವಿ’ಗಳೇ (ಪಂಚ್, ಕ್ರೆಟಾ, ಬ್ರೆಜ್ಜಾ, ಫ್ರಾಂಕ್ಸ್ ಮತ್ತು ಸ್ಕಾರ್ಪಿಯೊ/ಎನ್) ಆಗಿವೆ ಎಂಬುದು ಉಲ್ಲೇಖಾರ್ಹ. ಉಳಿದಂತೆ ಟಾಪ್ 10 ಪಟ್ಟಿಯಲ್ಲಿ 3 ಹ್ಯಾಚ್‌ಬ್ಯಾಕ್ (ವಾಗನ್ ಆರ್, ಸ್ವಿಫ್ಟ್, ಬಲೆನೊ), ಒಂದು ‘ಮಲ್ಟಿ ಪರ್ಪಸ್ ವೆಹಿಕಲ್’(ಎಂಪಿವಿ) (ಎರ್ಟಿಗಾ) ಮತ್ತು ಒಂದು ಸೆಡಾನ್(ಡಿಜೈರ್) ವಾಹನಗಳಿವೆ. ಅಂದರೆ, 2025ನೇ ಹಣಕಾಸು ವರ್ಷದಲ್ಲೂ ‘ಎಸ್‌ಯುವಿ’ಗಳದ್ದೇ ಮೇಲುಗೈ ಆಗಿದೆ.

ವಿಶ್ಲೇಷಕರ ಅಭಿಮತ

2024ರಲ್ಲಿದ್ದ ನಂ.1 ಸ್ಥಾನವನ್ನು ಉಳಿಸಿಕೊಳ್ಳುವ ಸಲುವಾಗಿ 2025ರಲ್ಲಿಯೂ ಉಳಿಸಿಕೊಳ್ಳಲು ಟಾಟಾ ಮೋಟಾರ್ಸ್ ಎಲ್ಲಾ ಪ್ರಯತ್ನ ಮಾಡಬಹುದು. 11 ತಿಂಗಳಲ್ಲಿ ‘ಪಂಚ್’ 2418 ವಾಹನಗಳ ಮಾರಾಟದ ಅಂತರವನ್ನು ಸರಿತೂಗಿಸಿಕೊಳ್ಳಲು ಡೀಲರ್‌ಗಳ(ವಾಹನ ಮಾರಾಟಗಾರರ) ಮೇಲೆ ಒತ್ತಡ ಹೇರುವ ಸಾಧ್ಯತೆ ಇದೆ. ಅದೇ ಸಮಯದಲ್ಲಿ ಮಾರುತಿ ಸುಜುಕಿ ಕಂಪನಿ ಕೂಡಾ ‘ವ್ಯಾಗನ್ ಆರ್’ ಮಾರಾಟ ಹೆಚ್ಚಳಕ್ಕೂ ಸ್ಪರ್ಧೆ ಮಾಡಲಿದೆ. ಹಾಗಾಗಿ 11 ತಿಂಗಳಲ್ಲಿನ ಚಿತ್ರಣ ಕಡೆಯ 1 ತಿಂಗಳಲ್ಲಿ ಬದಲಾಗುವ ಸಾಧ್ಯತೆ ಕಡಿಮೆ ಎಂದು ವಾಹನ ಮಾರಾಟ ಕ್ಷೇತ್ರದ ವಿಶ್ಲೇಷಕರು ಅಭಿಪ್ರಾಯಪಟ್ಟಿದ್ದಾರೆ.

ಅತ್ಯಧಿಕ ಮಾರಾಟ

ಭಾರತದಲ್ಲಿ ಕಳೆದ 3 ವರ್ಷಗಳಲ್ಲಿ ವ್ಯಾಗನ್ ಆರ್ ಕಾರು ಅತ್ಯಧಿಕ ಸಂಖ್ಯೆಯಲ್ಲಿ ಮಾರಾಟವಾಗಿದೆ. ಹಣಕಾಸು ವರ್ಷ 2022ರಲ್ಲಿ 1,89,000 ಮತ್ತು 2023ರಲ್ಲಿ 2,12,340 ಹಾಗೂ 2024ರಲ್ಲಿ 2,00,177 ವ್ಯಾಗನ್ ಆರ್ ಕಾರುಗಳ ಮಾರಾಟವಾಗಿದೆ. ಅಲ್ಲದೇ, ಪ್ರಸಕ್ತ ಹಣಕಾಸು ವರ್ಷದ 11 ತಿಂಗಳಲ್ಲಿ 1,81,276 ವ್ಯಾಗನ್ ಆರ್ ಮಾರಾಟವಾಗಿವೆ. ಆ ಮೂಲಕ ‘ಬೆಸ್ಟ್ ಸೆಲ್ಲಿಂಗ್ ಕಾರ್’ ಎನಿಸಿಕೊಂಡಿದೆ.

ಶೀಘ್ರವೇ ಭಾರತ ಭೇಟಿ: ಸುನಿತಾ ವಿಲಿಯಮ್ಸ್

ವಾಷಿಂಗ್ಟನ್: ಶೀಘ್ರದಲ್ಲೇ ನನ್ನ ತಂದೆಯ ತಾಯ್ನಾಡು ಭಾರತಕ್ಕೆ ಭೇಟಿ ನೀಡಲಿದ್ದೇನೆ ಎಂದು ಗಗನಯಾತ್ರಿ ಸುನೀತಾ ವಿಲಿಯಮ್ಸ್ ಹೇಳಿದ್ದಾರೆ.

ಬಾಹ್ಯಾಕಾಶದಲ್ಲಿನ ಹಲವಾರು ಕೌತುಕಗಳು, ಸಂಶೋಧನೆಗಳು ಹಾಗೂ ಭೂಮಿ ಕುರಿತು ಸುದ್ದಿಗೋಷ್ಠಿಯಲ್ಲಿ ಸುನೀತಾ ಅನುಭವಗಳನ್ನು ಹಂಚಿಕೊಂಡಿದ್ದಾರೆ. ಈ ವೇಳೆ, ಭಾರತದ ಬಗೆಗೂ ಮಾತನಾಡಿದ್ದಾರೆ. ಭಾರತ ಬಾಹ್ಯಾಕಾಶ ಜಗತ್ತಿನಲ್ಲಿ ಅದಾಗಲೇ ತನ್ನ ನೆಲೆಯನ್ನು ಸ್ಥಾಪಿಸಿದೆ. ಗಗನಯಾನ ವಿಚಾರದಲ್ಲಿ ನಾನು ಭಾರತದ ಗಗನಯಾತ್ರಿಗಳಿಗೆ ನೆರವಾಗಲು ಸಿದ್ಧ ಎಂದಿದ್ದಾರೆ. ಮುಂದಿನ ಆಕ್ಸಿಯಮ್ ಕಾರ್ಯಾಚರಣೆಯಲ್ಲಿ ಭಾಗವಹಿಸಲಿರುವ ಭಾರತೀಯ ಪ್ರಜೆಗಳನ್ನು ಭೇಟಿ ಮಾಡುತ್ತೇನೆ. ನಮ್ಮ ಅನುಭವಗಳನ್ನು ಹಂಚಿಕೊಳ್ಳಬಹುದೆಂದು ನಾನು ಭಾವಿಸುತ್ತೇನೆ. ಭಾರತ ಶ್ರೇಷ್ಠ ಪ್ರಜಾಪ್ರಭುತ್ವ ದೇಶ ಎಂದು ಬಣ್ಣಿಸಿದ್ದಾರೆ.

ಬಾಹ್ಯಕಾಶದಿಂದ ಭಾರತ ಅದ್ಭುತವಾಗಿ ಕಾಣುತ್ತದೆ. ಹಿಮಾಲಯದ ಮೇಲೆ ಹೋದಾಗಲೆಲ್ಲ ಅದ್ಭುತ ಚಿತ್ರಗಳು ಸಿಕ್ಕವು. ಬುಚ್ ವಿಲ್ಮೋರ್ ಬಹಳಷ್ಟು ಫೋಟೊಗಳನ್ನು ಕ್ಲಿಕ್ ಮಾಡಿದ್ದಾರೆ. ಗುಜರಾತ್ ಮತ್ತು ಮುಂಬೈ ದೀಪಗಳ ಜಾಲ ನಕ್ಷತ್ರ ಲೋಕದಂತೆ ಕಾಣುತ್ತದೆ.

-ಸುನಿತಾ ವಿಲಿಯಮ್ಸ್ ನಾಸಾ ಗಗನಯಾತ್ರಿ

ಕಂಪ್ಯೂಟರ್ ದಿಗ್ಗಜ ಮೈಕ್ರೊಸಾಫ್ಟ್‌ಗೀಗ 50ರ ಸಂಭ್ರಮ!

ಕಂಪ್ಯೂಟರ್ ಮಾರುಕಟ್ಟೆ: ‘ಎಂಎಸ್’ನದು 2.9 ಲಕ್ಷ ಕೋಟಿ ಡಾಲರ್ ಪಾಲು | 1975ರಲ್ಲಿ ಸ್ಥಾಪಿತ ಮೈಕ್ರೊಸಾಫ್ಟ್ ಕಂಪನಿಗೆ ಏ.4ರಂದು ಸುವರ್ಣ ಸಂಭ್ರಮ

ಸ್ಯಾನ್‌ಫ್ರಾನ್ಸಿಸ್ಕೊ: ವಾವ್, ಗಣಕಯಂತ್ರ ತಯಾರಕ ಕಂಪನಿ ಮೈಕ್ರೊಸಾಫ್ಟ್‌ಗೀಗ ಭರ್ತಿ 50 ವರ್ಷ.

1975ರಲ್ಲಿ ಕಂಪ್ಯೂಟರ್ ಪರಿಚಯಿಸಿದ ಮೈಕ್ರೊಸಾಫ್ಟ್ ಕಂಪನಿ ಈಗ ಸುವರ್ಣ ಸಂಭ್ರಮದಲ್ಲಿದೆ. ಅರ್ಧ ಶತಮಾನ ಕಳೆಯುವಷ್ಟರಲ್ಲೇ ವಿಶ್ವದ ಬಹುತೇಕ ಮನೆಗಳಲ್ಲಿ, ಎಲ್ಲಾ ಕಚೇರಿಗಳಲ್ಲಿ ಗಣಕಯಂತ್ರ ಇರುವಂತೆ ಆಗಿರುವುದರಲ್ಲಿ ಮೈಕ್ರೊಸಾಫ್ಟ್ ಕಂಪನಿಯ ಕೊಡುಗೆ ದೊಡ್ಡದಿದೆ.

ಎಂಎಸ್‌ನಿಂದ ವಿನ್ಯಾಸಗೊಂಡ ಮೆಕಿಂತೋಷ್ ಕಂಪ್ಯೂಟರ್.

ಬಿಲ್ ಗೇಟ್ಸ್ ಮತ್ತು ಪೌಲ್ ಆಲೆನ್ ಜಂಟಿಯಾಗಿ ಆರಂಭಿಸಿದ ಕಂಪನಿ ಜನಮನಕ್ಕೆ ಬಲು ಹತ್ತಿರವಾಗಿದೆ. ಕಂಪ್ಯೂಟರ್ ಎಂದರೆ ‘ಮೈಕ್ರೊಸಾಫ್ಟ್’ ಎಂಬಷ್ಟು ಜನರ ಹೃದಯಕ್ಕೆ ಆಪ್ತವಾಗಿದೆ.

ಅಂತರ್ಜಾಲ ಸಂಪರ್ಕವು ವಿಶ್ವಾದ್ಯಂತದ ಜನರ ಬದುಕಿನ ಭಾಗವಾಗಿರುವ ಈ ಸಂದರ್ಭದಲ್ಲಿ ಮೈಕ್ರೊಸಾಫ್ಟ್ ಕಂಪನಿ 50ನೇ ವರ್ಷದ ಸಂಭ್ರಮವನ್ನು ಇದೇ ಶುಕ್ರವಾರ(ಏ.4ರಂದು) ಆಚರಿಸಿಕೊಳ್ಳುತ್ತಿದೆ.

‘ಪ್ರತಿಯೊಂದು ಮನೆಗೂ, ಕಚೇರಿಗೂ ಕಂಪ್ಯೂಟರ್ ಇರುವಂತೆ ಮಾಡಬೇಕು’ ಎಂಬ ಕನಸು-ಗುರಿಯನ್ನಿಟ್ಟುಕೊಂಡು ಕಾರ್ಯಾರಂಭ ಮಾಡಿದ ಮೈಕ್ರೊಸಾಫ್ಟ್ ಕಂಪನಿ, ಇದೀಗ ವೇಗದ ಬೆಳವಣಿಗೆ ಕಾಣುತ್ತಿರುವ ‘ಆರ್ಟಿಫಿಷಯಲ್ ಇಂಟೆಲಿಜೆನ್ಸ್’(ಎ.ಐ-ಕೃತಕ ಬುದ್ಧಿಮತ್ತೆ) ಕ್ಷೇತ್ರದಲ್ಲಿಯೂ ತನ್ನ ಸಾಮರ್ಥ್ಯ ತೋರಲು, ಭವಿಷ್ಯವನ್ನು ಕಂಡುಕೊಳ್ಳಲು, ‘ಎ.ಐ ನಾಯಕ’ನಾಗಲು ಮುಂದಾಗಿದೆ.

‘ಆರಂಭ ದಿಸೆಯಲ್ಲಿ ಬೋರಿಂಗ್ ಕಂಪನಿ ಎನಿಸಿಕೊಂಡಿದ್ದ, ಜನರನ್ನು ಸೆಳೆಯುವಲ್ಲಿ ಹಿನ್ನಡೆ ಕಂಡಿದ್ದ ಕಂಪನಿ, ಪ್ರಸ್ತುತ 2.9 ಲಕ್ಷ ಕೋಟಿ ಡಾಲರ್‌ಗಳಷ್ಟು ಮಾರುಕಟ್ಟೆ ಸಾಮರ್ಥ್ಯಕ್ಕೆ ಬೆಳೆದಿರುವುದನ್ನು ನೋಡಿದರೆ ಅಚ್ಚರಿಯಾಗುತ್ತದೆ’ ಎಂದು ವಾಷಿಂಗ್ಟನ್ ಮೂಲದ ರಿಚ್‌ಮಂಡ್ ಕಂಪನಿಯ ಇ-ಮಾರುಕಟ್ಟೆ ವಿಶ್ಲೇಷಕ ಜೆರೆಮಿ ಗೋಲ್ಡ್‌ಮನ್ ವ್ಯಾಖ್ಯಾನಿಸಿರುವುದು ಮೈಕ್ರೊಸಾಫ್ಟ್ ಕಂಪನಿಯ ಆರಂಭ ಮತ್ತು ಬೆಳವಣಿಗೆಯ ಸಣ್ಣ ಚಿತ್ರಣ ಕಟ್ಟಿಕೊಡುತ್ತದೆ.

ಸದ್ಯ ಮಾರುಕಟ್ಟೆಯಲ್ಲಿ ಅತ್ಯಧಿಕ ಷೇರುಮೌಲ್ಯ ಹೊಂದಿರುವ ಏಕಮೇವ ಕಂಪನಿ ಯೆಂದರೆ ಅದು ಐಫೋನ್ ತಯಾರಕ ‘ಆಪಲ್’. ಇನ್ನೊಂದೆಡೆ ಕಂಪ್ಯೂಟರ್ ಲೋಕದಲ್ಲಿ ವಿಶ್ವವ್ಯಾಪಿಯಾಗಿರುವ ಸಾಫ್ಟ್‌ವೇರ್ ಮತ್ತು ಕ್ಲೌಡ್ ಕಂಪ್ಯೂಟಿಂಗ್ ಕ್ಷೇತ್ರಗಳಿಂದ ಅಪಾರ ವರಮಾನ ಗಳಿಸುತ್ತಿರುವ ಕಂಪನಿಯೆಂದರೆ ಮೈಕ್ರೊಸಾಫ್ಟ್. ಒಂದು ಕಾಲದಲ್ಲಿದ್ದ ಬಾಕ್ಸ್ ಲೆಕ್ಕದಲ್ಲಿರುತ್ತಿದ್ದ ಫ್ಲಾಪಿಡಿಸ್ಕ್, ಸಿಡಿಗಳ ಕಾಲ ಕೊನೆಗೊಂಡು ಮೈಕ್ರೊಸಾಫ್ಟ್, ಈಗ ಆನ್‌ಲೈನ್, ಕ್ಲೌಡ್ ಕಂಪ್ಯೂಟಿಂಗ್ ಜಗತ್ತಿನಲ್ಲಿ ವಿಜೃಂಭಿಸುತ್ತಿದೆ. ಈ ವಿಭಾಗದಲ್ಲಿ ಮೈಕ್ರೊಸಾಫ್ಟ್‌ಗೆ ಸ್ಪರ್ಧಿಗಳೆಂದರೆ ‘ಅಮೆಜಾನ್ ವೆಬ್ ಸರ್ವಿಸಸ್’(ಎಡಬ್ಲ್ಯುಎಸ್) ಮತ್ತು ‘ಗೂಗಲ್’ ಕಂಪನಿಗಳಾಗಿವೆ.

ಮೈಕ್ರೊಸಾಫ್ಟ್ ಕಂಪನಿ ಸ್ಥಾಪಕರಾದ ಬಿಲ್ ಗೇಟ್ಸ್ ಮತ್ತು ಆಲೆನ್ ಪೌಲ್.

ಸ್ಪರ್ಧೆ ಒಡ್ಡಲಾಗದ ಲಿಂಕ್ಡ್‌ಇನ್

ಅರ್ಧ ಶತಕ ಬಾರಿಸಿರುವ ಯಶಸ್ವಿ ಕಂಪನಿ ಮೈಕ್ರೊಸಾಫ್ಟ್‌ಗೀಗ ಹೊಸ ಸವಾಲುಗಳು ಎದುರಾಗುತ್ತಿವೆ. 2016ರಲ್ಲಿ ಸಾಮಾಜಿಕ ಜಾಲತಾಣ ಕ್ಷೇತ್ರಕ್ಕೂ ಪದಾರ್ಪಣೆ ಮಾಡಿದ ಮೈಕ್ರೊಸಾಫ್ಟ್ ವೃತ್ತಿನಿರತರಿಗಾಗಿ ‘ಲಿಂಕ್ಡ್‌ಇನ್’ ಪರಿಚಯಿಸಿತು. ಅದರಲ್ಲಿಯೂ ಯಶಸ್ಸು ಸಿಕ್ಕಿದ್ದು, ಸ್ಥಿರವಾದ ಪ್ರಗತಿ ಸಾಧ್ಯವಾಗಿದೆ. ಆದರೆ, ‘ಮೆಟಾ’ ಕಂಪನಿಯ ‘ಫೇಸ್‌ಬುಕ್’ ಮತ್ತು ‘ಇನ್‌ಸ್ಟಾಗ್ರಾಂ’ ಅಥವಾ ಎಲಾನ್ ಮಸ್ಕ್ ಅವರ ‘ಎಕ್ಸ್’ ಸಂದೇಶವಾಹಕ ಆಪ್‌ಗಳಿಗಿರುವ ಬೇಡಿಕೆಯ ಮಟ್ಟವನ್ನು ಲಿಂಕ್ಡ್‌ಇನ್‌ಗೆ ಮುಟ್ಟಲಾಗಿಲ್ಲ ಎಂಬುದು ಉಲ್ಲೇಖಾರ್ಹ.

- 1980 ಜೂ.16 ಮೊದಲ ಎಂಎಸ್ ಕಂಪ್ಯೂಟರ್ ಬಿಡುಗಡೆ
- 1987 ಫೆ.27 ಎಂಎಸ್ ವಿಂಡೋಸ್ 2.0ಗೆ ಪರಿಷ್ಕರಣೆ
- 1989 ಫೆ.27 ಪ್ರಥಮ ‘ಆಫೀಸ್ ವರ್ಡ್’ ಪರಿಚಯ
- 1990 ಫೆ.27 ಎಂಎಸ್ 3.0 ಪರಿಚಯ
- 1995 ಫೆ.27 ವಿಂಡೋಸ್ 95
- 1998 ಫೆ.27 ಎಂಎಸ್ 98 ಬಿಡುಗಡೆ
- 2000 ಫೆ.27 ವಿಂಡೋಸ್ 2000
- 2001 ಫೆ.27 ‘ಎಕ್ಸ್ ಬಾಕ್ಸ್’, ಆಫೀಸ್ ಎಕ್ಸ್‌ಪಿ ಬಿಡುಗಡೆ
- 2005 ಫೆ.28 ‘ಎಕ್ಸ್ ಬಾಕ್ಸ್ 360’
- 2010 ಫೆ.28 ಎಂಎಸ್ ಫೋನ್, ಆಫೀಸ್ ಫ್ರೀ ಚರಿಚಯ
- 2014 ಫೆ.28 ಬಿಂಗ್ಸ್ ಕ್ರಿಯೇಷನ್, ಎಂಎಸ್ ಆಫೀಸ್ 365

ಬಿಲ್ ಗೇಟ್ಸ್ ಮತ್ತು ಅವರ ಬಾಲ್ಯದ ಗೆಳೆಯ ಪೌಲ್ ಆಲೆನ್ ಜತೆಗೂಡಿ 1975ರಲ್ಲಿ ‘ಮೈಕ್ರೊಸಾಫ್ಟ್’ ಕಂಪನಿ ಆರಂಭಿಸಿದರು. ಮೊದಲಿಗೆ ‘ಎಂಎಸ್-ಡಿಒಎಸ್’ ಆಪರೇಟಿಂಗ್ ಸಿಸ್ಟಂ ಪರಿಚಯಿಸಿದರು. ನಂತರದಲ್ಲಿ ಅದನ್ನೇ ‘ವಿಂಡೋಸ್’ ಎಂದು ಕರೆಯಲಾಯಿತು. ಇದೇ ವಿಂಡೋಸ್ ವಿಶ್ವದೆಲ್ಲೆಡೆಯ ಕಂಪ್ಯೂಟರ್‌ಗಳ ಆತ್ಮವಾಯಿತು. ನಂತರದಲ್ಲಿ ‘ಮೈಕ್ರೊಸಾಫ್ಟ್’ ಕಂಪನಿ ಕಚೇರಿಗಳಲ್ಲಿನ ದಿನನಿತ್ಯದ ಕಾರ್ಯ ನಿರ್ವಹಣೆಗಾಗಿ ವರ್ಡ್, ಎಕ್ಸೆಲ್, ಪವರ್ ಪಾಯಿಂಟ್‌ಗಳನ್ನು ಅಭಿವೃದ್ಧಿಪಡಿಸಿ ಮಾರುಕಟ್ಟೆಗೆ ಒದಗಿಸಿತು. ಇವೆಲ್ಲವೂ ಕಚೇರಿ ನಿರ್ವಹಣೆ ಗಣಕಯಂತ್ರಗಳಿಗೆ ಅತ್ಯಗತ್ಯ ಮತ್ತು ಅನಿವಾರ್ಯವಾದ ಅಪ್ಲಿಕೇಷನ್‌ಗಳಾದವು.

ಮೈಕ್ರೊಸಾಫ್ಟ್‌ನ ಪ್ರಥಮ ಗಣಕಯಂತ್ರ.

ಮೈಕ್ರೊಸಾಫ್ಟ್ ಬಹಳಷ್ಟು ವೈವಿಧ್ಯದ ಬಿಜಿನೆಸ್ ಅಪ್ಲಿಕೇಷನ್‌ಗಳನ್ನು ಹೊಂದಿದ್ದರೂ ಅವುಗಳಿಗೂ ತಕ್ಕ ಪ್ರತಿಸ್ಪರ್ಧಿಗಳು, ಸವಾಲುಗಳು ಎದುರಾಗಿ ದುರ್ಬಲವೆನಿಸಿವೆ. ಅದಕ್ಕೆ ಆಫೀಸ್ ಅಪ್ಲಿಕೇಷನ್ ಒಂದು ಉದಾಹರಣೆ. ಹಾಗಿದ್ದೂ ಈ ಆಫೀಸ್ ಸಾಫ್ಟ್‌ವೇರ್ ಮೈಕ್ರೊಸಾಫ್ಟ್ ಪಾಲಿಗೆ ನಿರಂತರ ವರಮಾನ ತರುವ ತಂತ್ರಾಂಶವಾಗಿದೆ ಎಂದು ಗೋಲ್ಡ್‌ಮನ್ ವ್ಯಾಖ್ಯಾನಿಸುತ್ತಾರೆ.

ಸದ್ಯ ಮೈಕ್ರೊಸಾಫ್ಟ್ ಕಂಪನಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ(ಸಿಇಒ) ಆಗಿರುವ ಭಾರತ ಮೂಲದ ಸತ್ಯ ನಾದೆಲ್ಲಾ, ವಿಶ್ವದಲ್ಲಿ ಚಾಲ್ತಿಯಲ್ಲಿರುವ ಎಲ್ಲಾ ಬಗೆಯ ಎಲೆಕ್ಟ್ರಾನಿಕ್ ಸಾಧನಗಳಲ್ಲೂ ಮೈಕ್ರೊಸಾಫ್ಟ್‌ನ ಒಂದಲ್ಲಾ ಒಂದು ತಂತ್ರಾಂಶ ಬಳಕೆಯಲ್ಲಿರುವಂತೆ ಕ್ಲೌಡ್ ಮೂಲಕ ಸಾಧ್ಯವಾಗಿಸಿದ್ದಾರೆ. ಆ ಸಾಧನಗಳ ಬಳಕೆದಾರರನ್ನು ಕಂಪನಿಯ ನೋಂದಾಯಿತ ಸೇವೆಗಳ ಬಳಕೆದಾರರನ್ನಾಗಿ ಮಾಡಿದ್ದಾರೆ.

ಭವಿಷ್ಯ ನುಡಿದ ಬಿಜೆಪಿ ಜಿಲ್ಲಾಧ್ಯಕ್ಷ ದಡೇಸುಗೂರು | ಬಸನಗೌಡ ಪಾಟೀಲ್ ಯತ್ನಾಳಗೆ ಟಾಂಗ್

ಅಧಿಕಾರಕ್ಕೆ ಬಂದರೆ ವಿಜಯೇಂದ್ರ ಸಿಎಂ

ಕೊಪ್ಪಳ: ಮುಂದಿನ ದಿನದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದರೆ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರೇ ಮುಖ್ಯಮಂತ್ರಿ ಆಗಲಿದ್ದಾರೆ ಎಂದು ಬಿಜೆಪಿ ಜಿಲ್ಲಾಧ್ಯಕ್ಷ ಬಸವರಾಜ ದಢೇಸುಗೂರು ಭವಿಷ್ಯ ನುಡಿದರು. ನಗರದ ಕೊಪ್ಪಳ ಮೀಡಿಯಾ ಕ್ಲಬ್ ನಲ್ಲಿ ಸುದ್ದಿಗೋಷ್ಠಿ ನಡೆಸಿ ಮಂಗಳವಾರ ಮಾತನಾಡಿದರು.

ಬಿವೈ ವಿಜಯೇಂದ್ರ ಅವರ ನಾಯಕತ್ವವನ್ನು ವಹಿಸಿ ಎಲ್ಲರೂ ಒಪ್ಪಿಕೊಂಡಿದ್ದಾರೆ. ಜೊತೆಗೆ ಪಕ್ಷದ ಹೈಕಮಾಂಡ್ ಕೂಡ ಅವರ ಕಾರ್ಯ ವೈಖರಿ ಮೆಚ್ಚಿಕೊಂಡಿದೆ. ಒಂದಷ್ಟು ವಿರೋಧಿಗಳು ಏನೇ ಮಾತನಾಡಿದರೂ ಬಿಎಸ್‌ವೈ ವರ್ಚಸ್ಸು ಕುಗ್ಗಿಸಲು ಸಾಧ್ಯವಿಲ್ಲ ಎಂದು ಪರೋಕ್ಷವಾಗಿ ಉಚ್ಚಾಟಿತ ಶಾಸಕ ಬಸನಗೌಡ ಪಾಟೀಲ್ ಯತ್ನಾಳಗೆ ಟಾಂಗ್ ನೀಡಿದರು.


ಕೊಪ್ಪಳದ ಮೀಡಿಯಾ ಕ್ಲಬ್ ನಲ್ಲಿ ಬಿಜೆಪಿ ಮುಖಂಡರು ಮಂಗಳವಾರ ಸುದ್ದಿಗೋಷ್ಠಿ ನಡೆಸಿ ಮಾತನಾಡಿದರು.

ಡಿಪಿಆರ್ ಮಾಡಿಸಿದರೆ ಅನುಮೋದನೆ ಕೊಡಿಸುವೆ!

ತುಂಗಭದ್ರ ಜಲಾಶಯಕ್ಕೆ ಹೊಸ ಕ್ರಸ್ಟ್ ಗೇಟ್ ಅಳವಡಿಕೆ ಸಂಬಂಧ ರಾಜ್ಯ ಸರಕಾರ ಡಿಪಿಆರ್ ಸಿದ್ಧಗೊಳಿಸಿ, ಕೇಂದ್ರ ಸರಕಾರಕ್ಕೆ ಸಲ್ಲಿಸಬೇಕು. ಆದರೆ, ಈ ಬಗ್ಗೆ ರಾಜ್ಯ ಸರಕಾರ ಯಾವುದೇ ಪ್ರಸ್ತಾವನೆ ಸಲ್ಲಿಸಿಲ್ಲ. ಡಿಪಿಆರ್ ಸಲ್ಲಿಸದಿದ್ದರೆ ಕೇಂದ್ರ ಸರಕಾರ ಯಾವ ಮಾನದಂಡದ ಆಧಾರದ ಮೇಲೆ ಅನುದಾನ ನೀಡಬೇಕು? ಆದ್ದರಿಂದ ರಾಜ್ಯ ಸರಕಾರ ಹೊಸ ಕ್ರಸ್ಟ್ ಗೇಟ್ ಅಳವಡಿಕೆ ಬಗ್ಗೆ ಕೂಡಲೇ ಡಿಪಿಆರ್ ಸಲ್ಲಿಸಲಿ. ನಾನೇ ಕೇಂದ್ರದಿಂದ ಅನುಮೋದನೆ ಮಾಡಿಸುವೆ ಎಂದು ಬಸವರಾಜ ದಢೇಸುಗೂರು ರಾಜ್ಯ ಸರಕಾರಕ್ಕೆ ಸವಾಲು ಹಾಕಿದರು.

ಕನಕಗಿರಿ ಉತ್ಸವ ನಡೆಯಬೇಕು !

ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿ, ಕನಕಗಿರಿ ಉತ್ಸವ ಜಾತ್ರೆಯಲ್ಲೇ ಮಾಡಿ ನಕಲಿ ಬಿಲ್ ಸೃಷ್ಟಿಸಿ ಹಣ ಹೊಡೆಯಲು ಜಿಲ್ಲಾ ಉಸ್ತುವಾರಿ ಸಚಿವರು ಯೋಚಿಸಿದ್ದರು. ಆದರೆ, ಉತ್ಸವ- ಜಾತ್ರೆ ಒಟ್ಟಿಗೆ ಮಾಡಲು ಕಾಂಗ್ರೆಸ್ ಕಾರ್ಯಕರ್ತರೇ ಬೇಡ ಎಂದಿದ್ದರಿಂದ ಉತ್ಸವ ರದ್ದಾಗಿದೆ. ಕಳೆದ ವರ್ಷದ ಉತ್ಸವದಲ್ಲಿ 8 ಕೋಟಿ ರು. ಅಕ್ರಮ ನಡೆದಿದೆ. ಈ ವಿಚಾರ ಹೊರ ಬಂದಿದ್ದರಿಂದ ಈ ಬಾರಿ ಉತ್ಸವ ರದ್ದಾಗಿದೆ. ಈಗ ಜಾತ್ರೆ ಮುಗಿದಿದೆ. ಶೀಘ್ರವೇ ಉತ್ಸವ ಮಾಡಬೇಕು ಎಂದು ಧಡೆಸುಗೂರ ಒತ್ತಾಯಿಸಿದರು.

ಕಾಂಗ್ರೆಸ್ ಅಧಿಕಾರಕ್ಕೆ ಬಂದಾಗಿನಿಂದ ಬೆಲೆ ಏರಿಕೆ ಹೆಚ್ಚಾಗಿದೆ. ಇದರಿಂದ ಬಡವರ ಹಾಗೂ ಮಧ್ಯಮ ವರ್ಗದ ಜನರಿಗೆ ಹೊರೆಯಾಗುತ್ತಿದೆ. ಗ್ಯಾರಂಟಿ ಆಸೆ ತೋರಿಸಿ, ಬಡವರ ಹೊಟ್ಟೆಯ ಮೇಲೆ ಬರೆ ಎಳೆಯುತ್ತಿರುವ ರಾಜ್ಯದ ಕಾಂಗ್ರೆಸ್ ಸರಕಾರದ ವಿರುದ್ಧ ಬಿಜೆಪಿ ನಿರಂತರ ಹೋರಾಟ ರೂಪಿಸಲಿದೆ ಎಂದರು.

ಕಾಂಗ್ರೆಸ್ ಅಧಿಕಾರಕ್ಕೆ ಬಂದ ನಂತರ ಪ್ರತಿ ಲೀಟರ್ ಹಾಲಿನ ದರ 9 ರು. ಏರಿಕೆ ಮಾಡಲಾಗಿದೆ. ಸರಕಾರ ರೈತರಿಗೆ 662 ಕೋಟಿ ರು. ಪ್ರೋತ್ಸಾಹ ಧನ ಬಾಕಿ ಉಳಿಸಿಕೊಂಡಿದೆ. ಸ್ಮಾರ್ಟ್ ಮೀಟರ್ ನಲ್ಲೂ ಭ್ರಷ್ಟಾಚಾರ ಮಾಡಿದ್ದಾರೆ. ಬಸ್ ದರ ಶೇ.15ರಷ್ಟು ಏರಿಕೆಯಾಗಿದೆ. ಸರಕಾರ ಕೇವಲ ಬೊಕ್ಕಸ ತುಂಬಿಸಿಕೊಳ್ಳುವುದರಲ್ಲಿ ನಿರತವಾಗಿದ್ದು, ಗ್ರಾಹಕರು, ರೈತರು, ಬಡವರ ಮೇಲೆ ಕಾಳಜಿ ಇಲ್ಲ, ಇದು ಭ್ರಷ್ಟ ಮತ್ತು ಜನ ವಿರೋಧಿ ಸರಕಾರ ಎಂದು ಆಕ್ರೋಶ ವ್ಯಕ್ತಪಡಿಸಿದರು. ವಿಧಾನ ಪರಿಷತ್ ಶಾಸಕಿ ಹೇಮಲತಾ ನಾಯಕ, ಲೋಕಸಭೆ ಪರಾಜಿತ ಅಭ್ಯರ್ಥಿ ಡಾ. ಬಸವರಾಜ ಕ್ಯಾವಟರ್, ಮುಖಂಡರಾದ ಮಹೇಶ ಹಾದಿಮನಿ, ನಾಗರಾಜ ಬಿಲ್ಗಾರ್ ಇತರರು ಇದ್ದರು.

> ಬೆಂಗಳೂರಿನ ಫ್ರೀಡಂ ಪಾರ್ಕ್ ನಲ್ಲಿ ಏ. 2ರಂದು ಬೆಳಗ್ಗೆ 11ಕ್ಕೆ, ಕಾಂಗ್ರೆಸ್ ಸರಕಾರದ ಬೆಲೆ ಏರಿಕೆ ನೀತಿ ವಿರುದ್ಧ ಅಹೋರಾತ್ರಿ ಧರಣಿ ಆರಂಭವಾಗಲಿದೆ. ಬಿಜೆಪಿಯ 18 ಶಾಸಕರ ಅಮಾನತು ಮಾಡಿದ ಸ್ಪೀಕರ್ ನಡೆ ಖಂಡಿಸಿ ಅಂದೇ ಕೆಂಗಲ್ ಹನುಮಂತಯ್ಯ ಪ್ರತಿಮೆ ಮುಂದೆ ಪ್ರತಿಭಟನೆ ನಡೆಸಲಾಗುವುದು. ಅಮಾನತು ಆದೇಶ ವಾಪಾಸ್ ಪಡೆಯುವಂತೆ ಸ್ಪೀಕರ್ ಗೆ ಮನವಿ ಸಲ್ಲಿಸಲಾಗುವುದು.
> – ಬಸವರಾಜ ಧಡೆಸುಗೂರ, ಬಿಜೆಪಿ ಜಿಲ್ಲಾಧ್ಯಕ್ಷ

> ಗ್ಯಾರಂಟಿ ಯೋಜನೆಗೆ ರಾಜ್ಯ ಸರಕಾರ ಪ್ರತಿ ವರ್ಷ 52 ಸಾವಿರ ಕೋಟಿ ರೂ. ಬಳಸುತ್ತಿದೆ. ಇದಕ್ಕಾಗಿ ಮದ್ಯಪಾನ, ಹಾಲು, ವಿದ್ಯುತ್ ಸೇರಿ ಎಲ್ಲ ವಲಯದಲ್ಲಿ ಬೆಲೆ ಏರಿಕೆ ಮಾಡಲಾಗಿದೆ. ಮಧ್ಯಮ ವರ್ಗದವರಿಗೆ ಮುದ್ರಾಂಕ ಶುಲ್ಕ ಹೊರೆ ಆಗಿದೆ. ಆಸ್ತಿ ವಿಭಜನೆ ಶುಲ್ಕ 4 ಪಟ್ಟು ಏರಿಕೆ ಮಾಡಲಾಗಿದೆ. ಸರಕಾರಿ ಆಸ್ಪತ್ರೆಯಲ್ಲಿ ಒಪಿಡಿ ಮತ್ತು ಐಪಿಡಿ ಶುಲ್ಕ ಶೇ.10-30 ರಷ್ಟು ಹೆಚ್ಚಿಸಲಾಗಿದೆ.
> – ಹೇಮಲತಾ ನಾಯಕ, ವಿಧಾನ ಪರಿಷತ್ ಸದಸ್ಯೆ

ಸಮಾಚಾರ ಸಣ್ಣದಲ್ಲ

ಅಪಘಾತ ಸ್ಥಳಕ್ಕೆ ಎಸ್ಪಿ ಭೇಟಿ; ಪರಿಶೀಲನೆ

ಮುದಗಲ್: ಇತ್ತೀಚಿಗೆ ಸಮೀಪದ ಆಶಿಹಾಳ ಗ್ರಾಮದ ಹೊರವಲಯದಲ್ಲಿ ನಡೆದ ರಸ್ತೆ ಅಪಘಾತ ಸ್ಥಳಕ್ಕೆ ಜಿಲ್ಲಾ ಪೊಲೀಸ್ ವರಿಷ್ಟಾಧಿಕಾರಿ ಪುಟ್ಟಮಾದಯ್ಯ ಭೇಟಿ ನೀಡಿ ಪರಿಶೀಲನೆ ಮಾಡಿದರು. ಆಶಿಹಾಳ ಹತ್ತಿರ ಟ್ರಾಕ್ಟರ್ ಮತ್ತು ಬೈಕ್ ನಡುವೆ ಸಂಭವಿಸಿದ ರಸ್ತೆ ಅಪಘಾತದಲ್ಲಿ ಸ್ಥಳದಲ್ಲಿಯೇ ಬೈಕ್ ಸವಾರ ಸಾವಿಗೀಡಾದ ವರದಿ ಪಡೆದು ಸ್ಥಳ ಪರಿಶೀಲಿಸಿದರು. ಲೋಕೋಪಯೋಗಿ ಇಲಾಖೆ ಕೂಡಲೇ ರಸ್ತೆ ತಿರುವುಗಳಿಗೆ ಸೂಚನಾ ಫಲಕಗಳನ್ನು ಅಳವಡಿಸುವಂತೆ ತಿಳಿಸಲು ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿದರು. ರಸ್ತೆ ಅಪಘಾತ ನಿಯಂತ್ರಣಕ್ಕೆ ಸಾರ್ವಜನಿಕರು ಜಾಗೃತ ವಹಿಸಬೇಕೆಂದು ಮನವಿ ಮಾಡಿದರು. ಲಿಂಗಸುಗೂರು ಡಿವೈಎಸ್‌ಪಿ ದತ್ತಾತ್ರೇಯ ಕರ್ನಾಡ್, ಮಸ್ಕಿ ವೃತ್ತ ಸಿಪಿಐ ಬಾಲಚಂದ್ರ ಲಕ್ಕಂ, ಮುದಗಲ್ ಪಿಎ ವೆಂಕಟೇಶ ಮಾಡಗೇರಿ ಇದ್ದರು.

ಅಂಗಡಿಗಳ ಮಾಲೀಕರ ಸಭೆ

ಮುದಗಲ್: ರಾಯಚೂರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆದೇಶದ ಮೇರೆಗೆ ಮಂಗಳವಾರ ಸ್ಥಳೀಯ ಪೊಲೀಸ್ ಠಾಣೆಯಲ್ಲಿ ವಿವಿಧ ಅಂಗಡಿಗಳ ಮಾಲೀಕರ ಸಭೆ ನಡೆಯಿತು. ಲಿಂಗಸುಗೂರ ಡಿವೈಎಸ್ಪಿ ದತ್ತಾತ್ರೇಯ ಕಾರ್ನಾಡ ಅಧ್ಯಕ್ಷತೆಯಲ್ಲಿ ಪಟ್ಟಣದ ಕಿರಣಿ ಅಂಗಡಿ, ಮತ್ತು ಬಂಗಾರದ ಅಂಗಡಿ, ಹಾರ್ಡ್ವೇರ್ ಸೇರಿದಂತೆ ವಿವಿಧ ಅಂಗಡಿಗಳ ಮಾಲೀಕರ ಸಭೆ ನಡೆಯಿತು ಅಂಗಡಿಗಳಿಗೆ ಮತ್ತು ಮನೆಗಳಿಗೆ ರೋಡ್ಗೆ ಕವರ್ ಆಗುವಂತೆ ಸಿಸಿ ಕ್ಯಾಮರಗಳನ್ನು ಅಳವಡಿಸಬೇಕೆಂದು ಸೂಚನೆ ನೀಡಿದರು. ಪೊಲೀಸ್ ಇಲಾಖೆ ಸಹಕಾರ ನೀಡಬೇಕು ಎಂದರು ಈ ಸಂದರ್ಭದಲ್ಲಿ ಮಸ್ಕಿ ಸಿಪಿಐ ಬಾಲಚಂದ್ರ ಲಕಂ, ಮುದಗಲ್ ಪಿಎ ವೆಂಕಟೇಶ ಮಾಡಗೇರಿ,ಸಿಬ್ಬಂದಿ ಅಮರೇಶ ಎಚ್, ಕೆ, ಸೇರಿದಂತೆ ಪಟ್ಟಣದ ವಿವಿಧ ಅಂಗಡಿಗಳ ಮಾಲೀಕರು ಇದ್ದರು.

ಯತ್ನಾಳ ಉಚ್ಚಾಟನೆ ಖಂಡಿಸಿ ಪ್ರತಿಭಟನೆ

ಮುದುಗಲ್: ಬಿಜೆಪಿ ಪಕ್ಷದಿಂದ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ರವರನ್ನು ಉಚ್ಚಾಟನೆ ಮಾಡಿರುವದನ್ನು ಖಂಡಿಸಿ ಪಟ್ಟಣ ಸಮೀಪದ ಬುದ್ದಿನ್ನಿ ಗ್ರಾಮದಲ್ಲಿ ಪ್ರತಿಭಟನೆ ಮಾಡಿದರು. ವಾಲ್ಮೀಕಿ ವೃತ್ತದಿಂದ ಪ್ರಾರಂಭವಾಗಿ ಕಿತ್ತೂರಾಣಿ ಚೆನ್ನಮ್ಮ ವೃತ್ತದ ವರೆಗೆ ಪ್ರತಿಭಟನೆ ಮಾಡಿದರು ಉಚ್ಚಾಟನೆ ಕಾರಣರಾದ ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಮತ್ತು ಅವರ ಸುಪುತ್ರ ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಅವರ ವಿರುದ್ಧ ಧಿಕ್ಕಾರ ಕೂಗುತ್ತಾ ಅವರ ಪ್ರತಿಕೃತಿ ಹರಿದು ಹಾಕಿ ಆಕ್ರೋಶ ಹೊರ ಹಾಕಿದರು. ಈ ಸಂದರ್ಭದಲ್ಲಿ ಬಸವರಾಜ ಗಸ್ತಿ ಶರಣಪ್ಪ ತೆರೆಬಾವಿ, ವೀರೇಶ್ ತಳವಾರ, ಈರಪ್ಪ ಗೊಂದಿ, ಈರಪ್ಪ ಚಿನ್ನಮಕ್ಕಳು ಅಮರೇಶ ಗೊಂದಿ, ದೇವಪ್ಪ ಚಿನ್ನಮ್ಮಕ್ಕಳು, ಆದಪ್ಪ ಕೊಳ್ಳಿ, ನಿಂಗರಾಜು ಗೊಂದಿ, ಶೇಖರಗೌಡ ಗೊಂದಿ,ಪಂಪಣ್ಣ ತೀರ್ಥಭಾವಿ, ನಾಗರಾಜ ಗೊಂದಿ ಮಂಜು ಗೊಂದಿ ವೀರಭದ್ರಪ್ಪ ಚಿನ್ನಮಕ್ಕಳು ಸೇರಿದಂತೆ ಮುಂತಾದವರು ಇದ್ದರು.

ಆಯೋಗಕ್ಕೆ ಮಾದಿಗ ಸಮುದಾಯ ಮನವಿ

ರಾಯಚೂರು: ಪರಿಶಿಷ್ಟ ಜಾತಿಗಳ ಒಳ ಮೀಸಲಾತಿ ವರ್ಗೀಕರಣಕ್ಕೆ ನ್ಯಾಯಮೂರ್ತಿ ನಾಗಮೋಹನ ದಾಸ್ ನೇತೃತ್ವದಲ್ಲಿ ಇದೇ 6 ರಿಂದ ಪರಿಶಿಷ್ಟ ಜಾತಿಗಳ ಸಮೀಕ್ಷೆ ನಡೆಯಲಿದ್ದು, ನಮ್ಮ ಸಮೂದಾಯ ಜನರು ಗಣತಿಯಲ್ಲಿ ಮಾದಿಗ ಎಂದು ನಮೂದಿಸಬೇಕೆಂದು ಮಾದಿಗ ದಂಡರೋ ಮೀಸಲಾತಿ ಹೋರಾಟ ಸಮಿತಿ ರಾಜ್ಯಾಧ್ಯಕ್ಷ ನರಸಪ್ಪ ದಂಡೋರ ಮನವಿ ಮಾಡಿದರು. ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, ಕಳೆದ ಮೂವತ್ತು ವರ್ಷಗಳಿಂದ ಒಳಮೀಸಲಾತಿ ಜಾರಿಗೆ ನಿರಂತರ ಹೋರಾಟ ನಡೆಸಿದ ಫಲವಾಗಿ ರಾಜ್ಯ ಸರ್ಕಾರ ಏಕ ಸದಸ್ಯ ಆಯೋಗ ರಚನೆ ಮಾಡಿತ್ತು. ಆಯೋಗ ಮಧ್ಯಂತರ ವರದಿಯನ್ನು ನೀಡಿದ್ದರಿಂದ ಇನ್ನೆರಡು ತಿಂಗಳ ಕಾಲ ವಿಸ್ತರಿಸಿ ಗಣತಿ ನಡೆಸಲು ಅವಕಾಶ ನೀಡಿದೆ. ಗಣತಿದಾರರು ಮನೆ ಮನೆಗೆ ಬಂದಾಗ ಬೇರೆ ಜಾತಿಯನ್ನು ನಮೂದಿಸದೆ ಮಾದಿಗ ಎಂದು ನಮೂದಿಸಿದರೆ ಸಮಾಜ ಅಧಿಕೃತ ಜನಸಂಖ್ಯೆ ತಿಳಿಯಲು ಸಾಧ್ಯವಾಗುತ್ತದೆ. ಆದಿ ಕರ್ನಾಟಕ, ಆದಿ ದ್ರಾವಿಡ ಸೇರಿದಂತೆ ಇರುವ ಗೊಂದಲಗಳಿಂದ ಹೊರಬಂದು ಮಾದಿಗ ಎಂದು ನಮೂದಿಸಬೇಕೆಂದು ಮನವಿ ಮಾಡಿದರು. ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಯುವಸೇನೆ ಅಧ್ಯಕ್ಷ ರಂಜಿತ ದಂಡೋರ, ದುಳ್ಳಯ್ಯ ಗುಂಜಹಳ್ಳಿ, ಗೋವಿಂದ ಈಟೇಕರ್, ಜಕ್ರಪ್ಪ ಹಂಚಿನಾಳ, ಹನುಮಂತ ಜುಲುಂಗೇರಾ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ವಿರಾಮ
ಪ್ರತಿ ಭಾನುವಾರ

ಯತ್ನಾಳ ಉಚ್ಚಾಟನೆ ಖಂಡಿಸಿ ಪ್ರತಿಭಟನೆ

ಪಂಚಮಸಾಲಿ ಸಮಾಜದ ಮುಖಂಡರಿಂದ ಹೋರಾಟ | ಬಿಎಸ್‌ವೈ, ವಿರುದ್ಧ ಘೋಷಣೆ



ಕುಷ್ಟಗಿ: ಶಾಸಕ ಬಸನಗೌಡ ಪಾಟೀಲ್ ಯತ್ನಾಳರನ್ನು 6 ವರ್ಷ ಉಚ್ಚಾಟಿಸಿರುವ ಬಿಜೆಪಿ ನಡೆ ಖಂಡಿಸಿ, ಪಟ್ಟಣದಲ್ಲಿ ಪಂಚಮಸಾಲಿ ಸಮಾಜದ ಮುಖಂಡರು ಹಾಗೂ ಯುವಕರು ಮಂಗಳವಾರ ಪ್ರತಿಭಟಿಸಿದರು.

ಪಟ್ಟಣದ ಕಾರ್ಗಿಲ್ ಹುತಾತ್ಮ ವೀರಯೋಧ ಮಲ್ಲಯ್ಯ ವೃತ್ತದಲ್ಲಿ ಸಮಾವೇಶಗೊಂಡ ಪಂಚಮಸಾಲಿ ಸಮುದಾಯದ ಮುಖಂಡರು, ಬಿಜೆಪಿ ಹೈಕಮಾಂಡ್ ವಿರುದ್ಧ ಘೋಷಣೆ ಕೂಗಿದರು. ನಂತರ ಅಲ್ಲಿಂದ ಮಾರುತಿ ವೃತ್ತದ ಮಾರ್ಗವಾಗಿ ಬಸವೇಶ್ವರ ವೃತ್ತದ ವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಿದರು. ವೃತ್ತದಲ್ಲಿ ಮಾನವ ಸರಪಳಿ ನಿರ್ಮಿಸಿ, ಶಾಸಕ ಬಸನಗೌಡ ಪಾಟೀಲ್ ಯತ್ನಾಳ ಪರ ಘೋಷಣೆ ಕೂಗಿದರು. ಮಾಜಿ ಸಿಎಂ ಬಿ.ಎಸ್. ಯಡಿಯೂರಪ್ಪನವರ ಮತ್ತು ಬಿಜೆಪಿ ರಾಜ್ಯಾಧ್ಯಕ್ಷ ಬಿವೈ. ವಿಜಯೇಂದ್ರ ಭಾವಚಿತ್ರಕ್ಕೆ ಬೆಂಕಿ ಹಚ್ಚಿ ಆಕ್ರೋಶ ವ್ಯಕ್ತಪಡಿಸಿದರು.

ಸಮುದಾಯದ ಅಧ್ಯಕ್ಷ ದೇವೇಂದ್ರಪ್ಪ ಬಳೂಟಗಿ ಮಾತನಾಡಿದ ಅವರು, ಕುಟುಂಬ ರಾಜಕಾರಣದಿಂದ ರಾಜಕೀಯ ಪಕ್ಷದಲ್ಲಿ ನಿಷ್ಠಾವಂತ ಕಾರ್ಯಕರ್ತರಿಗೆ, ವ್ಯಕ್ತಿಗಳಿಗೆ ಬೆಲೆ ಇಲ್ಲದಂತಾಗಿದೆ. ಬಾಯಿ ಬಡುಕರಿಗೆ, ಲಫುಟರಿಗೆ ಪ್ರಾಶಸ್ತ ನೀಡಲಾಗುತ್ತಿದೆ. ವಿಧಾನಸಭೆ ಅಧಿವೇಶನದಲ್ಲಿ ಸರ್ವ ಸಮುದಾಯಗಳ ಪರವಾಗಿ ನೇರ ನಿಷ್ಠೂರವಾಗಿ ಧ್ವನಿ ಎತ್ತುವ ನಿಷ್ಠಾವಂತ ಹೋರಾಟಗಾರ ಶಾಸಕ ಬಸನಗೌಡ ಪಾಟೀಲ್ ಯತ್ನಾಳ ಉಚ್ಚಾಟನೆ ಮಾಡಿರುವುದು ಬಿಜೆಪಿಯ ದುರ್ದೈವ. ಬಸನಗೌಡ ಪಾಟೀಲ್ ಯತ್ನಾಳರನ್ನು ಪಕ್ಷದಿಂದ ಹೊರ ಹಾಕಿದ ಮೇಲೆ ರಾಜ್ಯಾದ್ಯಂತ ಯತ್ನಾಳರ ವ್ಯಕ್ತಿತ್ವ ಮತ್ತಷ್ಟು ಹೆಚ್ಚಿದೆ ಎಂದರು.

ಈ ನಡೆಯಿಂದ ಮೂಲ ಬಿಜೆಪಿಗಾರದ ಈಶ್ವರಪ್ಪ, ಬಸನಗೌಡ ಪಾಟೀಲ್ ಯತ್ನಾಳ ಅವರಿಗೆ ಅನ್ಯಾಯವಾಗಿಲ್ಲ. ಇದು ಬಿಜೆಪಿಗಾದ ಅನ್ಯಾಯ. ಈ ತಪ್ಪನ್ನು ಬಿಜೆಪಿ ನಾಯಕರು ತಿದ್ದಿಕೊಳ್ಳಬೇಕು. ಎಲ್ಲ ಸಮುದಾಯದವರು ಮುಂದಿನ ದಿನಗಳಲ್ಲಿ ರಾಜಕೀಯದಲ್ಲಿ ಉತ್ತಮರಿಗೆ ಪ್ರೋತ್ಸಾಹ ನೀಡಬೇಕು. ರಾಜಕಾಣದಲ್ಲಿರುವ ಹೊಲಸು ತೊಲಗಿಸಬೇಕು. ಶಾಸಕ ಬಸನಗೌಡ ಪಾಟೀಲ್ ಯತ್ನಾಳ ಜೊತೆಗೆ ಪಂಚಮಸಾಲಿ ಸಮುದಾಯ ಇರುತ್ತದೆ ಎಂದರು.

ಮಹಾಂತೇಶ ಕುಷ್ಟಗಿ ಮಾತನಾಡಿ, ಯತ್ನಾಳ ಎಲ್ಲ ಸಮಾಜದ ಪರವಾಗಿ ಮಾತನಾಡುವ ಧೀಮಂತ ನಾಯಕ. ಹಿಂದೂ ಹೋರಾಟಗಾರ. ಬಿಜೆಪಿ ಈ ರೀತಿ ನಡೆದುಕೊಳ್ಳಬಾರದಿತ್ತು. ಇದರಿಂದ ಪಕ್ಷಕ್ಕೆ ದೊಡ್ಡ ನಷ್ಟವಾಗುತ್ತದೆ ಎಂದರು.

ಸಮಾಜದ ಮುಖಂಡ ನಿಂಗಪ್ಪ ಮಂಗಳೂರು ಶರಣಪ್ಪ ಜೀಗೇರಿ, ವಿರೇಶ್ವರ ತುರಕಾಣಿ, ಶಂಕರಗೌಡ್ರು, ಬಸವರಾಜ್ ಹೊರಪ್ಯಾಟಿ, ಶೇಖರ್ ಹೊರಪೇಟೆ, ಶರಣು ಶಿವಪ್ಪ ಗೆಜ್ಜಲಗಟ್ಟಿ, ಸಿದ್ದರಾಮಪ್ಪ ಕೌದಿ, ಚನ್ನಬಸಪ್ಪ ನಾಯಕವಾಡಿ, ಸಂಗನಗೌಡ ಪಾಟೀಲ್, ಪ್ರಭು ಸೂಡಿ, ಯುವ ಘಟಕದಿಂದ ಸಂಗಮೇಶ ಕಂದಗಲ್, ಶಿವು ಸೂಡಿ, ನಿಂಗಪ್ಪ ಜೀಗೇರಿ, ಶಿವು ನಂದಿಹಾಳ ಇತರರು ಇದ್ದರು.

ಸರಕಾರ ವಿರುದ್ಧ ಜನಾಕ್ರೋಶ

ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ಉದ್ದೇಶಿಸಿ ವೀರನಗೌಡ ಪಾಟೀಲ ಲೇಕ್ಕಿಹಾಳ್ ಮಾತನಾಡಿದರು.

ರಾಯಚೂರು: ರಾಜ್ಯದಲ್ಲಿ ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದ ಮೇಲೆ ಬೆಲೆ ಏರಿಕೆ ಮಾಡುವ ಮೂಲಕ ಬಡವರ ಬದುಕು ದುರ್ಬಲಗೊಳಿಸುವುದರ ಜೊತೆಗೆ ಎಸ್ಟಿ, ಎಸ್ಸಿ ಮೀಸಲು ಅನುದಾನ ಗ್ಯಾರಂಟಿ ಯೋಜನೆಗಳಿಗೆ ಬಳಕೆ ಮಾಡುತ್ತಿರುವುದನ್ನು ಖಂಡಿಸಿ ಇದೇ 7 ರಿಂದ ರಾಜ್ಯ ಕಾಂಗ್ರೆಸ್ ಸರಕಾರದ ವಿರುದ್ಧ ಜನಾಕ್ರೋಶ ಯಾತ್ರೆ ನಡೆಸಲಾಗುತ್ತಿದೆ ಎಂದು ಬಿಜೆಪಿ ಜಿಲ್ಲಾಧ್ಯಕ್ಷ ವೀರನಗೌಡ ಪಾಟೀಲ ಲೇಕ್ಕಿಹಾಳ್ ಹೇಳಿದರು.

ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, ಈ ಹೋರಾಟಕ್ಕೆ ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಚಾಲನೆ ನೀಡಲಿದ್ದು, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರ ನೇತೃತ್ವದಲ್ಲಿ ಬೆಂಗಳೂರಿನ ಫ್ರೀಡಂ ಪಾರ್ಕಿನಲ್ಲಿ ಇಂದು ಬೆಲೆ ಏರಿಕೆಯ ವಿರುದ್ಧ ಅಹೋರಾತ್ರಿ ಧರಣಿ ನಡೆಯಲಿದೆ ಎಂದರು. ಬಿಜೆಪಿಯ ಎಲ್ಲ ಶಾಸಕರು ಸೇರಿದಂತೆ ಕಾರ್ಯಕರ್ತರು ಈ ಅಹೋರಾತ್ರಿ ಧರಣಿಯಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದರು.

ರಾಜ್ಯ ಬಜೆಟ್‌ನಲ್ಲಿ ಅಲ್ಪಸಂಖ್ಯಾತರಿಗೆ ಓಲೈಕೆ ಮಾತ್ರವಲ್ಲದೆ ಹಿಂದೂಗಳಿಗೆ ಅಪಮಾನ ಮಾಡಲಾಗಿದೆ. ಸರ್ಕಾರಿ ಕಾಮಗಾರಿಗಳಲ್ಲಿ ಮುಸಲ್ಮಾನರಿಗೆ ಶೇ 4 ಮೀಸಲಾತಿ ನೀಡಿದ್ದು, ಕಾನೂನಿನ ವಿರುದ್ಧವಾಗಿದೆ ಎಂದು ಆರೋಪಿಸಿದರು.

ಗ್ಯಾರಂಟಿ ಹೆಸರಲ್ಲಿ ರಾಜ್ಯದ ಖಜಾನೆ ದಿವಾಳಿಯಾಗಿದೆ. ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದ ನಂತರ ಹಾಲಿನ ದರ 9 ರು. ಏರಿಕೆಯಿಂದ ಬಡವರ ಬದುಕನ್ನು ದುರ್ಬಲಗೊಳಿಸುತ್ತಿದೆ. ಸುಮಾರು 662 ಕೋಟಿ ರೈತರ ಪ್ರೋತ್ಸಾಹ ಧನ ಬಾಕಿ ಉಳಿಸಿಕೊಂಡಿದೆ ಎಂದು ಆರೋಪಿಸಿದರು. ಸುದ್ದಿಗೋಷ್ಠಿಯಲ್ಲಿ ಮಾಜಿ ಶಾಸಕ ಬಸನಗೌಡ ಬ್ಯಾಗವಾಟ, ಎ.ಪಾಪಾರಡ್ಡಿ, ಎನ್. ಶಂಕ್ರಪ್ಪ, ರಾಘವೇಂದ್ರ ಊಟ್ಕೂರು, ರವೀಂದ್ರ ಜಲಾದ್ರ್, ಶಂಕರರೆಡ್ಡಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಖಡ್ಗ ಹಿಡಿದು ಕರಿ ಆಚರಣೆ

ಸಿಂಧನೂರು: ತಾಲೂಕಿನ ತುರ್ವಿಹಾಳ ಪಟ್ಟಣದಲ್ಲಿ ಮಸ್ಕಿ ಶಾಸಕ ಆರ್. ಬಸನಗೌಡ ತುರ್ವಿಹಾಳ ಸಹೋದರ ಮತ್ತು ಪುತ್ರ ಮಾರಕಾಸ ಗಳನ್ನು ಹಿಡಿದು ಬೇಟೆಯಾಡಿದ ಮೊಲಗಳನ್ನು ಮೆರವಣಿಗೆ ಮಾಡಿರುವುದು ಈಗ ವಿವಾದಕ್ಕೀಡಾಗಿದೆ.

ಇದು ಬೇಡರ ಸಮುದಾಯದ ಸಾಂಪ್ರದಾಯಿಕ ಆಚರಣೆಯಾಗಿದ್ದು, ಪ್ರತಿ ವರ್ಷ ನಡೆಸಿಕೊಂಡು ಬರಲಾಗುತ್ತಿದೆ. ಶಾಸಕರ ಸಹೋದರ ಸಿದ್ದನಗೌಡ ತುರ್ವಿಹಾಳ ಹಾಗೂ ಅವರ ಪುತ್ರ ಸತೀಶ್ ಗೌಡ ತುರ್ವಿಹಾಳ ಅವರನ್ನು ಹೊತ್ತು ಮೆರವಣಿಗೆ ನಡೆಸಲಾಗಿದೆ. ಬೃಹತ್ ಮೆರವಣಿಗೆಯಲ್ಲಿ ಸಾವಿರಾರು ಜನರ ಎದುರೇ ಮೊಲಕ್ಕೆ ಖಡ್ಗದಿಂದ ಹೊಡೆದು ಹಿಂಸೆ ಮಾಡುತ್ತಿರುವ ವಿಡೀಯೊ ವೈರಲ್ ಆಗಿದೆ. ಮೊಲಗಳನ್ನು ಬೇಟೆಯಾಡಿ ಅವುಗಳನ್ನು ಕಟ್ಟಿಗೆಗೆ ಕಟ್ಟಿಕೊಂಡು ಮೆರವಣಿಗೆ ನಡೆಸುವುದು ವಾಡಿಕೆಯಾಗಿದೆ.

ತುರ್ವಿಹಾಳ ಪಟ್ಟಣದ ತುಂಬಾ ನೂರಾರು ಜನರೊಂದಿಗೆ ಹತ್ತಾರು ಮೊಲಗಳ ಮೆರವಣಿಗೆ ಮಾಡಿದ್ದು, ಜನ ಸಂಭ್ರಮಿಸುತ್ತಾರೆ. ಈ ವೇಳೆ ಮೆರವಣಿಗೆ ವೇಳೆ ಖಡ್ಗ, ಕೊಡಲಿಗಳನ್ನು ಪ್ರದರ್ಶನ ಮಾಡಿರುವುದು ಹಾಗೂ ವನ್ಯಜೀವಿ ಹಿಂಸೆ ಮಾಡಿರುವುದಕ್ಕೆ ವನ್ಯ ಜೀವಿ ಸಂರಕ್ಷಣಾ ಕಾಯ್ದೆ ಉಲ್ಲಂಘನೆ ಮಾಡಿದಂತಾಗಿದೆ.

ಸರಕಾರದಿಂದ ಬೆಲೆ ಏರಿಕೆ: ಬಿಜೆಪಿ ಆಕ್ರೋಶ

ಹೊಸಪೇಟೆ: ರಾಜ್ಯ ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದ ಮೇಲೆ ದಿನಬಳಕೆ ವಸ್ತು ಸೇರಿ ಹಾಲಿನ ದರ ಏರಿಕೆ ಮಾಡಿದೆ ಇದು ಜನರ ಜೇಬಿಗೆ ಖನ್ನಾ ಹಾಕಿದ ಸರಕಾರಎಂದು ವಿಜಯನಗರ ಜಿಲ್ಲಾ ಬಿಜೆಪಿ ಅಧ್ಯಕ್ಷ ಸಂಜೀವರೆಡ್ಡಿ ಬೆಲೆ ಏರಿಕೆ ಖಂಡಿಸಿದ್ದಾರೆ. ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿದ್ದಾರೆ.

ರೈತರ ಹೆಸರಿನಲ್ಲಿ ಹಾಲಿನ ದರ ಏರಿಕೆ ಮಾಡಿರುವ ಸರಕಾರ, ರೈತರಿಗೆ ಸುಮಾರು 662 ಕೋಟಿ ರುಪಾಯಿ ನೀಡುವುದು ಬಾಕಿ ಇದೆ. ನಗರ ಪ್ರದೇಶದಲ್ಲಿರುವವರ ಮೇಲೆ ಹಾಲಿನ ದರ ಏರಿಕೆಯ ಬರೆ ಹಾಕಿದರೆ. ಗ್ರಾಮೀಣ ಭಾಗದ ರೈತರಿಗೆ ಪ್ರೋತ್ಸಾಹ ಧನ ನೀಡಿಲ್ಲ ಎಂದು ದೂರಿದ್ದಾರೆ.

ರಾಜ್ಯ ಸರಕಾರ ಬೊಕ್ಕಸವನ್ನು ತುಂಬಿಸಿಕೊಳ್ಳುವುದರಲ್ಲಿ ನಿರತವಾಗಿದೆಯೇ ಹೊರತು ಗ್ರಾಹಕರ, ರೈತರ ಹಾಗೂ ಬಡವರ ಮೇಲೆ ಕಾಳಜಿಯೇ ಇಲ್ಲ, ಇದು ಕಾಳಜಿಯಿಲ್ಲದ ಸರಕಾರವಾಗಿದೆ. ಬೆಲೆ ಏರಿಕೆಯಿಂದಾಗಿ ಮಧ್ಯಮ ವರ್ಗ ತತ್ತರಿಸಿ ಹೋಗಿದೆ. ಗ್ಯಾರಂಟಿ ಯೋಜನೆಯ ಹೆಸರಿನಲ್ಲಿ ಕರ್ನಾಟಕ ಜನತೆಯ ದಾರಿ ತಪ್ಪಿಸಿ ಕಾಂಗ್ರೆಸ್ ಮಂತ್ರಿಗಳು ಮತ್ತು ಶಾಸಕರು ಲೂಟಿ ಮಾಡುತ್ತಿದ್ದಾರೆ ಎಂದು ಆರೋಪಿಸಿದ್ದಾರೆ.

ವಿಧಾನಸಭಾ ಚುನಾವಣೆ ಫಲಿತಾಂಶಕ್ಕಯ ಮುನ್ನ ಪ್ರತಿ ಯುನಿಟಗೆ 70 ಪೈಸೆ ದರ ಏರಿಕೆ ಮಾಡಲಾಗಿತ್ತು. ನಂತರ ಉಚಿತ ಕರೆಂಟ್ ಘೋಷಣೆ ಮಾಡಲಾಯಿತು. 2023ರ ನವೆಂಬರ್ ನಲ್ಲಿ 85 ಪೈಸೆ ಏರಿಕೆ ಮಾಡಲಾಯಿತು. 2025ರ ಏಪ್ರಿಲ್ 1ರಿಂದ ಮತ್ತೆ 36 ಪೈಸೆ ಏರಿಕೆ ಮಾಡುವ ಮೂಲಕ ಉಚಿತ ಕರೆಂಟ್ ಎಂದು ಘೋಷಣೆ ಮಾಡಿ ಇತ್ತ ಗ್ರಾಹಕರಿಗೆ ಬರೆ ಹಾಕಲಾಗಿದೆ. ಆ ಮೂಲಕ ಉಚಿತ ಎನ್ನುತ್ತಲೇ ಜನರ ಹಣ ಕೊಳ್ಳೆ ಹೊಡೆಯುವಲ್ಲಿ ಸರಕಾರ ನಿರತವಾಗಿದೆ ಎಂದು ದೂರಿದ್ದಾರೆ.

ಹಾಲಿನ ದರ ಹೆಚ್ಚಿಸಿ ರೈತರಿಗೆ ಪ್ರೋತ್ಸಾಹ ದನ ನೀಡಲಾಗುವುದು ಎಂದು ಹೇಳಿದ ಈ ಸರಕಾರ ಕಳೆದ ಬಾರಿ 2 ರು. ಹೆಚ್ಚಿಸಿದಾಗ ರೈತರಿಗೆ ಪ್ರೋತ್ಸಾಹ ಧನ ನೀಡಿಲ್ಲ. ಇದೀಗ ರೈತರ ಹೆಸರಿನಲ್ಲಿ 4 ರು. ಹೆಚ್ಚಿಸಿದೆ. ಈಗಲೂ ಸಹ ರೈತರಿಗೆ ನೀಡದೇ ಕೇವಲ ಸಿಎಂ, ಸಚಿವರು, ಶಾಸಕರು ಹಾಗೂ ಕೆಎಂಎಫ್ ಅಧ್ಯಕ್ಷರ ಜೇಬಿಗೆ ಹೋಗಲಿದೆ. ಕೆಎಂಎಫ್ ಅಧ್ಯಕ್ಷ ನಮ್ಮ ಜಿಲ್ಲೆಯವರು. ಸ್ವತಃ ಬಳ್ಳಾರಿ ಹಾಲು ಒಕ್ಕೂಟ 1.63 ಕೋಟಿ ನಷ್ಟದಲ್ಲಿದೆ ಎಂದು ಸ್ವತಃ ಸಿಎಂ ಒಪ್ಪಿಕೊಂಡಿದ್ದಾರೆ. ಇದನ್ನೆಲ್ಲ ನೋಡಿದರೆ ಗ್ರಾಹಕರ, ಜನರ ಹಣ ಸರಕಾರ ಅಥವಾ ಯೋಜನೆಗಳಿಗೆ ಬಳಕೆಯಾಗದೆ ಕಾಂಗ್ರೆಸ್ ನವರ ಜೇಬಿಗೆ ಹೊರಟಿದೆ ಎಂದು ತಿಳಿಯುತ್ತದೆ. ಬೆಲೆ ಏರಿಕೆ ವಿರುದ್ಧ ಬಿಜೆಪಿ ರಾಜ್ಯಾಧ್ಯಕ್ಷರ ನೇತೃತ್ವದಲ್ಲಿ ಬೆಂಗಳೂರಿನಲ್ಲಿ ನಾಳೆ ಅಹೋರಾತ್ರಿ ಧರಣಿ ಹಮ್ಮಿಕೊಳ್ಳಲಾಗಿದೆ. ಇದರಲ್ಲಿ ಪಕ್ಷದ ರಾಜ್ಯದ ಎಲ್ಲಾ ಜಿಲ್ಲೆಯವರು ಪಾಲ್ಗೊಳ್ಳಿದ್ದೇವೆ ಎಂದು ತಿಳಿಸಿದ್ದಾರೆ.

ಕರವೇದಿಂದ ನೀರಿನ ಅರವಟಿಗೆ ಚಾಲನೆ

ಲಿಂಗಸುಗೂರು: ಪಟ್ಟಣದ ಹೊಸ ಬಸ್ ನಿಲ್ದಾಣದಲ್ಲಿ ಕರ್ನಾಟಕ ರಕ್ಷಣಾ ವೇದಿಕೆ ವತಿಯಿಂದ ಶುದ್ಧ ಕುಡಿಯುವ ನೀರಿನ ಅರವಟಿಗೆಯನ್ನು ಸಮ್ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ವಿನಯಕುಮಾರ ಗಣಾಚಾರಿ ಚಾಲನೆ ನೀಡಿದರು. ಪದ್ಮಭೂಷಣ, ತ್ರಿವಿಧ ದಾಸೋಹಿ, ಸಿದ್ದಗಂಗೆಯ ಕಾಯಕಯೋಗಿ ಲಿಂಗೈಕ್ಯ ಶಿವಕುಮಾರ ಸ್ವಾಮೀಜಿಗಳ ಜಯಂತಿ ಹಾಗೂ ಬೇಸಿಗೆ ಪ್ರಾರಂಭದ ಪ್ರಯುಕ್ತ ಶುದ್ಧ ಕುಡಿಯುವ ನೀರಿನ ಅರವಟಿಗೆಗೆ ಚಾಲನೆ ನೀಡಿ ಮಾತನಾಡಿದ ಅವರು ಹಳ್ಳಿಗಳಿಂದ ವ್ಯಾಪಾರ ವಹಿವಾಟಿಗಾಗಿ ಹಾಗೂ ವಿವಿಧ ಕಾರಣಗಳಿಂದ ಪಟ್ಟಣಕ್ಕೆ ಬರುವ ಸಾರ್ವಜನಿಕರಿಗೆ ಬಿಸಿಲಿನ ತಾಪಕ್ಕೆ ಪದೇ ಪದೇ ನೀರಿನ ದಾಹ ಆಗಲಿದ್ದು, ಈ ನಿಟ್ಟಿನಲ್ಲಿ ನೀರಿನ ದಾಹ ತೀರಿಸಲು ಕರವೇಯಿಂದ ನೀರಿನ ಅರವಟಿಗೆಯ ಅನೂಕೂಲ ಮಾಡಿದ್ದು ಶ್ಲಾಘನೀಯ ಕಾರ್ಯ ಎಂದು ಹೇಳಿದರು. ಈ ಸಂದರ್ಭದಲ್ಲಿ ಕೆಡಿಪಿ ಸದಸ್ಯರಾದ ಶಿವಪ್ಪ ನಾಯಕ ಹಾಗೂ ಗ್ರಾಪಂ ಸದಸ್ಯ ಮುದ್ದಪ್ಪ ಗೊಲಪಲ್ಲಿ, ಕರವೇ ತಾಲುಕಾ ಅಧ್ಯಕ್ಷ ಮಾದೇಶ ಸರ್ಜಾಪುರ,ಪ್ರಧಾನ ಕಾರ್ಯದರ್ಶಿ ಶರಣಬಸವಈಚನಾಳ, ಸಂ. ಕಾರ್ಯದರ್ಶಿ ಮುತ್ತಣ್ಣ ಗುಡಿಹಾಳ, ಜಿಲ್ಲಾ ಕಾರ್ಯದರ್ಶಿ ಜೆ . ನಾರಾಯಣ, ರಾಜೇಶ ಮಾಣಿಕ್, ಆಂಜನೇಯ ನಾಯಕ, ಈಶ್ವರ ಕಾಚಾಪುರ, ಬಸವರಾಜ ಗೊಲಪಲ್ಲಿ, ಹನುಮೇಶ ಹೂಗಾರ, ಅಮರೇಶ, ರಮೇಶ, ದುರುಗಪ್ಪ, ಪವನ್ , ಈರಯ್ಯ, ರಾಜೇಶಕುಮಾರ್, ಆನಂದ, ಇತರರು ಇದ್ದರು.

> {ಜಗದೀಶ್ ಶೆಟ್ಟರ್ } ಸಂಸದ
> ರಾಜ್ಯದಲ್ಲಿ ಪ್ರತಿ ನಿತ್ಯ ಬೆಲೆ ಏರಿಕೆಯಿಂದ ಜನರು ಬೇಸತ್ತು ಹೋಗಿದ್ದಾರೆ. ಏ.5 ರಿಂದ ಬಿಜೆಪಿಯಿಂದ ರಾಜ್ಯಾದ್ಯಂತ ಹೋರಾಟ ನಡೆಸಲಾಗುವುದು ಎಂದರು. ಸಿದ್ದರಾಮಯ್ಯನವರು ಆಡಳಿತದ ಹಿಡಿತ ಕಳೆದುಕೊಂಡಿದ್ದಾರೆ. ಕಾನೂನು ಸುವ್ಯವಸ್ಥೆ ಸಂಪೂರ್ಣ ಹದಗೆಟ್ಟು ಹೋಗಿದೆ.



ಅಧ್ಯಕ್ಷನಾದ ಮೇಲೆ ಎಲ್ಲರ ವಿಶ್ವಾಸಗಳಿಸಬೇಕು | ಜಿಲ್ಲಾ ಗ್ಯಾರಂಟಿ ಸಮಿತಿ ಅಧ್ಯಕ್ಷ ಪಾಮಯ್ಯ ಮುರಾರಿ

ಇಲ್ಲದ ಹೇಳಿಕೆ ಕೊಡುವ ಬದಲು ಪಕ್ಷ ಕಟ್ಟುವ ಕೆಲಸ ಮಾಡಲಿ

ಲಿಂಗಸೂಗೂರು : ಪದೇ ಪದೇ ನಾನು ಮೂಲ ಕಾಂಗ್ರೆಸ್ ಮೂಲ ಕಾಂಗ್ರೆಸ್ ಎಂದು ಹೇಳುವ ಗೋವಿಂದ ನಾಯಕ ರವರಿಗೆ ತಮ್ಮ ಬಗ್ಗೆ ತಮಗೆ ಅನುಮಾನ ಇದ್ದ ಹಾಗೆ ಇದೆ. ರಾಜಕೀಯದಲ್ಲಿ ಪಕ್ಷ ಬದಲಾವಣೆ ಸಾಮಾನ್ಯ ಆರ್ ಎಸ್ ಎಸ್ ನವರೆ ಆಗಿರಿ ಒಪ್ಪಿಕೊಂಡು ಕಾಂಗ್ರೆಸ್ ಪಕ್ಷ ಅಧಿಕೃತ ಪಟ್ಟ ಕೊಟ್ಟಿದೆ ಅದನ್ನು ಸರಿಯಾಗಿ ನಿಭಾಯಿಸಿಕೊಂಡು ಹೋಗಿ ಪದೇ ಪದೇ ನಾನು ಮೂಲ ಕಾಂಗ್ರೆಸಿಗ ಎನ್ನುವುದು ಸೂಕ್ತವಲ್ಲ ಎಂದು ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಭೂಪನಗೌಡ ಕರಡಕಲ್ ತಿರುಗೇಟು ನೀಡಿದರು.

ಪಟ್ಟಣದ ಪತ್ರಿಕಾ ಭವನದಲ್ಲಿ ಮಾತನಾಡಿದ ಅವರು, ನಾವು 35 ವರ್ಷದ ರಾಜಕೀಯ ಜೀವನದಲ್ಲಿ ಪಕ್ಷ ದ್ರೋಹ ಮಾಡಿದವರಲ್ಲ, ಭೂಪನಗೌಡರ ನೇಮಕ ಮಾಡಬಾರದು ಎಂದು ನನ್ನ ವಿರುದ್ಧ ಮುಖ್ಯಮಂತ್ರಿಗಳಿಗೆ ಉಪ ಮುಖ್ಯಮಂತ್ರಿಗಳಿಗೆ ಪತ್ರವನ್ನು ಕೊಟ್ಟಿದ್ದಾರೆ. ನಾನು ಬಿಜೆಪಿ ಮಾಡಿದ್ದು ಸಾಬೀತು ಪಡಿಸಲಿ, ಅವರು ಹೇಳಿದಂತೆ ಅಮರೇಶ್ವರಕ್ಕೆ ಬಂದು ಆಣೆ ಮಾಡಲು ನಾನು ರೆಡಿ, ಬಿಜೆಪಿಗೆ ಸಪೋರ್ಟ್ ಮಾಡಿ ಎಂದು ನಾನು ಹೇಳಿದ್ದೆ ಆದರೆ ನನ್ನ ನಾಲಿಗೆ ಕಟ್ ಮಾಡಿಕೊಳ್ಳುತೇನೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ನಾನು ಅಮರೇಶ್ವರ ನಾಯಕ ಸೇರಿದಂತೆ ಪಕ್ಷದ ಅಭ್ಯರ್ಥಿಗಳ ಚುನಾವಣೆಯಲ್ಲಿ ಗುರುಗುಂಟ ಭಾಗದಲ್ಲಿ ಕೆಲಸ ಮಾಡಿದ್ದೇನೆ. ಆ ಸಮಯದಲ್ಲಿ ಗೋವಿಂದ ನಾಯಕ ರವರು ಎಲ್ಲಿ ಇದ್ದರು ಎಂಬುದು ನನಗೆ ಗೊತ್ತಿಲ್ಲ. ವೆಂಕಟೇಶ್ ಗುತ್ತೇದಾರ, ಶಿವಪ್ಪ ನಾಯಕ, ರಾಜಾ ಶ್ರೀನಿವಾಸ್ ನಾಯಕ ಸೇರಿದಂತೆ ಹಲವರನ್ನು ನೋಡಿದ್ದೇನೆ ಇವರನ್ನು ನಾನು ಮೊದಲು ಎಲ್ಲಿಯೂ ನೋಡಿಲ್ಲ ಎಂದರು.ಅಮರೇಗೌಡರು ಹಿರಿಯರು 3 ಬಾರಿ ಗೆದ್ದ ವ್ಯಕ್ತಿಯ ಬಗ್ಗೆ ಮಾತಾಡೋದು ತಪ್ಪು, ಗೋವಿಂದ ನಾಯಕ ಚಿಕ್ಕವನು ಇನ್ನೊಮ್ಮೆ ಈ ಮಾತುಗಳನ್ನು ಆಡೋದು ಬಿಟ್ಟು ಪಕ್ಷ ಬೆಳೆಸುವ ಕೆಲಸ ಮಾಡಲಿ. ಅಖಂಡ ಕೊಪ್ಪಳ ರಾಯಚೂರು ಜಿಲ್ಲೆ ಇದ್ದಾಗಲೆ ಜಿಲ್ಲಾ ಪಂಚಾಯತ್ ಅಧ್ಯಕ್ಷ, ತಾಲೂಕ ಪಂಚಾಯತ್ ಅಧ್ಯಕ್ಷ ಸೇರಿದಂತೆ ಅನೇಕ ಹಿಂದುಳಿದವರಿಗೆ ಜಾತಿ ಮತ ನೋಡದೆ ಅಧಿಕಾರ ಜವಾಬ್ದಾರಿ ಕೊಟ್ಟವರು ಅಮರೇಗೌಡರು ಇದನ್ನು ಅರೆತು ಮಾತನಾಡಲಿ, ಎಂದು ಹೇಳಿದರು.

ಜಿಲ್ಲಾ ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಪಾಮಯ್ಯ ಮುರಾರಿ ಮಾತನಾಡಿ, ಗೋವಿಂದ ನಾಯಕ ವಿಧಾನ ಪರಿಷತ್ ಚುನಾವಣೆಯಲ್ಲಿ ಇದ್ದಿಲ್ಲ, ಚುನಾವಣೆ ಪೂರ್ವದಲ್ಲಿ ಏನು ನಡೆದಿದೆ ಎಂಬುದು ತಿಳಿಯದೆ ಮಾತನಾಡಿದ್ದು ತಪ್ಪು. ಮೊದಲು ಪಕ್ಷದಲ್ಲಿರುವ ಮುಖಂಡರನ್ನು ಭೇಟಿ ಮಾಡಿ, ಎಲ್ಲರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಹೋಗಿ, ಚಿಕ್ಕವರಾದ ನೀವು ಮುಂದೆ ಉನ್ನತ ಸ್ಥಾನ ದೊರಕುತ್ತವೆ, ಮೊದಲಿನ ವಿಷಯಗಳು ತಿಳಿಯದೆ ಯಾರ ಮಾತು ಕೇಳಿ ಮಾತಾಡಬಾರದು. ಜಿಲ್ಲಾ ಗ್ಯಾರಂಟಿ ಸಮಿತಿ ಅಧ್ಯಕ್ಷನಾದ ನನ್ನನ್ನು ಎಷ್ಟು ಕಾರ್ಯಕ್ರಮಗಳಿಗೆ ನೀವು ಅಹ್ವಾನ ಕೊಟ್ಟಿದ್ದೀರಿ, ಸುಖ ಸುಮ್ಮನ್ನೆ ಹೇಳಿಕೆ ಮಾತು ಕೇಳಿ ಮಾತನಾಡುವುದು ಶೋಭೆಯಲ್ಲ, ಹೂಲಗೇರಿ ಅವರು ಮೊದಲು ಯಾವ ಪಕ್ಷದಲ್ಲಿ ಇದ್ದರು ಅವರನ್ನು ಇಲ್ಲಿಗೆ ಕರೆದುಕೊಂಡು ಬಂದವರು ಯಾರು ಎಂಬುದು ತಿಳಿದುಕೊಂಡು ಮಾತನಾಡಿ, ಹುಲಗೇರಿರವರು ಮೀಸಲಾತಿ ಮುಗಿದ ಮೇಲೆ ಬೇರೆ ಕಡೆ ಹೋಗುತ್ತಾರೆ ಆದರೆ ನಾವು ಇದೆ ಪಕ್ಷದಲ್ಲಿ ಇದ್ದು ಪಕ್ಷ ಕಟ್ಟುತ್ತೇವೆ, ಗೋವಿಂದ ನಾಯಕ ಇರುತ್ತಾರೋ ಇಲ್ಲವೋ ಗೊತ್ತಿಲ್ಲ ಎಂದು ಹೇಳಿದರು.

ನೇಪಾಳದಲ್ಲಿ ಈಗಿರುವ ಪ್ರಜಾಪ್ರಭುತ್ವ ತೊಲಗಿ ರಾಜಪ್ರಭುತ್ವ ಮರಳಬೇಕು, ದೇಶವನ್ನು ಮೊದಲಿನಂತೆ ಹಿಂದೂ ರಾಷ್ಟ್ರವೆಂದು ಘೋಷಿಸಬೇಕು ಎಂದು ಆಗ್ರಹಿಸಿ ನೇಪಾಳಿಗರು ಪ್ರತಿಭಟನೆಗೆ ಮುಂದಾಗಿದ್ದಾರೆ. ಆ ಪ್ರತಿಭಟನೆ ಹಿಂಸಾಚಾರಕ್ಕೆ ತಿರುಗಿ ಸಾವು-ನೋವುಗಳೂ ಸಂಭವಿಸಿವೆ. ಈ ಕುರಿತಾದ ಪಕ್ಷಿನೋಟ ಇಲ್ಲಿದೆ.

ದೇಶವನ್ನು ರಕ್ಷಿಸುವ ಮತ್ತು ರಾಷ್ಟ್ರೀಯ ಏಕತೆಯನ್ನು ಮರುಸ್ಥಾಪಿಸುವ ಹೊಣೆಯನ್ನು ನಾವೀಗ ಹೊರಬೇಕಾಗಿ ಬಂದಿದೆ.

ಮಾಜಿ ರಾಜ ಜ್ಞಾನೇಂದ್ರ

ಹಿಮದ ಮಡಿಲು ಈಗ ಅಗ್ನಿಕುಂಡ

ಯಗಟಿ ರಘು ನಾಡಿಗ್

ನೆರೆರಾಷ್ಟ್ರ ನೇಪಾಳದಲ್ಲಿ ಶಾಂತಿ ಕದಡಿದೆ. ರಾಜಕೀಯ ವ್ಯವಸ್ಥೆಯಲ್ಲಿ ತಲೆದೋರಿರುವ ಅಸ್ಥಿರತೆ, ರಾಜಕಾರಣಿಗಳ ಹುಸಿ ಆಶ್ವಾಸನೆಗಳಿಂದ ಅಸಮಾಧಾನಗೊಂಡಿರುವ ನೇಪಾಳಿಗರು ಪ್ರತಿಭಟನೆಗೆ ಇಳಿಯುವುದರೊಂದಿಗೆ ಅಲ್ಲಿ ಬದಲಾವಣೆಯ ಗಾಳಿ ಬೀಸುವ ಲಕ್ಷಣಗಳು ಗೋಚರಿಸುತ್ತಿವೆ.

- **ತೀವ್ರಗೊಂಡ ಜನಾಕ್ರೋಶ**

ರಾಜಕಾರಣಿಗಳ ಭ್ರಷ್ಟಾಚಾರದಿಂದ ರೋಸಿಹೋಗಿರುವ ನೇಪಾಳಿಗರು 'ದೇಶದಲ್ಲಿ ಮತ್ತೆ ಮೊದಲಿನಂತೆ ರಾಜಪ್ರಭುತ್ವ ಬರಲಿ, ತನ್ಮೂಲಕ ದೇಶ ಉಳಿಯಲಿ' ಎಂಬ ಆಶಯ ದೊಂದಿಗೆ ವ್ಯವಸ್ಥೆಯ ಬದಲಾವಣೆಗೆ ಆಗ್ರಹಿಸುತ್ತಿದ್ದಾರೆ. ಜತೆಗೆ, ರಾಷ್ಟ್ರಕ್ಕೆ ಲಗತ್ತಿಸಲಾಗಿರುವ 'ಜಾತ್ಯತೀತ' ಎಂಬ ಹಣೆಪಟ್ಟಿಯನ್ನು ಕಿತ್ತೊಗೆದು ಮೊದಲಿನಂತೆ 'ಹಿಂದೂರಾಷ್ಟ್ರ' ಎಂದು ಕರೆಯುವಂತಾಗಬೇಕು ಎಂಬ ಒತ್ತಾಯವೂ ಇದರೊಂದಿಗೆ ಸೇರಿಕೊಂಡಿದೆ. 'ಮಾಜಿ ರಾಜ' ಜ್ಞಾನೇಂದ್ರ ಶಾ ಅವರ ಬೆಂಬಲಿಗರು ನೇಪಾಳ ರಾಜಧಾನಿ ಕಠ್ಮಂಡುವಿನಲ್ಲಿ ಶುರುಹಚ್ಚಿಕೊಂಡ ಪ್ರತಿಭಟನೆಯು ಮಾರ್ಚ್ 28ರಂದು ತಾರಕಕ್ಕೇರಿ ಹಿಂಸಾಚಾರದ ಸ್ತರವನ್ನು ತಲುಪಿತು. ಓರ್ವ ಪತ್ರಕರ್ತ ಸೇರಿದಂತೆ ಇಬ್ಬರು ಸ್ಥಳದಲ್ಲೇ ಅಸುನೀಗುವುದಕ್ಕೆ ಹಾಗೂ ನೂರಾರು ಜನರು ಗಾಯಗೊಳ್ಳುವುದಕ್ಕೆ ಅದು ಕಾರಣವಾಯಿತು.

- **ಪ್ರತಿಭಟನೆಗೆ ಕಾರಣವೇನು?**

ಹಾಗೆ ನೋಡಿದರೆ, ನೇಪಾಳದಲ್ಲಿ 240 ವರ್ಷಗಳಿಂದ ಚಾಲ್ತಿಯಲ್ಲಿದ್ದುದು ರಾಜಪ್ರಭುತ್ವ. ಬದಲಾದ ಕಾಲಘಟ್ಟದ ಅನಿವಾರ್ಯತೆ ಹಾಗೂ ನಿರೀಕ್ಷೆಗೆ ಅನುಸಾರವಾಗಿ 2008ರಲ್ಲಿ ರಾಜಪ್ರಭುತ್ವ ಕೊನೆಗೊಂಡು ಪ್ರಜಾಪ್ರಭುತ್ವದ ಪರ್ವಕಾಲ ಬಂತು. ಆಗಿನ ರಾಜ ಜ್ಞಾನೇಂದ್ರರು ಎಲ್ಲ ರಾಜಾಧಿಕಾರಗಳನ್ನೂ ಸಂಸತ್ತಿಗೆ ಹಸ್ತಾಂತರಿಸಿದರು. ವಿಷಾದನೀಯ ಸಂಗತಿಯೆಂದರೆ, ಪ್ರಜಾಪ್ರಭುತ್ವ ಅಲ್ಲಿ ಗಿಟ್ಟಲಿಲ್ಲ. ಅಂದರೆ, ಪ್ರಜಾಪ್ರಭುತ್ವ ಜಾರಿಗೆ ಬಂದ 17 ವರ್ಷಗಳಲ್ಲಿ ಬರೋಬ್ಬರಿ 11 ಸರಕಾರಗಳು ಬಂದುಹೋಗುವಂತಾಯಿತು. ಇದಕ್ಕೆ ಕಾರಣ, ರಾಜಕೀಯ ನಾಯಕರಿಗೆ ದೇಶದ ಹಿತಾಸಕ್ತಿಗಿಂತ ಸ್ವಹಿತಾಸಕ್ತಿಯೇ ಆದ್ಯತೆಯ ವಿಷಯವಾಗಿದ್ದು.

ತಮಾಷೆಯೆಂದರೆ, ನೇಪಾಳದಲ್ಲಿನ ಯಾವುದೇ ಚುನಾಯಿತ ಸರಕಾರ ಪೂರ್ಣಾವಧಿಯ ಅಧಿಕಾರ ನಡೆಸಿಲ್ಲ. ಮತ್ತೆ ಮತ್ತೆ ನಡೆಯುವ ಚುನಾವಣೆಗಳು, ಪ್ರಧಾನಮಂತ್ರಿ ಮತ್ತು ರಾಷ್ಟ್ರಪತಿಯಂಥ ಆಯಕಟ್ಟಿನ ಸ್ಥಾನಗಳಲ್ಲಿ ಆಗುತ್ತಲೇ ಹೋದ ಬದಲಾವಣೆ ಮುಂತಾದ ಕಾರಣದಿಂದಾಗಿ ನೇಪಾಳದಲ್ಲಿ ಆಳುಗ ವ್ಯವಸ್ಥೆಗೆ ಗ್ರಹಣ ಹಿಡಿದಂತಾಯಿತು. ಇಂಥ ರಾಜಕೀಯ ಅಸ್ಥಿರತೆಯ ಕಾರಣದಿಂದ ಯುವಜನರಿಗೆ ದಕ್ಕಬೇಕಾದ ಉದ್ಯೋಗಾವಕಾಶಗಳು ಸೇರಿದಂತೆ ಜನರ ವೈವಿಧ್ಯಮಯ ಅಗತ್ಯಗಳಿಗೆ ಸಂಚಕಾರ ಒದಗತೊಡಗಿತು. ಯುವಕರು ಹೊಟ್ಟೆಪಾಡಿಗಾಗಿ ಪರದೇಶಗಳತ್ತ ಮುಖಮಾಡಬೇಕಾಯಿತು. ಈ ಎಲ್ಲ ನಕಾರಾತ್ಮಕ ಬೆಳವಣಿಗೆಗಳೇ ಜನರು ಸಹನೆ ಕಳೆದುಕೊಳ್ಳಲು ಮೂಲವಾಯಿತು.

- **ಬದಲಾವಣೆಯ ಪರ್ವಕಾಲ**

ಫೆಬ್ರವರಿ 19 ನೇಪಾಳದ ಗಣತಂತ್ರ ದಿನ. ಅಂದು, ಮಾಜಿ ರಾಜ ಜ್ಞಾನೇಂದ್ರ ಅವರು ಜನಬೆಂಬಲ ಕೋರಿ ಕರೆನೀಡಿದ್ದು ಪ್ರತಿಭಟನಾಕಾರರಿಗೆ ಒಂದರ್ಥದಲ್ಲಿ ಪರೋಕ್ಷ ಸೂಚನೆಯಾಗಿತ್ತು ಎನ್ನಲಾಗುತ್ತದೆ. ''ದೇಶವನ್ನು ರಕ್ಷಿಸುವ ಮತ್ತು ರಾಷ್ಟ್ರೀಯ ಏಕತೆಯನ್ನು ಮರುಸ್ಥಾಪಿಸುವ ಹೊಣೆಯನ್ನು ನಾವೀಗ ಹೊರಬೇಕಾಗಿ ಬಂದಿದೆ'' ಎಂಬ ಅವರ ಮಾತನ್ನು ಗಂಭೀರವಾಗಿ ಪರಿಗಣಿಸಿ ಬೀದಿಗಿಳಿದ ಪ್ರತಿಭಟನಾಕಾರರು ಆಳುಗ ವಲಯಕ್ಕೆ ಚುರುಕು ಮುಟ್ಟಿಸಿದ್ದರ ಜತೆಗೆ, ತಮ್ಮ ಬೇಡಿಕೆಗಳ ಈಡೇರಿಕೆಗೆ ಗಡುವು ನೀಡಿದ್ದಾರೆ; ಅವನ್ನು ಈಡೇರಿಸುವ ಬದ್ಧತೆ ಹೊಮ್ಮದಿದ್ದಲ್ಲಿ ಪ್ರತಿಭಟನೆಯನ್ನು ಮತ್ತಷ್ಟು ತೀವ್ರಗೊಳಿಸುವ ಎಚ್ಚರಿಕೆಯನ್ನೂ ನೀಡಿದ್ದಾರೆ. ಸಾಲದೆಂಬಂತೆ ಜ್ಞಾನೇಂದ್ರರು ನೇಪಾಳದ ವಿವಿಧೆಡೆಯ ಧಾರ್ಮಿಕ ಸ್ಥಳಗಳಿಗೆ ಅನುಯಾಯಿಗಳೊಂದಿಗೆ ನೀಡಿ ಭಾರಿ ಬಹಿರಂಗ ಸಭೆಗಳನ್ನು ನಡೆಸಿದ್ದಾರೆ. ಇದು 'ಪ್ರಭುತ್ವ ಬದಲಾವಣೆ'ಯ ಪರ್ವದ ಮುನ್ಸೂಚನೆ ಎನ್ನಲಾಗುತ್ತಿದೆ.

- **ಹೊಮ್ಮಿತು ಟೀಕೆ-ಟಿಪ್ಪಣಿ**

ಫೆಬ್ರವರಿ 19ರ ಗಣತಂತ್ರ ದಿನದಂದು ಜ್ಞಾನೇಂದ್ರ ಶಾ ಅವರಿಂದ ಹೊಮ್ಮಿದ ಪರೋಕ್ಷ ಮಾತುಗಳ ಅರ್ಥವನ್ನು ಗ್ರಹಿಸಿದ ನೇಪಾಳದ ನಾಗರಿಕ ಸಮಾಜದ ಗುಂಪೊಂದು ಮಾರ್ಚ್ 24ರಂದು, ''ರಾಜಪ್ರಭುತ್ವದ ಮರುಸ್ಥಾಪನೆಯ ಗುರಿಯೊಂದಿಗೆ 'ರಾಜಕೀಯವಾಗಿ' ಸಕ್ರಿಯರಾಗಿರುವ ಜ್ಞಾನೇಂದ್ರ ಶಾ, ತನ್ಮೂಲಕ ತಮ್ಮ ಪೂರ್ವಜರ ರಾಷ್ಟ್ರ ನಿರ್ಮಾಣದ ಪ್ರಯತ್ನಗಳನ್ನು ಹಾಳುಗೆಡವಲು ಹೊರಟಿದ್ದಾರೆ; ಅವರ ಈ ಚಟುವಟಿಕೆಯಿಂದಾಗಿ ದೇಶವು ನೆರೆಹೊರೆಯ ರಾಷ್ಟ್ರಗಳು ಮತ್ತು ಪ್ರಪಂಚದ ಸಮ್ಮುಖದಲ್ಲಿ ದುರ್ಬಲಗೊಳ್ಳುವ ಅಪಾಯವಿದೆ'' ಎಂದು ಟೀಕಿಸಿದ್ದೂ ಉಂಟು.

- **ಆಸ್ತಿಪಾಸ್ತಿಗೆ ಹಾನಿ**

ಮಾರ್ಚ್ 28ರಂದು ಬೀದಿಗಿಳಿದ ಪ್ರತಿಭಟನಾಕಾರರು ಕಠ್ಮಂಡುವಿನ ಟಿಂಕುನೆ-ಬನೇಶ್ವರ್ ಪ್ರದೇಶದಲ್ಲಿ ರಾಜಕೀಯ ಪಕ್ಷವೊಂದರ ಕಚೇರಿಯ ಮೇಲೆ ದಾಳಿ ಮಾಡಿದ್ದರ ಜತೆಗೆ, ಕಲ್ಲುತೂರಾಟ, ವಾಹನಗಳಿಗೆ ಬೆಂಕಿ ಹಚ್ಚುವಿಕೆ ಮತ್ತು ಅಂಗಡಿಗಳ ಲೂಟಿಯಲ್ಲೂ ತೊಡಗಿಸಿಕೊಂಡ ಪರಿಣಾಮ ಕಠ್ಮಂಡುವಿನ ಒಂದಷ್ಟು ಭಾಗಗಳಲ್ಲಿ ಉದ್ವಿಗ್ನ ಪರಿಸ್ಥಿತಿ ತಲೆದೋರಿತ್ತು. ಸಾರ್ವಜನಿಕ ಸ್ವತ್ತುಗಳಿಗೆ ಮತ್ತು ಪರಿಸರಕ್ಕೆ ಹಾನಿಯಾದ ಹಿನ್ನೆಲೆಯಲ್ಲಿ, ಮಾಜಿ ರಾಜ ಜ್ಞಾನೇಂದ್ರ ಶಾ ಅವರಿಗೆ ಕಠ್ಮಂಡು ಮೆಟ್ರೋಪಾಲಿಟನ್ ನಗರದ ಮೇಯರ್ ಪತ್ರ ಬರೆದು, ಸ್ವತ್ತು-ಹಾನಿ ಸಂಬಂಧದ ದಂಡವನ್ನು ಪಾವತಿಸುವಂತೆ ಆಗ್ರಹಿಸಿದ ಬೆಳವಣಿಗೆಯೂ ಆಗಿದೆ.

- **ಕುದಿಯುತ್ತಿದೆ ನೇಪಾಳ**

ಹಿಮದ ಮಡಿಲಲ್ಲಿ ತಣ್ಣಗಿರಬೇಕಿದ್ದ ನೇಪಾಳ ಅಕ್ಷರಶಃ ಕುದಿಯುತ್ತಿದೆ. ಮೇಲೆ ಉಲ್ಲೇಖಿಸಲಾಗಿರುವ ರಾಜಕೀಯ ಕಾರಣಗಳಲ್ಲದೆ, ನೇಪಾಳದಲ್ಲಿ ಆರ್ಥಿಕ ಸಂಕಷ್ಟ ಅವ್ಯಾಹತವಾಗಿದೆ, ಬೆಲೆಯೇರಿಕೆಯಿಂದ ಜನರು ತತ್ತರಿಸಿದ್ದಾರೆ. ಶತಮಾನಗಳಿಂದ ಉಳಿದು-ಬೆಳೆದುಕೊಂಡು ಬಂದಿದ್ದ ನೇಪಾಳಿಯರ ಧಾರ್ಮಿಕ ಮತ್ತು ಸಾಂಸ್ಕೃತಿಕ ಅನನ್ಯತೆಗಳು, ಪರಂಪರೆಗಳು ಅಡಕತ್ತರಿಯಲ್ಲಿ ಸಿಲುಕಿವೆ.

ಹೀಗಾಗಿ ನೇಪಾಳಿಗರಲ್ಲಿ, 'ರಾಜಪ್ರಭುತ್ವವಿದ್ದಾಗ ರಾಷ್ಟ್ರಕ್ಕೆ ಇಂಥ ದುಸ್ಥಿತಿ ಒದಗಿರಲಿಲ್ಲ, ರಾಜರು ಮಾತ್ರವೇ ನಮ್ಮ ಸಮಸ್ಯೆಗಳಿಗೆ ಮದ್ದು ಅರೆಯಬಲ್ಲರು' ಎಂಬ ಗ್ರಹಿಕೆ ಒಡಮೂಡಿದೆ. ನಿರುದ್ಯೋಗಿಗಳು/ಯುವಕರು, ರೈತರು, ಮಧ್ಯಮ ವರ್ಗದವರು ಹೀಗೆ ಸಮಾಜದ ವಿವಿಧ ಸ್ತರದ ಜನರು ಈ ಪ್ರತಿಭಟನೆಗೆ ದನಿಗೂಡಿಸಿದ್ದಾರೆ. ಆಳುಗ ವಲಯದಿಂದ ಸೂಕ್ತ ಪ್ರತಿಸ್ಪಂದನೆ ದಕ್ಕದಿದ್ದಲ್ಲಿ, ಅವರ ಬೇಗುದಿ ಸ್ಫೋಟಗೊಳ್ಳುವ ನಿರೀಕ್ಷೆಯಿದೆ. ದೇಶದ 40ಕ್ಕೂ ಹೆಚ್ಚಿನ ಸಂಘಟನೆಗಳು ಈ ಪ್ರತಿಭಟನೆಗೆ ಒತ್ತಾಸೆಯಾಗಿ ನಿಂತಿವೆ ಎನ್ನಲಾಗಿದೆ.

- **ಅಸಮಾಧಾನದ ಮೊಳಕೆ**

ವಿಶ್ವದ ಏಕೈಕ ಹಿಂದೂ ರಾಷ್ಟ್ರ ಎಂಬ ಹೆಗ್ಗಳಿಕೆಯನ್ನು ಹೆಗಲಿಗೇರಿಸಿಕೊಂಡಿತ್ತು ನೇಪಾಳ. ಆದರೆ 2008ರಲ್ಲಿ ಅದಕ್ಕೆ 'ಜಾತ್ಯತೀತ ರಾಷ್ಟ್ರ' ಎಂಬ ಹಣೆಪಟ್ಟಿಯನ್ನು ನೇತುಹಾಕಿದ್ದು ಬದಲಾದ 'ಪ್ರಭುತ್ವ' ವ್ಯವಸ್ಥೆ. ಅಂದರೆ 'ರಾಜಪ್ರಭುತ್ವ'ದಿಂದ 'ಪ್ರಜಾಪ್ರಭುತ್ವ'ದೆಡೆಗಿನ ಸ್ಥಿತ್ಯಂತರದ ಘಟ್ಟ. ರಾಜಪ್ರಭುತ್ವಕ್ಕೆ ಒಗ್ಗಿಕೊಂಡಿದ್ದ ದೇಶದ ಜನರಲ್ಲಿ ಪ್ರಜಾಪ್ರಭುತ್ವವು ಹುಟ್ಟಿಸಿದ ಬೇಸರ ಮತ್ತು ಅಸಮಾಧಾನಗಳು ದಿನಗಳೆಯುತ್ತ ಬಂದಂತೆ ಹೆಮ್ಮರವಾಗಿ ಈಗಿನ ಪ್ರತಿಭಟನೆ ಮತ್ತು ಹಿಂಸಾಚಾರದ ಸಂದರ್ಭವನ್ನು ಹುಟ್ಟುಹಾಕಿವೆ ಎನ್ನಬೇಕು. ಪ್ರಜಾಪ್ರಭುತ್ವದ ಮುಖವಾಡ ಹೊತ್ತು ಕಾಲಾನುಕಾಲಕ್ಕೆ ಬಂದ ಸರಕಾರಗಳು ಹಿಂದೂ ಪರಂಪರೆ ಮತ್ತು ಮೌಲ್ಯಗಳನ್ನು ಮೂಲೆಗೊತ್ತಿ, ಪರಧರ್ಮಗಳಿಗೆ/ಪರಧರ್ಮೀಯರಿಗೆ ಮಣೆ ಹಾಕಿದ್ದು ಜನರ ಆಕ್ರೋಶಕ್ಕೆ ಕಾರಣವಾಗಿದೆ. ನೆಲದ ಧಾರ್ಮಿಕ ಅಸ್ಮಿತೆ ಮತ್ತು ಸಾಂಸ್ಕೃತಿಕ ಪರಂಪರೆಗೇ ಧಕ್ಕೆಯೊದಗುವ ಸ್ಥಿತಿ ಬಂದ ಹಿನ್ನೆಲೆಯಲ್ಲಿ ಜನ ಬೀದಿಗಿಳಿದಿದ್ದಾರೆ ಎನ್ನುತ್ತಾರೆ ವಿಶ್ಲೇಷಕರು.

ಭ್ರಷ್ಟರಿಗೆ ಪ್ರಾಮಾಣಿಕ ಅಧಿಕಾರಿಗಳೇ ಟಾರ್ಗೆಟ್

ಮಂಗಳೂರಿನಲ್ಲಿ ಹೆಚ್ಚುತ್ತಿದೆ ಭ್ರಷ್ಟಾಚಾರಿಗಳ ಲಾಬಿ

ಭ್ರಷ್ಟಾಚಾರ - ವಾಮಾಚಾರ ಅಬ್ಬರ

ಜಿಲ್ಲಾ ನೋಟ

ಜಿತೇಂದ್ರ ಕುಂದೇಶ್ವರ

ಮಂಗಳೂರು: ಈಗ ಮಂಗಳೂರಿನಲ್ಲಿ ಪ್ರಾಮಾಣಿಕರ ಮೇಲೆ ವಾಮಾಚಾರ ಮಾಡುವ ಭ್ರಷ್ಟಾಚಾರಿಗಳು ಹೆಚ್ಚ ತೊಡಗಿದ್ದಾರೆ. ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ಉರ್ವಾ ಕಚೇರಿಯಲ್ಲಿ ಬ್ರೋಕರುಗಳ ಆಟಾಟೋಪ ಮಿತಿಮೀರಿದ್ದು ಮುಡಾ ಕಮಿಷನರ್ ಅವರನ್ನೇ ಬ್ಲಾಕ್ ಮೇಲ್ ಮಾಡುವ ಹಂತಕ್ಕಿಳಿದಿದ್ದಾರೆ. ಇದರಿಂದ ನೊಂದ ಮುಡಾ ಕಮಿಷನರ್ ನೂರ್ ಝುಹರಾ ಖಾನಂ ಅವರು ಇಬ್ಬರು ಬ್ರೋಕರ್ ವಿರುದ್ಧ ಉರ್ವಾ ಠಾಣೆಗೆ ದೂರು ನೀಡಿದ್ದು ಎಫ್‌ಐಆರ್ ದಾಖಲಾಗಿದೆ.

ಕರ್ತವ್ಯಕ್ಕೆ ಅಡ್ಡಿ

ಮುಡಾ ಕಮಿಷನರ್ ನೂರ್ ಝುಹರಾ ಖಾನಂ ಅವರು ಇಬ್ಬರು ಬ್ರೋಕರ್ ಗಳ ವಿರುದ್ಧ ಉರ್ವಾ ಠಾಣೆಗೆ ದೂರು ನೀಡಿದ್ದಾರೆ. ಬ್ರೋಕರ್ ವಹಾಬ್ (45) ಮತ್ತು ಅಸಿಸ್ಟೆಂಟ್ ಬ್ರೋಕರ್ ಸಬಿತ್ (25) ಎಂಬ ಇಬ್ಬರ ವಿರುದ್ಧ ಕರ್ತವ್ಯಕ್ಕೆ ಅಡ್ಡಿಪಡಿಸಿದ ದೂರು ದಾಖಲಾಗಿದೆ. ವಾಮಾಚಾರ ನಡೆಸುವ ಬೆದರಿಕೆ ಒಡ್ಡಿದ್ದು ಯಾವ ಹೊತ್ತಿಗೆ ಮಾಟ ಮಾಡಿದ್ದಾರೆ, ಹೇಗೆ ಮಾಡಿದ್ದಾರೆ ಎನ್ನುವ ಕುರಿತು ಪೊಲೀಸರು ಇನ್ನಷ್ಟೇ ತನಿಖೆ ನಡೆಸಬೇಕಿದೆ.

ಮುಡಾ ಕಚೇರಿ ಕತೆ

ಜನವರಿ 7ರಂದು ಮುಡಾ ಕಚೇರಿ ಒಳಕ್ಕೆ ನುಗ್ಗಿದ್ದ ತಲಪಾಡಿಯ ಬ್ರೋಕರ್ ಸಿಬ್ಬಂದಿ ಇಲ್ಲದ ಸಂದರ್ಭದಲ್ಲಿ ಕಚೇರಿ ದಾಖಲೆಗಳನ್ನು ಪರಿಶೀಲಿಸಿ ತಿದ್ದಿದ್ದ. ಈ ವಿಡಿಯೋ ಕ್ಲಿಪ್ ಜಾಲತಾಣದಲ್ಲಿ ಸಂಚಲನ ಸೃಷ್ಟಿಸಿದ ಬಳಿಕ ಸುದ್ದಿ ಮಾಧ್ಯಮಗಳಲ್ಲಿಯೂ ಪ್ರಸಾರವಾಗಿತ್ತು, ಇದರಿಂದ ಬ್ರೋಕರ್‌ಗಳ ಮರ್ಯಾದೆ ಹರಾಜಾಗಿ ಆಡಳಿತದಲ್ಲಿ ಮಧ್ಯವರ್ತಿಗಳ ಪ್ರಭಾವ ಜಗಜ್ಜಾಹೀರಾಗಿತ್ತು. ಇದೆಲ್ಲ ಅವಾಂತರ ನಡೆದ ಬಳಿಕ ಕಮಿಷನರ್ ನೂರ್ ಝುಹರಾ ಅವರು, ಸಿಬ್ಬಂದಿಗೆ ಮಾತ್ರ ಪ್ರವೇಶ ಎಂದು ಆದೇಶಿಸಿದ್ದರು.

ಬ್ರೋಕರ್ ವಾಟ್ಸಪ್ ಗ್ರೂಪ್

ಇದು ತಮ್ಮ ಕಮಿಷನ್‌ಗೆ ಅಡ್ಡಗಾಲು ಹಾಕುವ ಮೂಲಕ ಅವರ ಹೊಟ್ಟೆಗೆ ಹೊಡೆಯುವ ತಂತ್ರ ಎಂದು ಭಾವಿಸಿದ ಬ್ರೋಕರ್ ಮುಡಾ ಕಮಿಷನರ್ ವಿರುದ್ಧವೇ ತಿರುಗಿ ಬಿದ್ದಿದ್ದರು. ಬ್ರೋಕರ್‌ಗಳದ್ದೇ ವಾಟ್ಸಪ್ ಗ್ರೂಪ್ ರಚಿಸಿ ಇದ್ದುದರಲ್ಲಿ ಪ್ರಾಮಾಣಿಕ ಅಧಿಕಾರಿಗೆ ಭ್ರಷ್ಟಾಚಾರದ ಆರೋಪ ಮಾಡುತ್ತಾ ಚರ್ಚಿಸುತ್ತಿದ್ದರು.

ವಾಮಾಚಾರ ಬೆದರಿಕೆ

ಎಲ್ಲಿಯವರೆಗೆ ಮುಟ್ಟಿದೆ ಎಂದರೆ ಗ್ಯಾಂಗ್‌ಗಳ ರೀತಿ ಗುಂಪುಗೂಡಿ ಕರ್ತವ್ಯಕ್ಕೆ ಅಡ್ಡಿಪಡಿಸುವುದು, ಫೋನ್ ಮೂಲಕ ಜೀವ ಬೆದರಿಕೆ ಒಡ್ಡುವ ಕೆಲಸ ಮಾಡುತ್ತಿದ್ದರು. ಒಂದು ಹಂತ ಮುಂದಕ್ಕೆ ಹೋಗಿ ಜನರ ಮುಂದೆಯೇ ಕಮಿಷನರ್ ಅವರನ್ನು ಅವಮಾನಿಸುವ ಕೆಲಸ ಮಾಡುತ್ತಿದ್ದರು. ಕೊನೆಗೆ ದಾರಿ ಗಾಣದೆ ನೂರ್ ಝುಹರಾ ಖಾನಮ್ ಉರ್ವ ಪೊಲೀಸರಿಗೆ ದೂರು ನೀಡಿದ್ದರು. ಕಮಿಷನರ್ ಕಚೇರಿ ಪ್ರದೇಶದಲ್ಲಿ ಶಾಂತಿ ಕದಡಲು ವಾಮಾಚಾರ ಮಾಡುವುದಾಗಿ ಬೆದರಿಕೆ ಒಡ್ಡಿರುವ ಕುರಿತು ದೂರು ನೀಡಿದ್ದಾರೆ.

ಭ್ರಷ್ಟಾಚಾರ ಮುಕ್ತ ಗುರಿ

ಹಿಂದೊಮ್ಮೆ ಖಡಕ್ ಅಧಿಕಾರಿ ಶ್ರೀಕಾಂತ್ ರಾವ್ ಕೂಡಾ ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರವನ್ನು ಭ್ರಷ್ಟಾಚಾರ ಮುಕ್ತ ಮಾಡಲು ಹೆಜ್ಜೆ ಇಟ್ಟಿದ್ದರು. ಮಧ್ಯವರ್ತಿಗಳಿಂದ ಮುಕ್ತ ಮುಡಾ ಎಂಬ ಅಭಿಯಾನ ಮಾಡಿದ್ದರು. ನೇರವಾಗಿ ಕಮಿಷನರ್ ಕಚೇರಿಗೆ ಬಂದರೆ ಯಾವುದೇ ಕಮಿಷನ್ ನೀಡದೆಯೇ ಅರ್ಜಿ ವಿಲೇವಾರಿ ಮಾಡುವ ಘೋಷಣೆ ಮಾಡಿದ್ದರು. ಇದರಿಂದ ಸಾರ್ವಜನಿಕರಿಗೆ ಬಹಳ ಉಪಯೋಗವಾಗಿತ್ತು. ಆಗ ಬ್ರೋಕರ್‌ಗಳ ಒಳಗೊಳಗೆ ಹಲ್ಲು ಮಸೆಯುತ್ತಿದ್ದರು. ಆದರೆ ಈಗ ಕಾಲ ಬದಲಾಗಿದೆ. ಪ್ರಾಮಾಣಿಕ ಅಧಿಕಾರಿಗಳಿಗೇ ಬೆದರಿಸುವ ಮಟ್ಟಕ್ಕೆ ಮಂಗಳೂರಿನ ಭ್ರಷ್ಟಾಚಾರ ಲಾಬಿ ಬೆಳೆದು ಹೋಗಿದೆ.

ಟಾರ್ಗೆಟ್ ಆಗುತ್ತಿರುವ ಅಧಿಕಾರಿಗಳಾದ ಮುಡಾ ಕಮಿಷನರ್ ನೂರ್ ಜಹರಾ ಕಾನಂ ಮತ್ತು ಪೊಲೀಸ್ ಇನ್ಸ್‌ಪೆಕ್ಟರ್ ಭಾರತಿ.

ದಕ್ಷಿಣ ಕನ್ನಡ ಜಿಲ್ಲೆಗೆ ಸಮಯ ಮೀಸಲಿಡಿ

ಯು.ಟಿ. ಖಾದರ್ ಸಚಿವರಾಗಿದ್ದಾಗ ಯಾವುದೇ ದೋಖ ನಂಬರ್ ದಂಧೆ ನಡೆಯಲು ಬಿಡುತ್ತಿರಲಿಲ್ಲ ಎಂಬ ಹೆಗ್ಗಳಿಕೆ ಇತ್ತು. ಇದೀಗ ವಿಧಾನಸಭಾಧ್ಯಕ್ಷರಾಗಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆ ವಾಮಾಚಾರ ಮಾಡುವ ಭ್ರಷ್ಟಾಚಾರಿಗಳಿಂದ ಮುಕ್ತಗೊಳಿಸಲು ಶಕ್ತರಾಗಿದ್ದಾರೆ. ಬ್ಯುಸಿ ಶೆಡ್ಯೂಲ್‌ನಲ್ಲಿ ಅವರು ಇದಕ್ಕೆ ಸಮಯ ಮೀಸಲಿಡಬೇಕು ಅಷ್ಟೇ.

ಯಾರಾರು ಶಾಮೀಲು

ಬೆಂಗಳೂರಿನ ಆರ್‌ಟಿಐ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ಗಂಗರಾಜ್ ಇನ್ನಿತರರ ವಿರುದ್ಧ ಪ್ರಸಾದ್ ಅತ್ತಾವರ ಎಂಬವರು ವಾಮಾಚಾರ ಮಾಡಿದ ವಿಚಾರ ಫೆಬ್ರವರಿಯಲ್ಲಿ ಬಹಿರಂಗವಾಗಿತ್ತು. ಮಂಗಳೂರು ಪೊಲೀಸರು ಪ್ರಸಾದ್ ಅತ್ತಾವರನ ಪತ್ನಿ ಪೊಲೀಸ್ ಎಸ್‌ಐ ಸುಮಾ ಕೂಡಾ ಇದರಲ್ಲಿ ಶಾಮೀಲಾಗಿರುವ ಕುರಿತು ಮಂಗಳೂರು ಪೊಲೀಸ್ ಕಮಿಷನರ್ ಅನುಪಮ್ ಅಗರವಾಲ್ ಹೇಳಿದರು. ನೋಟಿಸ್ ಕಳುಹಿಸಿದರೂ ಎಸ್‌ಐ ಕಡೆಯಿಂದ ಯಾವ ಉತ್ತರವೂ ಬಂದಿಲ್ಲ. ಪ್ರಸಾದ್ ಅತ್ತಾವರ ಮೇಲ್‌ನಲ್ಲಿ ಸಿಕ್ಕ ವಾಮಾಚಾರ ವಿವರಗಳಲ್ಲೂ ಪೊಲೀಸ್ ಕಿರಿಯ ಅಧಿಕಾರಿಯ ಹೆಸರಿತ್ತು. ಪ್ರಾಣಿ ಬಲಿ ಕೊಡುವ ವೇಳೆ ಚೀಟಿಯಲ್ಲೂ ಪ್ರಸಾದ್ ಅತ್ತಾವರ, ಸ್ನೇಹಮಯಿ ಕೃಷ್ಣ, ಗಂಗರಾಜು, ಶ್ರೀನಿಧಿ ಹೆಸರಿನ ಜತೆ ಸುಮಾ ಹೆಸರು ಉಲ್ಲೇಖಿಸಲಾಗಿತ್ತು.

ಭ್ರಷ್ಟರ ಲಾಬಿ

ವಿಶೇಷ ಅಂದರೆ ಉರ್ವ ಪೊಲೀಸ್ ಠಾಣೆಗೂ ಭ್ರಷ್ಟರ ಕಣ್ಣು ಬಿದ್ದಿದೆ. ಇದ್ದುದರಲ್ಲಿ ಪ್ರಾಮಾಣಿಕ ಅಧಿಕಾರಿ, ಲೋಕಾಯುಕ್ತದಲ್ಲೂ ಈ ಹಿಂದೆ ಕೆಲಸ ಮಾಡಿದ್ದ ಭಾರತಿ ಅವರನ್ನೂ ಭ್ರಷ್ಟರ ಲಾಬಿ ಟಾರ್ಗೆಟ್ ಮಾಡಿತ್ತು. ಪೊಲೀಸ್ ಒಬ್ಬರು ಆರೋಪಿ ಜತೆ ಸೆಲ್ಫಿ ತೆಗೆದುಕೊಂಡ ಫೋಟೊ ಸುದ್ದಿಯಾಗಿ ಇದಕ್ಕೆ ಇನ್‌ಸ್ಪೆಕ್ಟರ್ ಭಾರತಿ ಅವರನ್ನು ಸಿಲುಕಿಸಿ ಅವರನ್ನು ವರ್ಗಾವಣೆ ಮಾಡಲಾಗಿತ್ತು. ಸಸ್ಪೆಂಡ್ ಆಗುತ್ತಾರೆ ಅನ್ನುವಷ್ಟರಲ್ಲಿ ಅವರು ಲೋಕಾಯುಕ್ತಕ್ಕೆ ಸೇರ್ಪಡೆಗೊಂಡು ಬಚಾವ್ ಆಗಿದ್ದರು. ಅವರು ಹಿಂದೆ ಮಾಡಿದ್ದ ಒಳ್ಳೆಯ ಕೆಲಸ ಅವರನ್ನು ರಕ್ಷಣೆ ಮಾಡಿತ್ತು. ಇನ್ನೊಬ್ಬ ಪ್ರಾಮಾಣಿಕ ಅಧಿಕಾರಿ ಇದೀಗ ಕದ್ರಿ ಇನ್‌ಸ್ಪೆಕ್ಟರ್ ಸೋಮಶೇಖರ್ ಮೇಲೂ ಅಮಾನತು ತೂಗು ಗತ್ತಿ ನೇತಾಡುತ್ತಿದೆ.

ಬೆಟ್ಟಿಂಗ್ ದಂಧೆ

ಐಪಿಎಲ್ ನಡೆಯುತ್ತಿದೆ. ಎಲ್ಲೆಡೆ ಬೆಟ್ಟಿಂಗ್ ಬೆಟ್ಟಿಂಗ್ ಮಂಗಳೂರಲ್ಲಿ ಇದುವರೆಗೂ ಒಂದೇ ಒಂದು ಪ್ರಕರಣ ಪತ್ತೆಯಾಗಿಲ್ಲ. ಪ್ರಾಮಾಣಿಕರನ್ನು ಪತ್ತೆ ಮಾಡಲು ಹೋದರೆ ಭ್ರಷ್ಟ ಬ್ರೋಕರ್‌ಗಳು ನೂರ್ ಜಹರಾ ಕಾನಮ್ ಅವರಿಗೆ ಕಿರುಕುಳ ನೀಡಿದಂತೆ ಪ್ರಾಮಾಣಿಕ ಅಧಿಕಾರಿಗಳು ತೊಂದರೆಗೆ ಒಳಗಾಗುವ ಸಾಧ್ಯತೆ ಇದೆ. ಪ್ರಾಮಾಣಿಕ ಕರ್ತವ್ಯ ನಿರತ ಪತ್ರಕರ್ತರೂ ಇಂಥ ಪರಿಸ್ಥಿತಿಯಲ್ಲಿದ್ದಾರೆ.

ಸೆಟಲೈಟ್ ತಾಂತ್ರಿಕತೆ ಮೊರೆ ಹೋದ ಅರಣ್ಯಾಧಿಕಾರಿಗಳು

ಹಸಿರು ಮರ ಕಡಿದವರ ವಿರುದ್ಧ ಕಠಿಣ ಕಾನೂನು ಕ್ರಮ

ಅರಣ್ಯ ಭೂಮಿ ಅತಿಕ್ರಮಣಕ್ಕೆ ಬ್ರೇಕ್

ಜಿಲ್ಲಾ ನೋಟ

ವಸೀಮ ಭಾವಿಮನಿ

ಧಾರವಾಡ: ಮಲೆನಾಡಿನ ಸೆರಗಿಗೆ ಹೊಂದಿಕೊಂಡಿರುವ ಧಾರವಾಡ ಜಿಲ್ಲೆಯಲ್ಲಿ ಹಚ್ಚ ಹಸಿರಿನ ಪರಿಸರದ ವಾತಾವರಣ ಇದೆ. ಇಂತಹ ಅರಣ್ಯ ಭೂಮಿ ಯನ್ನು ಜಿಲ್ಲೆಯಲ್ಲಿ ಎಗ್ಗಿಲ್ಲದೇ, ಕೆಲವೊಂದಿಷ್ಟು ಜನರು ಅತಿಕ್ರಮಣ ಮಾಡಿಕೊಂಡು ಬರುತ್ತಿದ್ದು, ಜಿಲ್ಲೆಯಲ್ಲಿರುವ ಅರಣ್ಯ ಪ್ರದೇಶದ ಮರಗಳನ್ನು ಕಡಿಯುವುದು, ಕಚ್ಚಾ ರಸ್ತೆ ಮಾಡಿಕೊಂಡು ಹೋಗುತ್ತಿರುವವರ ಮೇಲೆ ಅರಣ್ಯ ಇಲಾಖೆ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳುತ್ತಿದೆ.

ಸೆಟ್‌ಲೈಟ್ ಬಳಕೆ:

ಜಿಲ್ಲೆಯಲ್ಲಿ 2011 ರಿಂದ ಅದಕ್ಕೂ ಮೊದಲು ಅರಣ್ಯ ಇಲಾಖೆಯಲ್ಲಿರುವ ದಾರಿಯನ್ನು ಅಥವಾ ರೈತರು ಅರಣ್ಯ ಇಲಾಖೆ ಒಪ್ಪಿಗೆ ಪಡೆದು ಮೊಹರಂ ಹಾಕಿ ರಸ್ತೆ ಮಾಡಿಕೊಂಡಿದ್ದರ ಬಗ್ಗೆ ಸೆಟ್‌ಲೈಟ್ ಮುಖಾಂತರ ಗುರುತಿಸುವ ಕೆಲಸಗಳನ್ನು ಅರಣ್ಯ ಇಲಾಖೆ ಮಾಡುತ್ತಿದೆ. ಇದಕ್ಕಾಗಿ ಸೆಟಲೈಟ್ ತಾಂತ್ರಿಕತೆಗೆ ಅರಣ್ಯ ಅಧಿಕಾರಿಗಳು ಮೊರೆ ಹೋಗಿದ್ದಾರೆ.

ರಸ್ತೆಗೆ ಅನುಮತಿ ಕಡ್ಡಾಯ

ಈಗಾಗಲೇ ಧಾರವಾಡ ಜಿಲ್ಲೆಯಲ್ಲಿ ಅರಣ್ಯ ಇಲಾಖೆಯ ವ್ಯಾಪ್ತಿಯಲ್ಲಿರುವ ತಮ್ಮ ಮಾಲ್ಕಿ ಜಮೀನಿಗಳಿಗೆ ರೈತರು ಹೋಗಲು ನಿಯಮಾನುಸಾರವಾಗಿ ಪರವಾನಿಗೆ ಪಡೆದು 4 ರಸ್ತೆಗಳನ್ನುರೈತರು ದುರಸ್ತಿ ಮಾಡಿಕೊಂಡಿದ್ದಾರೆ. ಆದ್ರೆ ಇಂತಹ ರಸ್ತೆಗಳಿಗೆ ಯಾವುದೇ ಕಾರಣಕ್ಕೂ ಡಾಂಬರ್ ಹಾಕಲು ಬರುವುದಿಲ್ಲ. ಒಂದು ವೇಳೆ ಡಾಂಬರ್ ಹಾಕಿದರೆ ಅದಕ್ಕೆ ಅರಣ್ಯ ಇಲಾಖೆಯ ಅನುಮತಿ ಕಡ್ಡಾಯವಾಗಿ ಬೇಕಾಗುತ್ತದೆ. ಇಲ್ಲದೇ ಹೋದ್ರೆ, ರಸ್ತೆ ದುರಸ್ತಿ ಮಾಡಿರುವವರ ಮೇಲೆ ಕಾನೂನು ಕ್ರಮವಾಗುತ್ತದೆ. ಧಾರವಾಡ ಜಿಲ್ಲೆಯಲ್ಲಿ ಕೆಲವು ದಿನಗಳ ಹಿಂದಷ್ಟೇ 38 ಎಕರೆ ಮಾಲ್ಕಿ ಜಮೀನಿನಲ್ಲಿರುವ ರೈತನೊಬ್ಬ ಅರಣ್ಯ ಇಲಾಖೆ ವ್ಯಾಪ್ತಿಯಲ್ಲಿ ಮರಕಡಿದ ಬಗ್ಗೆ ಹಾಗೂ ರಸ್ತೆ ನಿರ್ಮಾಣವಾದ ಬಗ್ಗೆ ದೊಡ್ಡ ಸುದ್ದಿಯಾಗಿತ್ತು. ಈ ಬಗ್ಗೆ ಹಿರಿಯ ಅಧಿಕಾರಿಗೆ ಜನಜಾಗೃತಿ ಸಂಘದ ಸಂಸ್ಥಾಪಕರಾದ ಬಸವರಾಜ ಕೊರವರ್ ಮನವಿಯನ್ನು ಸಲ್ಲಿಸಿದ್ದರು.

ಹಳ್ಳಿಗೇರಿಯಲ್ಲಿ ಸೆಟ್‌ಲೈಟ್ ಬಳಸಿ ಅರಣ್ಯ ಭೂಮಿಯ ರಸ್ತೆಯನ್ನು ಗುರುತಿಸಿರುವ ಧಾರವಾಡ ಜಿಲ್ಲೆಯ ಅರಣ್ಯ ಇಲಾಖೆ.

ಹಳ್ಳಿಗೇರಿ ಘಟನೆ

ಧಾರವಾಡ ಮೂಲದ ನವೀನಸಿಂಘ್ ಠಾಕೂರ ಎನ್ನುವರು ಹಳ್ಳಿಗೇರಿ ಸರ್ವೆ ನಂಬರ್ 23 ಹಾಗೂ 24ರ ಮಾಲಿಕತ್ವ ಹೊಂದಿದ್ದಾರೆ. ಹಳ್ಳಿಗೇರಿ ಅರಣ್ಯ ಸರ್ವೆ ನಂ.22 ರಲ್ಲಿ ಇರುವ ರಸ್ತೆಯು, 2011 ರ ಪೂರ್ವದಲ್ಲಿಯೇ 400 ಮೀಟರ್ ರಸ್ತೆಯ ಚಕ್ಕಡಿ ದಾರಿ ಇರುತ್ತದೆ. ಇಲ್ಲಿ ಹಳೆಯ ದಾರಿಯನ್ನು ಮತ್ತು 230 ಮೀಟರ್ ಹೊಸ ದಾರಿಯನ್ನು ಅನುಮತಿ ಪಡೆಯದೇ ದುರಸ್ತಿ ಮಾಡಿಸಿರುತ್ತಾರೆ. 630 ಮೀಟರ್ ಉದ್ದದ ರಸ್ತೆಯನ್ನು ಅರಣ್ಯ ಇಲಾಖೆಯ ಅನುಮತಿಯನ್ನು ಪಡೆಯದೇ ಮಾಡಿಸಿದ್ದರು.

ಈಗಾಗಲೇ ಹಳ್ಳಿಗೇರಿ ಪ್ರಕರಣಕ್ಕ ಸಂಬಂಧಿಸಿದಂತೆ, ಅರಣ್ಯ ಪ್ರದೇಶದಲ್ಲಿ ಮರ ಕಡಿದ ಬಗ್ಗೆ ಹಾಗೂ ಅನುಮತಿ ಇಲ್ಲದೇ ರಸ್ತೆ ನಿರ್ಮಾಣ ಮಾಡಿದ್ದರ ಬಗ್ಗೆ ಎಫ್‌ಐಆರ್ ದಾಖಲಾಗಿದೆ. ಎಸಿಎಫ್ ಪರಿಮಳಾ ಅವರನ್ನು ತನಿಖಾಧಿಕಾರಿಯನ್ನಾಗಿ ನೇಮಿಸಲಾಗಿದೆ. ಈ ಬಗ್ಗೆ ತನಿಖೆ ಪ್ರಗತಿಯಲ್ಲಿದೆ. ತಪಿತಸ್ಥರ ಮೇಲೆ ಕಾನೂನು ಕ್ರಮ ಆಗಲಿದೆ.

-ವಿವೇಕ ಟಿ.ಕವರಿ, ಡಿಎಫ್‌ಒ ಧಾರವಾಡ ಜಿಲ್ಲೆ

ಹಳ್ಳಿಗೇರಿಯಲ್ಲಿ ನವೀನ ಸಿಂಘ ಠಾಕೂರ್ ಎನ್ನುವವರು ಮರಗಳನ್ನು ಕಡಿದಿದ್ದಾರೆ. ಅಕ್ರಮವಾಗಿ ರಸ್ತೆ ನಿರ್ಮಾಣ ಮಾಡಿದ್ದಾರೆ. ಈ ಬಗ್ಗೆ ನಾವು ಅರಣ್ಯ ಇಲಾಖೆಯ ಹಿರಿಯ ಅಧಿಕಾರಿಗೆ ಮನವಿ ಕೊಟ್ಟಿದ್ದೇವೆ.

-ಬಸವರಾಜ ಕೊರವರ್, ಸಾಮಾಜಿಕ ಹೋರಾಟಗಾರ

2 ಪ್ರಕರಣ ದಾಖಲು

ಹಳ್ಳಿಗೇರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಈಗಾಗಲೇ 2 ಪ್ರಕರಣ ದಾಖಲಿಸಿಕೊಂಡು, ಅರಣ್ಯಾಧಿಕಾರಿ ಕಾನೂನು ಕ್ರಮ ಕೈಗೊಂಡಿದ್ದಾರೆ. ಒಟ್ಟಿನಲ್ಲಿ ಧಾರವಾಡ ಜಿಲ್ಲೆಯಾದ್ಯಂತ ಹಬ್ಬಿರುವ 36,213 ಹೇಕ್ಟೇರ್ ಅರಣ್ಯ ಭೂಮಿಯನ್ನು ಉಳಿಸಿಕೊಳ್ಳಲು ಹಾಗೂ ಬೆಳೆಸಲು ಅರಣ್ಯ ಇಲಾಖೆ ಅಧಿಕಾರಿಗಳು ಪ್ರಯತ್ನ ಮಾಡುತ್ತಿದ್ದಾರೆ.

ಕಠಿಣ ಕ್ರಮ

ಅರಣ್ಯ ಇಲಾಖೆಯಲ್ಲಿ ಮಾಲ್ಕಿ ಜಮೀನಿನಲ್ಲಿ ಮರ ಕಡಿಯುವುದು ಹಾಗೂ ಅರಣ್ಯ ಇಲಾಖೆ ಅನುಮತಿ ಇಲ್ಲದೇ ರಸ್ತೆ ನಿರ್ಮಾಣ ಮಾಡುವುದಕ್ಕೆ ಕಾನೂನಿನ ಪ್ರಕಾರ ಕ್ರಮ ಕೈಗೊಳ್ಳಲಾಗುತ್ತದೆ. ಆರೋಪ ಸಾಬೀತಾದ ಪಕ್ಷದಲ್ಲಿ ತಪಿತಸ್ಥರ ಮೇಲೆ ಕಡಿದ ಮರಗಳಿಗೆ ಎಷ್ಟು ಮೊತ್ತ ಆಗಲಿದೆಯೋ? ಅಷ್ಟೇ ಮೊತ್ತವನ್ನು ಭರಣ ಮಾಡಿಕೊಳ್ಳಲಾಗುತ್ತದೆ.

ತನಿಖಾ ತಂಡ

ಹಳ್ಳಿಗೇರಿ ಪ್ರಕರಣವನ್ನು ಗಂಭಿರವಾಗಿ ಪರಿಗಣಿಸಿರುವ ಅರಣ್ಯ ಇಲಾಖೆ ಹಿರಿಯ ಅಧಿಕಾರಿಗಳು ಎಸಿಎಫ್ ಪರಿಮಳಾ ಅವರಿಗೆ ಸಂಪೂರ್ಣ ತನಿಖೆಯನ್ನು ಮಾಡಲು ಆದೇಶ ಮಾಡಿದ್ದು, ತನಿಖಾಧಿಕಾರಿ ಪರಿಮಳಾ ಅವರು ತನಿಖೆಗೆ ಇಳಿದಾಗ, 2011 ರಿಂದಲೂ ಮೊದಲು, ಹಳ್ಳಿಗೇರಿಯಲ್ಲಿ ಅರಣ್ಯ ಪ್ರದೇಶದಲ್ಲಿ ರಸ್ತೆ ಇತ್ತು ಎನ್ನುವುದು ಸೆಟಲೈಟ್ ಫೋಟೊ ಮೂಲಕ ಗೊತ್ತಾಗಿದೆ ಎಂದಿದ್ದಾರೆ. ಈ ನಿಟ್ಟಿನಲ್ಲಿ ತನಿಖೆ ನಡೆಸುತ್ತಿದ್ದಾರೆ.

ಆರಾಮ

ವಿಶ್ವವಾಣಿ
@vishwavaninews
ಬೆಂಗಳೂರು
02-04-2025
ಬುಧವಾರ

ಚಿತ್ತವಿಹಾರ

ಮಾರ್ಗದರ್ಶಕ ಹೇಗಿರಬೇಕು?

● ಮಹಾದೇವ ಬಸರಕೋಡ

ನೂರೆಂಟು ಕಷ್ಟ-ನಷ್ಟಗಳು, ನೋವು-ನಿಂದನೆಗಳು, ಅಪಜಯ ನಮಗೆ ಬಂದೊದಗಿದಾಗ ಒಂದೊಮ್ಮೆ ನಾವು ಬದುಕಿನಲ್ಲಿ ಹಿನ್ನಡೆಯನ್ನು ಅನುಭವಿಸಿದಾಗ ನನಗೆ ಒಬ್ಬ ಮಾರ್ಗದರ್ಶಕರಿದ್ದರೆ ಅವರು ನಮಗೆ ಮಾರ್ಗದರ್ಶನ ಮಾಡಬಲ್ಲರು; ಆದರೆ ಯಾರ್‍ಯಾರೋ ನೀಡುವ ಸಲಹೆಯು ಕೆಲವೊಮ್ಮೆ ಸಮರ್ಪಕ ಎನ್ನಲಾಗದು. ಒಬ್ಬ ಯುವಕ ಕಾಡಿನ ಹಾದಿಯನ್ನು ಕತ್ತಲಿನಲ್ಲಿ ಕ್ರಮಿಸಬೇಕಿತ್ತು. ಅವನ ಕೈಯಲ್ಲಿ ಲಾಂದ್ರವಿತ್ತು. ಅಲ್ಲಿಯೇ ಬಹುದಿನಗಳಿಂದ ವಾಸಿಸುತ್ತಿದ್ದ ವಯಸ್ಸಾದ ವ್ಯಕ್ತಿಯೊಬ್ಬನನ್ನು ನಾನು ಕೈಯಲ್ಲಿರುವ ಲಾಂದ್ರದ ಬೆಳಕಿನಲ್ಲಿ ಕಾಡಿನ ಈ ಬದಿಯಿಂದ ಮತ್ತೊಂದು ಬದಿಯನ್ನು ತಲುಪಲು ಸಾಧ್ಯವೇ? ಎಂದು ಕೇಳಿದ. ವೃದ್ಧ ಕಾಡಿನ ದಾರಿ ತುಂಬ ದುರ್ಗಮ; ಇಷ್ಟು ಚಿಕ್ಕ ಲಾಂದ್ರದ ಸಹಾಯದಿಂದ ನೀನು ಕಾಡಿನಾಚೆಯ ಊರನ್ನು ತಲುಪುವುದು ತುಂಬ ಕಷ್ಟದ ಕೆಲಸ ಎಂದ. ಯುವಕ ಅವನ ಮಾತು ಕೇಳಿ ಅಲ್ಲಿಯೇ ನಿಂತು ಬಿಟ್ಟ. ಸ್ವಲ್ಪ ಸಮಯದ ನಂತರ ಅದೇ ಮಾರ್ಗದಲ್ಲಿ ಇನ್ನೊಬ್ಬ ಯುವಕ ಇವನಿಗಿಂತ ಚಿಕ್ಕ ಲಾಂದ್ರ ಕೈಯಲ್ಲಿ ಹಿಡಿದು, ಅದೇ ದಾರಿಯ ಮೂಲಕ ಹಾದು ಹೋಗುತ್ತಿದ್ದ. ಮೊದಲ ಯುವಕ ಅವನನ್ನು ತಡೆದು, ದಾರಿ ತುಂಬ ದುರ್ಗಮ. ನನ್ನ ಕೈಲಿ ಇರುವ ಲಾಂದ್ರಕ್ಕಿಂತ ನಿನ್ನದು ಚಿಕ್ಕದು ಅದು ಬೀರುವ ಬೆಳಕು ಕೂಡ ಕಡಿಮೆ. ತೊಂದರೆಯಾಗಬಹುದು ಅಲ್ಲವೇ ಎಂದ. ಆಗ ಅವನು ನಾನು ಒಂದು ಹೆಜ್ಜೆ ಇಟ್ಟಾಗ ಇನ್ನೊಂದು ಹೆಜ್ಜೆ ಇಡುವಷ್ಟು ಬೆಳಕನ್ನು ನನ್ನ ಚಿಕ್ಕ ಲಾಂದ್ರ ನೀಡುತ್ತದೆ. ಅದರ ಸಹಾಯದಿಂದ ಕಲ್ಲು ಮುಳ್ಳು ದಾಟಿ ಮುಂದೆ ಹೋಗಬಹುದು, ಅಷ್ಟು ಬೆಳಕು ಸಾಕು ನನಗೆ ಎಂದು ಹೇಳಿ ಸಾಗಿ ಹೋದ.

ನಾವು ನಮ್ಮ ಮಾರ್ಗರ್ಶಕರೆಂದು ಒಪ್ಪಿಕೊಂಡವರಿಗೆ ಅವರಿಗೆ ಬಾಲ್ಯದಿಂದಲೇ ಕಲಿಸಿದ ಕೆಲವು ನಿಮಯಗಳು, ಮತ್ತು ರಾಜಿ ಸೂತ್ರಗಳಿಂದ ವಾಸ್ತವ ಸ್ಥಿತಿಯನ್ನು ಅವರು ಅರ್ಥೈಯಿಸಿಕೊಳ್ಳದೇ ಹೋಗಬಹುದು. ತಮ್ಮ ಬದುಕಿನಲ್ಲಿ ಹಿಂದೊಮ್ಮೆ ಸಂಭವಿಸಿದ್ದ ಘನೀಕೃತ ಅನುಭವಗಳ ಆಳದಲ್ಲಿ ಹೂತು ಹೋಗಿ ಅದನ್ನೆ ಸತ್ಯವೆಂದು ಭಾವಿಸಿ ಅದರಲ್ಲಿಯೇ ಭ್ರಮಾಧೀನವಾಗಿರಬಹುದು. ಗುರಿಗಳಿಗಿಂತ ಹೆಚ್ಚಾಗಿ ಅಡತಡೆಗಳನ್ನೇ ಅವರು ನಂಬಿರಬಹುದು. ಹಾಗಾಗಿ ಮಾರ್ಗದರ್ಶಕರನ್ನು ಆಯ್ಕೆ ಮಾಡುವಾಗ ಸಂಕಟಗಳನ್ನು ಅನುಭವಿಸಿ ಅದರಿಂದ ಪಾರಾದ ಅನುಭವಿರುವ, ನಮ್ಮ ಗುಣವಾಗುಣಗಳ, ಶಕ್ತಿ ಸಾಮರ್ಥ್ಯಗಳ ಸಂಪೂರ್ಣ ಪರಿಚಯವಿರುವ, ಸಂದರ್ಭಕ್ಕೆ ತಕ್ಕಂತೆ ಎಲ್ಲವನ್ನೂ ಎಲ್ಲ ದೃಷ್ಟಿಕೋನಗಳಿಂದ ಅರ್ಥೈಯಿಸಿಕೊಳ್ಳಬಲ್ಲ, ನಮ್ಮಲ್ಲಿ ಅಂತರ್ಗತವಾಗಿರುವ ನೈಜ ಪ್ರತಿಭೆಯನ್ನು ಅನಾವರಣಗೊಳಿಸಬಲ್ಲ ಸಾಂದರ್ಭಿಕತೆಗೆ ತಕ್ಕಂತೆ ಭಿನ್ನ ಭಿನ್ನ ಮಾರ್ಗದರ್ಶಕರು ನಮ್ಮ ಜೊತೆಗಿದ್ದರೆ ಖಂಡಿತವಾಗಿಯ ಯಶಸ್ಸು ಸುಲಭ ಸಾಧ್ಯವಾಗಬಲ್ಲದು.

ಚಿನ್ನದ ತೋಳಿನ ವ್ಯಕ್ತಿ

ಅಪರೂಪ ಪ್ರಕಾರದ ರಕ್ತವನ್ನು ದಾನ ಮಾಡಿ, ಆ ಮೂಲಕ ಲಕ್ಷಾಂತರ ಮಕ್ಕಳ ಬದುಕನ್ನು ಬೆಳಗಿದ ಇವರು, ಇಂದು ಅವರೆಲ್ಲರ ಬದುಕಿನಲ್ಲಿ ಚಿರಂಜೀವಿಯಾಗಿದ್ದಾರೆ!

● ಸುರೇಶ ಗುದಗನವರ

ಸಾಮಾನ್ಯರಲ್ಲಿ ಅಸಾಮಾನ್ಯರಾದ ಆಸ್ಟ್ರೇಲಿಯಾದ ಜೇಮ್ಸ್ ಹ್ಯಾರಿಸನ್ ಅವರು 24 ಲಕ್ಷ ಶಿಶುಗಳ ಜೀವ ಉಳಿಸಲು ಕಾರಣರಾದವರು! ಶಿಶುಗಳನ್ನು ಉಳಿಸುವ ರಕ್ತದಾನಕ್ಕಾಗಿ 'ಚಿನ್ನದ ತೋಳನ್ನು ಹೊಂದಿರುವ ವ್ಯಕ್ತಿ' ಎಂದು ಪ್ರಸಿದ್ಧಿ ಪಡೆದ ಅವರು ತಮ್ಮ 88ನೇ ವಯಸ್ಸಿನಲ್ಲಿ ನಿಧನರಾದರು. ಜೇಮ್ಸ್ ಹ್ಯಾರಿಸನ್ ರು ರಕ್ತದಾನಕ್ಕೆ ತಮ್ಮ ಜೀವನವನ್ನೇ ಮುಡಿಪಾಗಿಟ್ಟರು; ಆ ಮೂಲಕ ಇಂದಿಗೂ ಲಕ್ಷಾಂತರ ಜೀವಗಳಲ್ಲಿ ಚಿರಂಜೀವಿಯಾಗಿದ್ದಾರೆ!

ಜೇಮ್ಸ್ ಕ್ರಿಸ್ಟೋಫರ್ ಹ್ಯಾರಿಸನ್ ಅವರು ಆಸ್ಟ್ರೇಲಿಯಾ ನ್ಯೂ ಸೌತ್‌ವೇಲ್ಸ್‌ನ, ಜುನೆ ಎಂಬಲ್ಲಿ, 1936ರ ಡಿಸೆಂಬರ್ 27ರಂದು ಜನಿಸಿದರು. ಅವರ ತಂದೆ ರೆಗ್, ತಾಯಿ ರೆಜಿನಾಲ್ಡ್. ಜೇಮ್ಸ್ ಹ್ಯಾರಿಸನ್‌ರು ರೇಲ್ವೆ ಇಲಾಖೆಯಲ್ಲಿ ಗುಮಾಸ್ತರಾಗಿ ಸೇವೆ ಸಲ್ಲಿಸಿ, 2018ರಲ್ಲಿ ನಿವೃತ್ತರಾದರು. ಅವರು ಬಾರ್ಬರಾ ಲಿಂಡ್‌ಬೆಕ್ ಶಿಕ್ಷಕಿಯನ್ನು ಮದುವೆ ಯಾದರು. ಅವರು ಕೂಡಾ ರಕ್ತದಾನಿಯಾಗಿದ್ದರು. ಅವರಿಗೆ ಒಬ್ಬಳೇ ಮಗಳು ಟ್ರೇಸಿ.

ಜೇಮ್ಸ್ ಹ್ಯಾರಿಸನ್ ಅವರು 14ರ ಹರೆಯದಲ್ಲಿದ್ದಾಗ, ಶ್ವಾಸಕೋಶ ಸಂಬಂಧಿ ಕಾಯಿಲೆಗೆ ಒಳಗಾದರು. ಆಗ ಶಸ್ತ್ರಚಿಕಿತ್ಸೆಯ ಸಮಯದಲ್ಲಿ ಅವರಿಗೆ ಬೇಕಾಗಿದ್ದ 13 ಲೀಟರ್ ರಕ್ತವನ್ನು ದಾನಿಗಳು ನೀಡಿದ್ದರು. ನಂತರ ಅವರು ಚೇತರಿಸಿಕೊಂಡ ಕೂಡಲೇ ದಾನಿಗಳು ನೀಡಿದ ದೊಡ್ಡ ಪ್ರಮಾಣದ ರಕ್ತ ನಿನ್ನನ್ನು ಉಳಿಸಿದೆ ಎಂದು ತಂದೆಯವರು ಹೇಳಿದ್ದರು. ಆಗ ಜೇಮ್ಸ್‌ರು ನಾನು ಹರೆಯಕ್ಕೆ ಬಂದ ದಿನದಿಂದಲೇ ರಕ್ತದಾನ ಮಾಡಲು ಆರಂಭಿಸುವೆ ಎಂದು ಪಣತೊಟ್ಟರು.

ಹ್ಯಾರಿಸನ್ ಅವರು 1954ರಲ್ಲಿ ತಮ್ಮ 18ನೇ ವಯಸ್ಸಿನಿಂದ ರಕ್ತದಾನ ಮಾಡಲು ಪ್ರಾರಂಭಿಸಿದರು. ಅಚ್ಚರಿಯೆಂದರೇ ಜೇಮ್ಸ್ ಅವರ ರಕ್ತದಲ್ಲಿ ರೀಸಸ್ ಡಿ ಹೆಮೋಲಿಟಿಕ್ ಕಾಯಿಲೆಗೆ ರಾಮಬಾಣವಾಗಬಲ್ಲ ಪ್ಲಾಸ್ಮಾ ಪತ್ತೆಯಾಯಿತು. ಅವರ ರಕ್ತದ ಸಹಾಯದಿಂದ ಆ್ಯಂಟಿ ಡಿ ಚುಚ್ಚುಮದ್ದು ಸೃಷ್ಟಿಸಿದ ವೈದ್ಯರು ಅದನ್ನು ಗರ್ಭಿಣಿಯರ ಮೇಲೆ ಪ್ರಯೋಗಿಸಿದರು. ಕಂದಮ್ಮಗಳು ಅಮ್ಮಂದಿರ ಗರ್ಭದಿಂದ ಹೊರಬಂದು ಕಣ್ಣುಬಿಡತೊಡಗಿದವು. ಸಂತೋಷದಿಂದ ವೈದ್ಯರು ಕುಣಿದಾಡಿದರು. 1960ರ ದಶಕದಲ್ಲಿ ಜೇಮ್ಸ್‌ರ ರಕ್ತದಿಂದ ವೈದ್ಯಕೀಯ ಲೋಕದಲ್ಲಿ ಜಾದೂವೇ ನಡೆಯಿತು. ನವಜಾತ ಶಿಶುವಿನ ಹಿಮೋಲಿಟಿಕ್ ಕಾಯಿಲೆಯ ವಿರುದ್ಧ ಹೋರಾಡುವಲ್ಲಿ ಆ್ಯಂಟಿ ಡಿ ಯ ಬಳಕೆಯು 1960ರ ದಶಕದವರೆಗೆ ಪತ್ತೆಯಾಗಿರಲಿಲ್ಲ.

ಹ್ಯಾರಿಸನ್ ಪ್ಲಾಸ್ಮಾದಲ್ಲಿ ಆ್ಯಂಟಿ ಡಿ ಎಂಬ ಅಪರೂಪದ ಪ್ರತಿಕಾಯವಿದ್ದು, ಅದು ಹೆರಿಗೆಯ ಸಮಯದಲ್ಲಿ ತಾಯಂದಿರಿಂದ ಅವರ ಶಿಶುಗಳಿಗೆ ಹಾನಿಕಾರಕ ಪ್ರತಿಕಾಯಗಳು ಹರಡುವುದನ್ನು ತಡೆಯುತ್ತದೆ.

ಜೇಮ್ಸ್ ಹ್ಯಾರಿಸನ್‌ರು ತಮ್ಮ 18ನೇ ವಯಸ್ಸಿನಿಂದ 81ನೇ ವಯಸ್ಸಿನವರೆಗೆ 1173 ಬಾರಿ ರಕ್ತದಾನ ಮಾಡಿದರು. ಅಂದರೆ 60 ವರ್ಷಗಳ ಕಾಲ ಪ್ರತಿ 15 ದಿನಗಳಿಗೊಮ್ಮೆ ಅವರು ತಪ್ಪದೇ ರಕ್ತದಾನ ಮಾಡಿ, 24 ಲಕ್ಷ ಶಿಶುಗಳಿಗೆ ಜೀವದಾನ ನೀಡಿದರು. ಅವರನ್ನು ಸಮಾಜ ಪ್ರೀತಿಯಿಂದ ಚಿನ್ನದ ತೋಳನ್ನು ಹೊಂದಿರುವ ವ್ಯಕ್ತಿ ಎಂದು ಕರೆದರು. ಅವರು ಅತೀ ಹೆಚ್ಚು ಪ್ಲಾಸ್ಮಾ ದಾನ ಮಾಡಿದ್ದಕ್ಕಾಗಿ, ಗಿನ್ನೆಸ್ ವಿಶ್ವ ದಾಖಲೆಗೂ ಪಾತ್ರರಾದರು. 2005ರಲ್ಲಿ ಹ್ಯಾರಿಸನ್ ಗಿನ್ನೆಸ್ ವಿಶ್ವದಾಖಲೆ ಗೌರವವನ್ನು ಪಡೆದರು. 1999ರಲ್ಲಿ ಅವರಿಗೆ ಮೆಡಲ್ ಆಫ್ ದಿ ಆರ್ಡರ್ ಆಫ್ ಆಸ್ಟ್ರೇಲಿಯಾ ಪದಕ ನೀಡಿ ಗೌರವಿಸಿತು. 2011ರಲ್ಲಿ ಅವರು ಆಸ್ಟ್ರೇಲಿಯನ್ ಆಫ್ ದಿ ಇಯರ್ ಪ್ರಶಸ್ತಿಗಳ ಹೀರೋ ವಿಭಾಗದಲ್ಲಿ ನಾಮ ನಿರ್ದೇಶನಗೊಂಡರು.

ಹ್ಯಾರಿಸನ್ ಅವರನ್ನು ಲೈಫ್ ಬ್ಲಡ್ ಮುಖ್ಯ ಕಾರ್ಯ ನಿರ್ವಾಹ ಅಧಿಕಾರಿ ಸ್ಟೀಫನ್ ಕಾರ್ನಲಿಸ್ಸೆನ್ ಮೆಚ್ಚಿಕೊಂಡಿದ್ದಾರೆ. ಜೇಮ್ಸ್ ಒಬ್ಬ ಕರುಣಾಮಯಿ ಮತ್ತು ಉದಾರ ವ್ಯಕ್ತಿಯಾಗಿದ್ದು, ಜೀವಮಾನವಿಡೀ ರಕ್ತದಾನ ಮಾಡಲು ಬದ್ಧರಾಗಿದ್ದರು ಎಂದು ಅವರು ಹೇಳಿದ್ದಾರೆ. ಇವರು ಫೆಬ್ರವರಿ 17, 2025ರಂದು ಇಹಲೋಕ ತ್ಯಜಿಸಿದರು. ಇದೀಗ ಅವರು ರಕ್ತದಾನ ಮಾಡಿದ್ದ ಹಳೆಯ ವೀಡಿಯೋಗಳು ಸೋಶಿಯಲ್ ಮಿಡಿಯಾದಲ್ಲಿ ಹರಿದಾಡುತ್ತಿವೆ!

ಪಡೆದದ್ದನ್ನು ಮಾತ್ರ ಉಣಬೇಕು

ಅನ್ನವುಣುವಂದು ಕೇಳ್, ಅದನು ಬೇಯಿಸಿದ ನೀರ್ ?
ನಿನ್ನ ದುಡಿತದ ಬೆಮರೊ, ಪೆರರ ಕಣ್ಣೀರೋ?
ತಿನ್ನು ನೀಂ ಜಗಕೆ ತಿನಲಿತ್ತನಿತ; ಮಿಕ್ಕೂಟ?
ಜೀರ್ಣಿಸದ ಋಣಶೇಷ ಮಂಕುತಿಮ್ಮ?

ನೀನು ನಿನ್ನ ಅನ್ನವನು ಉಣ್ಣುವಾಗ ನಿನಗೆ ನೀನೇ ಪ್ರಶ್ನೆ ಮಾಡಿಕೋ! ಅದೇನೆಂದರೆ 'ಈಗ ನಾನು ತಿನ್ನುತ್ತಿರುವ ಅಕ್ಕಿಯ ಅನ್ನವು ಬೆಂದಿರುವುದು ನಾನು ಬಸಿದ ಬೆವರ ನೀರಿನಿಂದಲೋ? ಅಥವಾ ಬೇರೊಬ್ಬರನ್ನು ಪೀಡಿಸಿದ ಕಣ್ಣೀರಿನಿಂದ ಬೆಂದಿರುವ ಅನ್ನವೋ?' ಎಂದು ಪ್ರಶ್ನೆ ಮಾಡಿಕೊ! ನೀನು ಈ ಜಗತ್ತು ಎಂಬ ವಿಶ್ವಸ್ತ ಮರವು ಬೆಳೆಯಲು ನೀನೆಷ್ಟು ಕೊಡುಗೆ ಕೊಟ್ಟಿರುವೆಯೋ! ನೀನು ಕೊಡುಗೆ ಕೊಟ್ಟಿರುವಷ್ಟನ್ನು ಮಾತ್ರವೇ ನಿನಗೆ ಉಣ್ಣಲು ಅಧಿಕಾರವಿದೆಯೇ ಹೊರತು ಅದಕ್ಕಿಂತ ಹೆಚ್ಚು ಉಂಡಲ್ಲಿ ಅದು ನಿನ್ನಲ್ಲಿ 'ಜೀರ್ಣಿಸದ ಋಣ'ವಾಗಿ ಈ ಜಗತ್ತಿನ ಸಾಲಗಾರನಾಗಿರುತ್ತೀಯೆ ಎಂಬ ಧರ್ಮ ಸೂಕ್ಷ್ಮ ನಿನ್ನಲ್ಲಿರಬೇಕು. ಜಗತ್ತಿನಲ್ಲಿ ನಾವು ಗಳಿಸಿ ಅನುಭವಿಸುವುದೆಲ್ಲವನ್ನೂ ನಮ್ಮದೇ ಕಷ್ಟಾರ್ಜಿತ ವಾಗಿರಬೇಕೆಂದೂ ಅನ್ಯರಿಂದ ಪಡೆದದ್ದು ನಮಗೆ ದಕ್ಕುವುದೂ ಇಲ್ಲ ಎಂದು ಈ ಕಗ್ಗದಲ್ಲಿ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ ಉಲ್ಲೇಖಿಸಿದ್ದಾರೆ.

ಶುಭೋದಯಕ್ಕೊಂದು ಕಗ್ಗ

ರವೀ ಚಿಕ್ಕನಾಯಕನಹಳ್ಳಿ

ಸ್ವಾಭಿಮಾನ ಮತ್ತು ಸ್ವಾವಲಂಬನೆಗೆ ಇದಕ್ಕಿಂತ ಹೆಚ್ಚು ಸೂಕ್ತವಾದ ಮಾತುಗಳಿರಲು ಸಾಧ್ಯವಿಲ್ಲ. ನಮ್ಮ ಜೀವಿತಾವಧಿಯಲ್ಲಿ ನಾವು ದುಡಿಯುವುದು ಉಣ್ಣಲು ಹಾಗೂ ಅಲ್ಪ ಸ್ವಲ್ಪ ಕೂಡಿಡಲು ಮಾತ್ರ. ನಾವು ನಮ್ಮ ದುಡಿಮೆ ಮತ್ತು ಗಳಿಕೆಗಳ ನಡುವಿನ ಲೆಕ್ಕವನ್ನೆಂದೂ ಮಾಡುವುದಿಲ್ಲ. ನಮ್ಮ ದುಡಿಮೆ ಎಂಬುದು ಈ ಜಗತ್ತಿಗೆ ನಮ್ಮಿಂದ ನೀಡಬಹುದಾದಂತಹ ಕೊಡುಗೆ.

ನಮ್ಮ ಬೆವರನ್ನು ಹರಿಸಿ ದುಡಿದ ದುಡಿಮೆಗೆ ಮಾತ್ರವೇ ಸಮನಾಗಿ ನಮ್ಮ ಗಳಿಕೆ ಇರಬೇಕು. ದುಡಿಮೆಯು ನಮ್ಮ ನೈತಿಕತೆ ಹಾಗೂ ಹರಿಸಿದ ಬೆವರಿಗಿಂತ ಹೆಚ್ಚಾದರೆ ಅದು ವಾಮಮಾರ್ಗದಲ್ಲಿ. ಗಳಿಸಿದ ಲೆಕ್ಕಕ್ಕೆ ಸೇರುತ್ತದೆ. ಹೀಗೆ ಅನೈತಿಕವಾಗಿ ದುಡಿದ ದುಡಿಮೆ ನಮ್ಮ ಜೀವಿತಾವಧಿಯ ಋಣವಾಗಿ ನಿಂತುಬಿಡುತ್ತದೆ. ಈ ಋಣವು ನಮ್ಮ ಕರ್ಮ ಶೇಷದೊಂದಿಗೆ ಸೇರಿಕೊಂಡುಬಿಡುತ್ತದೆ. ಆದುದರಿಂದ ಈ ಋಣ ಶೇಷಗಳ ವರ್ತುಲದಿಂದ ಹೊರಬರಬೇಕಾದರೆ ನಾವು ಗಳಿಸುವ ಮತ್ತು ಅನುಭವಿಸುವ ಸಂಪತ್ತು ಕೇವಲ ನಮ್ಮ ದುಡಿಮೆಯ ಫಲವಾಗಿರಬೇಕು. ಅನ್ಯರ ಕೃಪೆಗೆ ಅಥವಾ ಅನ್ಯರ ಶ್ರಮದ ಫಲವನ್ನು ನಾವು ಅನುಭವಿಸುವಂತಾಗಬಾರದು. ಹಾಗೆ ಅನುಭವಿಸಿದರೆ ಡಿವಿಜಿಯವರು ಹೇಳುವಂತೆ 'ಮಿಕ್ಕೂಟ ಜೀರ್ಣಿಸದ ಋಣಶೇಷ'ವಾಗುತ್ತದೆ. ಹಾಗೆ ಪಡೆದ ಮತ್ತು ನಾವು ಜೀರ್ಣಿಸಿಕೊಳ್ಳಲಾಗದ ಋಣವನ್ನು ಎಂದಾದರೂ ಒಂದು ದಿನ ತೀರಿಸಲೇ ಬೇಕಾಗುತ್ತದೆ.

ನಾವು ನಮ್ಮ ಜೀವಿತಾವಧಿಯಲ್ಲಿ ಎಂದಿಗೂ ಅನ್ಯರಿಂದ ನಮ್ಮ ಶ್ರಮದ ಫಲವನ್ನಲ್ಲದೆ ಬೇರೆ ಏನನ್ನೂ ಆಶಿಸಲೇಬಾರದು. ಆದು ತಟಸ್ಥ ಮತ್ತು ಊರ್ಧ್ವ ಸ್ಥಿತಿ. ನಾವು ಒಂದು ಹೆಜ್ಜೆ ಮುಂದೆ ಇಟ್ಟು ನಾವು ನಮ್ಮ ಶ್ರಮವನ್ನು ಮಾತ್ರ ಹೆಚ್ಚಿಸಿಕೊಳ್ಳುತ್ತಾ, ಶ್ರಮದಿಂದ ಬಂದ ಆದಾಯದಲ್ಲಿ ನಮ್ಮ ಅವಶ್ಯಕತೆಗಳನ್ನು ತೀರಿಸಿಕೊಳ್ಳುತ್ತಾ, ಅದರಲ್ಲಿ ಉಳಿದುದರಿಂದ ಪರರಿಗೂ ಉಪಕಾರ ಮಾಡುವಂತಾಗಬೇಕು. ಅಂತಹ ಬದುಕನ್ನು ನಾವು ಬದುಕಿದರೆ ನಮ್ಮ ಜೀವನ ಸಾರ್ಥಕವಾಗುತ್ತದೆ. 'ಪರರ ದುಃಖ ಸಾಗರದಲ್ಲಿ ನಮ್ಮ ನಗೆಯ ದೋಣಿ ಹಾಯುವಂತಾಗದಿರಲಿ' ಎಂಬ ಆಶಯ ನಮ್ಮ ಬದುಕಿನ ಗುರಿಯಾಗಿರಲಿ. ಆಗ ಮಾತ್ರವೇ ನಮ್ಮಯ ಬದುಕು ಹಾಗೂ ಜೀವನ ಸಾರ್ಥಕವಾಗುತ್ತದೆ. 'ಸ್ವಾರ್ಥವಿಲ್ಲದಾ ಬದುಕು ಸರ್ವಕಾಲಕ್ಕೂ ಶ್ರೇಷ್ಠ' ಎಂಬುದನ್ನು ಅರಿತರೆ ಸಿರಿ ಸಮೃದ್ಧ ನಮ್ಮಯ ಜೀವನ.

ತದಿಗೆ ಗೌರಿಯ ಆಗಮನ!

● ಪುಷ್ಪಾ ಮೋಹನ ಮುದಕವಿ

ಹೊಸಸಂವತ್ಸರದ ಮೊದಲ ದಿನ ಯುಗಾದಿಯಂದು, ಬೇವು ಬೆಲ್ಲಗಳ ಸೇವನೆಯಾದನಂತರ, ತೃತೀಯದಂದು ಚೈತ್ರದ ಗೌರಿಯ ಆಗಮನ ವಾಗುತ್ತದೆ. ಈ ಗೌರಿಯನ್ನು ಸೌಭಾಗ್ಯ ಗೌರಿ, ಉಯ್ಯಾಲೆ ಗೌರಿ, ತದಿಗೆ ಗೌರಿ ಎಂದೆಲ್ಲ ಕರೆಯುತ್ತಾರೆ. ಉತ್ತರ ಕರ್ನಾಟಕ ಹಾಗೂ ಮಹಾರಾಷ್ಟ್ರ ಭಾಗದಲ್ಲಿ, ಚೈತ್ರ ಮಾಸದ ಶುಕ್ಲ ಪಕ್ಷದ ತೃತೀಯದಿಂದ ವೈಶಾಖ ಶುಕ್ಲ ತೃತೀಯ ಅಂದರೆ ಅಕ್ಷಯ ತೃತೀಯವರೆಗೆ ಪಾರ್ವತಿದೇವಿ ಕೈಲಾಸದಿಂದ ತವರು ಮನೆಗೆ ಬಂದಿರುವಳೆಂದು, ಗೌರಿಯನ್ನುಪ್ರತಿಷ್ಠಾಪಿಸಿ ತವರಿಗೆ ಮಗಳು ಬಂದಾಗ ತಾಯಿ ಹೇಗೆ ಸಂಭ್ರಮಿಸುವಳೋ ಉಪಚರಿಸಿ ಆನಂದಿಸುವ ಪರ್ವ.

ಲೌಕಿಕ ಜೀವನದಲ್ಲೂ, ಮಾರ್ಚ್ ಎಪ್ರಿಲ್‌ನ ಸಮಯದಲ್ಲಿ ವಾರ್ಷಿಕ ಪರೀಕ್ಷೆ ಮುಗಿಸಿದ ತನ್ನ ಮಕ್ಕಳೊಂದಿಗೆ ಮನೆಯ ಹೆಣ್ಣುಮಗಳು ತನ್ನ ತಾಯಿತಂದೆಯರ ಜೊತೆಗಿರಲು ತೌರಿಗೆ ಬರುವ ಸಮಯ ಕೂಡ. ಗೌರಿಯ ತದಿಗೆಯಂದು ಉಯ್ಯಾಲೆ ಮೇಲೆ ಕುಳಿತ ಶುಭ್ರ ಕಂಚಿನ, ಅಥವಾ ಮರದ ಅಥವಾ ಅರಿಷಿಣದ ಗೌರಿಯನ್ನು ಪ್ರತಿಷ್ಠಾಪಿಸುವರು. ಒಂದು ಕಲಶದಲ್ಲಿ ಗಂಗೆಯನ್ನೂ ಆಹ್ವಾನಿಸಬೇಕು. ಗೌರಿಯ ಇಕ್ಕೆಲಗಳಲ್ಲಿ, ಪಾತ್ರೆಗಳಲ್ಲಿ ಮಣ್ಣು ತುಂಬಿಸಿ ಭತ್ತ ಇಲ್ಲವೆ ಗೋಧಿ ಅಥವಾ ಅಕ್ಕಡಿ ಕಾಳುಗಳ ಅಂಕುರಾರ್ಪಣೆ ಮಾಡುವದು ವಾಡಿಕೆ. ಇದು ಹೊಸ ಸಂವತ್ಸರದ ಹೊಸ ಬೆಳೆಯ ಮತ್ತು ಮಳೆಯ ಸಂಕೇತವೂ ಹೌದು.

ತಿಂಗಳ ಅವಧಿಯಲ್ಲಿ ಬರುವ ತದಿಗೆ ದಿನಗಳಂದು, ರಾಮನವಮಿ, ಹನುಮಜಯಂತಿ, ಶುಕ್ರವಾರ, ಮಂಗಳವಾರ ಗೌರಿಯನ್ನು ಪೂಜಿಸಿ, ಮಗಳು ಮನೆಗೆ ಬಂದಿರುವಳೆಂದು ಸಂಭ್ರಮಿಸಿ ವಿವಿಧ ತಿನಿಸುಗಳನ್ನು ಸಮರ್ಪಿಸಿ, ಮಾವಿನಕಾಯಿಯ ಪಾನಕ ಕೋಸಂಬರಿಯನ್ನಿತ್ತು ಸತ್ಕರಿಸಬೇಕು. ಮಹಿಳೆಯರನ್ನು ಮನೆಗೆ ಕರೆದು, ಕಾಲು ತೊಳೆದು ಹೂವೀಳ್ಯ ಕಾರ್ಯಕ್ರಮ ಮಾಡುವದೊಂದು ತವರಿನಲ್ಲಿ ತಾಯಿಯ ಸಂಭ್ರಮ. ಅಕ್ಷಯ ತೃತೀಯಾದ ನಂತರ, ಮನೆಗೆ ಬಂದ ಮಗಳಿಗೆ ಮಂಗಳ ದ್ರವ್ಯಗಳೊಂದಿಗೆ ಉಡಿ ತುಂಬಿಸಿ, ಮೊಸರವಲಕ್ಕಿಯನ್ನು ನಿವೇದಿಸಿ ಉಯ್ಯಾಲೆ ಗೌರಿ ಸೌಭಾಗ್ಯಕರುಣಿಸಿ, ಪತಿ ಶಂಕರನ ಒಡಗೂಡೆಂದು

ಪ್ರಾರ್ಥಿಸಬೇಕು. ಈ ಹಬ್ಬದಾಚರಣೆಯನ್ನು ದಾಸ ಮಹಿಳೆ ಕೋಲಾರ ಪದ್ಮಾಬಾಯಿ ತನ್ನ 24 ನುಡಿಯ ಕೋಲು ಹಾಡಿನಲ್ಲಿ ಬಣ್ಣಿಸಿದ್ದಾರೆ.

ಪದಬಂಧ

● ಸಿ.ರವಿಶಂಕರ ಶಾಸ್ತ್ರಿ, ದಂಬೆ



ಎಡದಿಂದ ಬಲಕ್ಕೆ

1. ಅನಾಸ್ಥೆಯಿಂದ ಕೂಡಿದ ಎಂದರ್ಥ (4)
4. ಪರ್ವತಗಳಿಗೇ ಅರಸನಂತಿರುವ ಹಿಮಾಚಲಕ್ಕೆ ಹೀಗೆನ್ನಬಹುದು (4)
6. ಮೂಲ ಅಥವಾ ಪ್ರಾರಂಭ (2)
7. ಅರ್ಜುನನಿಗೆ ಮತ್ತೊಂದು ಹೆಸರು (4)
9. ಪರರಿಗೆ ಮಾಡುವ ನೆರವು (4)
10. ಅತಿಮಾನುಷವಾದ ಕೃತ್ಯ (3)
12. ಅಸ್ತವ್ಯಸ್ತವಾಗಿ ಬಂದಿದೆ ಅಪಹಾಸ್ಯ (3)
14. ತುಂಬಿದ ಮೈಕಟ್ಟಿನ ಎಂದರ್ಥ (4)
16. ಕೃಷ್ಣನಿಗೆ ಹೀಗೊಂದು ಹೆಸರಿದೆ (4)
17. ಬೆಳಗಿನ ಮುಂಚೆ (2)
18. ರಸಾಸ್ವಾದನೆಗೆ ಆದ ಅಡ್ಡಿ (4)
19. ಹಿಂದೆ ಇದು ಚುನಾವಣಾ ಚಿಹ್ನೆ ಆಗಿತ್ತು (4)

ಮೇಲಿನಿಂದ ಕೆಳಕ್ಕೆ

2. ಪಿತ್ರಾರ್ಜಿತವಾಗಿ ಬಂದ ಆಸ್ತಿಯ ಪಾಲುದಾರ (3)
3. ತಿರುಗಿ ಬಂದಿರುವ ಗಾಳಿ (4)
4. ಕಿರುಬೆರಳಿನಲ್ಲಿ ಪರ್ವತವನ್ನೇ ಎತ್ತಿರುವ ಕೃಷ್ಣ (4)
5. ರಾಮಾಯಣದ ಈ ಹಕ್ಕಿಯ ರೆಕ್ಕೆ ಕತ್ತರಿಸಲಾಗಿದೆ (3)
6. ಮತ್ತೊಬ್ಬರ ಮೇಲೆ ತಪ್ಪು ಹೊರಿಸುವಿಕೆ (3)
8. ಜಗಳವಲ್ಲ, ಸ್ನಾನಕ್ಕೆ ಮತ್ತೊಂದು ಹೆಸರು (3)
9. ಹಲ್ಲಿಯ ಜಾತಿಗೆ ಸೇರಿದ ಒಂದು ಪ್ರಾಣಿ (2)
11. ವಾದ್ಯವನ್ನು ಬಾರಿಸುವಿಕೆ (3)
12. ಆಗಲಿ ಎನ್ನುವ ಪದ (2)
13. ಮಳೆಯ ದೇವರು ತಿರುಗಿ ಬಂದಿದ್ದಾನೆ (3)
14. ಪ್ರತಿದಿನವೂ ಭ್ರಷ್ಟಾಚಾರ ಇರುವ ಯುಗ? (4)
15. ಹೂವಿನಿಂದ ದುಂಬಿಯು ಹೀರುವ ರಸ (4)
16. ಬೆಡಗು, ಬಿನ್ನಾಣ (3)
17. ಎಲ್ಲರ ಭವಿಷ್ಯ ಇಲ್ಲಿದೆಯೇ? (3)

ಸರಿಯುತ್ತರಗಳು

ಎಡದಿಂದ ಬಲಕ್ಕೆ: 1. ಉದಾಸೀನ 4. ಗಿರಿರಾಜ 6. ಆದಿ 7. ಧನಂಜಯ 9. ಉಪಕಾರ 10. ಪವಾಡ 12. ಅಕಣ 14. ಕಟ್ಟುಮಸ್ತು 16. ವನಮಾಲಿ 17. ಜವ 18. ರಸಭಂಗ 19. ದನಕರು

ಮೇಲಿನಿಂದ ಕೆಳಕ್ಕೆ: 2. ದಾಯಾದಿ 3. ನಮಾವಪ 4. ಗಿರಿಧರ 5. ಜನಯ 6. ಆರೋಪ 8. ಜಳಕ 9. ಉಡ 11. ವಾದನ 12. ಅಸ್ತು 13. ಣರುವ 14. ಕಲಿಯುಗ 15. ಮಕರಂದ 16. ವಯ್ಯಾರ 17. ಜಾತಕ

ಭಗವದ್ಗೀತೆಯ ಸಾರ ತಿಳಿದವರು

ಒಬ್ಬ ರಾಜ ತನಗೆ ಭಗವದ್ಗೀತೆಯನ್ನು ಯಾರು ಅರ್ಥ ಮಾಡಿಸುವರೋ ಅವರಿಗೆ ಅರ್ಧ ರಾಜ್ಯ ಕೊಡುವುದಾಗಿ ಘೋಷಣೆ ಮಾಡಿದ. ಇದನ್ನು ಕೇಳಿ ಅನೇಕ ಪಂಡಿತರು ರಾಜನಿಗೆ ಗೀತೆ ಕಲಿಸಲು ಬಂದರು. ಆದರೆ ರಾಜನ ಒಂದೆರಡು ಪ್ರಶ್ನೆಗಳಿಗೆ ಹೆದರಿ ಹಿಂದಿರುಗಿದರು. ಒಬ್ಬ ಮಹಾ ಪಂಡಿತ ಬಂದು ರಾಜನ ಪ್ರಶ್ನೆಗಳಿಗೆ ಉತ್ತರ ಹೇಳಿ ಗೀತೆಯನ್ನು ಕಲಿಸಿದ. ರಾಜ ಆತನ ವಿದ್ವತ್ತನ್ನು ಮೆಚ್ಚಿ ದಕ್ಷಿಣೆಯನ್ನು ನೀಡಿ ಗೌರವಿಸಿದ. ಆದರೆ ಅರ್ಧ ರಾಜ್ಯ ಕೊಡಲಿಲ್ಲ.

ಪಂಡಿತ ಪಟ್ಟು ಹಿಡಿದ. ಗೀತೆ ನನಗೆ ಸರಿಯಾಗಿ ಅರ್ಥವಾಗಿಲ್ಲವೆಂದು ರಾಜ ಜಾರಿಕೊಂಡ. ಪಂಡಿತ ಬಿಡಲಿಲ್ಲ. ತೀರ್ಮಾನಕ್ಕೆ ವಿಂಧ್ಯಾಚಲದ ತಪೋವನದಲ್ಲಿರುವ ಮುನಿ ಬಳಿ ಕರೆದೊಯ್ದ.

ಮುನಿಗಳು 'ನೀನು ರಾಜನಿಗೆ ಗೀತೆ ಕಲಿಸಿದ್ದು ನಿಜವೇ?' ಎಂದು ಪ್ರಶ್ನಿಸಿದರು. ಪ್ರತಿ ಪದದ ಪ್ರಕೃತಿ ಪ್ರತ್ಯಯ ಭಿನ್ನ ಭಿನ್ನ ಅರ್ಥ ಎಲ್ಲಾ ತಿಳಿಸಿದ್ದೇನೆ ಎಂದ ಪಂಡಿತ. ರಾಜನಿಗೆ ಪ್ರಶ್ನಿಸಿದಾಗ ಹೌದೆಂದು ಒಪ್ಪಿದ. ಆಗ ಮುನಿಗಳೆಂದರು, 'ನೀನು ಕಲಿಸಿಯೂ ಇಲ್ಲ, ರಾಜ ಅದನ್ನು ಕಲಿತೂ ಇಲ್ಲ. ಗೀತೆಯನ್ನು ನೀನು ತಿಳಿದವನಾದರೆ ನಿನಗೆ ರಾಜ್ಯದ ಲೋಭವೇಕೆ? ರಾಜ ಗೀತೆಯನ್ನು ಅರ್ಥ ಮಾಡಿಕೊಂಡಿದ್ದರೆ ಕೊಟ್ಟ ಮಾತು ಉಳಿಸಿಕೊಳ್ಳಲು ಹಿಂಜರಿಕೆ ಏಕೆ' ಎಂದರು.

ನಾಲಿಗೆ - ಹೃದಯದಲ್ಲಿ ಶುದ್ಧಿ ಇಲ್ಲದ ಮೇಲೆ ಗೀತೆ ಕಲಿತರೇನು ಎಂದರು. ರಾಜ, ಪಂಡಿತ ಇಬ್ಬರಿಗೂ ಕೂಡ ಮುನಿಗಳ ಮಾತು ಅರ್ಥವಾಗಿ ತಲೆತಗ್ಗಿಸಿದರು.

ನಿಜ ಜೀವನದಲ್ಲೂ ನಮ್ಮ ಸುತ್ತಲೂ ಅನೇಕ ವಿದ್ಯಾವಂತರನ್ನು ನೋಡುತ್ತೇವೆ. ಹೆಸರಿಗೆ ಡಿಗ್ರಿ, ಡಬಲ್ ಡಿಗ್ರಿ ಮಾಡಿಕೊಂಡಿರುತ್ತಾರೆ. ಆದರೆ ಅವರ ಓದಿಗೂ ಅವರ ಸಂಸ್ಕಾರಕ್ಕೂ ಸಂಬಂಧವೇ ಇರುವುದಿಲ್ಲ. ಹೆಚ್ಚು ಓದಿದವರಿಗೂ ಕೆಲವೊಮ್ಮೆ ಸಾಮಾನ್ಯ ಜ್ಞಾನ ಕಡಿಮೆ ಇರುವುದನ್ನು ನೋಡುತ್ತೇವೆ. ವಿದ್ಯಾರ್ಜನೆ ಮಾಡಿದ ಕ್ಷಣ ಜೀವನ ಮೌಲ್ಯಗಳು ಮನವರಿಕೆ ಆಗಿರುತ್ತವೆ ಎಂದು ಯಾವ ಗ್ಯಾರಂಟಿಯೂ ತಂದೆ ತಾಯಿಗಳು ಮಕ್ಕಳನ್ನು ಬೆಳೆಸುವಾಗ ಬದುಕಿಗೆ ಬೇಕಾದಂಥ ಅನೇಕ ವಿಷಯಗಳನ್ನು ಅವರಿಗೆ ತಿದ್ದಿ ತೀಡಿ ಬೆಳೆಸಬೇಕಾಗುತ್ತದೆ. ಬದುಕು ನಡೆಸಲು ವಿದ್ಯಾರ್ಜನೆ ಒಂದೇ ಸಾಲದು, ಜೀವನ ಕೌಶಲ್ಯ, ಸಾಮಾನ್ಯ ಜ್ಞಾನ 10 ಜನರೊಡನೆ ಬೆರೆತು ಬದುಕುವ ಕಲೆ ಎಲ್ಲವೂ ಗೊತ್ತಿರಬೇಕಾಗುತ್ತದೆ.

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ಒಂದೊಳ್ಳೆ ಮಾತು Vishwavani TV Special ಯುಟ್ಯೂಬ್ ಚಾನೆಲ್‌ನಲ್ಲಿ!

ಅದಿಲ್ಲದೆ ಹೋದರೆ ಅವರು ಅದೆಂತಹ ಮೇಧಾವಿಗಳಾದರು, 10 ಜನರೊಡನೆ ಬೆರೆತು ಹೇಗೆ ನಡೆದುಕೊಳ್ಳಬೇಕು ಎನ್ನುವ ಸಾಮಾನ್ಯ ಜ್ಞಾನವೂ ಇಲ್ಲದೆ ಎಲ್ಲರ ಹತ್ತಿರ ನಿಷ್ಠೂರವಾಗ ಬೇಕಾಗುತ್ತದೆ. ಜೀವನದಲ್ಲಿ ಅನೇಕ ಸಂದರ್ಭಗಳಲ್ಲಿ ಅಸಹಾಯಕರನ್ನು, ಕಷ್ಟದಲ್ಲಿರುವವರನ್ನು ನೋಡಿದಾಗ ಅವರಿಗೆ ಏನಾದರೂ ಮಾಡಬೇಕು ಅನ್ನುವ ತುಡಿತ ಇರುವಂತಹ ವೈಚಾರಿಕತೆ, ಮಾನವೀಯ ಮೌಲ್ಯಗಳು ಇವೆಲ್ಲವನ್ನೂ ರೂಡಿಸಿಕೊಂಡಾಗ ನಾವು ಗಳಿಸಿದ ವಿದ್ಯೆಗೂ ಒಂದು ಮೌಲ್ಯ.

ಅದಿಲ್ಲದೆ ಸ್ವಾರ್ಥದಿಂದ ನಾನು ಮಾತ್ರ ಉದ್ಧಾರವಾಗಬೇಕು, ನನ್ನ ಕುಟುಂಬ ಚೆನ್ನಾಗಿದ್ದರೆ ಸಾಕು, ನಾನು ನನ್ನದು ಎನ್ನುವ ಆಲೋಚನೆಗಳಲ್ಲೇ ಬಂದಿಯಾದವರು ಸಮಾಜಕ್ಕೆ ಒಂದು ಹೊರೆ ಎಂತಲೇ ಹೇಳಬೇಕು. ಅವರಿಂದ ಯಾರಿಗೂ ಕಿಂಚಿತ್ತು ಸಹಾಯವೂ ಆಗುವುದಿಲ್ಲ, ಅವರನ್ನು ಅವರಂತಾಗುತ್ತಾರೆ. ಅವರು ಬೆಳೆಸುವ ಮಕ್ಕಳು ಕೂಡ ಸಮಾಜಕ್ಕೆ ಹೊರೆಯಾಗುತ್ತಾರೆ.

ಆದ್ದರಿಂದಲೇ ವಿದ್ಯಾರ್ಜನೆಯ ಜೊತೆಗೆ ಜೀವನ ಕೌಶಲ್ಯ, ಮಾನವೀಯ ಮೌಲ್ಯಗಳನ್ನ ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವುದು ಕೂಡ ಬಹಳ ಮುಖ್ಯವಾಗುತ್ತದೆ. ಇವುಗಳಿಂದ ನಮಗೆ ಯಾವುದೇ ರೀತಿಯ ಆರ್ಥಿಕ ಸಹಾಯ ಆಗದೆ ಹೋದರೂ, ಬೌದ್ಧಿಕವಾಗಿ ಇವು ನಮ್ಮನ್ನು ಸಮಾಜದಲ್ಲಿ ಬಹಳ ಎತ್ತರಕ್ಕೆ ಕೊಂಡೊಯ್ಯುವ ಸಾಮರ್ಥ್ಯವಿರುವ ಗುಣಗಳು. ನಾವು ಇದನ್ನು ಅಳವಡಿಸಿಕೊಂಡಾಗ ನಮ್ಮ ಸುತ್ತಲೂ ಇರುವ ಅನೇಕರನ್ನು ನಾವು ಚೆನ್ನಾಗಿ ನೋಡಿಕೊಂಡು ನೂರಾರು ಜನರಿಗೆ ಮಾದರಿಯಾಗಿ ಬದುಕುವ ಜೀವವಾಗುತ್ತೇವೆ. ಇಂತಹ ಸಮಾಜಮುಖಿ ಜೀವನ ನಮ್ಮೆಲ್ಲರದು ಆಗಲಿ ಎನ್ನುವ ಶುಭ ಹಾರೈಕೆ ಮಾತ್ರ ನನ್ನದು.

ಪಾಪ ಮತ್ತು ಪುಣ್ಯದ ಮೂಲಗಳು

ಕೃಷ್ಣ ಹೇಳುತ್ತಾನೆ: ಭಗವಂತ ಈ ಜಗತ್ತಿಗಾಗಿ ಕರ್ತೃತ್ವವನ್ನಾಗಲಿ, ಕರ್ಮವನ್ನಾಗಲಿ, ಕರ್ಮಫಲದ ಏಕತೆಯನ್ನಾಗಿ ಯಾವುದನ್ನು ಸೃಷ್ಟಿಸುವುದಿಲ್ಲ ಭ್ರಮಾತ್ಮಕ ಬ್ರಹ್ಮಾಂಡದ ಸ್ವಭಾವವೇ ಇವೆಲ್ಲಕ್ಕೂ ಮೂಲ ಕಾರಣ.(5.4)

ಭಗವಂತನು ಕರ್ತೃ ಅಲ್ಲ ಆದರೆ ಅವನು ಸೃಷ್ಟಿಕರ್ತ. ಸೃಷ್ಟಿಯಲ್ಲಿ ಎರಡು ರೀತಿಗಳಿವೆ. ಒಂದು ಕುಂಬಾರನು ಮಣ್ಣಿನ ಪಾತ್ರೆಗಳನ್ನು ಮಾಡುತ್ತಾನೆ ಮತ್ತು ಅವು ಬೇರೆ ಸ್ವತಂತ್ರ ಅಸ್ತಿತ್ವಕ್ಕಾಗಿ ಅವನಿಂದ ಬೇರೆ ಆಗುತ್ತವೆ. ಇದು ಒಂದು ರೀತಿ. ಇನ್ನೊಂದು ರೀತಿ ಅಂದರೆ ನೃತ್ಯಕಾರನು ನೃತ್ಯ ಮಾಡುತ್ತಾನೆ ಆದರೆ ನೃತ್ಯ ಮುಗಿದ ಮೇಲೆ ಆ ನೃತ್ಯಗಾರನ ಅನುಪಸ್ಥಿತಿಯಲ್ಲಿ ಆ ನೃತ್ಯ ಇರುವುದಿಲ್ಲ. ಭಗವಂತ ನೃತ್ಯಗಾರ ಇದ್ದ ಹಾಗೆ ಇಡೀ ವಿಶ್ವವೇ ಅವನನ್ನು ಅವಲಂಬಿಸಿದೆ ಆದರೆ ಅವನು ಯಾವುದರ ಮೇಲು ಅವಲಂಬಿಸಿಲ್ಲ. ಆದ್ದರಿಂದಲೇ ನೃತ್ಯ ಮಾಡುವ ಶಿವನನ್ನು ನಟರಾಜ ಎಂತಲೂ ಸಂಗೀತಗಾರ ಕೃಷ್ಣನನ್ನು ಮುರಾರಿ ಎಂದು ಚಿತ್ರಿಸಲಾಗಿದೆ. ರಾಸಾಯನಿಕ ಪ್ರಕ್ರಿಯೆಯಲ್ಲಿ ಭಗವಂತನನ್ನು ಪರಿವರ್ತಕನೆಂತಲೂ ನೋಡಬಹುದು. ಅವನಿಂದಾಗಿಯೇ ರಾಸಾಯನಿಕ ಪ್ರಕ್ರಿಯೆ ನಡೆಯುತ್ತದೆ. ಆದರೆ ಪರಿವರ್ತಕ ಯಾವ ಬದಲಾವಣೆ ಯನ್ನು ಹೊಂದುವುದಿಲ್ಲ.

ಕೃಷ್ಣ ಮುಂದೆ ಹೇಳುತ್ತಾನೆ: ವಿಶ್ವವ್ಯಾಪಕವಾದದ್ದು ವ್ಯಕ್ತಿಯ ಪಾಪ ಅಥವಾ ಪುಣ್ಯದ ಯಾವ ಗಣನೆಯನ್ನು ತೆಗೆದುಕೊಳ್ಳುವುದಿಲ್ಲ. ಮಾನವರು ತಮ್ಮ, ಜ್ಞಾನ ಮೋಹದಿಂದ ಆವೃತವಾಗಿರುವುದರಿಂದ ಭ್ರಮೆಗೆ ಒಳಗಾಗುತ್ತಾರೆ.(5.15) ಆದರೆ ಯಾರಲ್ಲಿ ಆತ್ಮ ಜ್ಞಾನದಿಂದ ಅಜ್ಞಾನ ನಾಶವಾಗಿರುತ್ತದೆಯೋ ಅವರಲ್ಲಿ ಹೊಳೆಯುವ ಸೂರ್ಯನಂತೆ ಪ್ರಜ್ಞಾನ ಪ್ರಕಟಗೊಳ್ಳುತ್ತದೆ. (5.16)

ನಿತ್ಯಜೀವನದಲ್ಲಿ ಭಗವದ್ಗೀತೆ



ಕೆ.ಶಿವಪ್ರಸಾದ್
ಹಿರಿಯ ಐಎಎಸ್ ಅಧಿಕಾರಿ

ಭಗವಂತ ಚಲನಚಿತ್ರದ ಪರದೆ ಇದ್ದಂತೆ. ಅಲ್ಲಿ ಪರದೆಯ ಮೇಲೆ ಬಿತ್ತರಗೊಳ್ಳುವ ಚಿತ್ರಕ್ಕೂ ಪರದೆಗೂ ಯಾವ ಸಂಬಂಧವೂ ಇರುವುದಿಲ್ಲ. ಆದರೆ ಪ್ರೇಕ್ಷಕರು ಅಲ್ಲಿ ಕಾಣುವ ಸಂಭ್ರಮ ಅಥವಾ ಅವಾಂತರದಿಂದ ಭಾವಾವೇಷಕ್ಕೆ ಒಳಗಾಗುತ್ತಾರೆ. ಆ ಚಿತ್ರಗಳು ನೆರಳಲ್ಲದೆ ಮತ್ತೇನು ಅಲ್ಲ. ಆದರೆ ನಾವು ತೀವ್ರವಾಗಿ ಅವುಗಳಲ್ಲಿ ತೊಡಗಿಸಿಕೊಂಡಿರುತ್ತೇವೆ. ಇದರಿಂದಾಗಿ ದೀರ್ಘಕಾಲ ಪರಿಣಾಮ ಬೀರುವ ಭಾವನೆಗಳು, ನಿರ್ಣಯಗಳು ರೂಪು ಗೊಳ್ಳುತ್ತವೆ. ಈ ಇಡೀ ಪ್ರಕ್ರಿಯೆಯಲ್ಲಿ ಪರದೆಯು ತಟಸ್ಥವಾಗಿದ್ದು ಅದಕ್ಕೂ ನಮ್ಮ ಭಾವನೆಗಳಿಗೂ ಯಾವುದೇ ಸಂಬಂಧ ಇರುವುದಿಲ್ಲ.

ಕೃಷ್ಣ ಈ ಮೊದಲು ಇಂಥ ಸಂದರ್ಭದಲ್ಲಿ ಭ್ರಮೆಯ ಅಂಧಕಾರ ಎಂಬ ಶಬ್ದವನ್ನು ಉಪಯೋಗಿಸಿದ್ದಾನೆ. (2.52) ಒಮ್ಮೆ ನಾವು ಈ ಮೋಹದಿಂದ ಹೊರ ಬಂದರೆ ಸೂರ್ಯ ಪ್ರಕಾಶದಂತೆ ಹೊಳೆಯುವ ಜಾಗ್ರತಿ ನಮ್ಮಲ್ಲಿ ಉಂಟಾಗುತ್ತದೆ.

ನೀವೂ ಬರೆಯಬಹುದು | ನಮ್ಮ ವಿಳಾಸ | ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098 | e-mail: vishwavanimagazine@gmail.com

ಅಂಕ ಪಟ್ಟಿ

	ಪಂದ್ಯ	ಗೆಲುವು	ಸೋಲು	ಅಂಕ
ಬೆಂಗಳೂರು	02	02	00	04
ಲಖನೌ	02	01	01	02
ಪಂಜಾಬ್	01	01	00	02
ಡೆಲ್ಲಿ	01	01	00	02
ಹೈದರಾಬಾದ್	02	01	01	02
ಕೋಲ್ಕತ್ತಾ	02	01	01	02
ಚೆನ್ನೈ	02	01	01	02
ಮುಂಬೈ	01	00	01	00
ಗುಜರಾತ್	01	00	01	00
ರಾಜಸ್ಥಾನ್	02	00	02	00

ಟೀಕೆಗೆ ಗುರಿಯಾದ ರೋಹಿತ್

ಮುಂಬೈ: ವಾಂಖೆಡೆ ಮೈದಾನದಲ್ಲಿ ಸೋಮವಾರ ನಡೆದಿದ್ದ ಪಂದ್ಯದಲ್ಲಿ ಹಿಟ್‌ಮ್ಯಾನ್ ರೋಹಿತ್ ಶರ್ಮಾ ಶೂನ್ಯಕ್ಕೆ ಪೆವಿಲಿಯನ್ ಸೇರಿದ್ದರು. ಇದರ ಬೆನ್ನಲ್ಲೇ ಹಿಟ್‌ಮ್ಯಾನ್ ಟೀಕೆಗೆ ಗುರಿಯಾಗಿದ್ದು, ಇಂಗ್ಲೆಂಡ್‌ನ

ಮಾಜಿ ನಾಯಕ ಮೈಕೆಲ್ ವಾನ್, ರೋಹಿತ್ ವಿರುದ್ಧ ಅಸಮಾಧಾನ ಹೊರ ಹಾಕಿದ್ದಾರೆ. 'ರೋಹಿತ್ ಶರ್ಮಾ ಮುಂಬೈ ಇಂಡಿಯನ್ಸ್ ತಂಡದ ನಾಯಕತ್ವದಿಂದ ಕೆಳಗಿಳಿದಿದ್ದಾರೆ, ಸದ್ಯ ಅವರು ಕೇವಲ ಬ್ಯಾಟ್ಸ್‌ಮನ್ ಆಗಿದ್ದು ಯಾವುದೇ ಒತ್ತಡವಿಲ್ಲ. ಅವರ ಸ್ಥಾನದಲ್ಲಿ ಬೇರೆ ಯಾವುದೇ ಆಟಗಾರ ಇದ್ದರೂ ಈ ರೀತಿ ಕಳಪೆ ಪ್ರದರ್ಶನ ನೀಡಿದ್ದರೆ ತಂಡದಲ್ಲಿ ಸ್ಥಾನ ಕಳೆದುಕೊಳ್ಳುತ್ತಿದ್ದರು' ಎಂದಿದ್ದಾರೆ. 'ರೋಹಿತ್ ಶರ್ಮಾ ಆಗಿರುವುದರಿಂದ ಇನ್ನೂ ತಂಡದಲ್ಲಿದ್ದಾರೆ. ಅಂತಹ ಅದ್ಭುತ ಆಟಗಾರನಿಂದ ಈ ಪ್ರದರ್ಶನ ಸೂಕ್ತವಲ್ಲ, ಹಾಗಂತ ಅವರನ್ನು ತಂಡದಿಂದ ತೆಗೆದುಹಾಕಬೇಕು ಎಂದು ನಾನು ಹೇಳುತ್ತಿಲ್ಲ. ರೋಹಿತ್ ಶರ್ಮಾ ತಮ್ಮ ಫಾರ್ಮ್ ಅನ್ನು ಮರಳಿ ಪಡೆಯಬೇಕು. ಮುಂಬೈ ದೊಡ್ಡ ಸ್ಕೋರ್ ಗಳಿಸುವ ಅವಶ್ಯಕತೆಯಿದೆ' ಎಂದು ಮೈಕೆಲ್ ವಾನ್ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಈ ಐಪಿಎಲ್ ಟೂರ್ನಿಯಲ್ಲಿ ಮುಂಬೈ ಪರ ಆಡಿರುವ ಮೂರು ಪಂದ್ಯಗಳಲ್ಲಿ ರೋಹಿತ್ ಶರ್ಮಾ 0, 8 ಮತ್ತು 13 ರನ್ ಗಳಿಸಿದ್ದು ಒಟ್ಟು 21 ರನ್‌ಗಳನ್ನು ಮಾತ್ರ ಗಳಿಸಲು ಸಾಧ್ಯವಾಗಿದೆ, ಕಳೆದ ಐದು ಐಪಿಎಲ್ ಋತುಗಳಲ್ಲಿ ರೋಹಿತ್ ಒಮ್ಮೆ ಮಾತ್ರ 400 ರನ್ ಗಳಿಸಿದ್ದರು.

ಸೂರ್ಯಕುಮಾರ್ ಯಾದವ್ ಎಲೈಟ್ ಪಟ್ಟಿಗೆ ಸೇರ್ಪಡೆ

ಮುಂಬಯಿ: ಕೆಕೆಆರ್ ವಿರುದ್ಧದ ಐಪಿಎಲ್ ಪಂದ್ಯದಲ್ಲಿ ಸೋಮವಾರ ಬಿರುಸಿನ ಬ್ಯಾಟಿಂಗ್ ನಡೆಸಿದ ಮುಂಬೈ ಇಂಡಿಯಾ ತಂಡದ



ಸೂರ್ಯಕುಮಾರ್ ಯಾದವ್ ಅವರು ಟಿ20 ಕ್ರಿಕೆಟ್‌ನಲ್ಲಿ 8 ಸಾವಿರ ರನ್ ಪೂರೈಸಿದ ಮೈಲುಗಲ್ಲು ತಲುಪಿದರು. ಈ ಮೂಲಕ ವಿರಾಟ್ ಕೊಹ್ಲಿ, ರೋಹಿತ್ ಶರ್ಮಾ ಜತೆ ಎಲೈಟ್ ಪಟ್ಟಿಗೆ ಸೇರ್ಪಡೆಗೊಂಡರು. ಕೆಕೆಆರ್ ಪಂದ್ಯದಲ್ಲಿ ಸೂರ್ಯ 9 ಎಸೆತಗಳಿಂದ ಅಜೇಯ 29 ರನ್ ಬಾರಿಸಿ ಗಮನಸೆಳೆದರು. ಟಿ20ಯಲ್ಲಿ ಅತಿ ಹೆಚ್ಚು ರನ್ ಗಳಿಸಿದ ಭಾರತೀಯ ಕ್ರಿಕೆಟಿಗರು: ವಿರಾಟ್ ಕೊಹ್ಲಿ- 12976 ರನ್, ರೋಹಿತ್ ಶರ್ಮಾ-11851 ರನ್, ಶಿಖರ್ ಧವನ್-9797 ರನ್, ಸುರೇಶ್ ರೈನಾ-8654 ರನ್, ಸೂರ್ಯಕುಮಾರ್ ಯಾದವ್- 8007 ರನ್.

ಚೆನ್ನೈ ತಂಡಕ್ಕೆ ಶ್ರೀಕಾಂತ್ ಸಲಹೆ

ದೆಹಲಿ: ಐಪಿಎಲ್ ಪಂದ್ಯಗಳ ಪವರ್‌ಪ್ಲೇನಲ್ಲಿ ರವಿಚಂದ್ರನ್ ಅಶ್ವಿನ್‌ಗೆ ಬೌಲಿಂಗ್ ಕೊಡಬೇಡಿ ಎಂದು ಚೆನ್ನೈ ಸೂಪರ್ ಕಿಂಗ್ಸ್ ತಂಡಕ್ಕೆ ಭಾರತದ ಮಾಜಿ ಕ್ರಿಕೆಟಿಗ ಕೃಷ್ಣಮಾಚಾರಿ ಶ್ರೀಕಾಂತ್ ಸಲಹೆ ನೀಡಿದ್ದಾರೆ.

ಇಲ್ಲಿಯವರೆಗೂ ಆಡಿದ ಮೂರೂ ಪಂದ್ಯಗಳ ಪೈಕಿ ಒಂದರಲ್ಲಿ ಗೆಲುವು ಪಡೆದರೆ, ಇನ್ನುಳಿದ ಎರಡೂ ಪಂದ್ಯಗಳಲ್ಲಿ ಸೋಲು ಅನುಭವಿಸಿದೆ. ಆ ಮೂಲಕ ಪಾಯಿಂಟ್ಸ್ ಟೇಬಲ್‌ನಲ್ಲಿ ಏಳನೇ ಸ್ಥಾನಕ್ಕೆ ಕುಸಿದಿದೆ. ತನ್ನ ಮೊದಲನೇ ಪಂದ್ಯದಲ್ಲಿ ಶುಭಾರಂಭ ಕಂಡಿದ್ದ ಋತುರಾಜ್ ಗಾಯಕ್ವಾಡ್ ನಾಯಕತ್ವದ ಚೆನ್ನೈ ಸೂಪರ್ ಕಿಂಗ್ಸ್ ತಂಡ, ನಂತರ ಎರಡನೇ ಪಂದ್ಯದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ವಿರುದ್ಧ ದೊಡ್ಡ ಅಂತರದಲ್ಲಿ ಸೋಲು ಅನುಭವಿಸಿತ್ತು, ಬಳಿಕ ಮೂರನೇ ಪಂದ್ಯದಲ್ಲಿ ರಾಜಸ್ಥಾನ ರಾಯಲ್ಸ್ ವಿರುದ್ಧ ಸೋಲು ಅನುಭವಿಸಿತ್ತು. ಚೆನ್ನೈ ತಂಡದ ಸತತ ಎರಡು ಸೋಲುಗಳ ಬಳಿಕ ಮಾತನಾಡಿದ ಕ್ರಿಸ್ ಶ್ರೀಕಾಂತ್, ಸಿಎಸ್‌ಕೆ ತಂಡದ ಹನ್ನೊಂದರ ಆಟಗಾರರ ಬಲಗದಲ್ಲಿ ಕೆಲ ಬದಲಾವಣೆಗಳನ್ನು ಸೂಚಿಸಿದ್ದಾರೆ. ಡೆವೋನ್ ಕಾನ್ವೇ ಹಾಗೂ ಅನ್ಷುಲ್ ಕಾಂಬೋಜ್‌ಗೆ ಪ್ಲೇಯಿಂಗ್ ಆಡಲು ಅವಕಾಶ ನೀಡಿ ಎಂದು ಆಗ್ರಹಿಸಿದ್ದಾರಲ್ಲದೆ, ಬೌಲರ್ ಆರ್.ಅಶ್ವಿನ್‌ಗೆ ಪವರ್‌ಪ್ಲೇನಲ್ಲಿ ಬೌಲಿಂಗ್ ನೀಡಬೇಡಿ ಎಂದೂ ಸಲಹೆ ನೀಡಿದ್ದಾರೆ. ಆರ್ ಅಶ್ವಿನ್ ಪವರ್‌ಪ್ಲೇನಲ್ಲಿ ಸ್ಪಿನ್ನರ್ ಬೌಲ್ ಮಾಡಬಾರದು. 7ರಿಂದ 18 ಓವರ್‌ಗಳಲ್ಲಿ ಆರ್.ಅಶ್ವಿನ್ ತುಂಬಾ ಪರಿಣಾಮಕಾರಿಯಾಗಲಿದ್ದಾರೆ. ಆ ಮೂಲಕ ನೂರ್ ಅಹ್ಮದ್ ಹಾಗೂ ರವೀಂದ್ರ ಜಡೇಜಾಗೆ ಸಾಥ್ ನೀಡಲಿ' ಎಂದು ತಮ್ಮ ಅಧಿಕೃತ ಯೂಟ್ಯೂಬ್ ಚಾನೆಲ್‌ನಲ್ಲಿ ಶ್ರೀಕಾಂತ್ ತಿಳಿಸಿದ್ದಾರೆ.

ಓಪನಿಂಗ್‌ನತ್ತ ರಮಣದೀಪ್ ಚಿತ್ತ

ಮುಂಬೈ: ಇಲ್ಲಿ ಸೋಮವಾರ ನಡೆದ ಐಪಿಎಲ್ ಪಂದ್ಯಾವಳಿಯಲ್ಲಿ ಮುಂಬೈ ಇಂಡಿಯನ್ಸ್ ವಿರುದ್ಧ 8 ವಿಕೆಟ್‌ಗಳ ಸೋಲು ಅನುಭವಿಸಿದ

ಬಳಿಕ ಮಾತನಾಡಿದ ಕೋಲ್ಕತಾ ನೈಟ್ ರೈಡರ್ಸ್ ಆಟಗಾರ ರಮಣ್‌ದೀಪ್ ಸಿಂಗ್, ತಮಗೆ ಓಪನಿಂಗ್ ಬ್ಯಾಟಿಂಗ್ ನೀಡಬೇಕೆಂದು ಕೆಕೆಆರ್‌ಗೆ ಮನವಿ ಮಾಡಿದ್ದಾರೆ. 'ನಾನು ಓಪನಿಂಗ್ ಬ್ಯಾಟ್ ಮಾಡಬೇಕು. ಮೇಲಿನ ಕ್ರಮಾಂಕದಲ್ಲಿ ಬ್ಯಾಟ್ ಮಾಡಬೇಕೆಂದು ನಾನು ಸಾಕಷ್ಟು ಪ್ರಯತ್ನವನ್ನು ನಡೆಸುತ್ತೇನೆ. ನಮ್ಮ ತಂಡದಲ್ಲಿ ಉತ್ತಮ ಸಮತೋಲನವಿದೆ, ಹಾಗಾಗಿ ತಂಡವು ನನಗೆ ಯಾವುದೇ ಬ್ಯಾಟಿಂಗ್ ಕ್ರಮಾಂಕ ನೀಡಿದರೂ ಪಂದ್ಯವನ್ನು ಗೆಲ್ಲಿಸುವ ಪ್ರದರ್ಶನ ತೋರಲು ನಾನು ಸಿದ್ಧನಿದ್ದೇನೆ' ಎಂದು ಕೆಕೆಆರ್ ಆಟಗಾರ ತಿಳಿಸಿದ್ದಾರೆ.

ಫಿಲ್ ಸಾಲ್ಟ್‌ರಂತಹ ಸ್ಟಾರ್ ಆಟಗಾರರನ್ನು ಕಳೆದುಕೊಂಡ ಮೆಗಾ ಹರಾಜಿನಿಂದ ಕೆಕೆಆರ್ ತಂಡದ ಸಂಯೋಜನೆಗೆ ಹೇಗೆ ತೊಂದರೆಯಾಯಿತು ಎಂಬುದರ ಕುರಿತು ಮಾತನಾಡಿದ ರಮಣದೀಪ್, ಪ್ರತಿ ಮೂರು ವರ್ಷಗಳಿಗೊಮ್ಮೆ ನಡೆಯುವ ಈ ಹರಾಜಿನ ಅಭಿಮಾನಿ ನಾನಲ್ಲ' ಎಂದು ಹೇಳಿಕೊಂಡಿದ್ದಾರೆ. 'ಮೆಗಾ ಹರಾಜುಗಳು ನಿರಾಶಾದಾಯಕವಾಗಿವೆ, ಮೂರು ವರ್ಷಗಳಿಗೊಮ್ಮೆ ತಂಡವನ್ನು ಬದಲಾಯಿಸಬೇಕಾಗುತ್ತದೆ. ಹಾಗಾಗಿ ತಂಡಗಳು ಸಾಧ್ಯವಾದಷ್ಟು ಬೇಗ ತಮ್ಮ ಗೆಲುವಿನ ಸಂಯೋಜನೆಗಳನ್ನು ಹೊಂದಿಸಲು ಪ್ರಯತ್ನಿಸುತ್ತವೆ ಮತ್ತು ಆಟಗಾರರೂ ಸಹ ಸದಾ ಗೆಲುವಿನ ಸಂಯೋಜನೆಯನ್ನು ಕಂಡುಹಿಡಿಯಲು ಪ್ರಯತ್ನಿಸುತ್ತಾರೆ' ಎಂದು ರಮಣದೀಪ್ ಸಿಂಗ್ ತಿಳಿಸಿದ್ದಾರೆ.

ಇಂದಿನ ಪಂದ್ಯ

7.30 PM

ರಾಯಲ್ ಚಾಲೆಂಜರ್ಸ್ ಬೆಂಗಳೂರು
VS
ಗುಜರಾತ್ ಟೈಟಾನ್ಸ್

ಚಿನ್ನಸ್ವಾಮಿ ಸ್ಟೇಡಿಯಂ, ಬೆಂಗಳೂರು



2027ರ ವಿಶ್ವಕಪ್ ನನ್ನ ಗುರಿ: ಕೊಹ್ಲಿ

'ಕಳೆದ 2013ರಿಂದ ಇಲ್ಲಿಯವರೆಗೂ ಭಾರತ ತಂಡಕ್ಕೆ ಐಸಿಸಿ ಏಕದಿನ ವಿಶ್ವಕಪ್ ಗೆಲ್ಲಲು ಸಾಧ್ಯವಾಗಿಲ್ಲ. ಆದರೆ 2024ರಲ್ಲಿ ಟಿ20 ವಿಶ್ವಕಪ್ ಮತ್ತು 2025ರಲ್ಲಿ ಚಾಂಪಿಯನ್ಸ್ ಟ್ರೋಫಿ ಗೆದ್ದಿದೆ. 2027ರಲ್ಲಿ ದಕ್ಷಿಣ ಆಫ್ರಿಕಾ, ನಮೀಬಿಯಾ ಮತ್ತು ಜಿಂಬಾಬ್ವೆಯ ಜಂಟಿ ಆತಿಥ್ಯದಲ್ಲಿ ಏಕದಿನ ವಿಶ್ವಕಪ್ ನಡೆಯಲಿದೆ, ಆ ಟೂರ್ನಿಯಲ್ಲಿ ಭಾರತ ತಂಡಕ್ಕೆ ಏಕದಿನ ವಿಶ್ವಕಪ್ ಗೆದ್ದು ಕೊಡುವುದು ನನ್ನ ಮುಖ್ಯ ಗುರಿ ಎಂದು ಟೀಮ್ ಇಂಡಿಯಾ ಮಾಜಿ ನಾಯಕ ವಿರಾಟ್ ಕೊಹ್ಲಿ ಬಹಿರಂಗಪಡಿಸಿದ್ದಾರೆ.

ವೃತ್ತಿಜೀವನದ ಮುಂದಿನ ದೊಡ್ಡ ಹೆಜ್ಜೆಯ ಬಗ್ಗೆ ಕಾರ್ಯಕ್ರಮವೊಂದರಲ್ಲಿ ಕೊಹ್ಲಿಗೆ ಪ್ರಶ್ನೆ ಕೇಳಿದಾಗ ಪ್ರತಿಕ್ರಿಯಿಸಿದ ಅವರು, 2027ರಲ್ಲಿ ನಡೆಯಲಿರುವ ಏಕದಿನ ವಿಶ್ವಕಪ್ ಗೆಲ್ಲುವ ಆಸೆ ಇದೆ ಎಂದು ಹೇಳಿಕೊಂಡಿದ್ದಾರೆ.

ಮಿಂಚಿದ ಪಂಜಾಬ್ ಬೌಲರ್ಸ್ | ಮತ್ತೆ ಮಿಂಚಿದ ಪೂರನ್

ಪಂಜಾಬ್‌ಗೆ 172 ರನ್ ಗುರಿ

ಲಖನೌ: ಇಲ್ಲಿನ ಅಟಲ್ ಬಿಹಾರಿ ವಾಜಪೇಯಿ ಏಕಾನಾ ಕ್ರಿಕೆಟ್ ಕ್ರೀಡಾಂಗಣದಲ್ಲಿ ನಡೆದ ಅತಿಥೇಯ ಲಕ್ನೋ ಸೂಪರ್ ಜೈಂಟ್ಸ್ ಮತ್ತು ಪಂಜಾಬ್ ಕಿಂಗ್ಸ್ ನಡುವಿನ ಐಪಿಎಲ್ ಪಂದ್ಯದಲ್ಲಿ ಟಾಸ್ ಸೋತು ಬ್ಯಾಟಿಂಗ್ ಮಾಡಿರುವ ಲಖನೌ ತಂಡವು 20 ಓವರ್‌ಗಳಲ್ಲಿ 7 ವಿಕೆಟ್‌ಗೆ 171 ರನ್ ಗಳಿಸಿ, ಪಂಜಾಬ್ ತಂಡಕ್ಕೆ 172 ರನ್‌ಗಳ ಗುರಿ ನೀಡಿತು.

ಟಾಸ್ ಗೆದ್ದ ಶ್ರೇಯಸ್ ಅಯ್ಯರ್ ಲಖನೌ ತಂಡವನ್ನು ಬ್ಯಾಟಿಂಗ್ ಆಹ್ವಾನಿಸಿದರೂ ತವರಿನಲ್ಲೇ ಉತ್ತಮ ಪ್ರದರ್ಶನ ತೋರುವಲ್ಲಿ ವಿಫಲರಾದರು. ಅರ್ಶದೀಪ್ ಎಸೆದ ಮೊದಲ ಓವರ್‌ನಲ್ಲೇ ಉತ್ತಮ ಫಾರ್ಮ್‌ನಲ್ಲಿದ್ದ ಮಿಚೆಲ್ ಮಾರ್ಷ್ ಔಟ್ ಆಗಿ ವಿಕೆಟ್ ಕಳೆದುಕೊಂಡರು. ಬಳಿಕ ಸ್ಫೋಟಕ ಆಟಕ್ಕೆ ಮುಂದಾದ ಮಾರ್ಕ್ರಮ್ 18 ಎಸೆತಗಳಲ್ಲಿ 4 ಬೌಂಡರಿ, 1 ಸಿಕ್ಸರ್ ಸಹಿತ 28 ರನ್ ಗಳಿಸಿ ಫರ್ಗ್ಯುಸನ್ ಬೌಲಿಂಗ್‌ನಲ್ಲಿ ಬೌಲ್ಡ್ ಆದರು. ನಂತರ ಬಂದ ನಾಯಕ ರಿಷಭ್ ಪಂತ್ ಕೇವಲ 2 ರನ್ ಗಳಿಸಿ ಔಟ್

ಆಗುವ ಮೂಲಕ ಸತತ 3ನೇ ಪಂದ್ಯದಲ್ಲೂ ವಿಫಲರಾದರು.

ಕೇವಲ 35 ರನ್‌ಗಳಲ್ಲಿ 3 ವಿಕೆಟ್ ಕಳೆದುಕೊಂಡು ಲಖನೌ ತಂಡವು ಅಲ್ಪಮೊತ್ತಕ್ಕೆ ಕುಸಿಯುವ ಭೀತಿಯಲ್ಲಿತ್ತು. ಆದರೆ ಆ ಸಂದರ್ಭದಲ್ಲಿ ನಿಕೋಲಸ್ ಪೂರನ್ ಹಾಗೂ ಆಯುಷ್ ಬದೋನಿ ಜತೆಯಾಗಿ 54 ರನ್‌ಗಳ ಜೊತೆಯಾಟ ನೀಡಿದರು. ಪೂರನ್ 30 ಎಸೆತಗಳಲ್ಲಿ 5 ಬೌಂಡರಿ, 2 ಸಿಕ್ಸರ್‌ಗಳ ಸಹಿತ 44 ರನ್‌ಗಳಿಸಿ ಚಹಲ್ ಬೌಲಿಂಗ್‌ನಲ್ಲಿ ಮ್ಯಾಕ್ಸ್‌ವೆಲ್‌ಗೆ ಕ್ಯಾಚ್ ನೀಡಿ ಔಟ್ ಆದರು. ನಂತರ ಬಂದ ಡೇವಿಡ್ ಮಿಲ್ಲರ್ 18 ಎಸೆತಗಳಲ್ಲಿ 3 ಬೌಂಡರಿ ಸಹಿತ 19ರನ್ ಗಳಿಸಿ ಪೆವಿಲಿಯನ್?ಗೆ ಮರಳಿದರು.

15.5 ಓವರ್‌ಗಳಲ್ಲಿ 5 ವಿಕೆಟ್ ಕಳೆದುಕೊಂಡು ಕೇವಲ 115 ರನ್ ಗಳಿಸಿ 150 ದಾಟುವುದು ಅನುಮಾನ ಎನ್ನುವ ಸಂದರ್ಭದಲ್ಲಿ ಬದೋನಿ ಜೊತೆಯಾದ ಅಬ್ದುಲ್ ಸಮದ್ ಕೇವಲ 21 ಎಸೆತಗಳಲ್ಲಿ 47 ರನ್ ಸೇರಿಸಿದರು. ಆದರೆ ಈ ಜೋಡಿ ಕೊನೆಯ 2 ಓವರ್‌ಗಳಲ್ಲಿ ರನ್ ಗಳಿಸಲು ವಿಫಲರಾದರು. 19ನೇ ಓವರ್‌ನಲ್ಲಿ ಮಾರ್ಕೊ ಜಾನ್ಸನ್ ಕೇವಲ 8 ರನ್ ಬಿಟ್ಟುಕೊಟ್ಟರೆ, 20ನೇ ಓವರ್‌ನಲ್ಲಿ ಅರ್ಶದೀಪ್ ಇವರಿಬ್ಬರನ್ನು ಔಟ್ ಮಾಡಿ ಕೇವಲ 7 ರನ್ ನೀಡಿದರು. ಬದೋನಿ 33 ಎಸೆತಗಳಲ್ಲಿ 3 ಬೌಂಡರಿ, 1 ಸಿಕ್ಸರ್ ಸಹಿತ 43 ರನ್, ಸಮದ್ 12 ಎಸೆತಗಳಲ್ಲಿ ತಲಾ 2 ಬೌಂಡರಿ, ಸಿಕ್ಸರ್‌ಗಳ ಸಹಿತ 27 ರನ್ ಗಳಿಸಿದರು.

ಪಂಜಾಬ್ ಪರ ಮಿಂಚಿದ ಅರ್ಶದೀಪ್ ಸಿಂಗ್ 43 ರನ್ ನೀಡಿ 3 ವಿಕೆಟ್ ಪಡೆದರೆ, ಫರ್ಗ್ಯುಸನ್ 26 ಕೊಟ್ಟು 1 ವಿಕೆಟ್, ಮ್ಯಾಕ್ಸ್‌ವೆಲ್ 22 ರನ್ ನೀಡಿ 1 ವಿಕೆಟ್, ಮಾರ್ಕೊ ಜಾನ್ಸನ್ 28 ಕೊಟ್ಟು 1 ವಿಕೆಟ್ ಹಾಗೂ ಚಹಲ್ 36 ರನ್‌ಗೆ 1 ವಿಕೆಟ್ ಪಡೆದು ಮಿಂಚಿದರು.

ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ 'ಈ ಸಲ ಕಪ್ ನಮ್ದೇ' ಮತ್ತೆ ಸದ್ದು

ಆರ್‌ಸಿಬಿಗೆ ಹ್ಯಾಟ್ರಿಕ್ ಗೆಲುವಿನ ತವಕ

ಬೆಂಗಳೂರು: ಐಪಿಎಲ್ ಟೂರ್ನಿಯಲ್ಲಿ ಬುಧವಾರದಂದು ಅತಿಥೇಯ ರಾಯಲ್ ಚಾಲೆಂಜರ್ಸ್ ಬೆಂಗಳೂರು ಮತ್ತು ಗುಜರಾತ್ ಟೈಟಾನ್ಸ್ ತಂಡಗಳು ಇಲ್ಲಿನ ಚಿನ್ನಸ್ವಾಮಿ ಕ್ರಿಕೆಟ್ ಸ್ಟೇಡಿಯಂನಲ್ಲಿ ಮುಖಾಮುಖಿ ಆಗುತ್ತಿವೆ.

ಈ ಆವೃತ್ತಿಯಲ್ಲಿ ಆರ್‌ಸಿಬಿ ತನ್ನ ತವರು ಮೈದಾನದಲ್ಲಿ ಆಡುತ್ತಿರುವ ಮೊದಲ ಪಂದ್ಯ ಇದಾಗಿದೆ. ಈ ಸಲದ ಐಪಿಎಲ್ ಟೂರ್ನಿಯಲ್ಲಿ ತನ್ನ ಜೈತ್ರಯಾತ್ರೆ ಮುಂದುವರಿಸಿರುವ ಆರ್‌ಸಿಬಿ ಈಗಾಗಲೇ ಎರಡು ಪಂದ್ಯಗಳಲ್ಲಿ ಗೆದ್ದು ಅಂಕಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದೆ. ಐಪಿಎಲ್ ಉದ್ಘಾಟನಾ ಪಂದ್ಯದಲ್ಲಿ ಕೆಕೆಆರ್ ತಂಡವನ್ನು ಸೋಲಿಸಿರುವ ಆರ್‌ಸಿಬಿ, ಎರಡನೇ ಪಂದ್ಯದಲ್ಲಿ ಸಾಂಪ್ರದಾಯಿಕ ಎದುರಾಳಿ ಆರ್‌ಸಿಬಿ ತಂಡವನ್ನು ಬಗ್ಗುಬಡಿದಿದ್ದು, ಇದೀಗ ಮೂರನೇ ಪಂದ್ಯವಾಡಲು ಸಜ್ಜಾಗಿದೆ.

ಮಾರ್ಚ್-22ರಂದು ನಡೆದ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ್ದ ಕೆಕೆಆರ್ 174 ರನ್ ಗಳಿಸಿತ್ತು. ಅದನ್ನು ಬೆಂಬತ್ತಿದ್ದ ಆರ್‌ಸಿಬಿ ಕೇವಲ 3 ವಿಕೆಟ್ ನಷ್ಟಕ್ಕೆ 16.3 ಓವರ್‌ಗಳಲ್ಲೇ ಸುಲಭ ಜಯ ಪಡೆದಿತ್ತು. ಬೆಂಗಳೂರು ತಂಡದ ಪರ ಕೊಹ್ಲಿ 59 ರನ್ ಬಾರಿಸಿದರೆ, ಫಿಲ್ ಸಾಲ್ಟ್ 56 ರನ್ ಗಳಿಸಿದ್ದರು. ಅಂದಿನ ಪಂದ್ಯದಲ್ಲಿ ಬೌಲರ್ ಕೃಣಾಲ್ ಪಾಂಡ್ಯ 3 ಹಾಗೂ ಹ್ಯಾಝೆಲ್‌ವುಡ್ 2 ವಿಕೆಟ್ ಗಳಿಸಿದ್ದರು.

ಪಾಟೀದಾರ್ ನಾಯಕತ್ವದ ಆರ್‌ಸಿಬಿ ತನ್ನ ಎರಡನೇ ಪಂದ್ಯದಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ತಂಡವನ್ನು ಮಾರ್ಚ್-28ರಂದು ಬಗ್ಗುಬಡಿದಿತ್ತು. ಚೆನ್ನೈನಲ್ಲಿ ನಡೆದ ಆ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಆರ್‌ಸಿಬಿ 196 ರನ್ ಗಳಿಸಿದರೆ, ಸಿಎಸ್‌ಕೆ 146 ರನ್ ಗಳಿಸಿ ಆರ್‌ಸಿಬಿ ಎದುರು 50 ರನ್‌ಗಳ ಸೋಲನ್ನೊಪ್ಪಿಕೊಂಡಿತ್ತು. ಆ ಪಂದ್ಯದಲ್ಲಿ ಪಾಟಿದಾರ್ 51, ಫಿಲ್‌ಸಾಲ್ಟ್ 32 ರನ್ ಮತ್ತು ಕೊಹ್ಲಿ 31 ರನ್ ಗಳಿಸಿದ್ದರು. ಆರ್‌ಸಿಬಿ ಪರವಾಗಿ ಹೆಝೆಲ್‌ವುಡ್ 3, ಯಶ್ ದಯಾಲ್ ಹಾಗೂ ಲಿವಿಂಗ್‌ಸ್ಟೋನ್ ತಲಾ 2 ವಿಕೆಟ್ ಪಡೆದಿದ್ದರು.

ಆರ್‌ಸಿಬಿಯನ್ನು ಬುಧವಾರ ಎದುರಿಸಲಿರುವ ಗುಜರಾತ್ ಟೈಟಾನ್ಸ್ ತಂಡವು ಈಗಾಗಲೇ ಪಂಜಾಬ್ ಮತ್ತು ಮುಂಬೈ ವಿರುದ್ಧ ಆಡಿದ್ದು, ಮುಂಬೈ ವಿರುದ್ಧದ ಪಂದ್ಯದಲ್ಲಿ ಮಾತ್ರ ಅದು ಗೆಲುವನ್ನು ಕಂಡಿದೆ. ಪಂಜಾಬ್ ವಿರುದ್ಧದ ಪಂದ್ಯದಲ್ಲಿ ಗುಜರಾತ್ 243 ರನ್ ಗಳಿಸಿದ್ದು, ಅದನ್ನು ಬೆಂಬತ್ತಿದ್ದ ಪಂಜಾಬ್ 11 ರನ್‌ಗಳ ಗೆಲುವನ್ನು ತನ್ನದನ್ನಾಗಿಸಿತ್ತು.

ಮುಂಬೈ ವಿರುದ್ಧದ ಪಂದ್ಯದಲ್ಲಿ ಸಾಯಿ ಸುದರ್ಶನ್ 63, ಜೋಸ್ ಬಟ್ಲರ್ 39 ರನ್, ಶುಭಮನ್ ಗಿಲ್ 38 ರನ್‌ಗಳಿಸಿ ಗೆಲುವಿಗೆ ಕಾರಣಕರ್ತರಾಗಿದ್ದರು. ಆ ಪಂದ್ಯದಲ್ಲಿ ಆರ್‌ಸಿಬಿ ಪರ ಸಾಯಿ ಕಿಶೋರ್ 3, ರಬಡಾ ಮತ್ತು ರಶೀದ್ ಖಾನ್ ತಲಾ ಒಂದು ವಿಕೆಟ್ ಪಡೆದಿದ್ದರು.

ತವರಿನಲ್ಲಿ ನಡೆಯಲಿರುವ ಪಂದ್ಯದ ಗೆಲುವನ್ನು ಪಡೆದು ಹ್ಯಾಟ್ರಿಕ್ ಜಯದ ನಿರೀಕ್ಷೆಯಲ್ಲಿರುವ ಆರ್‌ಸಿಬಿ ತಂಡವು ಗುಜರಾತ್ ಟೈಟಾನ್ಸ್ ವಿರುದ್ಧ ಬಲಿಷ್ಠ ತಂಡದೊಂದಿಗೆ ಕಣಕ್ಕಿಳಿಯಲಿದೆ. ಮೊದಲೆರಡು ಪಂದ್ಯಗಳಲ್ಲಿ ಆಲ್‌ರೌಂಡರ್ ಲಿವಿಂಗ್‌ಸ್ಟೋನ್ ಸಾಮಾನ್ಯ ಪ್ರದರ್ಶನವನ್ನಷ್ಟೇ ತೋರಿದ್ದು, ಬುಧವಾರದ ಪಂದ್ಯದಿಂದ ಅವರು ಹೊರಗುಳಿಯುವ ಸಾಧ್ಯತೆ ಇದೆ. ಒಂದು ವೇಳೆ ಲಿವಿಂಗ್‌ಸ್ಟೋನ್ ಹೊರಗುಳಿದರೆ ಅವರ ಸ್ಥಾನಕ್ಕೆ ಜೇಕಬ್ ಬೆಥೆಲ್ ಕಣಕ್ಕಿಳಿಯಲಿದ್ದಾರೆ.

ಐಪಿಎಲ್‌ನಲ್ಲಿ ಬೆಂಗಳೂರು ಮತ್ತು ಗುಜರಾತ್ ತಂಡಗಳು ಈ ವರೆಗೂ ಒಟ್ಟು 5 ಬಾರಿ ಮುಖಾಮುಖಿ ಆಗಿವೆ. ಇದರಲ್ಲಿ ಆರ್‌ಸಿಬಿ ತಂಡವು ಗುಜರಾತ್ ವಿರುದ್ಧ 3 ಬಾರಿ ಗೆದ್ದರೆ, ಗುಜರಾತ್ ತಂಡ 2 ಬಾರಿ ಗೆಲುವನ್ನು ಸಾಧಿಸಿದೆ.



ಆರ್‌ಸಿಬಿ ತಂಡ	ಗುಜರಾತ್ ತಂಡ
ರಜತ್ ಪಾಟಿದಾರ್ (ನಾಯಕ)	ಶುಭ್‌ಮನ್ ಗಿಲ್ (ನಾಯಕ)
ಫಿಲಿಪ್ ಸಾಲ್ಟ್	ಜೋಸ್ ಬಟ್ಲರ್
ವಿರಾಟ್ ಕೊಹ್ಲಿ	ಕುಮಾರ್ ಕುಶಾರಂಗ
ದೇವದತ್ ಪಡಿಕ್ಕಲ್	ಅನುಜ್ ರಾವತ್
ಲಿವಿಂಗ್‌ಸ್ಟೋನ್	ಎಸ್. ರುಥರ್‌ಫೋರ್ಡ್
ಜೇಕಬ್ ಬೆಥೆಲ್	ಗ್ಲೆನ್ ಫಿಲಿಫ್ಸ್
ಜಿತೇಶ್ ಶರ್ಮಾ	ಅರ್ಶಾದ್ ಖಾನ್
ಕೃನಾಲ್ ಪಾಂಡ್ಯ	ವಾಷಿಂಗ್ಟನ್ ಸುಂದರ್
ಟಿಮ್ ಡೇವಿಡ್	ಸಾಯಿ ಸುದರ್ಶನ್
ಭುವನೇಶ್ವರ್ ಕುಮಾರ್	ಶಾರೂಖ್ ಖಾನ್
ಜೋಶ್ ಹ್ಯಾಝಲ್‌ವುಡ್	ಮೊಹಮ್ಮದ್ ಸಿರಾಜ್
ಯಶ್ ದಯಾಳ್	ಪ್ರಸಿದ್ಧ ಕೃಷ್ಣ
ಸ್ವಸ್ತಿಕ್ ಚಿಕ್ಕಾರಾ	ರಶೀದ್ ಖಾನ್
ಮನೋಜ್ ಬಾಂಢಗೆ	ರಾಹುಲ್ ತಿವಾಟಿಯಾ

ಫೋಟೋ: ಸುಧಾಕರ್ ದೇವರಾಜ್

ಐಪಿಎಲ್: ಹಲವೆಡೆ ವಾಹನಗಳ ನಿಲುಗಡೆ ನಿಷೇಧ

ಬೆಂಗಳೂರು: ಸ್ಟೇಡಿಯಂ ಸುತ್ತಮುತ್ತ ಸಂಚಾರ ದಟ್ಟಣೆ ತಡೆಗಟ್ಟಲು ಹಲವು ಕ್ರಮಗಳನ್ನು ಕೈಗೊಳ್ಳಲಾಗಿದೆ. ಬುಧವಾರ ಮಧ್ಯಾಹ್ನ 3 ಗಂಟೆಯಿಂದ ರಾತ್ರಿ 11 ಗಂಟೆ ವರೆಗೂ ಸ್ಟೇಡಿಯಂ ಸುತ್ತಮುತ್ತ ನೋ ಪಾರ್ಕಿಂಗ್ ಇರಲಿದೆ. ಪಂದ್ಯ ವೀಕ್ಷಿಸಲು ಬರುವವರಿಗೆ ಪ್ರತ್ಯೇಕ ಪಾರ್ಕಿಂಗ್ ವ್ಯವಸ್ಥೆ ಮಾಡಲಾಗಿದೆ. ಕ್ರೀಡಾಂಗಣ ಸುತ್ತಮುತ್ತ ವಾಹನಗಳ ನಿಲುಗಡೆಗೆ ಸ್ಥಳ ಕೊರತೆ ಇರುವುದರಿಂದ ಬಿಎಂಟಿಸಿ, ಮೆಟ್ರೋ ಬಳಸಲು ಸಾರ್ವಜನಿಕರಿಗೆ ಮನವಿ ಮಾಡಲಾಗಿದೆ. ಓಲಾ, ಉಬರ್, ಆಟೋ, ಕ್ಯಾಬ್‌ಗಳ ಪಿಕ್ ಅಪ್ ಮತ್ತು ಡ್ರಾಪ್ ಮಾಡಲು ಸ್ಥಳ ನಿಗದಿಪಡಿಸಲಾಗಿದೆ.

- ಕ್ವೀನ್ಸ್ ರಸ್ತೆಯಲ್ಲಿ ಬಾಳೇಕುಂದ್ರಿ ವೃತ್ತದಿಂದ ಕ್ವೀನ್ಸ್ ವೃತ್ತದ ವರೆಗೆ ರಸ್ತೆಯ ಎರಡೂ ಕಡೆ ಪಾರ್ಕಿಂಗ್ ನಿಷೇಧ
- ಎಂ.ಜಿ ರಸ್ತೆಯಲ್ಲಿ ಅನಿಲ್ ಕುಂಬ್ಳೆ ವೃತ್ತದಿಂದ ಕ್ವೀನ್ಸ್ ವೃತ್ತದ ವರೆಗೆ ರಸ್ತೆಯ ಎರಡೂ ಕಡೆ ವಾಹನ ನಿಲುಗಡೆ ನಿಷೇಧಿಸಲಾಗಿದೆ.
- ಲಿಂಕ್ ರಸ್ತೆಯಲ್ಲಿ ಎಂ.ಜಿ ರಸ್ತೆಯಿಂದ ಕಬ್ಬನ್ ರಸ್ತೆ ವರೆಗೆ ನೋ ಪಾರ್ಕಿಂಗ್ ಇರಲಿದೆ.
- ರಾಜಭವನ ರಸ್ತೆಯ ಟಿ.ಚೌಡಯ್ಯ ರಸ್ತೆ ಮತ್ತು

ರೇಸ್ ಕೋರ್ಸ್ ರಸ್ತೆಗಳಲ್ಲಿ ಪಾರ್ಕಿಂಗ್‌ಗೆ ಅನುಮತಿ ಇಲ್ಲ.

- ಸೆಂಟ್ರಲ್ ಸ್ಟ್ರೀಟ್ ರಸ್ತೆಯ ಎರಡೂ ಕಡೆ ನೋ ಪಾರ್ಕಿಂಗ್.
- ಕಬ್ಬನ್ ರಸ್ತೆಯಲ್ಲಿ ಸಿ.ಟಿ.ಓ. ವೃತ್ತದಿಂದ ಡಿಕೆನ್ಸ್‌ನ್ ರಸ್ತೆ ಜಂಕ್ಷನ್ ವರೆಗೆ ರಸ್ತೆಯ ಎರಡೂ ಕಡೆ ವಾಹನ ನಿಲುಗಡೆಗೆ ಅವಕಾಶ ಇಲ್ಲ.
- ಸೆಂಟ್ ಮಾರ್ಕ್ಸ್ ರಸ್ತೆಯಲ್ಲಿ, ಕ್ಯಾಶ್ ಫಾರ್ಮಸಿ ಜಂಕ್ಷನ್‌ನಿಂದ ಅನಿಲ್ ಕುಂಬ್ಳೆ ವೃತ್ತದ ವರೆಗೆ ಪಾರ್ಕಿಂಗ್ ಮಾಡುವಂತಿಲ್ಲ.
- ಮ್ಯೂಸಿಯಂ ರಸ್ತೆಯಲ್ಲಿ, ಎಂ.ಜಿ ರಸ್ತೆಯಿಂದ ಸೆಂಟ್ ಮಾರ್ಕ್ಸ್ ರಸ್ತೆ ವರೆಗೆ ಹಾಗೂ ಆಶೀರ್ವಾದ ವೃತ್ತದ ವರೆಗೆ ನೋ ಪಾರ್ಕಿಂಗ್
- ಕಸ್ತೂರಬಾ ರಸ್ತೆಯಲ್ಲಿ, ಕ್ವೀನ್ಸ್ ವೃತ್ತದಿಂದ ಹಡ್ಸನ್ ವೃತ್ತದ ವರೆಗೆ ಹಾಗೂ ಮಲ್ಯ ಆಸ್ಪತ್ರೆ ರಸ್ತೆಯಲ್ಲಿ

ಪಾರ್ಕಿಂಗ್‌ಗೆ ಅವಕಾಶ ಎಲ್ಲೆಲ್ಲಿ?

- ಸೆಂಟ್ ಜೋಸೆಫ್ ಹೈಸ್ಕೂಲ್ ಗ್ರೌಂಡ್
- ಯು.ಬಿ.ಸಿಟಿ ನಿಲುಗಡೆ ಸ್ಥಳ
- ಶಿವಾಜಿನಗರ ಬಸ್ ನಿಲ್ದಾಣದ 1ನೇ ಮಹಡಿಯಲ್ಲಿ ಪಾರ್ಕಿಂಗ್ ಇದೆ.
- ಕೆ.ಎಸ್.ಸಿ.ಎ. ಸದಸ್ಯರ ವಾಹನಗಳಿಗೆ ಸೆಂಟ್ ಜೋಸೆಫ್ ಬಾಲಕರ ಶಾಲೆ ಮೈದಾನದಲ್ಲಿ ವ್ಯವಸ್ಥೆ

ಸಿದ್ದಲಿಂಗಯ್ಯ ವೃತ್ತದಿಂದ ಆರ್‌ಆರ್‌ಎಂಆರ್ ವೃತ್ತದವರೆಗೆ ನೋ ಪಾರ್ಕಿಂಗ್.

- ಕಬ್ಬನ್‌ಪಾರ್ಕ್ ಒಳಭಾಗದ ಕಿಂಗ್ ರಸ್ತೆ, ಪ್ರೆಸ್ ಕ್ಲಬ್ ಮುಂಭಾಗ, ಬಾಲಭವನ ಮುಂಭಾಗ ವಾಹನ ನಿಲುಗಡೆ ನಿಷೇಧಿಸಲಾಗಿದೆ.
- ಲ್ಯಾವೆಲ್ಲೆ ರಸ್ತೆಯಲ್ಲಿ, ಕ್ವೀನ್ಸ್ ವೃತ್ತದಿಂದ ವಿಠಲ್ ಮಲ್ಯ ರಸ್ತೆ ಜಂಕ್ಷನ್‌ವರೆಗೆ ಹಾಗೂ ವಿಠಲ್ ಮಲ್ಯ ರಸ್ತೆಯ ಸಿದ್ದಲಿಂಗಯ್ಯ ವೃತ್ತದಿಂದ ಸೆಂಟ್ ಮಾರ್ಕ್ಸ್ ರಸ್ತೆಯ ಬಿಷಪ್‌ಕಾಟನ್ ಬಾಲಕಿಯರ ಶಾಲೆಯವರೆಗೆ ವಾಹನ ನಿಲುಗಡೆ ನಿಷೇಧಿಸಲಾಗಿದೆ.

ಎಸ್‌ಎಚ್‌ಆರ್ ಆರೋಪ: ಅಸೋಸಿಯೇಶನ್ ಸ್ಪಷ್ಟನೆ

ಸನ್‌ರೈಸರ್ಸ್ ಹೈದರಾಬಾದ್ ಹಾಗೂ ಹೈದರಾಬಾದ್ ಕ್ರಿಕೆಟ್ ಅಸೋಸಿಯೇಷನ್ ನಡುವಿನ ವಿವಾದ ಇದೀಗ ಮತ್ತೊಂದು ರೂಪ ಪಡೆದುಕೊಂಡಿದೆ. ಕಾವ್ಯಾ

ಮಾರನ್ ಒಡೆತನದ ಎಸ್‌ಆರ್‌ಹೆಚ್ ಫ್ರಾಂಚೈಸಿ ಹೊರಿಸಿದ್ದ ಆರೋಪಗಳಿಗೆ ಇದೀಗ ಸ್ಪಷ್ಟನೆ ನೀಡಿರುವ ಹೈದರಾಬಾದ್ ಕ್ರಿಕೆಟ್ ಅಸೋಸಿಯೇಷನ್ ಅಧ್ಯಕ್ಷ ಎ. ಜಗನ್ ಮೋಹನ್ ರಾವ್ ಎಲ್ಲಾ ಆರೋಪಗಳನ್ನು ಸುಳ್ಳು ಎಂದಿದ್ದಾರೆ. 'ಎಚ್‌ಸಿಎ ಅಧ್ಯಕ್ಷರ ವಿರುದ್ಧ ಎಸ್‌ಆರ್‌ಹೆಚ್ ಅಧಿಕಾರಿಗಳು ಸುಳ್ಳು ಆರೋಪಗಳನ್ನು ಮಾಡುವುದು ಸೂಕ್ತವಲ್ಲ. ಎಸ್‌ಆರ್‌ಹೆಚ್ ಅಧಿಕಾರಿಗಳು ಎಲ್ಲಾ ಸಮಸ್ಯೆಗಳನ್ನು ಪರಿಹರಿಸಲು ಮುಕ್ತ ಮನಸ್ಸಿನಿಂದ ಮುಂದೆ ಬರಬೇಕೆಂದು ನಾವು ವಿನಂತಿಸುತ್ತೇವೆ' ಎಂದು ಅವರು ಪತ್ರಿಕಾ ಪ್ರಕಣೆಯಲ್ಲಿ ತಿಳಿಸಿದ್ದಾರೆ.

ಕಾವ್ಯ ಮಾರನ್ ಒಡೆತನದ ಎಸ್‌ಆರ್‌ಹೆಚ್ ಫ್ರಾಂಚೈಸಿ, ಹೈದರಾಬಾದ್ ಕ್ರಿಕೆಟ್ ಅಸೋಸಿಯೇಷನ್ ವಿರುದ್ಧ ಬೆದರಿಕೆ ಮತ್ತು ಬ್ಲ್ಯಾಕ್ ಮೇಲ್ ಆರೋಪಗಳನ್ನು ಹೊರಿಸಿತ್ತು. ಮಾಧ್ಯಮ ವರದಿಗಳ ಪ್ರಕಾರ, ಹೈದರಾಬಾದ್ ಕ್ರಿಕೆಟ್ ಅಸೋಸಿಯೇಷನ್‌ನ ಉನ್ನತ ಅಧಿಕಾರಿಗಳು ಉಚಿತ ಟಿಕೆಟ್‌ಗಳಿಗಾಗಿ ಎಸ್‌ಆರ್‌ಹೆಚ್ ಫ್ರಾಂಚೈಸಿಗೆ ಬೆದರಿಕೆ ಮತ್ತು ಬ್ಲ್ಯಾಕ್‌ಮೇಲ್ ಮಾಡಲು ಪ್ರಯತ್ನಿಸುತ್ತಿದ್ದಾರೆ. ಇದು ಫ್ರಾಂಚೈಸಿಯ ಅಸಮಾಧಾನಕ್ಕೆ ಕಾರಣವಾಗಿದ್ದು, ಇದೀಗ ಎಸ್‌ಆರ್‌ಹೆಚ್ ತಂಡ ಉಳಿದಿರುವ ತನ್ನ ತವರು ಪಂದ್ಯಗಳನ್ನು ಬೇರೆ ಸ್ಥಳಕ್ಕೆ ಸ್ಥಳಾಂತರಿಸುವ ಬಗ್ಗೆ ಯೋಚಿಸುತ್ತಿದೆ ಎಂದು ವರದಿಯಾಗಿತ್ತು.

ಮಾರ್ಚ್ 27ರಂದು ನಡೆದಿದ್ದ ಹೈದರಾಬಾದ್ ಮತ್ತು ಲಖನೌ ನಡುವಿನ ಪಂದ್ಯದ ಸಮಯದಲ್ಲಿ ಎಚ್‌ಸಿಎ ಪ್ರತಿನಿಧಿಗಳು ಈ-3 ಬಾಕ್ಸ್‌ನಲ್ಲಿ ಹೆಚ್ಚುವರಿಯಾಗಿ 20 ಟಿಕೆಟ್‌ಗಳನ್ನು ಕೇಳಿದ್ದರು, ಆದರೆ ಹೆಚ್ಚುವರಿ ಟಿಕೆಟ್‌ಗಳನ್ನು ನೀಡಲು ಫ್ರಾಂಚೈಸಿ ಒಪ್ಪದಿದ್ದಾಗ ಈ ವಿವಾದ ಹುಟ್ಟಿಕೊಂಡಿತ್ತು. ಐಪಿಎಲ್ ಸಮಯದಲ್ಲಿ ಕ್ರೀಡಾಂಗಣದ ಬಾಡಿಗೆಯನ್ನು ತಾವು ಪಾವತಿಸುತ್ತೇವೆ ಮತ್ತು ಕ್ರೀಡಾಂಗಣದ ಮೇಲೆ ಹಕ್ಕುಗಳನ್ನು ಹೊಂದಿದ್ದೇವೆ, ಹೀಗಿರುವಾಗ ಹೆಚ್ಚುವರಿ ಟಿಕೆಟ್‌ಗಳನ್ನು ಉಚಿತವಾಗಿ ನೀಡಲು ಸಾಧ್ಯವಿಲ್ಲ ಎಂಬುದು ಫ್ರಾಂಚೈಸಿಯ ವಾದವಾಗಿದೆ.

ಐಪಿಎಲ್: ಮೆಟ್ರೋ ಸೌಲಭ್ಯ

ಬೆಂಗಳೂರು: ಬುಧವಾರ ನಡೆಯಲಿರುವ ಪಂದ್ಯಾವಳಿಯ ಪ್ರಯುಕ್ತ ನಮ್ಮ ಮೆಟ್ರೋ ಕೂಡ ಪ್ರಯಾಣಿಕರಿಗೆ ಸಿಹಿ ಸುದ್ದಿ ನೀಡಿದೆ. ಮೆಟ್ರೋ ಕಾರ್ಯಾಚರಣೆ ಅವಧಿಯನ್ನು ವಿಸ್ತರಣೆ ಮಾಡಲಾಗಿದ್ದು, ಈ ಬಗ್ಗೆ ಬಿಎಂಆರ್‌ಸಿಎಲ್ ಸಾಮಾಜಿಕ ಮಾಧ್ಯಮ ಎಕ್ಸ್‌ನಲ್ಲಿ ಸಂದೇಶ ಪ್ರಕಟಿಸುವ ಮೂಲಕ ಕ್ರಿಕೆಟ್ ಪ್ರೇಮಿಗಳಿಗೆ ಮಾಹಿತಿ ನೀಡಿದೆ.

ಮೆಟ್ರೋದ ಎಲ್ಲಾ ನಾಲ್ಕು ಟರ್ಮಿನಲ್‌ಗಳಾದ ವೈಟ್‌ಫೀಲ್ಡ್ (ಕಾಡುಗೋಡಿ), ಚಲ್ಲಘಟ್ಟ, ರೇಷ್ಮೆ ಸಂಸ್ಥೆ ಮತ್ತು ಮಾದಾವರ ಮೆಟ್ರೋ ನಿಲ್ದಾಣಗಳಿಂದ ಕೊನೆಯ ಮೆಟ್ರೋ

ರೈಲು ಸೇವೆಯನ್ನು ರಾತ್ರಿ 12.30ರ ವರೆಗೆ ವಿಸ್ತರಿಸಿದೆ. ನಾಡಪ್ರಭು ಕೆಂಪೇಗೌಡ ನಿಲ್ದಾಣ ಮೆಜೆಸ್ಟಿಕ್‌ನಿಂದ ಎಲ್ಲಾ ನಾಲ್ಕು ದಿಕ್ಕುಗಳ ಕಡೆಗೆ ಕೊನೆಯ ರೈಲು ಮಧ್ಯರಾತ್ರಿ 1.15ಕ್ಕೆ ಹೊರಡಲಿದೆ ಎಂದು ಬಿಎಂಆರ್‌ಸಿಎಲ್ ಪ್ರಕಟಣೆ ತಿಳಿಸಿದೆ.

ಆರ್‌ಸಿಬಿ ಗೇಲಿ ಮಾಡಿದ ಸೆಹ್ವಾಗ್

ಬೆಂಗಳೂರು: ಭಾರತ ಕ್ರಿಕೆಟ್ ತಂಡದ ಮಾಜಿ ಆರಂಭಿಕ ಆಟಗಾರ ವೀರೇಂದ್ರ ಸೆಹ್ವಾಗ್ ತಮ್ಮ ಕುಚೇಷ್ಟೆಯ ಹೇಳಿಕೆಗಳಿಂದಲೇ ಆಗಾಗ ಸಾಮಾಜಿಕ ಜಾಲತಾಣಗಳಲ್ಲಿ ಸುದ್ದಿಯಾಗುತ್ತಿರುತ್ತಾರೆ. ಇದೀಗ ಅಂತಹದ್ದೇ ಹೇಳಿಕೆ ನೀಡಿ, ಸೆಹ್ವಾಗ್ ಆರ್‌ಸಿಬಿ ಅಭಿಮಾನಿಗಳ ಕೆಂಗಣ್ಣಿಗೆ ಗುರಿಯಾಗಿದ್ದಾರೆ. ಐಪಿಎಲ್ 2025ಕ್ಕೆ ಸಂಬಂಧಿಸಿದ ಕಾರ್ಯಕ್ರಮದಲ್ಲಿ ಸೆಹ್ವಾಗ್ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವನ್ನು ಕಳಪೆ ಎಂದು ಕರೆದಿದ್ದಾರೆ. ವೀರೇಂದ್ರ ಸೆಹ್ವಾಗ್ ಲೈವ್ ಕಾರ್ಯಕ್ರಮದಲ್ಲಿ ಆರ್‌ಸಿಬಿ ತಂಡವನ್ನು ಅಣಕಿಸಿ, ಕಳಪೆ ತಂಡಕ್ಕೆ ಹೋಲಿಸಿದ್ದಾರೆ. ಇದೀಗ ಸೆಹ್ವಾಗ್. ಅವರ ಈ ರೀತಿಯ ಹೇಳಿಕೆಯೂ ಅಸಂಖ್ಯಾತ ಆರ್‌ಸಿಬಿ ಅಭಿಮಾನಿಗಳು ಕೆರಳುವಂತೆ ಮಾಡಿದೆ.

ಕ್ರಿಕ್‌ಬಜ್ ಕಾರ್ಯಕ್ರಮದಲ್ಲಿ ಐಪಿಎಲ್ 2025ರ ಪಾಯಿಂಟ್ ಟೇಬಲ್ ಕುರಿತು ಕಾಮೆಂಟ್ ಮಾಡುವ ಸಂದರ್ಭದಲ್ಲಿ ಸೆಹ್ವಾಗ್, ಬಡ ತಂಡ ಸ್ವಲ್ಪ ಸಮಯದವರೆಗೆ ಪಾಯಿಂಟ್ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿರಲಿ ಬಿಡಿ, ಈ ತಂಡ ಎಷ್ಟು ಕಾಲ ಮೇಲಿರುತ್ತಾರೆಂದು ಯಾರಿಗೂ ತಿಳಿದಿಲ್ಲ. ನಾನು ಹಣದ ಬಗ್ಗೆ ಮಾತನಾಡುತ್ತಿದ್ದೇನೆ ಎಂದು ನೀವು

ಭಾವಿಸುತ್ತೀರಾ? ಇಲ್ಲ, ಈ ಎಲ್ಲಾ ತಂಡಗಳು ತುಂಬಾ ಶ್ರೀಮಂತವಾಗಿವೆ. ಪ್ರತಿಯೊಂದು ತಂಡವೂ ಒಂದು ಸೀಸನ್‌ನಲ್ಲಿ 400-500 ಕೋಟಿ ರು.ಗಳಿಸುತ್ತದೆ, ನಾನು ಅದರ ಬಗ್ಗೆ ಮಾತನಾಡುತ್ತಿಲ್ಲ. ನಾನು ಇಲ್ಲಿ ಒಂದೇ ಒಂದು ಟ್ರೋಫಿಯನ್ನು ಗೆಲ್ಲದಿರುವ ಬಗ್ಗೆ ಮಾತನಾಡುತ್ತಿದ್ದೇನೆ. ಅದಕ್ಕಾಗಿಯೇ ನಾನು ಆರ್‌ಸಿಬಿಯನ್ನು ಬಡ ತಂಡ ಎಂದು ಕರೆಯುತ್ತಿದ್ದೇನೆ' ಎಂದಿದ್ದಾರೆ.

'ಆರ್‌ಸಿಬಿ ಐಪಿಎಲ್‌ನಲ್ಲಿ ಅತ್ಯಂತ ಜನಪ್ರಿಯ ತಂಡವಾಗಿರಬಹುದು, ಆದರೆ ಈ ಫ್ರಾಂಚೈಸಿ ಇನ್ನೂ ಚಾಂಪಿಯನ್ ಆಗಲು ಸಾಧ್ಯವಾಗಿಲ್ಲ ಎಂಬುದು ನಿಜ. ಈ ಬಾರಿ ತಂಡ ವಿಭಿನ್ನ ಶೈಲಿಯಲ್ಲಿ ಕ್ರಿಕೆಟ್ ಆಡುತ್ತಿದೆ. ಮೊದಲ ಎರಡು ಪಂದ್ಯಗಳಲ್ಲಿ ಆರ್‌ಸಿಬಿ ಬ್ಯಾಟಿಂಗ್‌ಗಿಂತ ಬೌಲಿಂಗ್‌ನಲ್ಲಿಯೇ ಹೆಚ್ಚು ಮೇಲುಗೈ ಸಾಧಿಸಿದ್ದು, ಅಭಿಮಾನಿಗಳಲ್ಲಿ ಅಚ್ಚರಿ ಮೂಡಿಸಿದೆ' ಎಂದು ಸೆಹ್ವಾಗ್ ಹೇಳಿದ್ದಾರೆ.

ಪಾಂಡ್ಯಗೆ ಮತ್ತೊಂದು ಸಂಕಷ್ಟ

ಮುಂಬೈ: ಕೋಲ್ಕತ್ತಾ ನೈಟ್ ರೈಡರ್ಸ್ ವಿರುದ್ಧ ಭರ್ಜರಿ ಗೆಲುವು ಸಾಧಿಸಿದ ಬಳಿಕ ಮುಂಬೈ ಇಂಡಿಯನ್ಸ್ ತಂಡದ ನಾಯಕ ಹಾರ್ದಿಕ್ ಪಾಂಡ್ಯ ಮತ್ತೆ ಸುದ್ದಿಯ ಕೇಂದ್ರಬಿಂದುವಾಗಿದ್ದಾರೆ. ಪಂದ್ಯದ ನಂತರ ವಾಂಖೆಡೆ ಕ್ರೀಡಾಂಗಣದಿಂದ ಹೊಟೇಲ್‌ಗೆ ತೆರಳುತ್ತಿದ್ದಾಗ, ತಂಡದ ಬಸ್‌ನಲ್ಲಿ ಹಾರ್ದಿಕ್ ಜೊತೆಗೆ ಜಾಸ್ಮಿನ್ ವಾಲಿಯಾ ಕಾಣಿಸಿಕೊಂಡಿದ್ದು, ಇಬ್ಬರ ನಡುವಿನ ಪ್ರೇಮ ಸಂಬಂಧ ನಿಜ ಎಂಬುದಕ್ಕೆ ಸಾಕ್ಷಿ ಸಿಕ್ಕಂತಾಗಿದೆ. ಆದರೆ ಈ ಘಟನೆ ಐಪಿಎಲ್ ಮಾರ್ಗಸೂಚಿಗಳ ಉಲ್ಲಂಘನೆಯಾಗಿ ಗಂಭೀರ ಪ್ರಶ್ನೆಗಳನ್ನು ಎತ್ತಿದೆ.

ಪಂದ್ಯ ಮುಗಿದ ನಂತರ ಒಖ ಆಟಗಾರರು ಮತ್ತು ಸಿಬ್ಬಂದಿ ತಂಡದ ಬಸ್‌ನಲ್ಲಿ ಕುಳಿತಿದ್ದಾಗ, ಜಾಸ್ಮಿನ್ ವಾಲಿಯಾ ಬಸ್‌ಗೆ ಪ್ರವೇಶಿಸಿದ ದೃಶ್ಯ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಐಪಿಎಲ್ ನಿಯಮಗಳ ಪ್ರಕಾರ, ತಂಡದ ಸದಸ್ಯರು, ಕ್ರೀಡಾ ಸಿಬ್ಬಂದಿ ಮತ್ತು ಭ್ರಷ್ಟಾಚಾರ ನಿಗ್ರಹ

ತಂಡದವರನ್ನು ಹೊರತುಪಡಿಸಿ ಯಾರೂ ಬಸ್‌ನಲ್ಲಿ ಪ್ರಯಾಣಿಸುವಂತಿಲ್ಲ. ಕುಟುಂಬ ಸದಸ್ಯರು, ಸ್ನೇಹಿತರು ಅಥವಾ ಸಂಗಾತಿಗಳಿಗೂ ಈ ಅವಕಾಶವಿಲ್ಲ. ಹಾರ್ದಿಕ್ ಈ ನಿಯಮವನ್ನು ಮೀರಿ ಜಾಸ್ಮಿನ್‌ರನ್ನು ಬಸ್‌ನಲ್ಲಿ ಕೂರಿಸಿದ್ದು ವಿವಾದಕ್ಕೆ ಕಾರಣವಾಗಿದೆ.

ಈ ಘಟನೆಯನ್ನು ಗಂಭೀರ ಉಲ್ಲಂಘನೆ ಎಂದು ತಜ್ಞರು ಪರಿಗಣಿಸಿದ್ದು, ಇದು ನಿಯಮಗಳ ಸಂಪೂರ್ಣ ಉಲ್ಲಂಘನೆ ಎಂದು ಅವರು ದೃಢಪಡಿಸಿದರು.

ಪಂತ್ ವಿರುದ್ಧ ಅಭಿಮಾನಿಗಳು ಗರಂ

ಲಖನೌ: ಪ್ರಸ್ತುತ ನಡೆಯುತ್ತಿರುವ ಐಪಿಎಲ್ ಟೂರ್ನಿಯಲ್ಲಿ ರಿಷಭ್ ಪಂತ್ ತಮ್ಮ ಬ್ಯಾಟಿಂಗ್ ವೈಫಲ್ಯವನ್ನು ಮುಂದುವರಿಸಿದ್ದಾರೆ. ಮಂಗಳವಾರ ಪಂಜಾಬ್ ಕಿಂಗ್ಸ್ ವಿರುದ್ಧದ ಪಂದ್ಯದಲ್ಲಿಯೂ ಲಖನೌ ಸೂಪರ್ ಜಯಂಟ್ಸ್ ನಾಯಕ ವಿಫಲರಾಗಿದ್ದಾರೆ. ನಾಲ್ಕನೇ ಕ್ರಮಾಂಕದಲ್ಲಿ ಕ್ರೀಸ್‌ಗೆ ಬಂದಿದ್ದ ರಿಷಭ್ ಪಂತ್ 5 ಎಸೆತಗಳಲ್ಲಿ 2 ರನ್ ಗಳಿಸಿದ ಬಳಿಕ ಗ್ಲೆನ್ ಮ್ಯಾಕ್ಸ್‌ವೆಲ್ ಎಸೆತದಲ್ಲಿ ಯುಜ್ವೇಂದ್ರ ಚಹಲ್‌ಗೆ ಕ್ಯಾಚ್ ಕೊಟ್ಟರು. ಪಂತ್ ಔಟ್ ಆದ ಬೆನ್ನಲ್ಲೆ ರಿಷಭ್ ಪಂತ್ ವಿರುದ್ಧ ಸೋಶಿಯಲ್ ಮೀಡಿಯಾದಲ್ಲಿ ಅಭಿಮಾನಿಗಳು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಕಳೆದ ವರ್ಷ ಸೌದಿ ಅರೇಬಿಯಾದ ಜೆಡ್ಡಾದಲ್ಲಿ ನಡೆದಿದ್ದ 2025ರ ಐಪಿಎಲ್

ಟೂರ್ನಿಯ ಮೆಗಾ ಹರಾಜಿನಲ್ಲಿ ರಿಷಭ್ ಪಂತ್ ಅವರನ್ನು ಲಖನೌ ಫ್ರಾಂಚೈಸಿ 27 ಕೋಟಿ ರು. ಗಳಿಗೆ ಖರೀದಿಸಿತ್ತು. ಆ ಮೂಲಕ ರಿಷಭ್ ಪಂತ್ ಐಪಿಎಲ್ ಇತಿಹಾಸದಲ್ಲಿಯೇ ಅತ್ಯಂತ ದುಬಾರಿ ಆಟಗಾರ ಎನಿಸಿಕೊಂಡಿದ್ದರು. ಆದರೆ ಅವರು ತಮಗೆ ಸಿಕ್ಕಿರುವ ಹಣಕ್ಕೆ ಮೌಲ್ಯವನ್ನು ತಂದುಕೊಡುವಲ್ಲಿ ವಿಫಲರಾಗಿದ್ದಾರೆ. ಈ ಟೂರ್ನಿಯಲ್ಲಿ ಆಡಿದ ಮೂರು ಪಂದ್ಯಗಳಿಂದ ರಿಷಭ್ ಪಂತ್ ಗಳಿಸಿರುವುದು ಕೇವಲ 17 ರನ್‌ಗಳು ಮಾತ್ರ. ಮೊದಲನೇ ಪಂದ್ಯದಲ್ಲಿ 0, ಎರಡನೇ ಪಂದ್ಯದಲ್ಲಿ 15 ಹಾಗೂ ಮೂರನೇ ಪಂದ್ಯದಲ್ಲಿ 2 ರನ್ ಗಳಿಸಿ ವಿಕೆಟ್ ಒಪ್ಪಿಸಿದ್ದಾರೆ.

ಆರಂಭಿಕ ಮೂರೂ ಪಂದ್ಯಗಳಲ್ಲಿ ಬ್ಯಾಟಿಂಗ್ ವೈಫಲ್ಯ ಅನುಭವಿಸಿರುವ ಕಾರಣ ರಿಷಭ್ ಪಂತ್ ಸಾಕಷ್ಟು ಟೀಕೆಗಳಿಗೆ ಗುರಿಯಾಗಿದ್ದಾರೆ. ರಿಷಭ್ ಪಂತ್ ತೋರುತ್ತಿರುವ ಪ್ರದರ್ಶನ ಹಾಗೂ ಅವರಿಗೆ ನೀಡಿರುವ ಮೊತ್ತಕ್ಕೆ ಸಂಬಧವಿಲ್ಲ ಎಂದು ದೂರುತ್ತಿದ್ದು, ವಿಕೆಟ್ ಕೀಪರ್‌ಗೆ ಇಷ್ಟೊಂದು ದುಬಾರಿ ಮೊತ್ತ ನೀಡಬಾರದಿತ್ತು ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.